ಗುರುವಾರ, ಜುಲೈ 20, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 200 | ಪುಟ 14

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
ಬ್ರಿಟನ್‌ನಲ್ಲಿ ಟಾಟಾ ಗಿಗಾಫ್ಯಾಕ್ಟರಿ 5
ಭಾರತ-ವಿಂಡೀಸ್ 'ಶತಕ'ಪಥ
ಗದ್ದಲದ ನಡುವೆ 5 ಮಸೂದೆಗೆ ಒಪ್ಪಿಗೆ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
67,097 ▲	19,833 ▲	₹61,730 (ಬೆಂಗಳೂರು) ▲	₹77,600 (ಬೆಂಗಳೂರು) ▲	82.10 ▼

ಜೈಲಿನಲ್ಲೇ ಉಗ್ರರ ಜತೆಗೆ ನಂಟು • ರಾಜಧಾನಿಯಲ್ಲಿ ವಿಧ್ವಂಸಕ ಕೃತ್ಯಕ್ಕೆ ತಯಾರಿ

ಸ್ಫೋಟಕ್ಕೆ ಸಂಚು: ಐವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಧಾನಿ ಬೆಂಗಳೂರಿನಲ್ಲಿ ಸರಣಿ ವಿಧ್ವಂಸಕ ಕೃತ್ಯ ನಡೆಸಿ, ಭಾರಿ ಅನಾಹುತ ಎಸಗಲು ಸಂಚು ರೂಪಿಸಿದ್ದ ಐವರು ಶಂಕಿತ ಉಗ್ರರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಆರ್‌.ಟಿ.ನಗರ, ಸುಲ್ತಾನ್‌ಪಾಳ್ಯ, ಡಿ.ಜೆ.ಹಳ್ಳಿ, ಕೊಡಿಗೆಹಳ್ಳಿಯಲ್ಲಿ ಕಾರ್ಯಾಚರಣೆ ನಡೆಸಿದ್ದ ಪೊಲೀಸರು, ಸೈಯದ್ ಸುಹೇಲ್ ಖಾನ್, ಜಾಹೀದ್ ತಬ್ರೇಸ್, ಸೈಯದ್ ಮುದಾಸೀರ್ ಪಾಷಾ, ಮಹಮದ್ ಫೈಸಲ್, ಮಹಮದ್ ಉಮರ್ ಎಂಬ ಶಂಕಿತರನ್ನು ಬಂಧಿಸಿದ್ದಾರೆ.

ಸುಲ್ತಾನ್ ಪಾಳ್ಯದ ಪ್ರಾರ್ಥನಾ ಸ್ಥಳ ಮತ್ತು ಆರ್‌.ಟಿ. ನಗರದ ಕನಕ ಬಡಾವಣೆಯ ಸೈಯದ್ ಸುಹೇಲ್ ಬಾಡಿಗೆ ಮನೆಯಲ್ಲಿ ಸಭೆ ಸೇರಿ ಉಗ್ರ ಚಟುವಟಿಕೆ ಹಾಗೂ ಸ್ಫೋಟ ನಡೆಸುವುದಕ್ಕೆ ಸಂಬಂಧಿಸಿದಂತೆ ಆರೋಪಿಗಳು ಚರ್ಚೆ ನಡೆಸುತ್ತಿದ್ದರು. ಈ ಮಾಹಿತಿ ತಿಳಿದ ಸಿಸಿಬಿ ಪೊಲೀಸರು, ಕೇಂದ್ರ ಗುಪ್ತಚರ ಇಲಾಖೆ ಸಂಪರ್ಕಿಸಿದ್ದರು. ಎರಡೂ ವಿಭಾಗದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ, ಮಂಗಳವಾರ ಸಂಜೆ ವಶಕ್ಕೆ ಪಡೆದುಕೊಂಡಿದ್ದರು.

ಶಂಕಿತರಿಂದ 7 ನಾಡ ಬಂದೂಕು, 45 ಗುಂಡುಗಳು, ಸ್ಯಾಟಲೈಟ್ ಮಾದರಿಯ ವಾಕಿಟಾಕಿಗಳು, 12 ಮೊಬೈಲ್, ಡ್ರ್ಯಾಗರ್ ಸೇರಿದಂತೆ ವಿವಿಧ ವಸ್ತುಗಳನ್ನು ಜಪ್ತಿ ಮಾಡಿಕೊಂಡಿದ್ದಾರೆ.

'ಐವರೂ 35 ವರ್ಷದ ಒಳಗಿನವರೇ ಆಗಿದ್ದು, ಚಾಲಕ ಹಾಗೂ ಮೆಕ್ಯಾನಿಕಲ್ ವೃತ್ತಿಯಲ್ಲಿ ತೊಡಗಿದ್ದರು. ಪ್ರಕರಣದ ಸೂತ್ರಧಾರ ಜುನೈದ್ ಅಹಮದ್ ದುಬೈಗೆ ಪರಾರಿಯಾಗಿದ್ದಾನೆ. ಆತನನ್ನು ಬಂಧಿಸಿ ಕರೆತರಲು ಕೇಂದ್ರದ ತನಿಖಾ ಸಂಸ್ಥೆಗಳನ್ನು ಸಂಪರ್ಕಿಸಲಾಗಿದೆ. ಇದಕ್ಕಾಗಿ ವಿಶೇಷ ತಂಡ ರಚಿಸಲಾಗಿದೆ.

ದೇಶದ್ರೋಹ ಚಟುವಟಿಕೆಯಲ್ಲಿ ಭಾಗಿ, ಅಪರಾಧದ ಒಳಸಂಚು, ಶಸ್ತ್ರಾಸ್ತ್ರ ಕಾಯ್ದೆ ಅಡಿ ಹೆಬ್ಬಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ' ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ್ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

7ನೇ ಪುಟ ನೋಡಿ

ಆರೋಪಿಗಳ ವಿವರ

ಸೈಯದ್ ಸುಹೇಲ್ ಖಾನ್ (24), ಸುಲ್ತಾನ್‌ಪಾಳ್ಯ ಮುಖ್ಯರಸ್ತೆ, ಆರ್‌.ಟಿ.ನಗರ | ಜಾಹೀದ್ ತಬ್ರೇಸ್ (25), ಭದ್ರಪ್ಪ ಲೇಔಟ್, ಕೊಡಿಗೆಹಳ್ಳಿ | ಸೈಯದ್ ಮುದಾಸೀರ್ ಪಾಷಾ (28), ದಿಣ್ಣೂರು ಮುಖ್ಯ ರಸ್ತೆ, ಆರ್‌.ಟಿ.ನಗರ | ಮಹಮದ್ ಫೈಸಲ್ (30), ಸ್ಪೆನ್ಸರ್ ರಸ್ತೆ, ಆರ್‌.ಟಿ.ನಗರ | ಮಹಮದ್ ಉಮರ್(29), ಮಾರುತಿ ನಗರ, ಕೊಡಿಗೆಹಳ್ಳಿ

ಶಂಕಿತರಿಂದ ವಶಕ್ಕೆ ಪಡೆದ ಜೀವಂತ ಗುಂಡುಗಳು, ನಾಡ ಪಿಸ್ತೂಲ್ ಹಾಗೂ ಮೊಬೈಲ್‌ಗಳು.

ದುಷ್ಕೃತ್ಯಕ್ಕೆ ಲಷ್ಕರ್ ಎ ತೊಯ್ಬಾ ಮುಖಂಡನ ತರಬೇತಿ

• ಆದಿತ್ಯ ಕೆ.ಎ.

ಟಿ. ನಜೀರ್

ಬೆಂಗಳೂರು: ಕೊಲೆ, ದರೋಡೆ ಯತ್ನ, ರಕ್ತಚಂದನ ಕಳವು ಪ್ರಕರಣದಲ್ಲಿ 2017ರಲ್ಲಿ ಪರಪ್ಪನ ಅಗ್ರಹಾರದ ಕೇಂದ್ರ ಕಾರಾಗೃಹ ಸೇರಿದ್ದ ಶಂಕಿತರು, ಜೈಲಿನಲ್ಲಿದ್ದ ಟಿ. ನಜೀರ್‌ನ ಸಂಪರ್ಕದಿಂದ ಉಗ್ರಗಾಮಿ ಚಟುವಟಿಕೆಯತ್ತ ಹೆಜ್ಜೆ ಹಾಕಿರುವ ಆತಂಕಕಾರಿ ಮಾಹಿತಿ ಹೊರಬಿದ್ದಿದೆ.

2008ರ ಜುಲೈನಲ್ಲಿ ನಗರದ 9 ಸ್ಥಳಗಳಲ್ಲಿ ಸರಣಿ ಬಾಂಬ್ ಸ್ಫೋಟ ಸಂಭವಿಸಿತ್ತು. ಘಟನೆಯಲ್ಲಿ ಇಬ್ಬರು ಮೃತಪಟ್ಟು, 20 ಮಂದಿ ಗಾಯಗೊಂಡಿದ್ದರು. ಈ ಪ್ರಕರಣದಲ್ಲಿ ಬಂಧಿತ ಟಿ. ನಜೀರ್ ಪರಪ್ಪನ ಅಗ್ರಹಾರ ಕಾರಾಗೃಹದಲ್ಲೇ ಇದ್ದಾನೆ. ಆತನಿಗೆ ಜೈಲಿನಲ್ಲಿ ಪ್ರತ್ಯೇಕ ಬ್ಯಾರಕ್ ನೀಡಲಾಗಿತ್ತು. ಇದೇ ಸ್ಫೋಟ ಪ್ರಕರಣದ ಪ್ರಮುಖ ಆರೋಪಿ, ಪೀಪಲ್ಸ್ ಡೆಮಾಕ್ರಟಿಕ್ ಪಕ್ಷದ (ಪಿಡಿಪಿ) ಅಧ್ಯಕ್ಷ ಅಬ್ದುಲ್ ನಾಸಿರ್ ಮದನಿ ಸಹಚರನೇ ನಜೀರ್.

2017ರ ಕೊಲೆ ಪ್ರಕರಣದಲ್ಲಿ ಜೈಲು ಸೇರಿದ್ದ ಜುನೈದ್ ಹಾಗೂ ಆತನ ಗುಂಪಿನ ಸದಸ್ಯರು ನಜೀರ್ ಸಂಪರ್ಕಕ್ಕೆ ಬಂದಿದ್ದರು. ಜೈಲಿನೊಳಗೆ ಊಟ, ಕಾಫಿ ಹಾಗೂ ಕೆಲಸದ ಸಮಯದಲ್ಲಿ ಒಟ್ಟಿಗೆ ಸೇರುತ್ತಿದ್ದರು. ಆ ಸಮಯದಲ್ಲಿ ನಜೀರ್ ಎಲ್ಲರಿಗೂ ಉಗ್ರ ಕೃತ್ಯಕ್ಕೆ ಪ್ರೇರೇಪಿಸುತ್ತಿದ್ದ. ಬಾಂಬ್ ಸ್ಫೋಟ, ಶಸ್ತ್ರಾಸ್ತ್ರ ಬಳಕೆಯ ಬಗ್ಗೆ ಮಾಹಿತಿ ನೀಡುತ್ತಿದ್ದ' ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ. ಅಪರಾಧಿಗಳ ಮನಪರಿವರ್ತನೆಯಾಗಬೇಕಿದ್ದ ಜೈಲನ್ನು ಈ ಶಂಕಿತರು ಉಗ್ರ ಚಟುವಟಿಕೆ ನಡೆಸುವ ತರಬೇತಿ ಸ್ಥಳವಾಗಿ ಮಾಡಿಕೊಂಡಿದ್ದರು ಎಂದು ಪೊಲೀಸರು ಹೇಳಿದರು.

7ನೇ ಪುಟ ನೋಡಿ

'ಇಂಡಿಯಾ' ಸಭೆ ದಿನವೇ ವಶ: ಹೆಚ್ಚಿನ ತನಿಖೆ

ಬೆಂಗಳೂರಿನ ಹಲವೆಡೆ ಸರಣಿ ಸ್ಫೋಟಕ್ಕೆ ತಯಾರಿ ನಡೆಸಿದ್ದ ಶಂಕಿತ ಉಗ್ರರು, ಮಂಗಳವಾರ ಇಲ್ಲಿ ನಡೆದ ಬಿಜೆಪಿಯೇತರ ವಿರೋಧ ಪಕ್ಷಗಳ 'ಇಂಡಿಯಾ' ಸಭೆಯ ವೇಳೆಯೇ ದುಷ್ಕೃತ್ಯ ಎಸಗಲು ಕಾರ್ಯತಂತ್ರ ಹೆಣೆದಿದ್ದರೆ ಎಂಬ ಚರ್ಚೆ ನಡೆದಿದೆ.

ಮಡಿವಾಳದ ಎಫ್‌ಎಸ್‌ಎಲ್ ಆವರಣದ ವಿಚಾರಣಾ ಕೇಂದ್ರದಲ್ಲಿ ಶಂಕಿತ ಉಗ್ರರನ್ನು ಇರಿಸಿ ಪೊಲೀಸರು ವಿಚಾರಣೆಗೆ ನಡೆಸಿದ್ದಾರೆ. 'ಬಸ್ ನಿಲ್ದಾಣ, ಕೆಲವು ಮುಖ್ಯ ರಸ್ತೆ ಹಾಗೂ ಪ್ರತಿಷ್ಠಿತ ಹೋಟೆಲ್‌ಗಳ ಬಳಿ ಸ್ಫೋಟಕ್ಕೆ ಸಂಚು ರೂಪಿಸಲಾಗಿತ್ತೆಂದು ಬಂಧಿತರು ಬಾಯ್ಬಿಟ್ಟಿದ್ದಾರೆ' ಎಂದು ಮೂಲಗಳು ಹೇಳಿವೆ.

ಭಯೋತ್ಪಾದನೆ ಸೇರಿದಂತೆ ಯಾವುದೇ ತೆರನಾದ ದೇಶ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿರುವವರನ್ನು ಪತ್ತೆ ಹಚ್ಚಿ, ಬೇರು ಸಮೇತ ಅಂತಹ ಶಕ್ತಿಗಳನ್ನು ರಾಜ್ಯದಿಂದ ಕಿತ್ತೊಗೆಯಲು ಸದಾ ಸಿದ್ಧ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಬೆಂಗಳೂರು ಉಗ್ರರ ಸುರಕ್ಷಿತ ತಾಣವಾಗುತ್ತಿದೆ. ಶಂಕಿತರನ್ನು ಬಂಧಿಸಿರುವ ಸಿಸಿಬಿ ಪೊಲೀಸರಿಗೆ ಅಭಿನಂದನೆಗಳು. ಪ್ರಕರಣದ ತನಿಖೆಯನ್ನು ಎನ್‌ಐಎಗೆ ವರ್ಗಾಯಿಸಬೇಕು

ಬಸವರಾಜ ಬೊಮ್ಮಾಯಿ, ಬಿಜೆಪಿ ಶಾಸಕ

ಅನಾಹುತ ಸಂಭವಿಸುವ ಮುನ್ನವೇ ನಮ್ಮ ಪೊಲೀಸರು ಶಂಕಿತರನ್ನು ಬಂಧಿಸಿದ್ದಾರೆ. ಉತ್ತಮವಾಗಿ ಕೆಲಸ ಮಾಡಿದ ಅವರನ್ನು ಅಭಿನಂದಿಸುತ್ತೇನೆ

ಎಚ್‌.ಡಿ. ಕುಮಾರಸ್ವಾಮಿ
ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ವಿಧಾನಸಭೆಯ ಕಲಾಪದ ವೇಳೆ ಮಸೂದೆಗಳ ಪ್ರತಿಗಳನ್ನು ಹರಿದು ಉಪ ಸಭಾಧ್ಯಕ್ಷರ ಮೇಲೆ ಎಸೆದು ಬಿಜೆಪಿಯ ಸದಸ್ಯರು ಪ್ರತಿಭಟನೆ ನಡೆಸಿದರು

ಉಪಸಭಾಧ್ಯಕ್ಷರತ್ತ ಕಾಗದ ತೂರಿದ ಬಿಜೆಪಿಗರು ಅಮಾನತು

ಆತಿಥ್ಯಕ್ಕೆ ಐಎಎಸ್: ಗದ್ದಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭಾಧ್ಯಕ್ಷರ ಪೀಠದತ್ತ ಮಸೂದೆಗಳ ಪ್ರತಿಗಳನ್ನು ಚೂರು ಮಾಡಿ ಎಸೆದರು ಎಂಬ ಕಾರಣಕ್ಕೆ ಬಿಜೆಪಿಯ 10 ಸದಸ್ಯರನ್ನು ಈ ಅಧಿವೇಶನ ಮುಗಿಯುವವರೆಗೆ ಅಮಾನತುಗೊಳಿಸಿ, ಸದನದಿಂದ ಬಲವಂತವಾಗಿ ಹೊತ್ತೊಯ್ದು ಹೊರಗೆ ಹಾಕಿಸಿದ ಘಟನೆ ಭಾರಿ ಕೋಲಾಹಲಕ್ಕೆ ಕಾರಣವಾಯಿತು.

ಇದನ್ನು ಪ್ರತಿಭಟಿಸಿ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಅವರ ಕಚೇರಿ ಬಳಿ ಬಿಜೆಪಿ ಸದಸ್ಯರು ಧರಣಿ ನಡೆಸಿದಾಗ ಅವರನ್ನು ಮಾರ್ಷಲ್‌ಗಳ ನೆರವಿನಿಂದ ಹೊರಗೆ ಹಾಕಿಸುವಾಗ ನೂಕಾಟ, ತಳ್ಳಾಟಗಳಿಂದ ಗಾಜುಗಳು ಒಡೆದು ಹೋದವು. ಈ ಸಂದರ್ಭದಲ್ಲಿ ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ ಅವರು ಅಧಿಕ ರಕ್ತದೊತ್ತಡಕ್ಕೆ ಒಳಗಾಗಿ ಕುಸಿದರು. ಅವರನ್ನು ಆಂಬುಲೆನ್ಸ್ ಮೂಲಕ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತು. ಶಾಸಕ ಆರ್‌.ಅಶೋಕ ಕೂಡಾ ಉಸಿರಾಟದ ಸಮಸ್ಯೆಯಿಂದ ಅಸ್ವಸ್ಥರಾದರು.

ಸರ್ಕಾರ ಮತ್ತು ಸಭಾಧ್ಯಕ್ಷರ ನಡವಳಿಕೆಯನ್ನು ಖಂಡಿಸಿ ಶಾಸಕ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ಬಿಜೆಪಿ ಸದಸ್ಯರು ಮತ್ತು ಎಚ್‌.ಡಿ.ಕುಮಾರಸ್ವಾಮಿ ಅವರು ಕೆಂಗಲ್ ಪ್ರತಿಮೆ ಬಳಿ ಪ್ರತಿಭಟನೆ ನಡೆಸುವಾಗ ಎಲ್ಲರನ್ನೂ ಪೊಲೀಸರು ವಶಕ್ಕೆ ಪಡೆದು, ಬಳಿಕ ಬಿಡುಗಡೆ ಮಾಡಿದರು.

ಗದ್ದಲಕ್ಕೆ ಕಾರಣವೇನು?: ಬುಧವಾರ ಬೆಳಿಗ್ಗೆ ಕಲಾಪ ಆರಂಭ ವಾಗುತ್ತಿದ್ದಂತೆ ಬಿಜೆಪಿಯ ಆರ್‌. ಅಶೋಕ, 'ರಾಜಕೀಯ ಸಭೆಗೆ ಬಂದಿದ್ದವರ ಆತಿಥ್ಯಕ್ಕೆ ರಾಜ್ಯದ ಹಿರಿಯ ಐಎಎಸ್ ಅಧಿಕಾರಿಗಳನ್ನು ಈ ಸರ್ಕಾರ ನಿಯೋಜನೆ ಮಾಡಿತ್ತು. ಇದರಿಂದ ರಾಜ್ಯದ ಗೌರವಕ್ಕೆ ಧಕ್ಕೆಯಾಗಿದೆ. ಸರ್ಕಾರದ ನಡೆ ಖಂಡನೀಯ. ಇಂತಹ ತಪ್ಪಿಗಾಗಿ ಸರ್ಕಾರ ಕ್ಷಮೆ ಯಾಚಿಸಬೇಕು' ಎಂದು ಆಗ್ರಹಿಸಿದರು. ಇದನ್ನು ಕಾಂಗ್ರೆಸ್ ಸದಸ್ಯರು ಒಪ್ಪದಿದ್ದಾಗ ಇದು ಕೋಲಾಹಲಕ್ಕೆ ಕಾರಣವಾಯಿತು.

ಎರಡೂ ಪಕ್ಷಗಳ ಸದಸ್ಯರ ಮಧ್ಯೆ ವಾಕ್ಸಮರ ಮುಗಿಯದಿದ್ದಾಗ ಸಭಾಧ್ಯಕ್ಷ ಖಾದರ್ ಅವರು 'ನೀವು ಧರಣಿ ಮಾಡಿಕೊಂಡೇ ಇರಿ ಭೋಜನ ವಿರಾಮವನ್ನೂ ನೀಡುವುದಿಲ್ಲ' ಎಂದು ರೇಗಿ ಸದನವನ್ನೂ ಮುಂದೂಡದೇ ಉಪಸಭಾಧ್ಯಕ್ಷರನ್ನು ಪೀಠದ ಮೇಲೆ ಕೂರಿಸಿ ತೆರಳಿದರು. ಇದು ಬಿಜೆಪಿ ಸದಸ್ಯರನ್ನು ಕೆರಳಿಸಿತು. ಸರ್ಕಾರದ ವಿರುದ್ಧ ಧಿಕ್ಕಾರಗಳ ಘೋಷಣೆ ಮೊಳಗಿಸಿದರು. ಗದ್ದಲ ಹೆಚ್ಚಾಯಿತು.

ಜೆಡಿಎಸ್ ಸದಸ್ಯರೂ ಧರಣಿಗೆ ಜತೆಗೂಡಿದರು. ನಂತರ ಬಿಜೆಪಿ ಸದಸ್ಯರು ಮಸೂದೆಗಳ ಪ್ರತಿಗಳನ್ನು ಹರಿದು ಸಭಾಧ್ಯಕ್ಷರ ಪೀಠದತ್ತ ತೂರಿದರು. ಕೆಲವೊಂದು ಹಾಳೆಗಳು ಪೀಠದಲ್ಲಿದ್ದ ಉಪ ಸಭಾಧ್ಯಕ್ಷ ರುದ್ರಪ್ಪ ಲಮಾಣಿ ಅವರ ಮುಖ, ಮೈಮೇಲೆ ಬಿದ್ದವು. ಪ್ರತಿಭಟನಾನಿರತ ಶಾಸಕರನ್ನು ಸದನದಿಂದ ಹೊರ ಹಾಕುವಂತೆ ಉಪ ಸಭಾಧ್ಯಕ್ಷರು ಮಾರ್ಷಲ್‌ಗಳಿಗೆ ಸೂಚಿಸಿದರು. ಗದ್ದಲ ಜೋರಾಗುತ್ತಿದ್ದಂತೆ ಸದನವನ್ನು ಮಧ್ಯಾಹ್ನ 3 ಕ್ಕೆ ಮುಂದೂಡಲಾಯಿತು. ಈ ಮಧ್ಯೆ ಸಭಾಧ್ಯಕ್ಷ ಖಾದರ್ ಅವರು ಕಾಗದ ತೂರಿದವರನ್ನು ವಿಡಿಯೊ ದೃಶ್ಯಾವಳಿ ಮೂಲಕ ಗುರುತಿಸಿ ಅವರನ್ನು ಅಮಾನತುಗೊಳಿಸಲು ತೀರ್ಮಾನಿಸಿದರು. ಇದಕ್ಕೆ ಪ್ರತಿಯಾಗಿ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಸಭಾಧ್ಯಕ್ಷರ ವಿರುದ್ಧ ಅವಿಶ್ವಾಸದ ನಿರ್ಣಯ ಮಂಡಿಸಲು ನೋಟಿಸ್ ಕೂಡ ನೀಡಿದರು.

ಶಾಸಕರ ತೆರವಿಗೆ ಹರ ಸಾಹಸ: 'ಬಿಜೆಪಿಯ 10 ಸದಸ್ಯರು ಅಶಿಸ್ತಿನಿಂದ ವರ್ತಿಸಿ, ಸದನಕ್ಕೆ ಅಗೌರವ ತೋರಿದ್ದಾರೆ. ಇವರ ನಡವಳಿಕೆ ಕಪ್ಪು ಚುಕ್ಕೆ. ದ್ರೋಹ ಮತ್ತು ಮೋಸ ಮಾಡಿದ್ದಾರೆ. ಆದ್ದರಿಂದ ಇವರೆಲ್ಲರನ್ನೂ ಈ ಅಧಿವೇಶನ ಮುಗಿಯುವವರೆಗೆ ಸದನದಿಂದ ಅಮಾನತುಗೊಳಿಸಲಾಗಿದೆ' ಎಂದ ಸಭಾಧ್ಯಕ್ಷ ಖಾದರ್, ಅಮಾನತುಗೊಂಡವರ ಹೆಸರುಗಳನ್ನು ಓದಿದರು. ಅವರೆಲ್ಲರನ್ನೂ ಹೊರಗೆ ಕಳುಹಿಸುವಂತೆ ಮಾರ್ಷಲ್‌ಗಳಿಗೆ ಸೂಚಿಸಿ, ಕಲಾಪವನ್ನು 10 ನಿಮಿಷಗಳ ಕಾಲ ಮುಂದೂಡಿದರು.

6ನೇ ಪುಟ ನೋಡಿ

ಅಮಾನತು ಆದವರು

- ಆರ್‌.ಅಶೋಕ
- ಡಾ.ಸಿ.ಎನ್‌.ಅಶ್ವತ್ಥನಾರಾಯಣ
- ಆರಗ ಜ್ಞಾನೇಂದ್ರ
- ಸುನಿಲ್‌ಕುಮಾರ್
- ವೇದವ್ಯಾಸ ಕಾಮತ್
- ಯಶಪಾಲ್ ಸುವರ್ಣ
- ಧೀರಜ್ ಮುನಿರಾಜು
- ಭರತ್ ಶೆಟ್ಟಿ
- ಅರವಿಂದ ಬೆಲ್ಲದ
- ಉಮಾನಾಥ ಕೋಟ್ಯಾನ್

ಜೈನ ಮುನಿ ಕೊಲೆ ಪ್ರಕರಣ ಸಿಐಡಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕೋಡಿ ಹಿರೇಕೋಡಿ ನಂದಿ ಪರ್ವತ ಆಶ್ರಮದ ಕಾಮಕುಮಾರ ನಂದಿ ಮಹಾರಾಜ ಮುನಿ ಕೊಲೆ ಪ್ರಕರಣದ ತನಿಖೆಯನ್ನು ಸಿಐಡಿಗೆ ವರ್ಗಾಯಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಕಟಿಸಿದರು.

ವಿಧಾನಸಭೆಯಲ್ಲಿ ಬುಧವಾರ ಹೇಳಿಕೆ ನೀಡಿದ ಅವರು, 'ಜೈನ ಮುನಿ ಕೊಲೆ ಪ್ರಕರಣದಲ್ಲಿ ನಾರಾಯಣ ಮಾಳಿ, ಹಸನ್‌ಸಾಬ ಮಕ್ಬೂಲ್ ದಲಾಯತ್ ಅವರನ್ನು ಬಂಧಿಸಲಾಗಿದೆ. ಹಣಕಾಸಿನ ವ್ಯವಹಾರದ ಸಂಬಂಧ ಕೊಲೆ ನಡೆದಿದೆ ಎಂಬುದು ವಿಚಾರಣೆ ವೇಳೆ ಗೊತ್ತಾಗಿದೆ. ಪ್ರಕರಣದ ತನಿಖೆಯನ್ನು ಸಿಐಡಿಗೆ ವರ್ಗಾವಣೆ ಮಾಡಲಾಗುವುದು' ಎಂದು ತಿಳಿಸಿದರು.

'ಆ.16ರಿಂದ 'ಗೃಹಲಕ್ಷ್ಮಿ'ಯರಿಗೆ ಹಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೃಹಲಕ್ಷ್ಮಿ ಯೋಜನೆಯಡಿ ಆಗಸ್ಟ್ 16ರಿಂದ ಪ್ರತಿ ಕುಟುಂಬದ ಯಜಮಾನಿಯ ಖಾತೆಗೆ ತಿಂಗಳಿಗೆ ₹ 2,000 ಜಮಾ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಕಟಿಸಿದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್ ನಲ್ಲಿ ಬುಧವಾರ ನಡೆದ ಸಮಾರಂಭದಲ್ಲಿ ಗೃಹಲಕ್ಷ್ಮಿ ಯೋಜನೆಯ ಫಲಾನುಭವಿ ಗಳ ನೋಂದಣಿಗೆ ಚಾಲನೆ ನೀಡಿ ಮಾತನಾಡಿದ ಅವರು, ನೆರವು ವಿತರಣೆಯ ಆರಂಭದ ದಿನಾಂಕವನ್ನು ಘೋಷಿಸಿದರು.

'ಚುನಾವಣೆಗೂ ಮುನ್ನ ನಾವು ಕೊಟ್ಟ ಮಾತಿನಂತೆ ಐದೂ ಗ್ಯಾರಂಟಿಗಳನ್ನು ಜಾರಿಗೊಳಿಸುತ್ತೇವೆ. ಈ ಯೋಜನೆಗಳ ಅನುಷ್ಠಾನದಿಂದ ರಾಜ್ಯವು ಆರ್ಥಿಕ ಸಂಕಷ್ಟಕ್ಕೆ ಸಿಲುಕಲಿದೆ ಎಂಬ ಮಾತುಗಳನ್ನು ಕೆಲವರು ಆಡುತ್ತಿದ್ದಾರೆ. ಅಂತಹ ಮಾತುಗಳಿಗೆ ಯಾವ ಬೆಲೆಯೂ ಇಲ್ಲ' ಎಂದರು.

ಚಲನಶೀಲತೆಗೆ ನೆರವು: ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, 'ಗೃಹಲಕ್ಷ್ಮಿ ಯೋಜನೆಯು ರಾಜ್ಯದ ಕೋಟ್ಯಂತರ ಕುಟುಂಬಗಳಲ್ಲಿ ಬೆಳಕು ತರಲಿದೆ. ಮಹಿಳೆಯರ ಕೈಗೆ ಸಿಗುವ ಹಣ ಆರ್ಥಿಕತೆಯಲ್ಲಿ ಚಲನಶೀಲತೆಗೆ ನೆರವಾಗಲಿದೆ' ಎಂದು ಹೇಳಿದರು.

7ನೇ ಪುಟ ನೋಡಿ

ಅಂಕಿ-ಅಂಶಗಳು

1.28 ಕೋಟಿ
ಒಟ್ಟು ಫಲಾನುಭವಿಗಳು

₹2,000
ತಿಂಗಳಿಗೆ ತಲಾ

₹24,000
ಪ್ರತಿ ಫಲಾನುಭವಿಗೆ ವರ್ಷಕ್ಕೆ

ನೆರವಿಗೆ ಉಚಿತ ಸಹಾಯವಾಣಿ

ಗೃಹ ಲಕ್ಷ್ಮಿ ಯೋಜನೆಯ ಫಲಾನುಭವಿಗಳ ನೋಂದಣಿಗೆ ಸಲಹೆ ಪಡೆಯಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಉಚಿತ ಸಹಾಯವಾಣಿ ಆರಂಭಿಸಿದೆ. ದೂರವಾಣಿ ಸಂಖ್ಯೆ 1902ಕ್ಕೆ ಕರೆಮಾಡಿ ನೆರವು ಪಡೆಯಬಹುದು. ಆಯಾ ತಾಲ್ಲೂಕಿನಲ್ಲಿ ಈ ಯೋಜನೆಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಬರುವ ಅಹವಾಲು ಪರಿಶೀಲಿಸಿ ಪರಿಹಾರ ಸೂಚಿಸುವ ಹೊಣೆ ಯನ್ನು ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ನೀಡಲಾ ಗಿದೆ. ಇಲಾಖೆಯ ಜಿಲ್ಲಾ ಉಪ ನಿರ್ದೇ ಶಕರು ಜಿಲ್ಲಾ ಮಟ್ಟದ ಅಪೀಲು ಪ್ರಾಧಿಕಾರಿಯಾಗಿ ಕಾರ್ಯನಿರ್ವಹಿಸಲಿದ್ದಾರೆ.

ತೀಸ್ತಾ ಸೆಟಲ್ವಾಡ್‌ಗೆ ಜಾಮೀನು

ನವದೆಹಲಿ (ಪಿಟಿಐ): ಗೋಧ್ರೋತ್ತರ ಗಲಭೆಗಳ ಪ್ರಕರಣದಲ್ಲಿ ಸಾಮಾಜಿಕ ಹೋರಾಟಗಾರ್ತಿ ತೀಸ್ತಾ ಸೆಟಲ್ವಾಡ್ ಅವರಿಗೆ ಸುಪ್ರೀಂ ಕೋರ್ಟ್ ಬುಧವಾರ ನಿಯಮಿತ (ರೆಗ್ಯುಲರ್) ಜಾಮೀನು ನೀಡಿದೆ. 11

ಮೋದಿ ಮೌನವೇ 'ಇಂಡಿಯಾ'ಗೆ ಅಸ್ತ್ರ

ನವದೆಹಲಿ: ಮಣಿಪುರದ ಹಿಂಸಾಚಾರ ಮತ್ತು ದೆಹಲಿ ಸುಗ್ರೀವಾಜ್ಞೆಗೆ ಸಂಬಂಧಿಸಿದಂತೆ ಆಡಳಿತಾರೂಢ ಬಿಜೆಪಿ ಹಾಗೂ ಪ್ರತಿಪಕ್ಷಗಳ ನಡುವೆ ಸಂಸತ್‌ನ ಹೊರಗೆ ಈಗಾಗಲೇ ರಾಜಕೀಯ ಸಂಘರ್ಷ ಉತ್ತುಂಗಕ್ಕೇರಿದೆ. ಇದರ ಬೆನ್ನಲ್ಲೇ ಗುರುವಾರದಿಂದ ಮುಂಗಾರು ಅಧಿವೇಶನ ಆರಂಭವಾಗುತ್ತಿದೆ. ಈ ಸಂಘರ್ಷ ಸಂಸತ್‌ನ ಒಳಗೂ ಪ್ರವೇಶಿಸಲಿದ್ದು, ಸುಗಮ ಕಲಾಪ ನಡೆಸುವುದು ಕೇಂದ್ರ ಸರ್ಕಾರಕ್ಕೆ ಸವಾಲಾಗಿ ಪರಿಣಮಿಸಿದೆ. 10

ಒಳ ಪುಟಗಳು

'ಜೀತೆಗಾ ಭಾರತ್' ಟ್ಯಾಗ್‌ಲೈನ್‌ಗೆ ಅಸ್ತು 10

ಮಹಾರಾಷ್ಟ್ರ, ಗುಜರಾತ್, ಜಮ್ಮುವಿನಲ್ಲಿ ಭಾರಿ ಮಳೆ 11

ಚಿನಕುರಳಿ

ಪ್ರಕಾಶ್ ಶೆಟ್ಟಿ

ಮಹಾರಾಷ್ಟ್ರ: ಒಂದು ತಿಂಗಳಲ್ಲೇ 3 ಕೋಟಿ ರೂಪಾಯಿ ಆದಾಯ

ರೈತನಿಗೆ ಸಿರಿವಂತಿಕೆ ತಂದ ಟೊಮೆಟೊ

ಪುಣೆ (ಪಿಟಿಐ): ದಿನೇ ದಿನೇ ಟೊಮೆಟೊ ಬೆಲೆ ಗಗನಕ್ಕೇರುತ್ತಿದ್ದು ಜನಸಾಮಾನ್ಯರಿಗೆ ಹೊರೆಯಾಗಿ ಪರಿಣಮಿಸಿದ್ದರೆ, ಮಹಾರಾಷ್ಟ್ರದ ಪುಣೆ ಜಿಲ್ಲೆಯ ರೈತರೊಬ್ಬರು ಟೊಮೆಟೊ ಮಾರಿ ತಿಂಗಳೊಪ್ಪತ್ತಿನಲ್ಲೇ ₹ 3 ಕೋಟಿ ಆದಾಯ ಗಳಿಸಿದ್ದಾರೆ.

ಪುಣೆ ಜಿಲ್ಲೆಯ ಜುನ್ನಾರ್ ತಾಲ್ಲೂಕಿನ ಪಾಚ್‌ಘರ್ ಗ್ರಾಮದ ಈಶ್ವರ್ ಗಾಯ್ಕರ್ ಭರ್ಜರಿ ಆದಾಯ ಗಳಿಸಿದ ರೈತ.

ಇದೇ ವರ್ಷ ಮೇ ತಿಂಗಳಲ್ಲಿ ಟೊಮೆಟೊ ಬೆಳೆದಿದ್ದ ಈಶ್ವರ್, ಬೆಲೆ ಕುಸಿತದಿಂದಾಗಿ ಬೆಳೆಯನ್ನು ರಸ್ತೆಗೆ ಎಸೆಯಬೇಕಾದ ಕಠಿಣ ಸವಾಲನ್ನು ಎದುರಿಸಬೇಕಾಯಿತು. ಆದರೂ ವಿಚಲಿತರಾಗದೇ ಈಗಾಗಲೇ ತಮ್ಮ 12 ಎಕರೆಯಲ್ಲಿ ಬೆಳೆಯುತ್ತಿದ್ದ ಟೊಮೆಟೊ ಬೆಳೆಯನ್ನು ಉಳಿಸಿಕೊಳ್ಳುವ ಅಚಲ ನಿರ್ಧಾರವನ್ನು ಕೈಗೊಂಡರು. ಇದಕ್ಕಾಗಿ ಹಗಲೂ ರಾತ್ರಿ ದಣಿವರಿಯದೇ ದುಡಿದರು.

ಮಹಾರಾಷ್ಟ್ರದ ಪುಣೆ ಜಿಲ್ಲೆಯ ಪಾಚ್‌ಘರ್ ಗ್ರಾಮದ ತಮ್ಮ ಟೊಮೆಟೊ ಹೊಲದಲ್ಲಿ ಪತ್ನಿಯೊಂದಿಗೆ ರೈತ ಈಶ್ವರ್ ಗಾಯ್ಕರ್ —ಪಿಟಿಐ ಚಿತ್ರ

ಜೂನ್ 11ರಿಂದ ಜುಲೈ 18ರ ನಡುವೆ ಜುನ್ನಾರ್ ತಾಲ್ಲೂಕಿನ ನಾರಾಯಣಗಾಂವ್ ಎಪಿಎಂಸಿಯಲ್ಲಿ 18 ಸಾವಿರ ಕ್ರೇಟ್‌ಗಳಷ್ಟು (1 ಕ್ರೇಟ್‌ಗೆ 20 ಕೆಜಿ) ಟೊಮೆಟೊ ಮಾರಿರುವ ಈಶ್ವರ್ ₹ 3 ಕೋಟಿ ಗಳಿಸಿದ್ದಾರೆ. ಉಳಿದಿರುವ ಸುಮಾರು 4 ಸಾವಿರ ಕ್ರೇಟ್‌ಗಳಷ್ಟು ಟೊಮೆಟೊ ಮಾರಿ ₹ 50 ಲಕ್ಷ ಹೆಚ್ಚುವರಿ ಆದಾಯ ಪಡೆಯುವ ನಿರೀಕ್ಷೆ ಅವರದ್ದು.

'ಟೊಮೆಟೊ ಬೆಳೆಯಲು, ನಿರ್ವಹಣೆ ಮತ್ತು ಸಾಗಣೆಗಾಗಿ ಒಟ್ಟು ₹ 40 ಲಕ್ಷ ವೆಚ್ಚವಾಗಿದೆ.

ಜೂನ್ 11ರಂದು ಒಂದು ಕ್ರೇಟ್‌ಗೆ ₹770ರಂತೆ ಮಾರಿದ್ದೆ. ಆಗ ಬೆಲೆ ಕೆಜಿಗೆ ₹37ರಿಂದ 38 ಇತ್ತು. ಆದರೆ ಜುಲೈ 18ರಂದು ಒಂದು ಕ್ರೇಟ್‌ಗೆ ₹2,200 ಪಡೆದಿದ್ದೆ. ಆಗ 1 ಕೆಜಿಗೆ ₹110 ಆಗಿತ್ತು' ಎಂದು ಈಶ್ವರ್ ಮಾಹಿತಿ ನೀಡಿದರು.

'ಟೊಮೆಟೊ ಬೆಳೆಗಾರರಿಗೆ ಇದು ಉತ್ತಮ ಸಮಯ. ಆದರೆ, ನಾನು ಕೆಟ್ಟ ಸಮಯವನ್ನೂ ನೋಡಿದ್ದೇನೆ. ಇದೇ ವರ್ಷದ ಮೇ ತಿಂಗಳಲ್ಲಿ ಒಂದು ಎಕರೆಯಷ್ಟು ಮಾತ್ರ ಟೊಮೆಟೊ ಬೆಳೆ ಕೈಗೆ ಬಂದಿತ್ತು. ಆದರೆ ಆಗ ಬೆಲೆ ತೀವ್ರ ಕುಸಿತವಾಗಿದ್ದರಿಂದ ಬೆಳೆದ ಬಹುಪಾಲು ಬೆಳೆಯನ್ನು ಎಸೆಯಬೇಕಾಯಿತು. ಆಗ ಪ್ರತಿ ಕ್ರೇಟ್ ದರ ಕೇವಲ ₹ 50 ಇತ್ತು. ಅಂದರೆ 1 ಕೆ.ಜಿ.ಟೊಮೆಟೊಗೆ ಕೇವಲ ಎರಡೂವರೆ ರೂಪಾಯಿ ಇತ್ತು' ಎಂದು ಅವರು ನೆನಪಿಸಿಕೊಂಡರು.

ದೀರ್ಘಕಾಲದ ಕೀಲು ನೋವು, ಮಂಡಿ ನೋವು, ಸೊಂಟ ನೋವು, ಬೆನ್ನು ನೋವಿಗೆ ಆಯುರ್ವೇದದ ದಿವ್ಯೌಷಧ.

AMRITH NONI

ಅಮೃತ್‌ನೋನಿ ಆರ್ಥೋಪ್ಲಸ್

ವಯಸ್ಸಾದಂತೆ ಕೀಲುಗಳಲ್ಲಿ cartilage ನ ಕೊರತೆಯಿಂದ ಮೂಳೆಗಳ ಸವೆತ ಉಂಟಾಗಿ, ಕೀಲುನೋವು, ಮಂಡಿನೋವು, ಬೆನ್ನುನೋವು ಹಾಗೂ ಸ್ನಾಯುಗಳಲ್ಲಿ ಸೆಳೆತ ಉಂಟಾಗುತ್ತದೆ. ಇಂತಹ ದೀರ್ಘಕಾಲದ ಸಮಸ್ಯೆಗಳಿಗೆ ಆಯುರ್ವೇದದಲ್ಲಿ ಉಲ್ಲೇಖವಿರುವ ನೋನಿ ಹಣ್ಣಿನ ಸಾರ, ಗುಗ್ಗುಲು, ರಸ್ನ, ಶಲಾಕಿ, ಎರಂಡಮೂಲ, ನಿರ್ಗುಂಡಿ, ಗೋಕ್ಷುರಾ, ದಶಮೂಲ ಮುಂತಾದ ಔಷಧೀಯ ಗಿಡಮೂಲಿಕೆಗಳಿಂದ ಅಮೃತ್‌ನೋನಿ ಆರ್ಥೋಪ್ಲಸ್ ಸಮೃದ್ಧವಾಗಿದ್ದು, ನುರಿತ ಆಯುರ್ವೇದ ಪಂಡಿತರು ಹಾಗೂ ವಿಜ್ಞಾನಿಗಳ ಸಂಶೋಧನೆಯಿಂದ ಹೊರತರಲಾಗಿದೆ.



ನೋನಿ : ನೋನಿ ಹಣ್ಣು 164 ಕ್ಕೂ ಹೆಚ್ಚು ಅಗತ್ಯ ಪೋಷಕಾಂಶಗಳನ್ನು ಮತ್ತು 700 ಕ್ಕೂ ಹೆಚ್ಚು ಫೈಟೊಕೆಮಿಕಲ್‌ಗಳನ್ನು ಒಳಗೊಂಡಿದೆ. ಮತ್ತು ಕೀಲು ನೋವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ.

ಶಲಾಕಿ : ಶಲಾಕಿಯಲ್ಲಿ ಉರಿ ಊತ ಮತ್ತು ಸಂಧಿವಾತದ ನಿರ್ವಹಣೆಯ ಗುಣ ಇರುತ್ತದೆ.

ಎರಂಡಮೂಲ : ಆರೋಗ್ಯಕರ ಸ್ನಾಯುಗಳು ಮತ್ತು ಕೀಲುಗಳನ್ನು ಕಾಪಾಡಿಕೊಳ್ಳಲು ಮತ್ತು ವಾತ ದೋಷವನ್ನು ಸಮತೋಲನಗೊಳಿಸಲು ಸಹಾಯಕವಾಗಿದೆ.

ನಿರ್ಗುಂಡಿ : ಇದು ಕೀಲು ನೋವು ಮತ್ತು ಸ್ನಾಯು ಸೆಳೆತವನ್ನು ಹೊಂದಿರುವವರಿಗೆ ಸಂಧಿವಾತ ತಗ್ಗಿಸಲು ಸಹಾಯ ಮಾಡುತ್ತದೆ.

ಗೋಕ್ಷುರಾ : ಗೋಕ್ಷುರಾ ನೋವು ಮತ್ತು ಉರಿಯೂತವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.

ನಿಮ್ಮ ಆರೋಗ್ಯ ಸಂಬಂಧಿ ಸಮಸ್ಯೆಗಳಿಗೆ ನುರಿತ ವೈದ್ಯರಿಂದ ಉಚಿತ ಸಲಹೆ ಹಾಗು ಸಮಾಲೋಚನೆಗಾಗಿ ಸಂಪರ್ಕಿಸಿ.
+91 95136 13362

ಎಲ್ಲಾ ಆಯುರ್ವೇದಿಕ್ ಹಾಗೂ ಮೆಡಿಕಲ್ ಸ್ಟೋರ್‌ಗಳಲ್ಲಿ ಲಭ್ಯ.

Marketed by Om Sree Marketing Solutions Pvt. Ltd.

To order online : www.amrithnoni.com

ಕುಲಸಚಿವರಾಗಿ ಶೇಕ್ ಲತೀಫ್

ಶೇಕ್ ಲತೀಫ್

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ನೂತನ ಕುಲಸಚಿವರಾಗಿ (ಆಡಳಿತ) ಕೆಎಎಸ್ ಅಧಿಕಾರಿ ಶೇಕ್ ಲತೀಫ್ ಅಧಿಕಾರ ಸ್ವೀಕರಿಸಿದ್ದಾರೆ.

ನೈಋತ್ಯ ರೈಲ್ವೆ G20

ಟೆಂಡರ್ ಸೂಚನೆ ಸಂ. CAO/CN/BNC/100/2022 ದಿನಾಂಕ: 26.10.2022 ಗೆ ತಿದ್ದುಪಡಿ

ಕಾಮಗಾರಿಯ ವಿವರಣೆ	ಅಂದಾಜು ಮೌಲ್ಯ
ಸಿಗ್ನಲಿಂಗ್ ಟೆಲಿಕಮ್ಯುನಿಕೇಶನ್ ಮತ್ತು ಎಲೆಕ್ಟ್ರಿಕಲ್ ಕೆಲಸಗಳು (17.18ಕಿಮೀ) ಸೇರಿದಂತೆ ಮಲುಗೂರಿನಿಂದ (ಸಿಎಚ್:0.000) ಪಾಲಸಮುದ್ರ, ದವರೆಗೆ (ಸಿಎಚ್:17180.000) ವಿದ್ಯುದೀಕೃತ ಹೊಸ ಬ್ರಾಡ್ ಗೇಜ್ ಲೈನ್ ಟ್ರ್ಯಾಕ್ ನಿರ್ಮಾಣ (ಟೆಂಡರ್ ಉಲ್ಲೇಖ ಸಂಖ್ಯೆ: MLU-PALASAMUDRAM-EPC-01).	ರೂ. 232,05,30,000/-

ಅಸ್ತಿತ್ವದಲ್ಲಿರುವ ಬಿಡ್ ಅಂತಿಮ ದಿನಾಂಕ: 02-08-2023, 15:00 ಗಂಟೆಯವರೆಗೆ
ಪರಿಷ್ಕೃತ ಬಿಡ್ ಅಂತಿಮ ದಿನಾಂಕ: 21-08-2023, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್/ನಿರ್ಮಾಣ/ಕಾಮಗಾರಿಗಳು ಬೆಂಗಳೂರು ಕಂಟೋನ್ಮೆಂಟ್

PUB/249/AAV/PRB/SWR/2023-24

S.W.Railways | SWRRLY | SWRRLY

ನಕ್ಷೆ ಉಲ್ಲಂಘನೆ: ಕಟ್ಟಡ ತೆರವು ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ದಕ್ಷಿಣ ವಲಯದಲ್ಲಿ ನಕ್ಷೆ ಉಲ್ಲಂಘಿಸಿ ನಿರ್ಮಾಣವಾಗಿರುವ ಕಟ್ಟಡಗಳ ತೆರವು ಕಾರ್ಯಾಚರಣೆ ಬುಧವಾರ ಆರಂಭಗೊಂಡಿದೆ.

ಬಸವನಗುಡಿಯ ಗಿರಿನಗರದಲ್ಲಿ ಒಂದು ಅಂತಸ್ತನ್ನೇ ಹೆಚ್ಚುವರಿಯಾಗಿ ನಿರ್ಮಾಣ ಮಾಡಲಾಗುತ್ತಿತ್ತು. ನಗರ ಯೋಜನೆ ಅಧಿಕಾರಿಗಳ ನೇತೃತ್ವದಲ್ಲಿ ಬಿಬಿಎಂಪಿ ಸಿಬ್ಬಂದಿ ಕಟ್ಟಡವನ್ನು ತೆರವುಗೊಳಿಸಿದರು.

ಚಿಕ್ಕಪೇಟೆ, ಬಸವನಗುಡಿ, ಪದ್ಮನಾಭ ನಗರ, ಬಿಟಿಎಂ ಲೇಔಟ್, ಜಯನಗರ, ವಿಜಯನಗರ ವಿಧಾನಸಭೆ ಕ್ಷೇತ್ರಗಳ ವ್ಯಾಪ್ತಿಯಲ್ಲಿ 80 ಕಟ್ಟಡಗಳು ನಕ್ಷೆ ಉಲ್ಲಂಘಿಸಿ ನಿರ್ಮಾಣವಾಗಿರುವುದು ಸಾಬೀತಾಗಿದೆ.

2018ರಿಂದ 2023ರವರೆಗೆ ನಕ್ಷೆ ಅನುಮೋದನೆಯಾಗಿರುವ ಕಟ್ಟಡಗಳೇ ಇದರಲ್ಲಿ ಹೆಚ್ಚಿವೆ.

2010, 2014, 2015ರಲ್ಲೂ ಮಂಜೂರಾದ ನಕ್ಷೆಗಳ ಕಟ್ಟಡಗಳಲ್ಲೂ ಉಲ್ಲಂಘನೆಯಾಗಿದ್ದು, ನ್ಯಾಯಾಲಯದ ತಡೆಯಾಜ್ಞೆಗಳಿದ್ದವು. ಅವುಗಳ ತಡೆಯಾಜ್ಞೆ ತೆರವಾಗಿದ್ದು, ಅಕ್ರಮ ಕಟ್ಟಡಗಳ ತೆರವು ಕಾರ್ಯಾಚರಣೆ ಆರಂಭವಾಗಿದೆ.

'ನಕ್ಷೆ ಉಲ್ಲಂಘಿಸಿ ಕಟ್ಟಡ ನಿರ್ಮಿಸಲಾಗಿದೆ' ಎನ್ನುವ ದೂರು ಜನರಿಂದ ಬಂದಿದ್ದವು. ಈ ದೂರು ಆಧರಿಸಿ ವಿಚಾರಣೆ ನಡೆಸಿರುವ ನಗರ ಯೋಜನಾ ಅಧಿಕಾರಿಗಳು, ಅಕ್ರಮವಾಗಿ ಕಟ್ಟಿರುವುದನ್ನು ದಾಖಲೆ ಸಹಿತ ಸಾಬೀತುಪಡಿಸಿದ್ದಾರೆ. ಇದಾದ ಮೇಲೆ, ಸ್ಥಳ ಪರಿಶೀಲನೆ ನಡೆಸಲಾಗಿದ್ದು, ನಕ್ಷೆ ಉಲ್ಲಂಘಿಸಿ ನಿರ್ಮಿಸಲಾಗಿರುವ ಕಟ್ಟಡಗಳ ತೆರವಿಗೆ ಆದೇಶ ಹೊರಡಿಸಲಾಗಿದೆ. ಕಟ್ಟಡಗಳ ಮೇಲೆ ಎಷ್ಟು ಹೆಚ್ಚುವರಿಯಾಗಿ ನಿರ್ಮಿಸಲಾಗಿದೆ ಎಂಬುದನ್ನು ಕಳೆದ ವಾರ ಕೆಂಪು ಬಣ್ಣದಿಂದ ಬರೆಯಲಾಗಿತ್ತು.

ದಕ್ಷಿಣ ವಲಯದಲ್ಲಿ ಒಟ್ಟು 80 ಕಟ್ಟಡಗಳನ್ನು ನಕ್ಷೆ ಉಲ್ಲಂಘಿಸಿ ನಿರ್ಮಿಸಲಾಗಿದೆ. ಇವುಗಳ ಬಗ್ಗೆ ಪರಿಶೀಲನೆ ನಡೆಸಿ, ನೋಟಿಸ್ ನೀಡಿ, ತೆರವಿಗೆ ಆದೇಶ ನೀಡಲಾಗಿತ್ತು. ಈ ಹಿಂದೆ ಕೆಲವು ಪ್ರಕರಣಗಳಲ್ಲಿ ನ್ಯಾಯಾಲಯ ತಡೆಯಾಜ್ಞೆ ನೀಡಿತ್ತು. ಅವೆಲ್ಲ ತೆರವಾಗಿದ್ದು, ತೆರವು ಕಾರ್ಯಾಚರಣೆ ಆರಂಭವಾಗಿದೆ ಎಂದು ದಕ್ಷಿಣ ವಲಯ ಆಯುಕ್ತ ಜಯರಾಂ ರಾಯಪುರ ತಿಳಿಸಿದರು.

ಬಸವನಗುಡಿಯ ಗಿರಿನಗರದಲ್ಲಿ ನಕ್ಷೆ ಉಲ್ಲಂಘಿಸಿ ನಿರ್ಮಾಣವಾಗಿದ್ದ ಒಂದು ಅಂತಸ್ತನ್ನು ಬಿಬಿಎಂಪಿ ಸಿಬ್ಬಂದಿ ಬುಧವಾರ ತೆರವುಗೊಳಿಸಿದರು

ಎಲ್ಲೆಲ್ಲಿ ಉಲ್ಲಂಘನೆ?

ಪ್ರದೇಶ	ಸಂಖ್ಯೆ
ಚಿಕ್ಕಪೇಟೆ	31
ಜಯನಗರ	18
ಬಸವನಗುಡಿ	16
ಪದ್ಮನಾಭನಗರ	9
ಬಿಟಿಎಂ ಲೇಔಟ್	5
ವಿಜಯನಗರ	1
ಒಟ್ಟು	80

ರಾಜಕಾಲುವೆ ಒತ್ತುವರಿ ತೆರವಿಗೆ ಮತ್ತೊಮ್ಮೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ರಾಜಕಾಲುವೆ ಒತ್ತುವರಿ ಕಾರ್ಯಾಚರಣೆಯನ್ನು ತ್ವರಿತವಾಗಿ ನಡೆಸಬೇಕು ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ಬಿಬಿಎಂಪಿ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಬೃಹತ್ ನೀರುಗಾಲುವೆಗಳ ಒತ್ತುವರಿ ತೆರವು ಕಾರ್ಯಾಚರಣೆಗೆ ಸಂಬಂಧಿಸಿದಂತೆ ಅಧಿಕಾರಿಗಳ ಸಭೆ ನಡೆಸಿದ ಅವರು, ಎಂಟೂ ವಲಯಗಳಲ್ಲಿ ಬಾಕಿಯಿರುವ ಒತ್ತುವರಿಯನ್ನು ತೆರವು ಮಾಡಬೇಕು. ಎಲ್ಲಿಯೂ ಜಲಾವೃತವಾಗದಂತೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದರು.

ತುಷಾರ್ ಗಿರಿನಾಥ್

2015-16ರಿಂದ ಇದುವರೆಗೆ ಒಟ್ಟಾರೆ 2,951 ಒತ್ತುವರಿಗಳನ್ನು ಗುರುತಿಸಲಾಗಿದೆ. ಈ ಪೈಕಿ 2,183 ಒತ್ತುವರಿಗಳನ್ನು ತೆರವುಗೊಳಿಸಲಾಗಿದ್ದು, 768 ಬಾಕಿ ಉಳಿದಿವೆ.

ಇದರಲ್ಲಿ 123 ಪ್ರಕರಣಗಳು ನ್ಯಾಯಾಲಯಕ್ಕೆ ಸಂಬಂಧಿಸಿದ್ದಾಗಿದ್ದು, 568 ಒತ್ತುವರಿಗಳ ತೆರವು ಕಾರ್ಯಾಚರಣೆಗೆ ಸಂಬಂಧಿಸಿದಂತೆ ಭೂಮಾಪಕರಿಂದ ಮಾರ್ಕಿಂಗ್ ಪ್ರಕ್ರಿಯೆ ನಡೆದಿದೆ. ತಹಶೀಲ್ದಾರರಿಂದ ನೋಟಿಸ್ ನೀಡಲಾಗುತ್ತಿದೆ. ಹಂತ-ಹಂತವಾಗಿ ತ್ವರಿತಗತಿಯಲ್ಲಿ ಎಲ್ಲ ಅನಧಿಕೃತ ಒತ್ತುವರಿಗಳ ತೆರವು ಕಾರ್ಯಾಚರಣೆ ಕಾರ್ಯ ನಡೆಯಲಿದೆ ಎಂದು ಅಧಿಕಾರಿಗಳು ಹಿಂದಿನ ಮಾಹಿತಿಯನ್ನೇ ನೀಡಿದರು.

ತೆರವು: ಪುಲಕೇಶಿನಗರ ಕ್ಷೇತ್ರದ ಶಾಂಪುರ ವ್ಯಾಪ್ತಿಯಲ್ಲಿ ನೀರುಗಾಲುವೆ ಒತ್ತುವರಿಯನ್ನು ತೆರವು ಮಾಡಲಾಯಿತು. ಸರ್ವೆ ಸಂಖ್ಯೆ 6, 12 ಮತ್ತು 12 ಸೇರಿದಂತೆ ಸುಮಾರು 700 ಮೀಟರ್ ಉದ್ದದ ನೀರುಗಾಲುವೆಯ ಮೇಲೆ 13 ಕಟ್ಟಡಗಳನ್ನು ನಿರ್ಮಾಣ ಮಾಡಿಕೊಂಡಿದ್ದು, ತಹಶೀಲ್ದಾರ್ ಅವರಿಂದ ನೋಟಿಸ್ ಕೂಡ ನೀಡಲಾಗಿತ್ತು.

ಮಹದೇವಪುರ ವಲಯ ಕಾಡುಗೋಡಿ ವಾರ್ಡ್ ಚನ್ನಸಂದ್ರ ವ್ಯಾಪ್ತಿಯಲ್ಲಿ ಸುಮಾರು 30 ಮೀಟರ್ ಉದ್ದದ ರಾಜಕಾಲುವೆಯಲ್ಲಿ ನಿರ್ಮಾಣ ಮಾಡಿಕೊಂಡಿದ್ದ ಮಳಿಗೆಗಳನ್ನು, ಸ್ವಪ್ರೇರಿತವಾಗಿ ಅವರೇ ತೆರವು ಮಾಡುತ್ತಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದರು.

ಸುದ್ದಿ 2 ನಿಮಿಷ

ಕಸಾಪ: ಒಡೆಯರ್ ಪುತ್ಥಳಿ ಅನಾವರಣ ನಾಳೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಇದೇ ಶುಕ್ರವಾರ ಸಂಜೆ 5 ಗಂಟೆಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪುತ್ಥಳಿ ಅನಾವರಣ ಕಾರ್ಯಕ್ರಮ ಹಮ್ಮಿಕೊಂಡಿದೆ.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪುತ್ಥಳಿಯು ಈ ಮೊದಲು ಚಾಮರಾಜಪೇಟೆಯಲ್ಲಿರುವ ಪರಿಷತ್ತಿನ ಕೇಂದ್ರ ಕಚೇರಿಯ ಮೊದಲ ಮಹಡಿಯಲ್ಲಿತ್ತು. ಕಸಾಪ ಅಧ್ಯಕ್ಷರ ಭೇಟಿಗೆ ಬಂದವರಿಗೆ ಮಾತ್ರ ಇದರ ದರ್ಶನವಾಗುತ್ತಿತ್ತು. ಆದ್ದರಿಂದ ಈ ಪುತ್ಥಳಿಯನ್ನು ಪರಿಷತ್ತಿನ ಆವರಣದಲ್ಲಿ ಸ್ಥಾಪಿಸಲಾಗುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಮೈಸೂರಿನ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಇದನ್ನು ಅನಾವರಣ ಮಾಡಲಿದ್ದಾರೆ.

'ಪುತ್ಥಳಿಯನ್ನು ಪರಿಷತ್ತಿನ ಆವರಣದಲ್ಲಿ ಸ್ಥಾಪನೆ ಮಾಡುವ ಮೂಲಕ ಸಮಸ್ತ ಕನ್ನಡಿಗರೂ ಗೌರವ ಸಲ್ಲಿಸುವ ಮುಕ್ತ ಅವಕಾಶ ಕಲ್ಪಿಸಲಾಗುತ್ತಿದೆ. ಈ ಮೂಲಕ ಕನ್ನಡ ಸಾಹಿತ್ಯ ಪರಿಷತ್ತು ತನ್ನ ಸಂಸ್ಥಾಪಕರನ್ನು ವಿಶೇಷವಾಗಿ ಗೌರವಿಸುತ್ತಿದೆ' ಎಂದು ಮಹೇಶ ಜೋಶಿ ಹೇಳಿದ್ದಾರೆ.

ಬಮೂಲ್ ಅಧ್ಯಕ್ಷರಾಗಿ ಎಚ್.ಪಿ.ರಾಜಕುಮಾರ್ ಆಯ್ಕೆ

ಬೊಮ್ಮನಹಳ್ಳಿ: ಬೆಂಗಳೂರು ಸಹಕಾರ ಹಾಲು ಒಕ್ಕೂಟದ (ಬಮೂಲ್) ಅಧ್ಯಕ್ಷರಾಗಿ ಕನಕಪುರ ಕ್ಷೇತ್ರದ ಎಚ್.ಪಿ.ರಾಜಕುಮಾರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಬಮೂಲ್‌ನ 20ನೇ ಅಧ್ಯಕ್ಷರಾಗಿ ಆಯ್ಕೆಯಾದ ರಾಜಕುಮಾರ್, ಕಳೆದ ಒಂಬತ್ತು ವರ್ಷಗಳಿಂದ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಬಾಕಿ ಇರುವ 9 ತಿಂಗಳ ಅವಧಿಗೆ ರಾಜ್‌ಕುಮಾರ್ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಲಿದ್ದಾರೆ.

'ಸ್ವತಃ ರೈತನಾಗಿರುವ ನಾನು, ರೈತರಿಗೆ ಬೆಂಬಲ ಬೆಲೆ ದೊರೆಯುವಂತೆ ಮಾಡುವುದು ನನ್ನ ಪ್ರಥಮ ಆದ್ಯತೆ. ಅದೇ ರೀತಿ ಸಂಸ್ಥೆಯ ಮಾರುಕಟ್ಟೆ ಮೌಲ್ಯ ವೃದ್ಧಿಸುವಂತೆ ಮಾಡುವುದು, ಪೈಪೋಟಿಯ ಮಾರುಕಟ್ಟೆ ವ್ಯವಸ್ಥೆಯಲ್ಲಿ ಸರಕಿನ ಗುಣಮಟ್ಟ ಕಾಯ್ದುಕೊಳ್ಳುವ ಸವಾಲು ನಮ್ಮ ಮುಂದಿದೆ. ಇದಕ್ಕಾಗಿ ಪ್ರಾಮಾಣಿಕವಾಗಿ ಶ್ರಮಿಸುವುದಾಗಿ' ರಾಜಕುಮಾರ್ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಇದುವರೆಗೆ ಮಾಗಡಿಯ ನರಸಿಂಹಮೂರ್ತಿ ಅವರು ಅಧ್ಯಕ್ಷರಾಗಿದ್ದರು. ನರಸಿಂಹಮೂರ್ತಿ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ರಾಜಕುಮಾರ್ ಮತ್ತು ಬೆಂಗಳೂರು ಉತ್ತರ ಕ್ಷೇತ್ರದ ಕೇವಶಮೂರ್ತಿ ಪ್ರಬಲ ಪೈಪೋಟಿ ನಡೆಸಿದ್ದರು. ಈ ಸಂಬಂಧ ಸಂಸದ ಡಿ.ಕೆ.ಸುರೇಶ್, ಸಚಿವ ರಾಮಲಿಂಗಾರೆಡ್ಡಿ ಸೇರಿದಂತೆ ಪಕ್ಷದ ಪ್ರಮುಖರು ಬಮೂಲ್ ನಿರ್ದೇಶಕರ ಜತೆಗೆ ಮಂಗಳವಾರ ಸಂಜೆ ಸಭೆ ನಡೆಸಿದ್ದರು. ಅಂತಿಮವಾಗಿ ರಾಜಕುಮಾರ್ ಆಯ್ಕೆಗೆ ನಿರ್ಧರಿಸಲಾಯಿತು.

OFFICE OF THE DIGP GROUP CENTRE CRPF, YELAHANKA, BENGALURU-560064.

TENDER NOTICE

Invites sealed tender for running the following shops inside this Group Centre premises for initial period of 11 months.

1. Bakery Shop
2. Tailor Shop
3. Juice Shop
4. Stationary / Fancy Shop
5. Chicken Shop
6. Fish Shop
7. Force Personnel Kit Items
8. Fast Food (Non-Veg)
9. Fast Food (Veg)
10. Panipuri Shop
11. Photo Studio Shop

2. The Tender forms, details of earnest money with terms and conditions may be obtained from Group Centre CRPF Yelahanka, Bengaluru-560064 within 07 days from the date of advertisement.

DIGP, GC CRPF BENGALURU

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

General

OPPORTUNITY TO Earn INCOME 60k & Above per month with Fixed Salary for Retired, Bankers, Sr.Citizens, Business People's, Homemaker's. Part/ Full Time. Contact:- 9035303572/ 9060034387.

Teachers/ Professors

AVK INSTITUTE OF MANAGEMENT (Recognized by Govt. of Karnataka AICTE & Affiliated to Bangalore City University) Sy.No.69, Pipe Line Road, BWSSB Colony, Chikkagollarahatti, Magadi Main Road, Vishwaneedam Post, Bangalore-560091 Tel: 91-80-26719531,26717520 E-mail-info@avkedu.com

REQUIRES
1. HOD - MANAGEMENT DEPT.
2. ASSISTANT PROFESSOR WITH MINIMUM 3 YEARS OF EXPERIENCE NET OR SLET PREFERABLE. FRESHERS CAN ALSO APPLY
3. ACCOUNTANT WITH MINIMUM 3 YEARS OF EXPERIENCE PREFERABLY IN EDUCATIONAL INSTITUTIONS
4. COMPUTER OPERATOR

Eligibility -As per AICTE norms
WALK-IN-INTERVIEW on 22/07/2023 Saturday Between 10.00AM to 2.00PM -Chairman

ದಿ ಕರ್ನಾಟಕ ವೃತ್ತ ಅಂಚೆ ಪತ್ತಿನ ಸಹಕಾರ ಸಂಘ ನಿಯಮಿತ
ನಂ. 5, ಶಿರೂರ ಪಾರ್ಕ್, "ಎ" ಅಡ್ಡರಸ್ತೆ, ಶೇಷಾದ್ರಿಪುರಂ, ಬೆಂಗಳೂರು-560 020

ಪತ್ರಿಕಾ ಪ್ರಕಟಣೆ

ಮೇಲ್ಕಂಡ ಸಂಘದಲ್ಲಿ ಖಾಲಿ ಇರುವ ಈ ಕೆಳಕಂಡ 09 (ಒಂಭತ್ತು) ಹುದ್ದೆಗಳ ನೇರ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು Online ಮುಖಾಂತರ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಆಸಕ್ತಿಯುಳ್ಳ ಅಭ್ಯರ್ಥಿಗಳು ಅಧಿಕೃತ ವೆಬ್‌ಸೈಟ್ https://virtualofficeerp.com/kcpccs2023 ರಲ್ಲಿ ನೀಡಿರುವ ಲಿಂಕ್ ಮುಖಾಂತರ ಮಾತ್ರ ಅರ್ಜಿಯನ್ನು ಸಲ್ಲಿಸತಕ್ಕದ್ದು, ಅರ್ಜಿಗಳನ್ನು ಖುದ್ದಾಗಿ/ ಅಂಚೆ/ ಕೋರಿಯರ್ ಇತ್ಯಾದಿಗಳ ಮೂಲಕ ಕಳುಹಿಸಲು ಅವಕಾಶವಿರುವುದಿಲ್ಲ.

ಕ್ರ.ಸಂ.	ಹುದ್ದೆಯ ಹೆಸರು	ಹುದ್ದೆಗಳ ಸಂಖ್ಯೆ
01	ಮುಖ್ಯಕಾರ್ಯನಿರ್ವಾಹಕರು	1
02	ವ್ಯವಸ್ಥಾಪಕರು	1
03	ಆಂತರಿಕ ಲೆಕ್ಕ ಪರಿಶೋಧಕರು	1
04	ಗುಮಾಸ್ತರು-III	4
05	ರೆಕಾರ್ಡ್ ಕೀಪರ್	1
06	ನಾಲ್ಕನೇ ದರ್ಜೆ ನೌಕರರು	1

ಅರ್ಜಿ ಸಲ್ಲಿಸಲು ದಿನಾಂಕ : 20.07.2023 ರಂದು ಪ್ರಾರಂಭವಾಗಿ ದಿನಾಂಕ : 05.08.2023 ರಾತ್ರಿ 11.00 ಗಂಟೆಯೊಳಗೆ ಹಾಗೂ ದಿನಾಂಕ : 05.08.2023ರ ರಾತ್ರಿ 11.30 ಗಂಟೆಯೊಳಗೆ ಅರ್ಜಿ ಶುಲ್ಕ ಪಾವತಿಸಲು ಕೊನೆಯ ದಿನವಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಅಧಿಕೃತ ವೆಬ್‌ಸೈಟ್‌ನಲ್ಲಿ ಸಂಪರ್ಕಿಸಲು ಕೋರಿದೆ.

ದಿನಾಂಕ : 19-07-2023 ಸಹಿ/- ಸದಸ್ಯ ಕಾರ್ಯದರ್ಶಿ, ನೇಮಕಾತಿ ಸಮಿತಿ

Marketing & Sales

REQUIRED FOR Bhavnagar based Engineering Company. MARKETING MANAGER-1. MARKETING EXECUTIVE-1 Walk-In Interview Date:22/07/2023 Saturday Time-11am to 5pm Venue:Mahesh Twisto Tech Pvt.Ltd. No.144 T20 Purvi Plaza Bashyam Road, Cotton pet Bengaluru-560053 Contact 9825293129/ 7069993129

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

CONNECT

ನ್ಯಾಷನಲ್ ಸಿಲ್ಕ್ ಎಕ್ಸ್‌ಪೋ
ಪ್ರದರ್ಶನ ಹಾಗೂ ಮಾರಾಟ
20 ರಿಂದ 25 ಜುಲೈ
ಶುಭ್ ಕನ್ವೆನ್ಷನ್ ಸೆಂಟರ್
(ಹಿಂದಿನ ಇಲಾನ್ ಕನ್ವೆನ್ಷನ್ ಸೆಂಟರ್)
7ನೇ ಹಂತ, ಕೊತ್ತನೂರು ದಿಣ್ಣೆ ಮುಖ್ಯರಸ್ತೆ, ಬ್ರಿಗೇಡ್ ಮಿಲೆನಿಯಂ ಎದುರು, ಜೆಪಿ ನಗರ, ಬೆಂಗಳೂರು
1,50,000 ಕ್ಕೂ ಹೆಚ್ಚು ಇತ್ತೀಚಿನ ವೈವಿಧ್ಯಮಯ ವಸ್ತ್ರಗಳನ್ನು ಆಯ್ಕೆ ಮಾಡಿ ಭಾರತದಾದ್ಯಂತ ನೇರ ತಯಾರಕರು ಮತ್ತು ಕೈಯಿಂದ ತಯಾರಿಸಿದ ಹೊಸ ವಿನ್ಯಾಸಗಳೊಂದಿಗೆ ಪ್ರಮಾಣೀಕೃತ ನೈಜ ರೇಷ್ಮೆ ಉತ್ಪನ್ನಗಳು ಒಂದೇ ಸೂರಿನಡಿ
ಭಾಗವಹಿಸುವ ರಾಜ್ಯಗಳು
ಬಿಹಾರ್, ಅಸ್ಸಾಂ, ಉತ್ತರ ಪ್ರದೇಶ, ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶ, ಪಶ್ಚಿಮ ಬಂಗಾಳ, ರಾಜಸ್ಥಾನ, ಕರ್ನಾಟಕ, ತಮಿಳುನಾಡು, ಪಂಜಾಬ್, ತೆಲಂಗಾಣ, ಒಡಿಸ್ಸಾ, ಛತ್ತೀಸ್‌ಗಢ್, ಜಮ್ಮು & ಕಾಶ್ಮೀರ್, ಆಂಧ್ರಪ್ರದೇಶ್ & ಇತರೆ ರಾಜ್ಯಗಳು
UP TO 50% Discount
M: 9441987009 | ALL DEBIT & CREDIT CARDS ACCEPTED | ENTRY FREE

PERSONAL

Change of Name

CHANGE OF NAME: I, SINGH AMARJITH RAM MADAN Residing at No.16, 1st Main, Ramakrishna Layout, opp Aswini Clinic, Ramamurthinagar, Bengaluru-16 have changed my name to AMARJITH SINGH vide affidavit dated 19.7.2023 before notary M. Narendran, Bengaluru. Henceforth I shall be called AMARJITH SINGH only.

I, NAGESH.R, R/at No.116/11, 2nd Main, 9th Cross, Vijayanagar Extension, Chamarajapete, Bengaluru-560018 have changed my daughter's name from GULABI.N to GULABI BHAVANI.N vide affidavit dated;22-6-2023 before Notary H.C.Thammannagowda, Bangalore.

I, SHANTHAKUMARI. S R/o, E-103, Suraj Ganga Socrates Apartment, Vajarahalli, Doddakallasandra, Bangalore-62 have changed my name as SHANTHA KUMARI. S/ SHANTHA KUMARI SURYANARAYANA RAO Vide affidavit dated 18/07/2023 before Notary L. Puttaraju, Bangalore

CHANGE OF NAME: I, V. Suresh & Nirmala, Residing at No. 124/15, 4th Cross, 18th Main, 1st N Block, Rajajinagar, Bangalore-10, declare that in our daughter Maithri. S, School record our names are mentioned as Suresh V and Nirmala C.V., correct name is V. Suresh & Nirmala, vide affidavit dated 19/07/2023, before notary Vanajakshi. R. Bangalore.

I, SATYAPREMADEVI NARASIMAIAH, Residing at No.1530, 1st Stage, 2nd Block, 9th Main, Opp. Sri Krishna Apartment, HBR Layout, Bangalore- 560043 have changed my name to SATYAPREMADEVI NARASIMAIAH Vide Affidavit dated 18.07.2023 sworn before advocate and notary K.H. Venkatappa, Chickaballapur.

CHANGE OF NAME: I, MANDEPANDA UTTHAPPA BOPPANNA Residing at Chowndicad Estate, Hachinad Village, Kanangala Post, Post Box 208, Ammathi, Kodagu-571211, Karnataka have changed my name to MANDEPANDA UTHAPPA BOPANNA vide affidavit dated 19.7.2023 before notary L Gopala Krishna Bengaluru. Henceforth I shall be called MANDEPANDA UTHAPPA BOPANNA only

I SHAFFIULLA RESIDENCE NO 1466, 13th Cross, R K HEDGENAGAR BANGALORE-560077, I HAVE CHANGE MY NAME TO NEW NAME VIDE AFFIDAVIT DATE 19/07/2023 NOTARY NAME KANIKHA RAJA BA LLB ADVOCATE AND NOTARY BENGALURU HENCEFORTH I SHALL BE CALLED SHAFFIULLAH K.

I, DIGANTA BORAH R/o. #5, 19th Cross, Sampangirama Nagar, Bengaluru-27, have changed my name to DIGANTA GOGOI, affidavit dated 11/07/2023, notary S. Nagaraja, Bagnalore.

I, NAMA SWARUPA LAKSHMI, Residing at 21st Ward, Pragathi Gramina Bank Road, Bagepalli-561207 have changed my name to MEDA SWARUPALAKSHMI Vide Affidavit dated 07.07.2023 sworn before advocate and notary K.H. Venkatappa, Chickaballapur.

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

TOURS & TRAVEL

Travel

COLOURFUL HYDERABAD, Ramoji Film City, Bhadrachalam, Vijayawada, Visakhapatnam, Burracaves 11 days tour by Volvo AC Bus from 06.08.2023. Delhi, Yamunotri, Gangotri, Kedarnath Badrinath 14 days from 21.08.2023 25.09.2023 01.10.2023. Puri Konark Kashi Gaya Ayodhya Naimisharanya 10 days from 22.09.2023 25.09.2023 01.10.2023. Contact 26508925 9980993631 Srichaitanya Travels chamarajapet Bengaluru.18

DH DECCAN HERALD | ಪ್ರಜಾವಾಣಿ
REAL ESTATE
BOOK YOUR PROPERTY AD IN DECCAN HERALD ALL KARNATAKA + PRAJAVANI BENGALURU CITY
@ 3000/-* FOR 15 WORDS
PAY FOR 2 GET 1 FREE
conditions apply*
For More Details Contact:
9886213331 | 9731810277
9901641752 | 9845114560
080- 45557163 | 45557164

ಎಎಪಿ: 'ಮುಖ್ಯಮಂತ್ರಿ' ಚಂದ್ರು ಅಧಿಕಾರ ಸ್ವೀಕಾರ 22ಕ್ಕೆ

ಬೆಂಗಳೂರು: ಆಮ್ ಆದ್ಮಿ ಪಾರ್ಟಿಯ ರಾಜ್ಯ ಘಟಕದ ಅಧ್ಯಕ್ಷರಾಗಿ ನೇಮಕಗೊಂಡಿರುವ ನಟ 'ಮುಖ್ಯಮಂತ್ರಿ' ಚಂದ್ರು ಅವರು ಜುಲೈ 22ರಂದು ನಡೆಯುವ ಪದಗ್ರಹಣ ಸಮಾರಂಭದಲ್ಲಿ ಅಧಿಕಾರ ಸ್ವೀಕರಿಸಲಿದ್ದಾರೆ.

ನಗರದ ಭಾರತ್ ಸ್ಕೌಟ್ಸ್ ಆ್ಯಂಡ್ ಗೈಡ್ಸ್ ಸಭಾಂಗಣದಲ್ಲಿ ಪದಗ್ರಹಣ ಸಮಾರಂಭ ನಡೆಯಲಿದೆ. ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಪಂಕಜ್ ಗುಪ್ತ, ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿಯಾಗಿರುವ ರಾಜ್ಯಸಭಾ ಸದಸ್ಯ ಸಂದೀಪ್, ರಾಜ್ಯ ಉಸ್ತುವಾರಿ ದಿಲೀಪ್ ಪಾಂಡೆ, ರಾಷ್ಟ್ರೀಯ ಜಂಟಿ ಕಾರ್ಯದರ್ಶಿ ಪೃಥ್ವಿ ರೆಡ್ಡಿ ಭಾಗವಹಿಸುವರು ಎಂದು ಎಎಪಿ ರಾಜ್ಯ ಮಾಧ್ಯಮ ಸಂಚಾಲಕ ಜಗದೀಶ್ ವಿ. ಸದಂ ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾಹಿತಿ ನೀಡಿದರು.

ರಾಜ್ಯ ಸಂಘಟನಾ ಕಾರ್ಯದರ್ಶಿಗಳಾಗಿ ಆಯ್ಕೆಯಾಗಿರುವ ಬಿ.ಟಿ. ನಾಗಣ್ಣ ಹಾಗೂ ಅರ್ಜುನ್ ಪರಪ್ಪ ಹಲಗಿ ಗೌಡರ ಅಧಿಕಾರ ಸ್ವೀಕರಿಸಲಿದ್ದಾರೆ ಎಂದು ವಿವರಿಸಿದರು.

ಅತಿಥಿ ಶಿಕ್ಷಕರ ಬೇಡಿಕೆ ಈಡೇರಿಕೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೇವಾ ಭದ್ರತೆ ಒದಗಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಅತಿಥಿ ಶಿಕ್ಷಕರ ಸಂಘದ ನೇತೃತ್ವದಲ್ಲಿ ಅತಿಥಿ ಶಿಕ್ಷಕರು ಬುಧವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು.

ಪ್ರತಿವರ್ಷ ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳುವಾಗ ಸೇವಾ ಹಿರಿತನ ಪರಿಗಣಿಸಿ ಮೊದಲ ಆದ್ಯತೆ ನೀಡಬೇಕು ಮತ್ತು ಮೆರಿಟ್ ಪದ್ಧತಿ ತೆಗೆದು ಹಾಕಬೇಕು. ಸರ್ಕಾರಿ ಶಿಕ್ಷಕರಂತೆ ಮಧ್ಯಂತರ ರಜೆ ಮತ್ತು ಬೇಸಿಗೆ ರಜೆಯಲ್ಲಿಯೂ ವೇತನ ನೀಡಬೇಕು. ಸಮಾನ ಕೆಲಸಕ್ಕೆ ಸಮಾನ ವೇತನ ನೀಡುವ ಜೊತೆಗೆ ಸೇವೆಯಲ್ಲಿ ಮುಂದುವರಿಸಿ ನೇಮಕಾತಿಯಲ್ಲಿ ಶೇ 5 ಕೃಪಾಂಕ ನೀಡಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಅತಿಥಿ ಶಿಕ್ಷಕರನ್ನು ಕಾಯಂಗೊಳಿಸಲು ದೆಹಲಿ, ಹರಿಯಾಣ, ಪಂಜಾಬ್, ಉತ್ತರ ಪ್ರದೇಶ ಸರ್ಕಾರಗಳು ಕ್ರಮ ಕೈಗೊಂಡಿವೆ. ಕರ್ನಾಟಕ ಸರ್ಕಾರವೂ ಇದೇ ನೀತಿ ಅನುಸರಿಸಬೇಕು. ಆಯಾ ಶಾಲೆಗಳಲ್ಲಿ ಸೇವಾ ದೃಢೀಕರಣ ಪತ್ರವನ್ನು ನೀಡಬೇಕು. ಆಕಸ್ಮಿಕ ಅವಘಡಗಳಿಂದ ಜೀವಕ್ಕೆ ತೊಂದರೆಯಾದಾಗ ಅವರ ಕುಟುಂಬಕ್ಕೆ ಪರಿಹಾರ ಧನ ನೀಡಬೇಕು. ಇಲ್ಲವೇ ಜೀವವಿಮಾ ಯೋಜನೆ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಪ್ರತಿ ತಿಂಗಳು ಸರಿಯಾಗಿ ವೇತನ ಪಾವತಿಸಬೇಕು. ಅತಿಥಿ ಶಿಕ್ಷಕರ ಬ್ಯಾಂಕ್ ಖಾತೆಗೆ ನೇರ ಪಾವತಿಸಬೇಕು. ಅತಿಥಿ ಶಿಕ್ಷಕ ಎಂಬ ಪದ ತೆಗೆದು ಹಾಕಿ ಗೌರವ ಶಿಕ್ಷಕ ಎಂದು ನಮೂದಿಸಬೇಕು. ಕಾಯಂ ಶಿಕ್ಷಕರಂತೆ ಅತಿಥಿ ಶಿಕ್ಷಕರಿಗೂ ಸಮಾನ ಸ್ಥಾನಮಾನ, ವಿವಿಧ ತರಬೇತಿಗಳಿಗೆ ಅವಕಾಶ ನೀಡಬೇಕು. ಹಾಜರಾತಿಯಲ್ಲಿ ಸೇರ್ಪಡೆ ಮಾಡಬೇಕು ಎಂದು ಮನವಿ ಮಾಡಿದರು.

ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಅತಿಥಿ ಶಿಕ್ಷಕರ ಸಂಘದ ನೇತೃತ್ವದಲ್ಲಿ ಅತಿಥಿ ಶಿಕ್ಷಕರು ಬುಧವಾರ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು —ಪ್ರಜಾವಾಣಿ ಚಿತ್ರ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ರಸ್ತೆ ಮೂಲಭೂತಸೌಕರ್ಯ - ಯಲಹಂಕ ವಿಭಾಗ, 3ನೇ ಮಹಡಿ, ಮಿನಿ ವಿಧಾನಸೌಧ, ಯಲಹಂಕ, ಬೆಂಗಳೂರು- 560 064
ಸಂಖ್ಯೆ:ಕಾಪಾಅ/ರಮೂಸೌ/ಯಲಹಂಕ/ಟೆಂಡರ್/01/2023-24 ದಿನಾಂಕ: 19.07.2023

ಅಲ್ಪಾವಧಿ ಟೆಂಡರ್ ಪ್ರಕಟಣೆ - ಪ್ರಸ್ತಾವನೆಗಳಿಗಾಗಿ ಕೋರಿಕೆ
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, (ರ.ಮೂ.ಸೌ- ಯಲಹಂಕ ವಿಭಾಗ) ಬೃ.ಬೆಂ.ಮ.ಪಾಲಿಕೆ, ಬೆಂಗಳೂರು, ಇವರು ಹೆಸರಾಂತ ಸಂಸ್ಥೆಗಳು/ಕಂಪನಿಗಳು/ಏಜೆನ್ಸಿಗಳಿಂದ ರ.ಮೂ.ಸೌ- ಯಲಹಂಕ ವಿಭಾಗ ಕ್ಷೇತ್ರ ಪ್ರದೇಶದಲ್ಲಿ ಬರುವ ಯಲಹಂಕ ಮತ್ತು ಬ್ಯಾಟರಾಯನಪುರ ಸಂಬಂಧಿಸಿದ ಪಾದಚಾರಿ ಮಾರ್ಗಗಳು ಒಳಗೊಂಡಂತೆ ರಸ್ತೆ ಗುಂಡಿಗಳನ್ನು ಹೊರತುಪಡಿಸಿ ಪ್ರಧಾನ ಮತ್ತು ಉಪ-ಪ್ರಧಾನ ರಸ್ತೆಗಳನ್ನು ವಾರ್ಷಿಕ ನಿರ್ವಹಣೆ ಮಾಡುವ ಕಾಮಗಾರಿಗಾಗಿ ಸ್ಪರ್ಧಾತ್ಮಕ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ.

ಪ್ಯಾಕೇಜಿನ ಹೆಸರು	ಅಂದಾಜು ಉದ್ದ ಕಿಮೀ.ಗಳಲ್ಲಿ	ಇಎಂಡಿ (₹ ಗಳಲ್ಲಿ)
ರ.ಮೂ.ಸೌ-ವಿಭಾಗ, ಯಲಹಂಕ ಕ್ಷೇತ್ರ ಪ್ರದೇಶಕ್ಕೆ ಸಂಬಂಧಿಸಿದ ಪಾದಚಾರಿ ಮಾರ್ಗಗಳನ್ನು ಒಳಗೊಂಡು ರಸ್ತೆ ಗುಂಡಿಗಳನ್ನು ಹೊರತುಪಡಿಸಿ ಪ್ರಧಾನ ಮತ್ತು ಉಪ-ಪ್ರಧಾನ ರಸ್ತೆಗಳನ್ನು ವಾರ್ಷಿಕ ನಿರ್ವಹಣೆ ಮಾಡುವುದು.	19.48 ಕಿ.ಮೀಗಳು	55,000
ರ.ಮೂ.ಸೌ-ವಿಭಾಗ, ಬ್ಯಾಟರಾಯನಪುರ ಕ್ಷೇತ್ರ ಪ್ರದೇಶಕ್ಕೆ ಸಂಬಂಧಿಸಿದ ಪಾದಚಾರಿ ಮಾರ್ಗಗಳನ್ನು ಒಳಗೊಂಡು ರಸ್ತೆ ಗುಂಡಿಗಳನ್ನು ಹೊರತುಪಡಿಸಿ ಪ್ರಧಾನ ಮತ್ತು ಉಪ-ಪ್ರಧಾನ ರಸ್ತೆಗಳನ್ನು ವಾರ್ಷಿಕ ನಿರ್ವಹಣೆ ಮಾಡುವುದು.	29.23 ಕಿ.ಮೀಗಳು	82,000

ಟೆಂಡರ್ ವೇಳಾಪಟ್ಟಿ: (1) ಆರ್‌ಎಫ್‌ಪಿ ದಾಖಲೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ದಿನಾಂಕ 21.07.2023ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಬಿಡ್ ಪೂರ್ವಭಾವಿ ಸಭೆಯನ್ನು ಪ್ರಧಾನ ಅಭಿಯಂತರರ ಕಚೇರಿ, 1ನೇ ಮಹಡಿ, ಅನೆಕ್ಸ್-2 ಕಟ್ಟಡ, ಬೃ.ಬೆಂ.ಮ.ಪಾಲಿಕೆ, ನರಸಿಂಹರಾಜಚೌಕ, ಬೆಂಗಳೂರು - 02 ದಿನಾಂಕ 25.07.2023ರ ಸಂಜೆ 4:00 ಗಂಟೆಗೆ ನಡೆಸಲಾಗುವುದು. (3) ಬಿಡ್ ದಾಖಲೆಗಳನ್ನು ಸಲ್ಲಿಸಲು ದಿನಾಂಕ 31.07.2023ರ ಸಂಜೆ 4:00 ಗಂಟೆಯವರೆಗೆ. (4) ತಾಂತ್ರಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ 02.08.2023ರ ಮಧ್ಯಾಹ್ನ 2:30 ಗಂಟೆಗೆ. (5) ಆರ್ಥಿಕ ಪ್ರಸ್ತಾವನೆ ತೆರೆಯುವುದನ್ನು ಬಿಡ್ಡರುಗಳಿಗೆ ನಂತರ ತಿಳಿಸಲಾಗುವುದು. (6) ಈ ಟೆಂಡರ್ ಪ್ರಕಟಣೆಯನ್ನು ಬೃ.ಬೆಂ.ಮ.ಪಾಲಿಕೆ ವೆಬ್‌ಸೈಟ್ www.bbmp.gov.in ನಲ್ಲಿಯು ಕೂಡ ವೀಕ್ಷಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು, ರಮೂಸೌಕರ್ಯ-ಯಲಹಂಕ ವಿಭಾಗ

ಅಲೋಕ್ ಆರಾಧೆ ತೆಲಂಗಾಣ ಸಿಜೆ

ನವದೆಹಲಿ(ಪಿಟಿಐ): ಕರ್ನಾಟಕ ಹೈಕೋರ್ಟ್‌ನ ನ್ಯಾಯಮೂರ್ತಿ ಅಲೋಕ್ ಆರಾಧೆ ಅವರಿಗೆ ಬಡ್ತಿ ನೀಡಿ, ತೆಲಂಗಾಣ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ನೇಮಕ ಮಾಡಲಾಗಿದೆ.

ಇವರ ಜತೆಗೆ, ಒಡಿಶಾ, ಗುಜರಾತ್ ಮತ್ತು ಕೇರಳ ಹೈಕೋರ್ಟ್‌ಗಳಿಗೂ ಮುಖ್ಯ ನ್ಯಾಯಮೂರ್ತಿಗಳನ್ನು ನೇಮಿಸಿರುವುದಾಗಿ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ತಿಳಿಸಿದ್ದಾರೆ.

ಡ್ರೋನ್ ಮೂಲಕ ಬೀದಿ ನಾಯಿ ಗಣತಿ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃತಕ ಬುದ್ಧಿಮತ್ತೆ (ಎಐ) ಹಾಗೂ ಡ್ರೋನ್ ಸಹಾಯದಿಂದ ನಗರದ ಕೆಲವು ಕೆರೆಗಳ ಪ್ರದೇಶದಲ್ಲಿರುವ ಬೀದಿ ನಾಯಿಗಳ ಗಣತಿ ಕಾರ್ಯವನ್ನು ಬಿಬಿಎಂಪಿ, ಭಾರತೀಯ ವಿಜ್ಞಾನ ಸಂಸ್ಥೆಯ ಸಹಯೋಗದಲ್ಲಿ ಆರಂಭಿಸಿದೆ.

ಮೊದಲ ಹಂತದಲ್ಲಿ ಹುಳಿಮಾವು, ಸಾರಕ್ಕಿ, ಸೀಗೇಹಳ್ಳಿ ಮತ್ತು ಎಲೆ ಮಲ್ಲಪ್ಪ ಶೆಟ್ಟಿ ಕೆರೆಗಳ ಪ್ರದೇಶದಲ್ಲಿ ಡ್ರೋನ್‌ಗಳು ನಾಯಿಗಳ ಚಿತ್ರಗಳನ್ನು ಸೆರೆಹಿಡಿದಿವೆ. ಕೃತಕ ಬುದ್ಧಿಮತ್ತೆಯನ್ನು ಬಳಸಿಕೊಂಡು ಬೀದಿ ನಾಯಿಗಳನ್ನು ಗುರುತಿಸಲು ಯಶಸ್ವಿಯಾಗಿವೆ.

ದತ್ತಾಂಶವನ್ನು ಮುಂಬರುವ ದಿನಗಳಲ್ಲಿ ವಿಶ್ಲೇಷಿಸಲಾಗುವುದು. ಸಾಂಪ್ರದಾಯಿಕ ಕ್ಷೇತ್ರ ಸಮೀಕ್ಷೆ ತಂಡವು ಸಂಗ್ರಹಿಸಿದ ದತ್ತಾಂಶದೊಂದಿಗೆ ತಾಳೆ ಮಾಡಲಾಗುತ್ತದೆ. ದತ್ತಾಂಶವು ಪರಸ್ಪರ ಸಮಾನತೆ ಹೊಂದಿದ್ದರೆ, ಮುಂಬರುವ ವರ್ಷಗಳಲ್ಲಿ ನಗರದಲ್ಲಿನ ಎಲ್ಲಾ ಸುರಕ್ಷಿತ ಮತ್ತು ಮುಕ್ತ ಹಾರಾಟದ ಸ್ಥಳಗಳನ್ನು ಡ್ರೋನ್‌ಗಳೊಂದಿಗೆ ಸಮೀಕ್ಷೆ ಮಾಡಲಾಗುತ್ತದೆ ಎಂದು ಪಶುಪಾಲನಾ ವಿಭಾಗದ ಜಂಟಿ ನಿರ್ದೇಶಕ ಡಾ. ರವಿಕುಮಾರ್ ತಿಳಿಸಿದ್ದಾರೆ.

ಸಾಂಪ್ರದಾಯಿಕ ಕ್ಷೇತ್ರ ಸಮೀಕ್ಷೆ ವಿಧಾನಗಳಿಗೆ ಹೋಲಿಸಿದರೆ ಸಮಯ ಮತ್ತು ವೆಚ್ಚದಲ್ಲಿ ಉಳಿತಾಯವಾಗಲಿದೆ. ಹಗಲು ಮತ್ತು ರಾತ್ರಿಯ ಸಮಯದಲ್ಲೂ ಸಮೀಕ್ಷೆಯನ್ನು ಕೈಗೊಳ್ಳಬಹುದಾಗಿದೆ ಎಂದಿದ್ದಾರೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಜುಲೈ 11ರಿಂದ 14 ದಿನ ಬೀದಿ ನಾಯಿಗಳ ಕ್ಷೇತ್ರ ಸಮೀಕ್ಷೆ ನಡೆಯಲಿದೆ. ಇದರ ಜೊತೆಗೆ, 'ಕೃತಕ ಬುದ್ಧಿಮತ್ತೆ ಮತ್ತು ರೊಬೊಟಿಕ್ಸ್ ಟೆಕ್ನಾಲಜಿ ಪಾರ್ಕ್-ಭಾರತೀಯ ವಿಜ್ಞಾನ ಸಂಸ್ಥೆ' ವೇಡೈನ್ ಸ್ಟಾರ್ಟ್ ಅಪ್‌ನ ಡ್ರೋನ್ ತಂತ್ರಜ್ಞಾನವನ್ನು ಪ್ರಾಯೋಗಿಕವಾಗಿ ಬಳಸಿಕೊಳ್ಳಲಾಗುತ್ತಿದೆ. ಬೀದಿ ನಾಯಿಗಳ ಸಮೀಕ್ಷೆಗೆ ಡ್ರೋನ್ ಬಳಸುತ್ತಿರುವುದು ಭಾರತದಲ್ಲಿ ಇದೇ ಮೊದಲ ಯೋಜನೆ ಎಂದು ಹೇಳಿದ್ದಾರೆ.

ಮೂಲಸೌಕರ್ಯದ ಕೊರತೆಯಿಂದ ಮುಚ್ಚಿದ 200 ಅಂಗಡಿಗಳು: ಮರುನವೀಕರಣಕ್ಕೆ ವ್ಯಾಪಾರಿಗಳ ಒತ್ತಾಯ

ಗಬ್ಬೆದ್ದು ನಾರುತ್ತಿದೆ ರಸೆಲ್ ಮಾರುಕಟ್ಟೆ

• ಖಲೀಲಅಹ್ಮದ ಶೇಖ

ಬೆಂಗಳೂರು: ಎಲ್ಲೆಂದರಲ್ಲೇ ಬಿದ್ದಿರುವ ಹಸಿ ಮೀನು ಮತ್ತು ಮಾಂಸದ ತ್ಯಾಜ್ಯ, ಕೊಳೆತ ಹಣ್ಣು ತರಕಾರಿಗಳ ರಾಶಿ, ಸರಾಗವಾಗಿ ಹರಿಯದ ಕೊಳಚೆ ನೀರು...

ಶಿವಾಜಿನಗರದ ರಸೆಲ್ ಮಾರುಕಟ್ಟೆಯ ದುಃಸ್ಥಿತಿ ಇದು.

ಒಂದೇ ಸೂರಿನಡಿ ತರಕಾರಿ–ಹಣ್ಣು, ಮೀನು–ಮಾಂಸ, ಸಿಗುವ ರಸೆಲ್ ಮಾರುಕಟ್ಟೆ ನಗರದ ಪ್ರಮುಖ ಮತ್ತು ಪುರಾತನ ವಾಣಿಜ್ಯ ಕೇಂದ್ರ. ಆದರೆ, ಇಲ್ಲಿ ವಾಹನ ನಿಲುಗಡೆಗೆ ಸರಿಯಾದ ಜಾಗವಿಲ್ಲ. ಶುದ್ಧ ಕುಡಿಯುವ ನೀರು ಮತ್ತು ಶೌಚಾಲಯ ವ್ಯವಸ್ಥೆಯೇ ಇಲ್ಲ. ಒಟ್ಟಾರೆಯಾಗಿ ಈ ಮಾರುಕಟ್ಟೆ ಮೂಲಸೌಲಭ್ಯಗಳ ಕೊರತೆಯಿಂದ ಗಬ್ಬೆದ್ದು ನಾರುತಿದ್ದು, ಅದರಲ್ಲಿಯೇ ಪ್ರತಿನಿತ್ಯ ವ್ಯಾಪಾರ–ವಹಿವಾಟು ನಡೆಯುತ್ತಿದೆ.

ಅತ್ಯಂತ ಜನನಿಬಿಡ ಪ್ರದೇಶಗಳಲ್ಲಿ ಒಂದಾಗಿರುವ ಶಿವಾಜಿನಗರದಲ್ಲಿ ರಸೆಲ್ ಮಾರುಕಟ್ಟೆ ತನ್ನದೇ ಆದ ವಿಶೇಷ ಆಕರ್ಷಣೆಯನ್ನು ಇಂದಿಗೂ ಉಳಿಸಿಕೊಂಡಿದೆ. ಪ್ರವೇಶದ್ವಾರದ ಬಳಿ ಹೂವಿನ ಅಂಗಡಿಗಳಿದ್ದರೆ, ಕೊನೆಯಲ್ಲಿ ಮೀನಿನ ಅಂಗಡಿಗಳಿವೆ. ಒಟ್ಟಾರೆ ಇಲ್ಲಿ 475 ಮಳಿಗೆಗಳಲ್ಲಿ ವ್ಯಾಪಾರ ನಡೆಯುತ್ತಿದೆ.

‘1984ರಿಂದಲೂ ಬಿಬಿಎಂಪಿ ರಸೆಲ್ ಮಾರುಕಟ್ಟೆಯನ್ನು ಕಡೆಗಣಿಸುತ್ತಿದೆ. ಸದ್ಯ ಮಾರುಕಟ್ಟೆಯ ಚಾವಣಿ ಶಿಥಿಲಗೊಂಡಿದ್ದು, ಕೆಲವು ಕಡೆ ತಗಡಿನ ಶೀಟ್‌ಗಳಿಲ್ಲದ ಕಾರಣ ಮಳೆ ಬಂದರೆ ಸೋರುತ್ತಿದೆ. ಮಾರುಕಟ್ಟೆಗೆ ಪ್ರವೇಶ ಕಲ್ಪಿಸುವ ಗೇಟ್‌ಗಳು ಮುರಿದು ಬಿದ್ದಿದ್ದು, ಕಳ್ಳರ ಉಪಟಳ ಹೆಚ್ಚಾಗಿದೆ. ಇತ್ತೀಚೆಗೆ ರಸೆಲ್ ಮಾರುಕಟ್ಟೆಯ ಹೊರಾಂಗಣಕ್ಕೆ ಮಾತ್ರ ಬಣ್ಣ ಬಳಿಯಲಾಗಿದೆ. ಆದರೆ, ಕಟ್ಟಡದ ಒಳಗಿನ ಗೋಡೆಗಳು, ಹಿಂಭಾಗ ಇದುವರೆಗೂ ಬಣ್ಣ ಕಂಡಿಲ್ಲ. ಮಾರುಕಟ್ಟೆಯ ಪ್ರಾಂಗಣದ ಕೆಲವು ಗೋಡೆಗಳು ಕುಸಿದು ಬಿದ್ದಿವೆ. ಇದರಿಂದ ವ್ಯಾಪಾರಿಗಳು ಪಾದಚಾರಿ ಮಾರ್ಗದಲ್ಲಿ ವ್ಯಾಪಾರ ಮಾಡುತ್ತಿದ್ದಾರೆ’ ಎಂದು ರಸೆಲ್ ಮಾರ್ಕೆಟ್ ವ್ಯಾಪಾರಿಗಳ ಸಂಘದ ಪ್ರಧಾನ ಕಾರ್ಯದರ್ಶಿ ಮಹಮ್ಮದ್ ಇದ್ರೀಸ್ ಚೌಧರಿ ತಿಳಿಸಿದರು.

‘ಮೀನು, ಮಾಂಸ, ತರಕಾರಿ ಮತ್ತು ಹಣ್ಣಿನ ತ್ಯಾಜ್ಯ ಮಾರುಕಟ್ಟೆಯಲ್ಲಿ ಉತ್ಪತ್ತಿಯಾಗುತ್ತಿದ್ದು, ಅದನ್ನು ರಸೆಲ್ ಮಾರುಕಟ್ಟೆಯ ಬಲಭಾಗದಲ್ಲಿ ಸುರಿಯಲಾಗುತ್ತದೆ. ಇದರಿಂದ, ಸಾಂಕ್ರಾಮಿಕ ರೋಗಗಳು ಹರಡುವ ಭೀತಿ ಎದುರಾಗಿದೆ. ಮೀನಿನ ಮಾರುಕಟ್ಟೆಗೆ ಪ್ರವೇಶಿಸುವ ರಸ್ತೆ ಮಧ್ಯದಲ್ಲಿರುವ ಮ್ಯಾನ್‌ಹೋಲ್ ಮುಚ್ಚಿಲ್ಲ. ಇದರ ತ್ಯಾಜ್ಯ ನೀರು ಮಾರುಕಟ್ಟೆಗೆ ಪ್ರವೇಶಿಸುತ್ತಿದೆ. ಅಪರಿಚಿತರು ಈ ಮಾರ್ಗದಲ್ಲಿ ಸಾಗಿದರೆ ಮ್ಯಾನ್‌ಹೋಲ್‌ನಲ್ಲಿ ಬೀಳುವ ಆತಂಕ ಎದುರಾಗಿದೆ’ ಎಂದು ರಸೆಲ್ ಮಾರುಕಟ್ಟೆ ಮೀನಿನ ವರ್ತಕರ ಸಂಘದ ಅಧ್ಯಕ್ಷ ಮನೋಹರ್ ದೂರಿದರು.

ರಸೆಲ್ ಮಾರುಕಟ್ಟೆಯ ಹಿಂಭಾಗದಲ್ಲಿರುವ ಮೀನಿನ ಮಾರುಕಟ್ಟೆ. ಪ್ರಜಾವಾಣಿ ಚಿತ್ರಗಳು/ ರಂಜು ಪಿ

‘ನವೀಕರಣವಾಗದ ರಸೆಲ್ ಮಾರುಕಟ್ಟೆ’

ಮಹಮ್ಮದ್ ಇದ್ರೀಸ್ ಚೌಧರಿ

‘1857ರಲ್ಲಿ ನಿರ್ಮಾಣವಾದ ಈ ಮಾರುಕಟ್ಟೆಯ ಮುಂಭಾಗದ ಕಟ್ಟಡ 1927ರಲ್ಲಿ ನಿರ್ಮಾಣವಾಯಿತು. ಕಳೆದ 10 ವರ್ಷಗಳಿಂದ ಇಲ್ಲಿ ಯಾವುದೇ ಅಭಿವೃದ್ಧಿ ಕಾಮಗಾರಿ ನಡೆದಿಲ್ಲ. ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳಿಗೆ ಮೂಲಸೌಕರ್ಯ ಒದಗಿಸುವಂತೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಮಾರುಕಟ್ಟೆಯ ಪ್ರವೇಶ ದ್ವಾರಗಳಿಗೆ ಭದ್ರತೆ ಇಲ್ಲದ ಕಾರಣ ಡ್ರಗ್ಸ್ ಸೇರಿ ಇತರೆ ಅಕ್ರಮ ಚಟುವಟಿಕೆಗಳ ತಾಣವಾಗಿ ಮಾರ್ಪಟ್ಟಿದೆ’ ಎಂದು ಮಹಮ್ಮದ್ ಇದ್ರೀಸ್ ಚೌಧರಿ ದೂರಿದರು.



ರಸೆಲ್ ಮಾರುಕಟ್ಟೆಯ ಹಿಂಭಾಗದಲ್ಲಿ ದುಃಸ್ಥಿತಿಯಲ್ಲಿರುವ ಚರಂಡಿ

ಮಾರುಕಟ್ಟೆ ಕಷ್ಟ ಸಿಕ್ಕಾಪಟ್ಟೆ

‘ರಸೆಲ್ ಮಾರುಕಟ್ಟೆ ಅಭಿವೃದ್ಧಿಗೊಳಿಸಿ’

‘ರಸೆಲ್ ಮಾರುಕಟ್ಟೆಯನ್ನು ಬಿಬಿಎಂಪಿ ಅಭಿವೃದ್ಧಿಗೊಳಿಸಬೇಕು. ಪ್ರತಿ ತಿಂಗಳು ತೆರಿಗೆ ಪಾವತಿಸುವ ವರ್ತಕರಿಗೆ ಮೂಲಸೌಕರ್ಯ ಕಲ್ಪಿಸಬೇಕು. ಇಲ್ಲದಿದ್ದರೆ, ರಸೆಲ್ ಮಾರುಕಟ್ಟೆಯನ್ನು ಒಡೆದು ಹಾಕಿ ಯಾವುದಾದರೂ ಮಾಲ್ ನಿರ್ಮಿಸಬೇಕು. ಗಬ್ಬೆದ್ದು ನಾರುವಂತಿರುವ ಪ್ರದೇಶಕ್ಕೆ ಗ್ರಾಹಕರು ಬರಲು ಹಿಂದೇಟು ಹಾಕುತ್ತಿದ್ದಾರೆ. ಇದರಿಂದ ವ್ಯಾಪಾರಿಗಳಿಗೆ ನಷ್ಟವಾಗುತ್ತಿದೆ’ ಮೀನಿನ ವ್ಯಾಪಾರಿ ಸಲ್ಮಾನ್ ಹೇಳಿದರು.

ಮಾರುಕಟ್ಟೆಯಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಪ್ರತಿದಿನ ಬೆಳಿಗ್ಗೆ, ಸಂಜೆ ಎರಡು ಬಾರಿ ಸ್ವಚ್ಛಗೊಳಿಸಿದರೆ ಮಾತ್ರ ಗ್ರಾಹಕರು ಮಾರುಕಟ್ಟೆಗೆ ಬರುತ್ತಾರೆ.

ಮನೋಹರ್, ರಸೆಲ್ ಮಾರುಕಟ್ಟೆ ಮೀನಿನ ವರ್ತಕರ ಸಂಘದ ಅಧ್ಯಕ್ಷ

‘ಪಾದಚಾರಿ ಮಾರ್ಗದಲ್ಲಿ ವ್ಯಾಪಾರ’

‘ಮೂಲ ಸೌಕರ್ಯ ಮತ್ತು ಸುರಕ್ಷತೆ ಕೊರತೆಯಿಂದ ಇಲ್ಲಿನ 200ಕ್ಕೂ ಹೆಚ್ಚು ಅಂಗಡಿಗಳು ಮುಚ್ಚಿವೆ. ಪಾದಚಾರಿ ಮಾರ್ಗಗಳಲ್ಲಿ ವ್ಯಾಪಾರ ನಡೆಯುತ್ತಿದೆ. ಸಮರ್ಪಕ ವಿದ್ಯುತ್ ವ್ಯವಸ್ಥೆ ಕಲ್ಪಿಸಬೇಕು. ಗಡಿಯಾರ ಗೋಪುರ ದುರಸ್ತಿಗೊಳಿಸಬೇಕು’ ಎಂದು ವ್ಯಾಪಾರಿ ದಾದಾಪೀರ್ ಹೇಳಿದರು.

ಸರ್ಕಾರದ ಅನುದಾನ ಬಳಸಿಕೊಂಡು ಪಾರಂಪರಿಕ ರಸೆಲ್ ಮಾರುಕಟ್ಟೆಯ ಕಟ್ಟಡವನ್ನು ಸಂಪೂರ್ಣ ಅಭಿವೃದ್ಧಿಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಸೈಫುದ್ದೀನ್, ಬಿಬಿಎಂಪಿ ಶಿವಾಜಿನಗರ ವಲಯ ಕಾರ್ಯನಿರ್ವಾಹಕ ಎಂಜಿನಿಯರ್

ಮಣಿಪುರ: ಮಹಿಳೆಯರ ಬೆತ್ತಲೆ ಮೆರವಣಿಗೆ ವಿಡಿಯೊ ಬಿಡುಗಡೆ

ಪ್ರಜಾವಾಣಿ ವಾರ್ತೆ

ಗುವಾಹಟಿ: ಮಣಿಪುರದ ಕಾಂಗ್‌ಪೊಕ್ಪಿ ಜಿಲ್ಲೆಯಲ್ಲಿ ಮೇ 4ರಂದು ನಡೆದಿದ್ದ ಹಿಂಸಾಚಾರದ ವೇಳೆ ಇಬ್ಬರು ಮಹಿಳೆಯರನ್ನು ಬೆತ್ತಲೆಗೊಳಿಸಿ ಮೆರವಣಿಗೆ ಮಾಡಿದ್ದ ವಿಡಿಯೊವೊಂದು ಬುಧವಾರ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದೆ. ಹೀಗಾಗಿ ರಾಜ್ಯದಲ್ಲಿ ಪರಿಸ್ಥಿತಿ ಮತ್ತೆ ಉದ್ವಿಗ್ನಗೊಂಡಿದೆ.

‘ದೇಶೀಯ ಬುಡಕಟ್ಟು ನಾಯಕರ ವೇದಿಕೆ’ (ಐಟಿಎಲ್‌ಎಫ್) ಗುರುವಾರ ಹಮ್ಮಿಕೊಂಡಿದ್ದ ಪ್ರತಿಭಟನಾ ಮೆರವಣಿಗೆಯ ಮುನ್ನಾದಿನವೇ ವಿಡಿಯೊ ಬಿಡುಗಡೆ ಮಾಡಲಾಗಿದೆ. ಇಬ್ಬರು ಮಹಿಳೆಯರನ್ನು ಭತ್ತದ ಗದ್ದೆಗೆ ಕರೆದೊಯ್ಯುವ ದುಷ್ಕರ್ಮಿಗಳ ಗುಂಪು ಅವರನ್ನು ಹಿಂಸಿಸುತ್ತಿರುವುದು ವಿಡಿಯೊದಲ್ಲಿ ಕಂಡು ಬಂದಿದೆ. ಮಹಿಳೆಯರು ಸಹಾಯಕ್ಕಾಗಿ ಅಂಗಲಾಚುವುದು ದಾಖಲಾಗಿದೆ.

ಘಟನೆಯನ್ನು ದೃಢೀಕರಿಸಿರುವ ಪೊಲೀಸರು ಬುಧವಾರ ಸಂಜೆ ಹೇಳಿಕೆ ಬಿಡುಗಡೆ ಮಾಡಿದ್ದು, ದುಷ್ಕರ್ಮಿಗಳ ಬಂಧನಕ್ಕಾಗಿ ಎಲ್ಲ ರೀತಿಯ ಪ್ರಯತ್ನಗಳನ್ನು ನಡೆಸುತ್ತಿರುವುದಾಗಿ ಹೇಳಿದ್ದಾರೆ. ಕೃತ್ಯದಲ್ಲಿ ಭಾಗಿಯಾದವರ ವಿರುದ್ಧ ಥೌಬಲ್ ಜಿಲ್ಲೆಯ ನಾಂಗ್‌ಪೋಕ್ ಸೆಕ್ಮೈ ಪೊಲೀಸ್ ಠಾಣೆಯಲ್ಲಿ ಅಪಹರಣ, ಸಾಮೂಹಿಕ ಅತ್ಯಾಚಾರ ಮತ್ತು ಕೊಲೆ ಪ್ರಕರಣ ದಾಖಲಿಸಲಾಗಿದೆ ಎಂದು ತಿಳಿಸಿದ್ದಾರೆ.

‘ಸಂತ್ರಸ್ತ ಮಹಿಳೆಯರು ಕುಕಿ-ಜೋ ಬುಡಕಟ್ಟಿಗೆ ಸೇರಿದವರು. ಇಬ್ಬರೂ ಮಹಿಳೆಯರ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿದೆ. ಗುರುತು ಬಹಿರಂಗವಾಗುವಂಥ ವಿಡಿಯೊವನ್ನು ದುಷ್ಕರ್ಮಿಗಳು ಸಾಮಾಜಿಕ ಮಾಧ್ಯಮದಲ್ಲಿ ಬಿಡುಗಡೆ ಮಾಡಿದ್ದು, ಮಹಿಳೆಯರು ಮತ್ತಷ್ಟು ಅಪಮಾನಕ್ಕೆ ಗುರಿಯಾಗಿದ್ದಾರೆ’ ಎಂದು ಐಟಿಎಲ್‌ಎಫ್ ತಿಳಿಸಿದೆ. ಹಲವಾರು ಸಂಘಟನೆಗಳು, ಪಕ್ಷಗಳು ಇದೊಂದು ಪೈಶಾಚಿಕ ಕೃತ್ಯ ಎಂದು ಟೀಕಿಸಿವೆ. ತ್ರಿಪುರಾದ ಪ್ರಾದೇಶಿಕ ಪಕ್ಷ ತಿಪ್ರಾ ಮೋಥಾದ ಮುಖ್ಯಸ್ಥ ಪ್ರದ್ಯೋತ್ ದೇಬ್ ಬರ್ಮಾ ವಿಡಿಯೊ ಬಗ್ಗೆ ಆಘಾತ ವ್ಯಕ್ತಪಡಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಉಪನ್ಯಾಸಕ ಮೂರ್ತಿಗೆ ನೋಟಿಸ್

ಬೆಂಗಳೂರು: ಚಂದ್ರಯಾನ-3 ಯೋಜನೆಯನ್ನು ಟೀಕಿಸಿ ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದ ಆರೋಪದ ಮೇಲೆ ಸರ್ಕಾರಿ ಪಿಯು ಕಾಲೇಜಿನ ಉಪನ್ಯಾಸಕ ಹುಲಿಕುಂಟೆ ಮೂರ್ತಿ ಅವರಿಗೆ ಪದವಿಪೂರ್ವ ಶಿಕ್ಷಣ ಇಲಾಖೆ ನೋಟಿಸ್ ನೀಡಿದೆ.

ಚಂದ್ರಯಾನಕ್ಕೂ ಮೊದಲು ತಿರುಪತಿ ತಿಮ್ಮಪ್ಪನ ಸನ್ನಿಧಿಯಲ್ಲಿ ಪೂಜೆ ಸಲ್ಲಿಸಿದ್ದ ವಿಜ್ಞಾನಿಗಳ ಧೋರಣೆಯನ್ನು ಖಂಡಿಸಿದ್ದ ಮೂರ್ತಿ ‘ಚಂದ್ರಯಾನಕ್ಕೆ ತಿರುಪತಿ ನಾಮ’ ಎಂದು ಟೀಕಿಸಿದ್ದರು. ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಶಾಸಕ ಎಸ್.ಸುರೇಶ್ ಕುಮಾರ್ ಶಾಲಾ ಶಿಕ್ಷಣ ಸಚಿವರಿಗೆ ಪತ್ರ ಬರೆದಿದ್ದರು.

‘ವಿವರಣೆ ಕೇಳಿ ನೋಟಿಸ್ ನೀಡಲಾಗಿದೆ. ಉತ್ತರ ನೋಡಿಕೊಂಡು ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದು ಪದವಿಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಫಾಲಾಕ್ಷಪ್ಪ ‘ಪ್ರಜಾವಾಣಿ’ಗೆ ತಿಳಿಸಿದರು.

ಬೆದರಿಕೆ, 30 ಜನರ ವಿರುದ್ಧ ದೂರು: ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಿದ್ದ ಮೂರ್ತಿ ಹಾಗೂ ಅವರ ಪತ್ನಿ ವಿರುದ್ಧ ಹಲವರು ಅವಾಚ್ಯವಾಗಿ ಟೀಕೆ ಮಾಡಿದ್ದು, ಕೆಲವರು ಬೆದರಿಕೆ ಹಾಕಿದ್ದಾರೆ ಎಂದು ಮೂರ್ತಿ ದೂರಿದ್ದಾರೆ. 30 ಜನರ ವಿರುದ್ಧ ಪೊಲೀಸರಿಗೆ ದೂರು ನೀಡಿದ್ದಾರೆ.

ನಾಲ್ವರು ಅಧಿಕಾರಿಗಳಿಗೆ ಹುದ್ದೆ

ಬೆಂಗಳೂರು: ಹುದ್ದೆ ನಿರೀಕ್ಷೆಯಲ್ಲಿದ್ದ ನಾಲ್ವರು ಐಎಎಸ್ ಅಧಿಕಾರಿಗಳಿಗೆ ಹುದ್ದೆ ತೋರಿಸಿ ರಾಜ್ಯ ಸರ್ಕಾರ ಬುಧವಾರ ಆದೇಶ ಹೊರಡಿಸಿದೆ.

ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ಕಾರ್ಯನಿರ್ವಾಹಕ ನಿರ್ದೇಶಕಿಯಾಗಿ ಆರ್. ವಿನೋತ್ ಪ್ರಿಯಾ ಅವರನ್ನು ನೇಮಿಸಲಾಗಿದೆ. ಉಳಿದಂತೆ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಅಡಿಯಲ್ಲಿರುವ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ (ಎಂಎಸ್‌ಎಂಇ) ನಿರ್ದೇಶಕರಾಗಿ ವಿಜಯ ಮಹಾಂತೇಶ್ ಬಿ.ದಾನಮ್ಮನವರ್, ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಕುಲಸಚಿವರಾಗಿ ಪಿ.ಆರ್. ಶಿವಪ್ರಸಾದ್, ಬಾಗಲಕೋಟೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಡಾ. ಎಸ್. ಆಕಾಶ್ ಅವರನ್ನು ನೇಮಿಸಲಾಗಿದೆ.

ಬ್ಯಾಂಕ್‌ಗಳ ಖಾಸಗೀಕರಣ ಬೇಡ

ಬೆಂಗಳೂರು: ಸಾರ್ವಜನಿಕ ವಲಯದ ಬ್ಯಾಂಕುಗಳ ಖಾಸಗೀಕರಣಕ್ಕೆ ಸರ್ಕಾರ ಒತ್ತು ನೀಡಬಾರದು ಎಂದು ಅಖಿಲ ಭಾರತ ಬ್ಯಾಂಕ್ ಅಧಿಕಾರಿಗಳ ಮಹಾ ಒಕ್ಕೂಟ ಆಗ್ರಹಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ರಾಜ್ಯ ಕಾರ್ಯದರ್ಶಿ ಕೆ.ಎಂ. ಗಿರಿರಾಜ್, ‘ಬ್ಯಾಂಕ್‌ಗಳ ಖಾಸಗೀಕರಣ ಮಾಡುವ ಪ್ರಸ್ತಾವಗಳಿಂದ ಜನಸಾಮಾನ್ಯರ ಮೇಲೆ ತೀವ್ರ ಪರಿಣಾಮ ಬೀರುತ್ತದೆ. ದೇಶದಲ್ಲಿ ಆರ್ಥಿಕ ಸಮಾನತೆ ಸಾಧಿಸುವಲ್ಲಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ಸಾಕಷ್ಟು ಕೊಡುಗೆ ನೀಡುತ್ತಿವೆ. ಸಾರ್ವಜನಿಕರ ಅಗತ್ಯಕ್ಕಿಂತ ಲಾಭದಾಯಕ ವಹಿವಾಟಿಗೆ ಹೆಚ್ಚು ಆದ್ಯತೆ ನೀಡುವ ಖಾಸಗಿ ಬ್ಯಾಂಕ್‌ಗಳು ಸೀಮಿತ ಸೇವೆ ಒದಗಿಸುತ್ತಿವೆ. ಇದು ಆರ್ಥಿಕ ಪರಿಸ್ಥಿತಿಯ ಮೇಲೆ ಪ್ರತಿಕೂಲ ಪರಿಣಾಮವಾಗಲಿದೆ’ ಎಂದು ಹೇಳಿದರು.

ಕನ್ನಡ ಕಲಿಕೆ ಸ್ಥಗಿತ; ಸೋಫಿಯಾ ಶಾಲೆಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಟನೇ ತರಗತಿಯಿಂದ ಕನ್ನಡ ಕಲಿಕೆಗೆ ಅವಕಾಶ ಕಲ್ಪಿಸದ ಅರಮನೆ ರಸ್ತೆಯ ಸೋಫಿಯಾ ಬಾಲಕಿಯರ ಪ್ರೌಢಶಾಲೆಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ನೋಟಿಸ್ ನೀಡಿದೆ.

ಕನ್ನಡ ಭಾಷಾ ಕಲಿಕೆ ಕಾಯಿದೆ-2015ರ ಪ್ರಕಾರ ಶಾಲೆಗಳು ಕನ್ನಡವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯಾಗಿ ಕಲಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ಆದರೆ, ಸೋಫಿಯಾ ಶಾಲೆ ಎಂಟನೇ ತರಗತಿಯಿಂದ ಕನ್ನಡ ಕಲಿಕೆಗೆ ಅವಕಾಶ ನೀಡಿಲ್ಲ. ಅಲ್ಲದೇ, ಸ್ವಇಚ್ಛೆಯಿಂದ ಮಗು ಕನ್ನಡ ಕಲಿಯಲು ಬಯಸುತ್ತಿಲ್ಲ ಎಂದು ಪತ್ರಕ್ಕೆ ಸಹಿ ಮಾಡುವಂತೆ ಒತ್ತಡ ಹಾಕಲಾಗಿತ್ತು ಎಂದು ಪೋಷಕರು ದೂರಿದ್ದಾರೆ. ಈ ಕುರಿತು ತಕ್ಷಣ ವಿವರ ನೀಡುವಂತೆ ಪ್ರಾಧಿಕಾರ ಸೂಚಿಸಿದೆ.

ಕಾನೂನಿನ ಪ್ರಕಾರ ಕನ್ನಡ ಕಲಿಕೆಗೆ ಅವಕಾಶ ಕಲ್ಪಿಸದ ಖಾಸಗಿ ಶಾಲೆಗಳ ವಿರುದ್ಧ ಕ್ರಮಕೈಗೊಳ್ಳುವಂತೆ ಕೋರಿ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಅವರು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರಿಗೆ ಪತ್ರ ಬರೆದಿದ್ದರು.

ನಗರದಲ್ಲಿ ಇಂದು

‘ಮಾಧ್ಯಮ ಕ್ಷೇತ್ರದಲ್ಲಿದ್ದು ಶಾಸಕರಾದ ಹಾಗೂ ಮಾಧ್ಯಮ ಸಂಯೋಜಕರಾದ ವೃತ್ತಿ ಬಾಂಧವರಿಗೆ’ ಅಭಿನಂದನಾ ಕಾರ್ಯಕ್ರಮ: ಅಭಿನಂದಿಸುವವರು: ಕೆ.ವಿ. ಪ್ರಭಾಕರ್, ಅತಿಥಿ: ಹೇಮಂತ ನಿಂಬಾಳ್ಕರ್, ಅಧ್ಯಕ್ಷತೆ: ಶಿವಾನಂದ ತಗಡೂರು, ಆಯೋಜನೆ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಸ್ಥಳ: ಕೆಯುಡಬ್ಲ್ಯುಜೆ ಸಭಾಂಗಣ, ಕಂದಾಯ ಭವನ, ಕೆ.ಜಿ. ರಸ್ತೆ, ಮಧ್ಯಾಹ್ನ 12.15

ಅಭಿನಂದನಾ ಸಮಾರಂಭ: ಸನ್ಮಾನ: ಡಿ.ಕೆ. ಶಿವಕುಮಾರ್, ಆಯೋಜನೆ: ಕರ್ನಾಟಕ ಪ್ರಾಂತ್ಯ ಧರ್ಮಗುರುಗಳ ಭಗಿನಿಯರ ಮತ್ತು ಸಂಘ ಸಂಸ್ಥೆಗಳ ನಿಯೋಗ, ಸ್ಥಳ: ಕುಮಾರಕೃಪಾ ಅತಿಥಿಗೃಹ, ಕುಮಾರಕೃಪಾ ರಸ್ತೆ, ಸಂಜೆ 4

ಅಧಿಕ ಮಾಸದ ಹರಿಭಜನೆ: ಪೇಜಾವರ ಭಜನಾ ಮಂಡಳಿ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಜಯನಗರ, ಸಂಜೆ 5.30ರಿಂದ

‘ಬೆಪ್ಪತಕ್ಕಡಿ ಬೋಳೇಶಂಕರ’ ನಾಟಕ ಪ್ರದರ್ಶನ: ರಚನೆ: ಚಂದ್ರಶೇಖರ ಕಂಬಾರ, ನಿರ್ದೇಶನ: ಸುಜಿತ್ ಕುಮಾರ್ ಎಚ್.ಎಂ., ಆಯೋಜನೆ: ಕನ್ನಡ ಸಾಹಿತ್ಯ ಕೂಟ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಜಾಲಹಳ್ಳಿ, ಸಂಜೆ 6

ಎ.ಎನ್. ಮೂರ್ತಿರಾವ್ ಅವರ ‘ದೇವರು’ ಪುಸ್ತಕದಲ್ಲಿನ ವೈಚಾರಿಕತೆ ಕುರಿತು ಉಪನ್ಯಾಸ: ಕುಸುಮಾ ಸಿ.ಆರ್., ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ಪ್ರವಚನ ವಾಹಿನಿ: ‘ಭಗವಂತ ಮತ್ತು ಭಕ್ತನ ಅವಿನಾಭಾವ ಸಂಬಂಧ’ದ ಕುರಿತ ಉಪನ್ಯಾಸ: ಪವಮಾನಾಚಾರ್ ಎಂ., ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30ರಿಂದ

ಹರಿದಾಸ ಮಂಜರಿ: ಗಾಯನ: ಶ್ರೀನಿವಾಸಮೂರ್ತಿ, ಪಿಟೀಲು: ಮೈಸೂರು ಸಂಜೀವ್ ಕುಮಾರ್, ಮೃದಂಗ: ಮುರಳಿ ನಾರಾಯಣರಾವ್, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಪವಮಾನಪುರ, ಸಂಜೆ 7

ವೀಣಾ ವಾದನ: ಪ್ರಸ್ತುತಿ: ಶ್ರುತಿ ಕುಲಕರ್ಣಿ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಜಯನಗರ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ ಕಳುಹಿಸಿ. nagaradalli_indu@prajavani.co.in

‘ಸಂಪ್ರದಾಯ ಪಾಲಿಸುವ ಹವ್ಯಕರು’

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ‘ಭಾರತೀಯ ಸಂಸ್ಕೃತಿಗೆ ಹವ್ಯಕರ ಕೊಡುಗೆ ಅಪಾರ. ಸಂಸ್ಕಾರ, ಸಂಸ್ಕೃತಿ, ಆಚಾರ ವಿಚಾರಗಳನ್ನು ಹವ್ಯಕರಿಂದ ಕಲಿಯಬೇಕು’ ಎಂದು ಬೆಂಗಳೂರು ಉತ್ತರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಂ. ರಾಜ್‌ಕುಮಾರ್ ಹೇಳಿದರು.

ಹವ್ಯಕ ಪ್ರತಿಷ್ಠಾನವು ಬಿಇಎಂಎಲ್ ಬಡಾವಣೆಯಲ್ಲಿ ಹಮ್ಮಿಕೊಂಡಿದ್ದ‘ಸಂಭ್ರಮ 2023’ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ಹವ್ಯಕರು ದೊಡ್ಡ ಹುದ್ದೆ, ಪದವಿಯಲ್ಲಿದ್ದರೂ ಮನೆಗಳಲ್ಲಿ ಸಂಪ್ರದಾಯ ಉಳಿಸಿಕೊಂಡಿದ್ದಾರೆ’ ಎಂದು ಶ್ಲಾಘಿಸಿದರು.

ಶಾಸಕ ಮುನಿರತ್ನ ಮಾತನಾಡಿ, ‘ಹವ್ಯಕ ಜನಾಂಗದ ನಿಷ್ಠೆ, ಪ್ರಾಮಾಣಿಕತೆ ಮೆಚ್ಚುವಂತದ್ದು. ಸಂಸ್ಕೃತಿ, ಪರಂಪರೆ, ಇತಿಹಾಸ ಉಳಿಸಬೇಕಾಗಿದೆ’ ಎಂದು ಹೇಳಿದರು. ಹವ್ಯಕ ಪ್ರತಿಷ್ಠಾನದ ಅಧ್ಯಕ್ಷ ಗೋಪಾಲಕೃಷ್ಣ ಹೆಗಡೆ ಅಧ್ಯಕ್ಷತೆ ವಹಿಸಿದ್ದರು. ವಿಭು ಅಕಾಡೆಮಿ ಅಧ್ಯಕ್ಷೆ ಆರತಿ ವಿ.ಬಿ. ಮಾತನಾಡಿದರು. ಪಾಲಿಕೆ ಮಾಜಿ ಸದಸ್ಯರಾದ ಜಿ.ಎಚ್. ರಾಮಚಂದ್ರ, ಎಂ. ಮಂಜು, ಕೋಶಾಧ್ಯಕ್ಷ ರಾಮಕೃಷ್ಣ ಹೆಗಡೆ, ಉಪಾಧ್ಯಕ್ಷ ಗಣಪತಿ ಎಸ್. ಹೆಗಡೆ, ಸತೀಶ್ ಮುಟುಗುಪ್ಪೆ ಇದ್ದರು. ವೇದ ವಿದ್ವಾನ್ ಶಂಕರ್ ಭಟ್ ಅವರನ್ನು ಸನ್ಮಾನಿಸಲಾಯಿತು.

ರಾಜರಾಜೇಶ್ವರಿನಗರದಲ್ಲಿ ಹವ್ಯಕ ಪ್ರತಿಷ್ಠಾನವು ಹಮ್ಮಿಕೊಂಡಿದ್ದ ಸಂಭ್ರಮ 2023 ಕಾರ್ಯಕ್ರಮವನ್ನು ಬೆಂಗಳೂರು ಉತ್ತರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಂ.ರಾಜ್‌ಕುಮಾರ್ ಉದ್ಘಾಟಿಸಿದರು. ವೇದವಿದ್ವಾನ್ ಶಂಕರ ಭಟ್, ಗೋಪಾಲಕೃಷ್ಣ ಹೆಗಡೆ, ಆರತಿ ವಿ.ಬಿ., ಗಣಪತಿ ಎಸ್ ಹೆಗಡೆ, ಪಾಲಿಕೆ ಮಾಜಿ ಸದಸ್ಯ ಎಂ.ಮಂಜು ಇದ್ದರು.

ರಾಜಕಾಲುವೆಗೆ ತಡೆಗೋಡೆ ನಿರ್ಮಾಣ: ಮುನಿರಾಜು

ಪೀಣ್ಯ ದಾಸರಹಳ್ಳಿ: ‘ಮಳೆಗಾಲದಲ್ಲಿ ಜಲಾವೃತವಾಗದಂತೆ, ತಗ್ಗು ಪ್ರದೇಶಗಳಿಗೆ ನೀರು ನುಗ್ಗದಂತೆ ಮಾಡಲು ರಾಜ ಕಾಲುವೆಯ ಎರಡೂ ಕಡೆ ತಡೆಗೋಡೆ ನಿರ್ಮಾಣ ಮಾಡಲಾಗುವುದು’ ಎಂದು ಶಾಸಕ ಎಸ್. ಮುನಿರಾಜು ತಿಳಿಸಿದರು.

ಮೇದರಹಳ್ಳಿಯ ಪಶ್ಚಿಮ ಕೌಂಟಿ ಬಳಿಯ ಸುಮಾರು 450 ಮೀಟರ್ ಉದ್ದದ ರಾಜ ಕಾಲುವೆಗೆ ತಡೆಗೋಡೆ, ಬಾಗಲಗುಂಟೆಯ ಮಾರಣ್ಣ ಬಡಾವಣೆಯಲ್ಲಿ ಸುಮಾರು 60 ಮೀಟರ್ ಉದ್ದದ ರಾಜಕಾಲುವೆಯ ತಡೆಗೋಡೆ ನಿರ್ಮಾಣಕ್ಕೆ ಚಾಲನೆ ನೀಡಿ ಮಾತನಾಡಿದರು.

‘ರಾಜ ಕಾಲುವೆಯಲ್ಲಿ ಗಿಡಗಂಟಿ ಬೆಳೆದು ಸೊಳ್ಳೆಯ ಕಾಟ ಹೆಚ್ಚಾಗಿದೆ. ಇದರಿಂದ ರೋಗ ಹರಡಲಿದೆ ಎಂದು ಸ್ಥಳೀಯರು ಭೀತಿ ವ್ಯಕ್ತಪಡಿಸಿದ್ದರಿಂದ ರಾಜ ಕಾಲುವೆಗಳ ರಕ್ಷಣೆ ಮತ್ತು ಅದರ ಸ್ವಚ್ಛತೆಗೆ ಆದ್ಯತೆ ನೀಡುತ್ತಿದ್ದೇವೆ’ ಎಂದು ಹೇಳಿದರು.

ಕೆಲ ರಾಜ ಕಾಲುವೆಗಳ ಒತ್ತುವರಿಯ ಬಗ್ಗೆ ಸರ್ವೆ ಮಾಡಿಸ ಲಾಗುವುದು. ರಾಜ ಕಾಲುವೆಗಳ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ಸಹಾಯಕ ಕಾರ್ಯಪಾಲಕ ಎಂಜಿನಿಯರ್ ನಿರಂಜನ್ ತಿಳಿಸಿದರು. ದಾಸರ ಹಳ್ಳಿ ಮಂಡಲ ಬಿಜೆಪಿ ಅಧ್ಯಕ್ಷ ಸೋಮಶೇಖರ್, ಬಿಜೆಪಿ ಮುಖಂಡ ರಾದ ಭರತ್ ಸೌಂದರ್ಯ, ಗುರು ಪ್ರಸಾದ್, ಕೃಷ್ಣಮೂರ್ತಿ, ಬಿ.ಎಂ. ನಾರಾಯಣ್, ರಘು ಸೂರ್ಯ, ವಿನೋದ್ ಗೌಡ, ನಾಣಯ್ಯ ಇದ್ದರು.

ನರೇಗಾ: ವಾರ್ಷಿಕ 200 ದಿನ ಕೆಲಸ ನೀಡಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನರೇಗಾ ಯೋಜನೆ ಅಡಿಯಲ್ಲಿ ವಾರ್ಷಿಕ ಕೆಲಸದ ದಿನಗಳನ್ನು 100 ರಿಂದ 200 ದಿನಗಳಿಗೆ ಹೆಚ್ಚಿಸಿ, ದಿನಗೂಲಿ ದರವನ್ನು ₹316ರಿಂದ ₹500ಕ್ಕೆ ಹೆಚ್ಚಿಸಬೇಕು ಎಂದು ಹಾವೇರಿ ಜಿಲ್ಲಾ ಮಹಾತ್ಮ ಗಾಂಧೀಜಿ ಕಟ್ಟಡ ಮತ್ತು ಇತರೆ ಕೂಲಿ ಕಾರ್ಮಿಕರ ಸಂಘಟನೆ ಆಗ್ರಹಿಸಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘಟನೆಯ ಜಿಲ್ಲಾ ಸಂಚಾಲಕ ಎಸ್‌.ಡಿ. ಬಳಿಗಾರ, ‘ಕೇಂದ್ರ ಮತ್ತು ರಾಜ್ಯ ಸರ್ಕಾರದ ಪ್ರಮುಖ ಯೋಜನೆಗಳಲ್ಲಿ ಒಂದಾಗಿರುವ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ನರೇಗಾ) ಅಡಿಯಲ್ಲಿ 100 ದಿನಗಳ ಉದ್ಯೋಗದ ಗ್ಯಾರಂಟಿ ಇರುತ್ತದೆ. ಇದರಿಂದ ಸಾವಿರಾರು ಕುಟುಂಬಗಳಿಗೆ ಆಸರೆಯಾಗಿದೆ. ಆದರೆ, ಹಾವೇರಿ ಜಿಲ್ಲೆಯಲ್ಲಿ ಸದ್ಯ ಬರಗಾಲದ ಛಾಯೆ ಇದ್ದು, ಈಗಾಗಲೇ 100 ದಿನಗಳ ಅವಧಿ ಮುಗಿಯುತ್ತಾ ಬಂದಿದೆ. ಮುಂದಿನ ದಿನಗಳಲ್ಲಿ ಜೀವನ ನಡೆಸಲು ವಲಸೆ ಹೋಗುವ ಪರಿಸ್ಥಿತಿ ಎದುರಾಗಿದೆ. ಆದ್ದರಿಂದ ಕೆಲಸದ ದಿನಗಳನ್ನು ಹೆಚ್ಚಿಸಬೇಕು’ ಎಂದು ಹೇಳಿದರು.

‘ನರೇಗಾ ಯೋಜನೆ ಅಡಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಮಕ್ಕಳ ಶಿಕ್ಷಣಕ್ಕೆ ಕಾರ್ಮಿಕ ಇಲಾಖೆಯಿಂದ ವಿದ್ಯಾರ್ಥಿವೇತನ ನೀಡಬೇಕು. ಸಾಮಾಜಿಕ ಭದ್ರತಾ ಯೋಜನೆ ಅಡಿಯಲ್ಲಿ ಅಸಂಘಟಿತ ಕೂಲಿ ಕಾರ್ಮಿಕರಿಗೆ ₹5 ಸಾವಿರ ಪಿಂಚಣಿ ಮತ್ತು ಜೀವವಿಮಾ ಸೌಲಭ್ಯವನ್ನು ಕಲ್ಪಿಸಬೇಕು’ ಎಂದು ಆಗ್ರಹಿಸಿದರು.

ಸಂಘಟನೆಯ ಸದಸ್ಯರಾದ ಸಚಿನ ಬೂದಿಹಾಳ, ನಾಗಪ್ಪ ಕಳ್ಳಿಮನಿ, ಸಿದ್ದಪ್ಪ ಹರಿಜನ, ಗುತ್ತೆಮ್ಮ ಸುಣಗಾರ, ಲಲಿತಮ್ಮ ಚನ್ನಳ್ಳಿ ಇದ್ದರು.

ಹೊಲಿಗೆ ಯಂತ್ರ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೋತ್ಥಾನದ ಸೇವಾ ವಸತಿ ಯೋಜನೆಯಡಿಯಲ್ಲಿ ಫಲಾನುಭವಿಗಳಿಗೆ ಹೊಲಿಗೆ ತರಬೇತಿ ನೀಡಿ ಹೊಲಿಗೆ ಯಂತ್ರಗಳನ್ನು ವಿತರಿಸಲಾಯಿತು.

ರಾಷ್ಟ್ರೋತ್ಥಾನ ಪರಿಷತ್ ಪ್ರಧಾನ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ 62 ಹೊಲಿಗೆ ಯಂತ್ರಗಳನ್ನು ವಿತರಿಸಿದರು.

ಕೊಳೆಗೇರಿಯ ಸಮಗ್ರ ಅಭಿವೃದ್ಧಿಗಾಗಿ ಸಕ್ರಿಯವಾಗಿರುವ 12 ಸೇವಾ ವಸತಿಗಳಲ್ಲಿ 3 ತಿಂಗಳ ಕಾಲ ಉಚಿತ ಹೊಲಿಗೆ ತರಬೇತಿ ನೀಡಲಾಗಿತ್ತು. 11 ಸೇವಾ ವಸತಿಗಳಲ್ಲಿ ಹೊಲಿಗೆ ತರಬೇತಿಯೊಂದಿಗೆ ಕಂಪ್ಯೂಟರ್ ಹಾಗೂ ಬ್ಯೂಟಿಷಿಯನ್ ತರಬೇತಿಯನ್ನೂ ನೀಡಲಾಗುತ್ತಿದೆ. 350ಕ್ಕೂ ಹೆಚ್ಚಿನ ಮಂದಿ ಪ್ರಯೋಜನ ಪಡೆಯುತ್ತಿದ್ದಾರೆ.

ಇಲ್ಲಿಯವರೆಗೆ 450ಕ್ಕೂ ಅಧಿಕ ಜನರು ಉಚಿತ ಹೊಲಿಗೆ ತರಬೇತಿ ಪಡೆದಿದ್ದಾರೆ. 270 ಮಂದಿ ಸ್ವ-ಉದ್ಯೋಗ ಮಾಡುತ್ತಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಸೇವಾ ವಸತಿ ಯೋಜನೆಯನ್ನು ರಾಷ್ಟ್ರೋತ್ಥಾನವು ಬೆಂಗಳೂರಿನ ಕೊಳೆಗೇರಿಗಳ ಸಮಗ್ರ ವಿಕಾಸಕ್ಕಾಗಿ 1995ರಲ್ಲಿ ಪ್ರಾರಂಭಿಸಿತು. ಸದ್ಯ, 570 ಕೊಳೆಗೇರಿಗಳ ಪೈಕಿ 230 ಕೊಳೆಗೇರಿಗಳಲ್ಲಿ ಶಾಲಾ ನಂತರದ ಕಲಿಕಾ ಕೇಂದ್ರಗಳು, ವೃತ್ತಿಪರ ತರಬೇತಿ, ಆರೋಗ್ಯ ತಪಾಸಣಾ ಶಿಬಿರಗಳನ್ನು ನಿರಂತರವಾಗಿ ನಡೆಸಿಕೊಂಡು ಬಂದಿದೆ. 75 ಸಾವಿರಕ್ಕೂ ಹೆಚ್ಚಿನ ಫಲಾನುಭವಿಗಳು ಈ ಯೋಜನೆಯ ಪ್ರಯೋಜನ ಪಡೆದಿದ್ದು, 2000ಕ್ಕೂ ಹೆಚ್ಚು ಮಹಿಳೆಯರು ಸ್ವಸಹಾಯ ಸಂಘಗಳ ಸದಸ್ಯರಾಗಿದ್ದಾರೆ ಎಂದು ತಿಳಿಸಿದೆ.

ರಾಷ್ಟ್ರೋತ್ಥಾನದ ಸೇವಾ ವಸತಿ ಯೋಜನೆಯಡಿಯಲ್ಲಿ ಫಲಾನುಭವಿಗಳಿಗೆ ಹೊಲಿಗೆ ತರಬೇತಿ ನೀಡಿ, ಹೊಲಿಗೆ ಯಂತ್ರಗಳನ್ನು ವಿತರಿಸಲಾಯಿತು

ಸ್ಪರ್ಧಾ ವಾಣಿ

ನೇಮಕಾತಿ ಪ್ರಕ್ರಿಯೆಯ ಭಾಗವಾಗಿರುವ ಸಂದರ್ಶನದಲ್ಲಿ ಅಭ್ಯರ್ಥಿಯ ವ್ಯಕ್ತಿತ್ವ ಅರಿಯಲು ಮೃದು ಕೌಶಲಗಳನ್ನು ಪರೀಕ್ಷಿಸಲಾಗುತ್ತದೆ. ವ್ಯಕ್ತಿಯಲ್ಲಿ ಅಮೂರ್ತವಾಗಿರುವ ಮೃದು ಕೌಶಲಗಳು ಯಾವುವು ? ಅವುಗಳನ್ನು ಅಳವಡಿಸಿಕೊಳ್ಳುವುದು ಹೇಗೆ? ಈಗಾಗಲೇ ವ್ಯಕ್ತಿಯಲ್ಲಿರುವ ಕೌಶಲಗಳನ್ನು ಗುರುತಿಸಿ, ಸುಧಾರಿಸಿಕೊಳ್ಳುವುದು ಹೇಗೆ ? ಈ ಎಲ್ಲ ಅಂಶಗಳ ಕುರಿತ ಮಾಹಿತಿ ಇಲ್ಲಿದೆ

ಮೃದು ಕೌಶಲ ಈಗ ಬಲು ಮುಖ್ಯ

ನಾಗೇಶ ಜಿ. ವೈದ್ಯ

ಹೆಚ್ಚಿನ ನೇಮಕಾತಿಗಳು ಸ್ಪರ್ಧಾತ್ಮಕ ಪರೀಕ್ಷೆಗಳ ನಂತರ ಸಂದರ್ಶನವನ್ನೂ ಒಳಗೊಂಡಿರುತ್ತವೆ. ಸಂಭಾವ್ಯ ಉದ್ಯೋಗಿಯನ್ನು ನೇಮಿಸಿಕೊಳ್ಳುವಾಗ, ಅವರ ಮೃದು ಕೌಶಲ(ಸಾಫ್ಟ್ ಸ್ಕಿಲ್)ವನ್ನು ಮೌಲ್ಯಮಾಪನ ಮಾಡಲು ಉದ್ಯೋಗದಾತರಿಗೆ ಸಹಕಾರಿಯಾಗುವುದು ಸಂದರ್ಶನ. ಇದನ್ನು ಎದುರಿಸಲು 'ಮೃದು ಕೌಶಲ' ಅಗತ್ಯ. ಈ ಕೌಶಲದ ಕೊರತೆಯ ಕಾರಣದಿಂದಾಗಿ ಶೈಕ್ಷಣಿಕವಾಗಿ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಗರಿಷ್ಠ ಅಂಕಗಳಿಸಿದವರೂ ಆಯ್ಕೆ ಪ್ರಕ್ರಿಯೆಯಲ್ಲಿ ಸೋಲನ್ನು ಅನುಭವಿಸುವ ಸಾಧ್ಯತೆ ಇರುತ್ತದೆ.

ಏನಿದು ಮೃದು ಕೌಶಲ?

ಮೃದು ಕೌಶಲಗಳು ಪ್ರಮಾಣೀಕರಿಸಲಾಗದ ವೈಯಕ್ತಿಕ ಗುಣಲಕ್ಷಣಗಳು. ಸೃಜನಶೀಲತೆ, ಸಂವಹನ, ವಿಮರ್ಶಾತ್ಮಕ ಚಿಂತನೆ, ಪ್ರೇರಣೆ, ಸಮಸ್ಯೆಗಳ ಪರಿಹಾರ, ಸ್ಥಿತಿಸ್ಥಾಪಕತ್ವ, ವಿಶ್ವಾಸಾರ್ಹತೆ, ಹೊಂದಿಕೊಳ್ಳುವಿಕೆ ಹಾಗೂ ನಾಯಕತ್ವ - ಇವನ್ನೆಲ್ಲ 'ಮೃದು ಕೌಶಲ'ಗಳೆಂದು ಗುರುತಿಸಲಾಗಿದೆ.

ಬಾಲ್ಯದಲ್ಲಿ ಪೋಷಕರು ಮತ್ತು ಶಿಕ್ಷಕರಿಂದ ವ್ಯಕ್ತಿತ್ವ, ಸಾಮಾಜಿಕ ನಡವಳಿಕೆಯಂತಹ ಮೃದು ಕೌಶಲಗಳು ರೂಪುಗೊಳ್ಳುತ್ತವೆ. ನಂತರದಲ್ಲಿ ಬೆಳವಣಿಗೆಯ ಪರಿಸರವನ್ನು ಅವಲಂಬಿಸಿ ಇವು ವಿಸ್ತರಿಸುತ್ತವೆ. ಕಠಿಣ ಕೌಶಲಗಳು ಸಾಂಪ್ರದಾಯಿಕವಾಗಿರುತ್ತವೆ ಹಾಗೂ ವ್ಯಕ್ತಿಯ ಪರಿಣತಿಯನ್ನು ಅಳೆಯಬಹುದಾದಂಥವು.

ಪದವಿಗಳು, ಪ್ರಮಾಣಪತ್ರಗಳು ವ್ಯಕ್ತಿಯೊಬ್ಬ ಕೌಶಲಗಳನ್ನು ಹೊಂದಿರುವುದಕ್ಕೆ ಪುರಾವೆಗಳು. ಆದರೆ, ಮೃದು ಕೌಶಲಗಳು ಅಮೂರ್ತವಾದವು. ಮಾತ್ರವಲ್ಲ, ವೈಯಕ್ತಿಕ ಸ್ವಭಾವವನ್ನು ಅವಲಂಬಿಸಿದವು. ಇವುಗಳನ್ನು ತೂಗಿ ನೋಡಲು ನಿರ್ದಿಷ್ಟ ಮಾಪಕಗಳಿಲ್ಲ. ಆದರೆ, ಮೃದು ಕೌಶಲಗಳನ್ನು ಹೊಂದಿರುವ ಅಭ್ಯರ್ಥಿಗಳಿಗೆ ಉದ್ಯೋಗ ಮಾರುಕಟ್ಟೆಯಲ್ಲಿ ನಿರಂತರ ಬೇಡಿಕೆಯಿದೆ. ಇವು ವೃತ್ತಿಜೀವನದ ಯಶಸ್ಸಿಗೆ ಮಾತ್ರವಲ್ಲ, ನಿಮ್ಮ ದೈನಂದಿನ ಜೀವನದಲ್ಲಿಯೂ ಸಹ ನಿರ್ಣಾಯಕವಾಗಿವೆ.

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ..

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳ ಸಂದರ್ಶನದ ಸಮಯದಲ್ಲಿ ಆಯಾ ಸಂಸ್ಥೆಗಳು ಹತ್ತು, ಹದಿನೈದು ನಿಮಿಷಗಳಲ್ಲಿ ಸಾಂದರ್ಭಿಕ ಮತ್ತು ನಡವಳಿಕೆಯ ಪ್ರಶ್ನೆಗಳ ಮೂಲಕ ಅವರ ಮೃದು ಕೌಶಲಗಳನ್ನು ತೂಗಿ ಅಳೆದುಬಿಡುತ್ತಾರೆ. ನಾಳೆ ತಮ್ಮ ಸಂಸ್ಥೆಯ ಆಸ್ತಿಯಾಗುವ ಅಭ್ಯರ್ಥಿಯು ವಿವಿಧ ಸಂದರ್ಭಗಳಲ್ಲಿ ಹೇಗೆ ಕಾರ್ಯನಿರ್ವಹಿಸುತ್ತಾನೆ ಎಂಬುದನ್ನು ತಿಳಿದುಕೊಳ್ಳುತ್ತವೆ.

ಮೃದು ಕೌಶಲದ ಮಹತ್ವ ಅರಿತ ಅನೇಕ ವಿಶ್ವವಿದ್ಯಾಲಯಗಳು ಇದನ್ನು ತಮ್ಮ ಪಠ್ಯಕ್ರಮದಲ್ಲಿ ಈ ವಿಷಯವನ್ನು ಸೇರಿಸಿವೆ. ಕೆಲವು ಕಾಲೇಜುಗಳಲ್ಲಿ ಮೃದು ಕೌಶಲದ ಡಿಪ್ಲೊಮಾ, ಸರ್ಟಿಫಿಕೇಟ್ ಕೋರ್ಸ್‌ಗಳಿವೆ. ಖಾಸಗಿ ಸಂಸ್ಥೆಗಳೂ ತರಬೇತಿಯನ್ನು ನೀಡುತ್ತಿವೆ. ಮಾರುಕಟ್ಟೆಯಲ್ಲಿ ಮಾರ್ಗದರ್ಶಕರು ಲಭ್ಯವಿದ್ದಾರೆ. ಇದು ಅಭ್ಯರ್ಥಿಗಳು ಕೆಲಸಕ್ಕೆ ಸೇರುವ ಮುಂಚೆ ವೃತ್ತಿಪರರಾಗಲು ಹಾಗೂ ಕೆಲಸವನ್ನು ಮೊದಲ ದಿನದಿಂದಲೇ ಪರಿಣಾಮಕಾರಿಯಾಗಿ ನಿರ್ವಹಿಸಲು ಸಾಧ್ಯವಾಗಿಸುತ್ತದೆ. ಅಭ್ಯರ್ಥಿಯ ಹಾಗೂ ಸಂಸ್ಥೆಗಳ ಯಶಸ್ಸಿಗೂ ಮೃದು ಕೌಶಲ ಅತ್ಯಗತ್ಯ ಎಂಬುದು ಈಗ ರುಜುವಾತಾಗಿದೆ.

ಇವುಗಳ ಮೇಲೆ ಲಕ್ಷ್ಯವಿರಲಿ

ಕೃತಕ ಬುದ್ಧಿಮತ್ತೆಯು ಉದ್ಯೋಗದ ಸ್ವರೂಪವನ್ನೇ ಬದಲಾಯಿಸುತ್ತಿರುವುದರಿಂದ, ಯಂತ್ರಗಳು ಕರಗತ ಮಾಡಿಕೊಳ್ಳಲು ಸಾಧ್ಯವಾಗದ ಸಾಮಾಜಿಕ ಮತ್ತು ಭಾವನಾತ್ಮಕ ಸಾಮರ್ಥ್ಯಗಳನ್ನು ವ್ಯಕ್ತಿಗಳು ಹೊಂದುವುದು ಅನಿವಾರ್ಯವಾಗಿದೆ. ಹೆಚ್ಚುತ್ತಿರುವ ಸ್ಪರ್ಧಾತ್ಮಕ ಉದ್ಯೋಗಿಗಳ ಮಾರುಕಟ್ಟೆಯಲ್ಲಿ, ಸಂಸ್ಥೆಗಳೂ ಉತ್ತಮ ಮೃದು ಕೌಶಲಗಳನ್ನು ಹೊಂದಿರುವ ಅಭ್ಯರ್ಥಿಗಳನ್ನೇ ನೇಮಿಸಿಕೊಳ್ಳುತ್ತಿವೆ. ಹಾಗಾಗಿ, ಸ್ಪರ್ಧಾತ್ಮಕ ಪರೀಕ್ಷೆಯ ನಂತರ ಎದುರಿಸುವ ಅಭ್ಯರ್ಥಿಯು ಈ ಕೆಳಂಡ ವಿಷಯಗಳ ಬಗ್ಗೆ ಲಕ್ಷ್ಯವಿಡುವುದು ಉತ್ತಮ.

ಚಿಂತನೆ, ಧನಾತ್ಮಕತೆ : ಅಭ್ಯರ್ಥಿಯು ಪರೀಕ್ಷೆ ಪಾಸಾಗಿರುವುದರಿಂದ ಅವರ ವಿಷಯ ಜ್ಞಾನದ ಬಗ್ಗೆ ಆಯ್ಕೆ ಸಮಿತಿಗೆ ಅರಿವಾಗಿರುತ್ತದೆ. ಹಾಗಾಗಿ, ಸಂದರ್ಶನದಲ್ಲಿ, ನಿಮ್ಮ ಮೃದು ಕೌಶಲಗಳನ್ನು ಪ್ರದರ್ಶಿಸಲು ಅವಕಾಶ ನೀಡುತ್ತಾರೆ. ನಿಮ್ಮಲ್ಲಿ ಗೊಂದಲ ಮೂಡಿಸಬಲ್ಲ ಪ್ರಶ್ನೆಗಳನ್ನು ಕೇಳುವ ಮೂಲಕ ನಿಮ್ಮ ತಾರ್ಕಿಕ ಚಿಂತನೆ, ತಾಳ್ಮೆ, ಉತ್ಸಾಹ ಮತ್ತು ವಿಶ್ವಾಸಾರ್ಹತೆಯನ್ನು ಒರೆಗೆ ಹಚ್ಚುತ್ತಾರೆ.

ಸಂವಹನ: ನೀವು ಉತ್ತರ ನೀಡುತ್ತಿದ್ದರೆ, ಆಯ್ಕೆ ಸಮಿತಿಯು ನಿಮ್ಮ ಹಾವಭಾವವನ್ನು ಗಮನಿಸುತ್ತಿರುತ್ತದೆ. ನಿಮ್ಮ ಭಂಗಿ, ನೀವು ಬಳಸುವ ಶಬ್ದಗಳು, ಸ್ಪಷ್ಟತೆ, ಉತ್ತರಿಸುವ ರೀತಿ ಕೂಡ ಅವರ ಮೇಲೆ ಪ್ರಭಾವ ಬೀರುತ್ತವೆ. ಸಮರ್ಪಣಾ ಭಾವ, ಆತ್ಮವಿಶ್ವಾಸ, ಸಮಯಪ್ರಜ್ಞೆಯನ್ನು ಸೂಕ್ಷ್ಮವಾಗಿ ನೋಡುತ್ತಾರೆ.

ತಂಡ ಪ್ರವೃತ್ತಿ, ನಾಯಕತ್ವ: ಅಭ್ಯರ್ಥಿಗಳು ನಾಯಕರಾಗಿ ಹೊರಹೊಮ್ಮುವುದನ್ನು ಆಯ್ಕೆ ಸಮಿತಿ ಇಷ್ಟಪಡುತ್ತದೆ. ಗುಂಪು ಚರ್ಚೆಯಲ್ಲಿ ಇದನ್ನೇ ಗಮನಿಸಲಾಗುತ್ತದೆ. ಚರ್ಚೆಯ ವೇಳೆ ನೀಡಲಾದ ವಿಷಯವನ್ನು ಮೌಲ್ಯಯುತವಾಗಿ ವಿಮರ್ಶಿಸುವುದು, ಉಳಿದವರನ್ನೂ ಮಾತನಾಡಲು ಪ್ರೋತ್ಸಾಹಿಸುವುದು, ಇತರರ ಅಭಿಪ್ರಾಯಗಳನ್ನು ಸೌಜನ್ಯದಿಂದ ಸ್ವೀಕರಿಸುವುದು, ಗುಂಪಿನಲ್ಲಿ ಎಲ್ಲರೊಂದಿಗೆ ಹೊಂದಿಕೊಳ್ಳುವುದು, ಸ್ನೇಹಪರತೆ, ವಿನಯಶೀಲತೆ, ಚರ್ಚೆಯಲ್ಲಿ ನಮ್ರತೆ, ನಾವೀನ್ಯ, ಸಮಯ ನಿರ್ವಹಣೆ, ಸಮಸ್ಯೆಯನ್ನು ಪರಿಹರಿಸುವ ಕೌಶಲ, ಒತ್ತಡದಲ್ಲಿ ನಿಮ್ಮ ವರ್ತನೆ ಹಾಗೂ ನಾಯಕತ್ವದ ಗುಣಗಳನ್ನು ಅರಿಯಲು ಉಪಯೋಗಿಸಲಾಗುತ್ತದೆ.

ಇವಿಷ್ಟರಲ್ಲಿ ನೀವು ಆಯ್ಕೆ ಸಮಿತಿಯ ಮನ ಗೆದ್ದುಬಿಟ್ಟರೆ, ಉಳಿದ ಕೌಶಲಗಳನ್ನು ತರಬೇತಿಯ ಮೂಲಕ ಕಲಿಸಿಕೊಡಬಹುದೆಂಬ ಆಶಯ ಅವರದ್ದು. ❖

ಸುಧಾರಣೆ ಸಾಧ್ಯ

ನಿಮ್ಮಲ್ಲಿರುವ ಮೃದು ಕೌಶಲಗಳ ಬಗ್ಗೆ ಎಂದಾದರೂ ಯೋಚಿಸಿದ್ದೀರಾ? ಗುರು, ಹಿರಿಯರಿಂದ ಕೊಡುಗೆಯಾಗಿ ಬಂದಿರುವ ಇವುಗಳು ಪರಿಪೂರ್ಣವಲ್ಲ ಅನ್ನಿಸಿದೆಯೆ? ಚಿಂತೆ ಬೇಡ. ಎಷ್ಟೋ ಸಲ ಇವೆಲ್ಲ ಇದ್ದರೂ, ಇವೇ ಮೃದು ಕೌಶಲಗಳೆಂದು ಗೊತ್ತೇ ಇರುವುದಿಲ್ಲ.

ಬೇಕಾದರೆ ಗಮನಿಸಿ; ಅನೇಕರಿಗೆ ಮುಕ್ತವಾಗಿ ಮಾತನಾಡಲು ಸಂಕೋಚ ಕಾಡಬಹುದು. ಕೆಲವರಿಗೆ ಒಟ್ಟಾಗಿ ತಂಡವಾಗಿ ಕೆಲಸ ಮಾಡುವುದು ಇಷ್ಟವಾಗದೇ ಇರಬಹುದು. ತನ್ನ ಕೆಲಸ ಮಾಡಿದರೆ ಸಾಕು, ಇತರರೊಂದಿಗೆ ಹಂಚಿಕೊಳ್ಳುವುದರ ಔಚಿತ್ಯವಿಲ್ಲ ಎಂದೂ ಇನ್ನು ಕೆಲವರು ಯೋಚಿಸಬಹುದು. ಇನ್ನೊಬ್ಬರ ಪ್ರತಿಕ್ರಿಯೆಯು ಕೆಲವರಿಗೆ ಕಿರಿಕಿರಿ ಎನ್ನಿಸಬಹುದು, ಮುಂಗೋಪಕ್ಕೆ ಕಾರಣವಾಗಬಹುದು.

ಈ ಮೇಲಿನ ಎಲ್ಲ ಅಂಶಗಳು ಎಲ್ಲರಲ್ಲೂ ಇರಬಹುದಾದ ದುರ್ಬಲ ಅಂಶಗಳೇ. ಅಂತಹವುಗಳನ್ನು ಗುರುತಿಸಿ, ಸುಧಾರಿಸಿಕೊಳ್ಳಲು ದಾರಿಯಿದೆ. ಸುಧಾರಣೆಗೆ ಹೀಗೆ ಮಾಡಬಹುದು;

- ಗೆಳೆಯರೊಂದಿಗೆ ಹೆಚ್ಚು ಹೆಚ್ಚಾಗಿ ಚರ್ಚೆಯಲ್ಲಿ ತೊಡಗುವುದು, ಓದುವುದು ಸುಲಭ ವಿಧಾನಗಳು.
- ಯಾವುದೇ ಮಾರ್ಗದರ್ಶಕರ ಸಂಪರ್ಕದಲ್ಲಿರಬಹುದು ಜೊತೆಗೆ ತರಬೇತಿಗೂ ಸೇರಿಕೊಳ್ಳಬಹುದು.
- ಯೂಟ್ಯೂಬ್ ವಿಡಿಯೊಗಳ ವೀಕ್ಷಣೆಯೂ ಸಹಕಾರಿಯಾಗಬಲ್ಲದು.

ಒಮ್ಮೆ ಮೃದು ಕೌಶಲವನ್ನು ಮೈಗೂಡಿಕೊಂಡ ಮೇಲೆ, ಉದ್ಯೋಗಕ್ಕೆ ಸಲ್ಲಿಸುವ ಅರ್ಜಿಯಲ್ಲಿ ನಿಮ್ಮ ಮೃದು ಕೌಶಲಗಳನ್ನು ತಪ್ಪದೇ ನಮೂದಿಸಿ ಲಾಭ ಪಡೆಯಬಹುದು.

ಪ್ರಚಲಿತ ವಿದ್ಯಮಾನಗಳು

ಯುಪಿಎಸ್‌ಸಿ -ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ- 2, ಕೆಪಿಎಸ್‌ಸಿ -ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-2 ಮತ್ತು ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಿರುವ ಪ್ರಚಲಿತ ಮಾಹಿತಿ ಇಲ್ಲಿದೆ.

ಗುರುಶಂಕರ್



1. ಅಟಲ್ ವಯೊ ಅಭ್ಯುದಯ ಯೋಜನೆ (Atal Vayo Abhyuday Yojana –AVYAY)

ಭಾರತದಲ್ಲಿ ವಾಸವಾಗಿರುವ ಹಿರಿಯ ನಾಗರಿಕರ ಸಬಲೀಕರಣಕ್ಕಾಗಿ ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಸಬಲೀಕರಣ ಸಚಿವಾಲಯ ಆರಂಭಿಸಿರುವ ಯೋಜನೆ ಅಟಲ್ ವಯೊ ಅಭ್ಯುದಯ ಯೋಜನೆ (AVYAY). ಇದಕ್ಕೆ ರಾಷ್ಟ್ರೀಯ ಹಿರಿಯ ನಾಗರಿಕರ ಕಾರ್ಯನಿರ್ವಹಣಾ ಯೋಜನೆ ಎಂಬ ಹೆಸರಿತ್ತು. ಕೇಂದ್ರ ಸರ್ಕಾರ ಇದರಲ್ಲಿ ಕೆಲ ಮಾರ್ಪಾಡುಗಳನ್ನು ಮಾಡಿ ಅಟಲ್ ವಯೊ ಅಭ್ಯುದಯ ಯೋಜನೆಯೆಂದು ಮರುನಾಮಕರಣ ಮಾಡಿದೆ.

ಹಿರಿಯ ನಾಗರಿಕರಿಗೆ ಮೂಲಸೌಲಭ್ಯಗಳಾದ ವಸತಿ, ಆಹಾರ, ವೈದ್ಯಕೀಯ ಆರೈಕೆ ಮತ್ತು ಮನರಂಜನೆಯನ್ನು ಒದಗಿಸುವ ಮೂಲಕ ಸಾಮಾಜಿಕ ಘನತೆಯ ಜೀವನ ಕಲ್ಪಿಸುವುದು ಈ ಯೋಜನೆಯ ಉದ್ದೇಶಗಳಲ್ಲೊಂದು.

ಅಭ್ಯುದಯ ಯೋಜನೆಯ ಭಾಗವಾಗಿರುವ ರಾಷ್ಟ್ರೀಯ ವಯೋಶ್ರೀ ಯೋಜನೆ ಅಡಿಯಲ್ಲಿ, ವಯೋ ಸಂಬಂಧಿತ ಅಂಗವೈಕಲ್ಯ ಹಾಗೂ ದೌರ್ಬಲ್ಯಗಳಿಂದ ಬಳಲುತ್ತಿರುವ ಅರ್ಹ ಹಿರಿಯ ನಾಗರಿಕರಿಗೆ ಜೀವನ ನಡೆಸಲು ಬೇಕಾದ ಸಹಕಾರ ಕಲ್ಪಿಸಲಾಗುತ್ತದೆ. ಜೊತೆಗೆ, ವಿವಿಧ ಆರೋಗ್ಯ ಸವಲತ್ತುಗಳನ್ನು ಕಲ್ಪಿಸುವ ಮೂಲಕ ಅಂಧತ್ವ, ಶ್ರವಣದೋಷ ಹಾಗೂ ಇನ್ನಿತರೆ ಸ್ವರೂಪದ ಆರೋಗ್ಯ ಸಂಬಂಧಿತ ಸಮಸ್ಯೆಗಳಿಗೆ ಪರಿಹಾರವನ್ನೂ ಕಲ್ಪಿಸಲಾಗುತ್ತದೆ. ಹಿರಿಯ ನಾಗರಿಕರ ಕುಂದುಕೊರತೆಗಳನ್ನು ಆಲಿಸಲು ಸಹಾಯವಾಣಿಯನ್ನೂ ಆರಂಭಿಸಲಾಗುತ್ತದೆ.

2. ಸಾಗರ್ ಸಂಪರ್ಕ (SAGAR SAMPARK)

ಭಾರತದ ಸಮುದ್ರದ ವಲಯವನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ಸ್ಥಳೀಯವಾಗಿ ಅಭಿವೃದ್ಧಿ ಪಡಿಸಿರುವ ಡಿಫರೆನ್ಶಿಯಲ್ ಗ್ಲೋಬಲ್ ನ್ಯಾವಿಗೇಶನ್ ಸ್ಯಾಟಲೈಟ್ ಸಿಸ್ಟಮ್ (ಡಿಜಿಎನ್‌ಎಸ್‌ಎಸ್) ಅನ್ನು ಇತ್ತೀಚೆಗೆ ಕೇಂದ್ರ ಬಂದರು, ಹಡಗು ನಿರ್ಮಾಣ ಮತ್ತು ಜಲಮಾರ್ಗ ಖಾತೆ ಸಚಿವರು ಉದ್ಘಾಟಿಸಿದರು. ಈ ಡಿಜಿಟಲ್ ವ್ಯವಸ್ಥೆಗೆ 'ಸಾಗರ್ ಸಂಪರ್ಕ್' ಎಂದು ಹೆಸರಿಸಲಾಗಿದೆ.

ಡೈರೆಕ್ಟರ್ ಜನರಲ್ ಆಫ್ ಲೈಟ್ ಹೌಸಸ್ ಆ್ಯಂಡ್ ಲೈಟ್ ಶಿಪ್ ಸಂಸ್ಥೆಯ ಅಡಿಯಲ್ಲಿ ದೇಶದ ಆರು ಸ್ಥಳಗಳಲ್ಲಿ ಈ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಮುಂದಿನ ದಿನಗಳಲ್ಲಿ ಇದನ್ನು ದೇಶದ ಉದ್ದಕ್ಕೂ ಇರುವ ಎಲ್ಲ ಸಮುದ್ರದ ವಲಯಗಳಿಗೂ ವಿಸ್ತರಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಚಿಂತನೆ ನಡೆಸಿದೆ.

ನೌಕಾಪಡೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನಾವಿಕರ ಸುರಕ್ಷತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಈ ವ್ಯವಸ್ಥೆಯು ಕಾರ್ಯನಿರ್ವಹಿಸಲಿದೆ. ಬಂದರು ಪ್ರದೇಶಗಳಲ್ಲಿ ಯಾವುದೇ ರೀತಿಯ ಘರ್ಷಣೆಗಳು ಹಾಗೂ ಅಪಘಾತಗಳು ಉಂಟಾಗದಂತೆ ತಡೆಗಟ್ಟಲು ಈ ವ್ಯವಸ್ಥೆಯು ಹೆಚ್ಚು ಉಪಯುಕ್ತವಾಗಲಿದೆ.

3. ಭಾರತ್ (BHARAT- Banks Heralding Accelerated Rural & Agriculture Transformation)

ಕೃಷಿವಲಯದಲ್ಲಿ ಮೂಲಸೌಕರ್ಯಗಳನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯ 'ಭಾರತ್' ಎಂಬ ಅಭಿಯಾನವನ್ನು ಹಮ್ಮಿಕೊಂಡಿದೆ.

ಈ ಅಭಿಯಾನವನ್ನು ಆಗಸ್ಟ್ 15, 2023 ರವರೆಗೆ ಆಯೋಜಿಸಲಾಗಿದ್ದು, ಇದಕ್ಕೆ ₹7,200 ಕೋಟಿ ಹಣವನ್ನು ಮೀಸಲಿಡಲಾಗಿದೆ.

ಈ ಅಭಿಯಾನದ ಅನ್ವಯ ಬ್ಯಾಂಕುಗಳು ಕೃಷಿ ವಲಯದಲ್ಲಿ ಮೂಲಭೂತ ಸವಲತ್ತುಗಳನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ₹ 1 ಲಕ್ಷ ಕೋಟಿ ಸಂಗ್ರಹಿಸಲು ಕಾರ್ಯಪ್ರವೃತ್ತವಾಗುತ್ತವೆ. ಸಂಗ್ರಹಣೆಯಾದ ಈ ಮೊತ್ತವನ್ನು ಕೃಷಿ ವಲಯದ ಮೂಲ ಸೌಕರ್ಯ ಅಭಿವೃದ್ಧಿಗೆ ಬಳಸಲಾಗುತ್ತದೆ.

● ಕೃಷಿ ಮೂಲಸೌಕರ್ಯ ನಿಧಿ ಯೋಜನೆ

ಭಾರತ ಸರ್ಕಾರ ಮೇ 2020ರಲ್ಲಿ ಕೃಷಿ ಮೂಲ ಸೌಕರ್ಯ ನಿಧಿ ಯೋಜನೆ (Agri Infra Fund Scheme) ಜಾರಿಗೆ ತಂದಿದೆ. ಈ ಯೋಜನೆಯನ್ನು ಕೇಂದ್ರ ಸರ್ಕಾರ ನಿರ್ವಹಿಸುತ್ತಿದೆ.

ಕೃಷಿ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳನ್ನು ಜಾರಿಗೆ ತರಲು ₹1 ಲಕ್ಷ ಕೋಟಿ ಹಣವನ್ನು ಕೇಂದ್ರ ಸರ್ಕಾರ ಖರ್ಚು ಮಾಡಲಿದ್ದು, ರೈತ ಉತ್ಪಾದಕ ಸಂಸ್ಥೆಗಳು, ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳಿಗೆ ಹಾಗೂ ಕೃಷಿ ವಲಯದಲ್ಲಿ ಸ್ಟಾರ್ಟ್ ಅಪ್‌ಗಳನ್ನು ಆರಂಭಿಸಲು ಹಣಕಾಸಿನ ನೆರವು ಕಲ್ಪಿಸಲಾಗುತ್ತದೆ.

ಈ ಯೋಜನೆಯನ್ವಯ ಕೇಂದ್ರ ಸರ್ಕಾರದವತಿಯಿಂದ ಮಧ್ಯಮ ಹಾಗೂ ದೀರ್ಘಾವಧಿಯ ಸಾಲದ ಸೌಲಭ್ಯವನ್ನು ಕಲ್ಪಿಸಲಾಗುತ್ತದೆ. ದಾಸ್ತಾನು ಸಂಗ್ರಹಣಾ ಸವಲತ್ತುಗಳ ನಿರ್ಮಾಣ, ಕಟಾವಿನ ನಂತರ ಆಹಾರಧಾನ್ಯಗಳು ಮತ್ತು ಆಹಾರ ಉತ್ಪನ್ನಗಳನ್ನು ಸಂರಕ್ಷಿಸಲು ಬೇಕಾದ ಶೈತ್ಯಾಗಾರಗಳ ಸ್ಥಾಪನೆ ಹಾಗೂ ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಯಲ್ಲಿ ತೊಡಗಿಕೊಂಡಿರುವ ಸಂಸ್ಥೆಗಳಿಗೆ ಹಣಕಾಸಿನ ನೆರವು ಕಲ್ಪಿಸಲು ಕೇಂದ್ರ ಸರ್ಕಾರ ಸಾಲ ಸೌಲಭ್ಯ ನೀಡಲಿದೆ. ಈ ಯೋಜನೆಯನ್ನು ಕೇಂದ್ರ ಸರ್ಕಾರ 2032-33 ರ ಹಣಕಾಸು ವರ್ಷದವರೆಗೂ ಮುಂದುವರಿಸಲಿದೆ.

4. ವಿಶ್ವ ಚುನಾವಣಾ ಆಯೋಗಗಳ ಸಂಘಟನೆ

ಭಾರತದ ಮುಖ್ಯ ಚುನಾವಣಾ ಆಯುಕ್ತರು ಇತ್ತೀಚೆಗೆ ವಿಶ್ವ ಚುನಾವಣಾ ಆಯೋಗಗಳ ಸಂಘಟನೆಯ ಕಾರ್ಯಕಾರಿ ಮಂಡಳಿಯ 11ನೇ ಸಮಾವೇಶದಲ್ಲಿ ಭಾಗವಹಿಸಿದ್ದರು.

ಈ ಸಂಘಟನೆಯ ಪ್ರಮುಖ ಉದ್ದೇಶವೇನೆಂದರೆ ವಿವಿಧ ರಾಷ್ಟ್ರಗಳಲ್ಲಿರುವ ಚುನಾವಣಾ ನಿರ್ವಹಣೆಗೆ ಸಂಬಂಧಿಸಿದ ಉತ್ತಮ ಅಂಶಗಳು ಮತ್ತು ಆಚರಣೆಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುವುದು. ಈ ಮೂಲಕ ಪ್ರಜಾತಾಂತ್ರಿಕ ಮೌಲ್ಯಗಳನ್ನು ಮತ್ತಷ್ಟು ಹೆಚ್ಚಿಸುವ ನಿಟ್ಟಿನಲ್ಲಿ ಸದಸ್ಯ ರಾಷ್ಟ್ರಗಳು ಕಾರ್ಯನಿರ್ವಹಿಸುತ್ತವೆ. ❖

EXAM DH ಪ್ರಜಾವಾಣಿ MASTERMIND™

ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ

ಮತ್ತಷ್ಟು 'ಪ್ರಚಲಿತ'ಕ್ಕಾಗಿ..

'ಎವಿವೈಎವೈ', 'ಭಾರತ್' ಸೇರಿದಂತೆ ವಿವಿಧ ಪ್ರಚಲಿತ ವಿದ್ಯಮಾನಗಳ ಕುರಿತ ಮತ್ತಷ್ಟು ವಿವರಣೆ ಹಾಗೂ ನಾಗರಿಕ ಸೇವಾ ಪರೀಕ್ಷೆಗಳಿಗೆ ಪೂರಕವಾಗುವ ಲೇಖನ ಹಾಗೂ ವಿಡಿಯೊಗಳಿಗಾಗಿ 'ಪ್ರಜಾವಾಣಿ – ಡೆಕ್ಕನ್‌ಹೆರಾಲ್ಡ್ ಪತ್ರಿಕೆಯ 'ಮಾಸ್ಟರ್ ಮೈಂಡ್' ಇ-ಪೇಪರ್‌ಗೆ ಚಂದಾದಾರರಾಗಿ. ಚಂದಾಕ್ಕಾಗಿ ಪಕ್ಕದಲ್ಲಿರುವ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ.

www.exammastermind.com

'ಅಗ್ನಿವೀರ್ ವಾಯು' ಹುದ್ದೆಗಳಿಗೆ ಅರ್ಜಿ ಆಹ್ವಾನ

ಭಾರತೀಯ ವಾಯುಪಡೆ 'ಅಗ್ನಿವೀರ್ ವಾಯು' ನೇಮಕಕ್ಕೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದೆ. ಜುಲೈ 27ರಿಂದ ಅರ್ಜಿ ಸಲ್ಲಿಕೆಯ ಪ್ರಕ್ರಿಯೆ ಆರಂಭವಾಗಲಿದೆ. ಆಗಸ್ಟ್ 17 ಅರ್ಜಿ ಸಲ್ಲಿಸಲು ಕೊನೆಯ ದಿನ. ಈ ಕುರಿತು ಭಾರತೀಯ ವಾಯುಪಡೆ ಅಧಿಸೂಚನೆ ಹೊರಡಿಸಿದೆ.

ಈ ವರ್ಷವೂ 4,165 ಹುದ್ದೆಗಳಿಗೆ ನೇಮಕ ನಡೆಯಲಿದೆ. ಮಹಿಳೆಯರಿಗೆ 833 ಹುದ್ದೆಗಳು ರಾಜ್ಯವಾರು ಮೀಸಲಾಗಿವೆ ಎಂದು ಮೂಲಗಳು ತಿಳಿಸಿವೆ. (SSR 02/23 ನವೆಂಬರ್ ಹಾಗೂ 01/24 ಎಪ್ರಿಲ್ 24ರ ಬ್ಯಾಚ್‌ಗಳಿಗೆ)

ನೇಮಕಾತಿಗಾಗಿ ಮೂರು ಹಂತಗಳಲ್ಲಿ ಪರೀಕ್ಷೆ ನಡೆಯಲಿದೆ. ಇದೇ ವರ್ಷದ ಅಕ್ಟೋಬರ್ 13ರಿಂದ ಆನ್‌ಲೈನ್ ಪರೀಕ್ಷೆ ಆರಂಭವಾಗಲಿದೆ ಎಂದು ಅಧಿಸೂಚನೆಯಲ್ಲಿ ತಿಳಿಸಿದೆ.

ಗಮನಿಸಿ: ಈ ಆಯ್ಕೆ ಪರೀಕ್ಷೆಯು ಐಎಎಫ್‌ನ 'ಅಗ್ನಿವೀರ್ ವಾಯು' ಆಗಲು ಮಾತ್ರ. ಉಳಿದಂತೆ ಕಮಿಷನ್ಡ್ ಆಫೀಸರ್‌ಗಳು/ಪೈಲಟ್‌ಗಳು / ನ್ಯಾವಿಗೇಟರ್‌ಗಳು /ಏರ್‌ಮೆನ್ ಆಗಿ ಆಯ್ಕೆಯಾಗಲು ಅಲ್ಲ.

ಯಾರು ಅರ್ಜಿ ಸಲ್ಲಿಸಬಹುದು?

ಕೆಲವು ಶೈಕ್ಷಣಿಕ ಮತ್ತು ದೈಹಿಕ ಅರ್ಹತೆಗಳನ್ನು ಪೂರೈಸಿರುವ ಎಲ್ಲಾ ಅವಿವಾಹಿತ ಭಾರತೀಯ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಈ ಪ್ರಮುಖ ನೇಮಕಾತಿ ಡ್ರೈವ್‌ಗಳಿಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ : https://agnipathvayu.cdac.in/ https://indianairforce.nic.in ನೋಡಬಹುದು.

(ಮುಂದಿನವಾರ : 'ಅಗ್ನಿವೀರ್ ವಾಯು' ನೇಮಕಾತಿಗೆ ಸಂಬಂಧಿಸಿದ ಮೂರು ಹಂತದ ಪರೀಕ್ಷೆಗಳು, ನೇಮಕಾತಿ ವಿಧಾನ, ವೇತನ, ಭತ್ಯೆ ಮತ್ತಿತರ ಮಾಹಿತಿಗಳಿರುವ ಲೇಖನ)

ಬಹು ಆಯ್ಕೆಯ ಪ್ರಶ್ನೆಗಳು

ಐಎಎಸ್, ಕೆಎಎಸ್, ಕೆಪಿಎಸ್‌ಸಿ ಸೇರಿದಂತೆ ವಿವಿಧ ಹುದ್ದೆಗಳಿಗಾಗಿ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿನ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ನೀಡಲಾಗಿದೆ.



1) ಸಿಕಲ್ ಸೆಲ್ ಅನಿಮಿಯಾಕುರಿತು ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ.

ಎ. ಕುಡಗೋಲು ಜೀವಕೋಶದ ರಕ್ತಹೀನತೆಯು ಕುಡಗೋಲು ಕಣ ಕಾಯಿಲೆಯ ಆನುವಂಶಿಕ ಅಸ್ವಸ್ಥತೆಗಳ ಗುಂಪಿನಲ್ಲಿ ಒಂದಾಗಿದೆ.

ಬಿ. ಇದು ದೇಹದ ಎಲ್ಲಾ ಭಾಗಗಳಿಗೆ ಆಮ್ಲಜನಕವನ್ನು ಸಾಗಿಸುವ ಕೆಂಪು ರಕ್ತ ಕಣಗಳ ಆಕಾರದ ಮೇಲೆ ಪರಿಣಾಮ ಬೀರುತ್ತದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುದು ಸರಿಯಾಗಿದೆ ?

1) ಎ ಮಾತ್ರ 2) ಬಿ ಮಾತ್ರ
3) ಎ ಮತ್ತು ಬಿ ಎರಡೂ ಸರಿ
4) ಎ ಅಥವಾ ಬಿ ಅಲ್ಲ

ಉತ್ತರ: 3

2) ಮಿನರಲ್ಸ್ ಸೆಕ್ಯುರಿಟಿ ಪಾಲುದಾರಿಕೆ (MSP) ಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:

ಎ. ಇದು ಅಭಿವೃದ್ಧಿ ಹೊಂದಿದ ದೇಶಗಳ ಪ್ರಾಬಲ್ಯ ಹೊಂದಿರುವ ಅಮೆರಿಕ ನೇತೃತ್ವದ ಒಕ್ಕೂಟವಾಗಿದೆ.

ಬಿ. ನಿರ್ಣಾಯಕ ಖನಿಜಗಳನ್ನು ಸಂಗ್ರಹಿಸಲು ಚೀನಾದ ಮೇಲೆ ಜಾಗತಿಕ ಅವಲಂಬನೆಯನ್ನು ಕಡಿಮೆ ಮಾಡುವುದು ಈ ಪಾಲುದಾರಿಕೆಯ ಪ್ರಮುಖ ಗುರಿಯಾಗಿದೆ.

ಮೇಲಿನ ಹೇಳಿಕೆಗಳಲ್ಲಿ ಯಾವುದು ಸರಿಯಾಗಿದೆ?

1) ಎ ಮಾತ್ರ 2) ಬಿ ಮಾತ್ರ
3) ಎ ಮತ್ತು ಬಿ ಎರಡೂ ಸರಿ
4) ಎ ಅಥವಾ ಬಿ ಅಲ್ಲ

ಉತ್ತರ:3

3) ಈ ಕೆಳಗಿನವುಗಳಲ್ಲಿ ಯಾವುದು ಮಿನರಲ್ಸ್ ಸೆಕ್ಯುರಿಟಿ ಪಾಲುದಾರಿಕೆಯ (MSP) ಉದ್ದೇಶಗಳಾಗಿವೆ ?

ಎ. ಪಾಲುದಾರ ರಾಷ್ಟ್ರಗಳ ನಡುವೆ ಮಾಹಿತಿ ಹಂಚಿಕೆಯನ್ನು ಬಲಪಡಿಸುವುದು

ಬಿ. ಸುರಕ್ಷಿತ ನಿರ್ಣಾಯಕ ಖನಿಜಗಳ ಪೂರೈಕೆ ಸರಪಳಿಗಳಲ್ಲಿ ಹೆಚ್ಚಿದ ಹೂಡಿಕೆ

ಸಿ. ಮರುಬಳಕೆ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುವುದು

ಕೆಳಗಿನ ಕೋಡ್ ಬಳಸಿ ಸರಿಯಾದ ಉತ್ತರವನ್ನು ಆಯ್ಕೆಮಾಡಿ.

1) ಎ ಮತ್ತು ಬಿ ಮಾತ್ರ 2) ಬಿ ಮತ್ತು ಸಿ ಮಾತ್ರ
3) ಎ ಮತ್ತು ಸಿ ಮಾತ್ರ 4) ಎ, ಬಿ ಮತ್ತು ಸಿ

ಉತ್ತರ: 4

4) ಇತ್ತೀಚೆಗೆ ಪ್ರಸ್ತಾಪದಲ್ಲಿರುವ 'ನಾರಿ ಅದಾಲತ್' ವ್ಯವಸ್ಥೆಯಲ್ಲಿ ಯಾವ ಸ್ವರೂಪದ ಪ್ರಕರಣಗಳನ್ನು ಕೈಗೆತ್ತಿಕೊಳ್ಳಲಾಗುತ್ತದೆ?

1. ಆಸ್ತಿಯ ಹಕ್ಕುಗಳು
2. ಕೌಟುಂಬಿಕ ಹಿಂಸಾಚಾರ
3. ಮಹಿಳೆಯರ ಸಾಮಾಜಿಕ ಸ್ಥಾನಮಾನ ಹೆಚ್ಚಿಸುವುದು.
4. ಮಹಿಳೆಯರ ಉದ್ಯೋಗ ಸೃಷ್ಟಿ

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ

ಎ. 1 ಮತ್ತು 2 ಬಿ. 2 ಮತ್ತು 3
ಸಿ. 1 ಮತ್ತು 4 ಡಿ. 3 ಮತ್ತು 4

ಉತ್ತರ : ಎ

5. ಪ್ರಾಥಮಿಕ ಹಂತದಲ್ಲಿ 'ನಾರಿ ಅದಾಲತ್' ವ್ಯವಸ್ಥೆಯನ್ನು ಕೆಳಗಿನ ಯಾವ ರಾಜ್ಯಗಳಲ್ಲಿ ಸ್ಥಾಪಿಸಲು ಸರ್ಕಾರ ಚಿಂತಿಸಿದೆ?

1. ಅಸ್ಸಾಂ 2. ಮಣಿಪುರ
3. ಜಮ್ಮು ಮತ್ತು ಕಾಶ್ಮೀರ 4. ಮೇಘಾಲಯ

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ

ಎ. 1 ಮತ್ತು 2 ಬಿ. 1 ಮತ್ತು 3
ಸಿ. 2 ಮತ್ತು 3 ಡಿ. 2 ಮತ್ತು 4.

ಉತ್ತರ : ಬಿ

6. ಇತ್ತೀಚೆಗೆ ಚೀನಾ ಕೆಳಗಿನ ಯಾವ ಪ್ರಮುಖ ಖನಿಜಗಳ ರಫ್ತಿನ ಮೇಲೆ ನಿಯಂತ್ರಣ ಹೇರಿದೆ?

1. ಗ್ಯಾಲಿಯಮ್ 2. ಜರ್ಮೇನಿಯಂ
3. ಇಂಡಿಎಂ 4. ಸಿಲಿಕಾನ್

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ

ಎ. 1 ಮತ್ತು 2 ಬಿ. 1 ಮತ್ತು 3
ಸಿ. 2 ಮತ್ತು 3 ಡಿ. 3 ಮತ್ತು 4

ಉತ್ತರ : ಎ

7. ಚೀನಾ ಸರ್ಕಾರ ವಿಧಿಸಿರುವ ರಫ್ತಿನ ನಿಯಂತ್ರಣಗಳಿಗೆ ಸಂಬಂಧಿಸಿದ ಸರಿಯಾದ ಹೇಳಿಕೆಗಳನ್ನು ಗುರುತಿಸಿ

1. ಚೀನಾದ ರಫ್ತುದಾರರು ಚೀನಾ ಸರ್ಕಾರದಿಂದ ವಿಶೇಷ ಪರವಾನಗಿಯನ್ನು ಪಡೆದುಕೊಳ್ಳತಕ್ಕದ್ದು.
2. ರಫ್ತುದಾರರು, ಆಮದುದಾರರು ಸಂಪೂರ್ಣ ಮಾಹಿತಿಯನ್ನು ಸರ್ಕಾರಕ್ಕೆ ಒದಗಿಸುವುದು ಕಡ್ಡಾಯ.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ

ಎ. 1 ಮಾತ್ರ ಸರಿ ಬಿ. 2 ಮಾತ್ರ ಸರಿ
ಸಿ. 1 ಮತ್ತು 2 ಸರಿ ಡಿ. ಮೇಲಿನ ಎರಡು ಹೇಳಿಕೆಗಳು ತಪ್ಪಾಗಿವೆ.

ಉತ್ತರ : ಸಿ

8. ಇತ್ತೀಚೆಗೆ ಭಾರತದ ರಕ್ಷಣಾ ಸ್ವಾಧೀನ ಮಂಡಳಿ ಕೆಳಗಿನ ಯಾವುದನ್ನು ಖರೀದಿಸಲು ಮತ್ತು ಭಾರತದಲ್ಲಿ ಅಭಿವೃದ್ಧಿಪಡಿಸಲು ನಿರ್ಧರಿಸಿದೆ?

1. ರಫೆಲ್-ಎಂ ಯುದ್ಧ ವಿಮಾನಗಳು
2. ಸ್ಕಾರ್ಪಿನ್ ವರ್ಗದ ಜಲಾಂತರ್ಗಾಮಿಗಳು
3. ನೌಕಾಪಡೆಯಲ್ಲಿ ಬಳಕೆಯಾಗುವ ಗಸ್ತು ತಿರುಗುವ ವಾಹನಗಳು
4. ನಾಗರಿಕ ವಿಮಾನಗಳು

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ

ಎ. 1 ಮತ್ತು 2 ಬಿ. 1 ಮತ್ತು 3
ಸಿ. 2 ಮತ್ತು 3 ಡಿ. 3 ಮತ್ತು 4.

ಉತ್ತರ : ಎ

9.ಕೆಳಗಿನ ಯಾವ ಹಡಗು ನಿರ್ಮಾಣ ಕೇಂದ್ರ ಪ್ರಾಜೆಕ್ಟ್-75 ಅನ್ನು ಅನುಷ್ಠಾನಗೊಳಿಸುತ್ತಿದೆ?

ಎ. ಕೊಚ್ಚಿನ್ ಬಿ. ಮಡಗಾವ್
ಸಿ. ವಿಶಾಖಪಟ್ಟಣ ಡಿ. ಮಂಗಳೂರು

ಉತ್ತರ : ಬಿ

10. ಇತ್ತೀಚೆಗೆ ಯಾವ ಪಾಶ್ಚಿಮಾತ್ಯ ರಾಷ್ಟ್ರ ವಸಾಹತುಶಾಹಿ ಆಡಳಿತದ ಸಂದರ್ಭದಲ್ಲಿ ಪಡೆದುಕೊಂಡಿದ್ದ ಕಲಾಕೃತಿಗಳನ್ನು ಹಿಂದಿರುಗಿಸಲು ಅನುಮೋದಿಸಿದೆ?

ಎ. ನೆದರ್ಲೆಂಡ್ಸ್ ಬಿ. ಸ್ಪೇನ್
ಸಿ. ಪೋರ್ಚುಗಲ್ ಡಿ. ಇಟಲಿ.

ಉತ್ತರ : ಎ

ಮತ್ತಷ್ಟು ಪ್ರಶ್ನೋತ್ತರಕ್ಕಾಗಿ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

ಹುದ್ದೆ ಭರ್ತಿ: ಅಧಿಸೂಚನೆ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಿರಿಯ ಎಂಜಿನಿಯರ್‌ಗಳಿಗೆ ಬಡ್ತಿ ನೀಡಿ, ಸಹಾಯಕ ಕಾರ್ಯ ನಿರ್ವಾಹಕ ಎಂಜಿನಿಯರ್ ಹುದ್ದೆಗಳಲ್ಲಿ ಶೇ 25ರಷ್ಟು ಹುದ್ದೆಗಳನ್ನು ಭರ್ತಿ ಮಾಡುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ 2011ರಲ್ಲಿ ಹೊರಡಿಸಿದ್ದ ಅಧಿಸೂಚನೆಯನ್ನು ಹೈಕೋರ್ಟ್ ರದ್ದುಪಡಿಸಿದೆ.

ಅಧಿಸೂಚನೆ ರದ್ದುಪಡಿಸುವಂತೆ ಕೋರಿ ಎಂ.ಆರ್. ರಂಗರಾಮು ಸೇರಿದಂತೆ ರಾಜ್ಯದ ವಿವಿಧ ನಗರಸಭೆ ಮತ್ತು ನಗರಪಾಲಿಕೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಏಳು ಮಂದಿ ಸಹಾಯಕ ಎಂಜಿನಿಯರ್‌ಗಳು ಸಲ್ಲಿಸಿದ್ದ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಇ.ಎಸ್. ಇಂದಿರೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿ ಈ ಕುರಿತಂತೆ ಆದೇಶಿಸಿದೆ.

ಕಿರಿಯ ಎಂಜಿನಿಯರ್‌ಗಳಿಗೆ ಬಡ್ತಿ ನೀಡಿ ಸಹಾಯಕ ಕಾರ್ಯ ನಿರ್ವಾಹಕ ಎಂಜಿನಿಯರ್ ಹುದ್ದೆ ಭರ್ತಿ ಮಾಡಲು ಅವಕಾಶವಾಗುವಂತೆ ಕರ್ನಾಟಕ ಮುನ್ಸಿಪಲ್ ಕಾರ್ಪೋರೇಷನ್ (ಅಧಿಕಾರಿಗಳ ಮತ್ತು ಸಿಬ್ಬಂದಿ

ಸಾಮಾನ್ಯ ನೇಮಕಾತಿ) ಅಧಿನಿಯಮಗಳು-2011ರ ಷೆಡ್ಯೂಲ್-3ಕ್ಕೆ ಮಾರ್ಪಾಡು ಮಾಡಿ ಸರ್ಕಾರವು 2011ರ ಏಪ್ರಿಲ್ 11ರಂದು ಅಧಿಸೂಚನೆ ಹೊರಡಿಸಿತ್ತು. 'ಈ ಅಧಿಸೂಚನೆ ಅಸಾಂವಿಧಾನಿಕ ಹಾಗೂ ಸಂವಿಧಾನದ 14 (ಸಮಾನತೆ) ಮತ್ತು 16ನೇ (ಸಮಾನ ಅವಕಾಶ) ವಿಧಿಗಳ ಸ್ಪಷ್ಟ ಉಲ್ಲಂಘನೆ' ಎಂದು ನ್ಯಾಯಪೀಠ ಘೋಷಿಸಿದೆ.

'ಸಹಾಯಕ ಕಾರ್ಯ ನಿರ್ವಾಹಕ ಎಂಜಿನಿಯರ್ ಹುದ್ದೆಗೆ ಫೀಡರ್ ಅಥವಾ ಕೆಳ ಶ್ರೇಣಿಯ ಅಧಿಕಾರಿಗಳು ಅಂದರೆ; ಸಹಾಯಕ ಎಂಜಿನಿಯರ್‌ಗಳಿಗೆ ಬಡ್ತಿ ನೀಡಿ ಹುದ್ದೆಯನ್ನು ಭರ್ತಿ ನೀಡಬೇಕು. ಈ ಪ್ರಕ್ರಿಯೆಯನ್ನು ಆದೇಶದ ಪ್ರತಿ ದೊರೆತ ಎಂಟು ವಾರಗಳ ಒಳಗೆ ಪೂರ್ಣಗೊಳಿಸಬೇಕು' ಎಂದು ಸರ್ಕಾರಕ್ಕೆ ನಿರ್ದೇಶಿಸಿದೆ. ಅರ್ಜಿದಾರರ ಪರ ಹಿರಿಯ ವಕೀಲ ಎಂ.ಎಸ್. ಭಾಗವತ್, ಕೆ.ಎನ್. ಫಣೀಂದ್ರ ಹಾಗೂ ವಕೀಲರಾದ ಎಂ.ಪಿ. ಶ್ರೀಕಾಂತ್, ಅನೀಶ್ ಆಚಾರ್ಯ ಮತ್ತು ಕೆ.ಸತೀಶ್ ಭಟ್ಟ ವಾದ ಮಂಡಿಸಿದ್ದರು.

ಹೆಚ್ಚುವರಿ ಸ್ಥಳಾವಕಾಶ: ಪ್ರಸ್ತಾವನೆಗೆ ಹೈಕೋರ್ಟ್ ನಿರ್ದೇಶನ

ಬೆಂಗಳೂರು: 'ಹೈಕೋರ್ಟ್‌ನ ಕಚೇರಿಗಳು, ನ್ಯಾಯಮೂರ್ತಿಗಳ ಕೊಠಡಿಗಳು ಮತ್ತು ಕೋರ್ಟ್ ಹಾಲ್‌ಗಳಿಗೆ ಹೆಚ್ಚುವರಿ ಸ್ಥಳಾವಕಾಶ ಒದಗಿಸುವ ನಿಟ್ಟಿನಲ್ಲಿ ಸಮಗ್ರ ಪ್ರಸ್ತಾವನೆಯೊಂದನ್ನು ಸಲ್ಲಿಸಿ' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಈ ಸಂಬಂಧ ವಕೀಲ ರಮೇಶ್ ನಾಯಕ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

'ಹೈಕೋರ್ಟ್‌ನಲ್ಲಿ ಪ್ರಕರಣಗಳ ಸಂಖ್ಯೆ ಹಾಗೂ ನ್ಯಾಯಮೂರ್ತಿಗಳ ನೇಮಕಾತಿ ಹೆಚ್ಚುತ್ತಿದ್ದು, ಇವರಿಗೆಲ್ಲಾ ಕೊಠಡಿಗಳನ್ನು ಒದಗಿಸುವುದು ಕಷ್ಟವಾಗುತ್ತಿದೆ. ಹೊಸ ನ್ಯಾಯಮೂರ್ತಿಗಳಿಗೆ ಕೋರ್ಟ್ ಹಾಲ್‌ಗಳನ್ನು ಒದಗಿಸುವುದಕ್ಕೆ ಸಂಬಂಧಿಸಿದಂತೆ ಸಮಗ್ರವಾದ ಪ್ರಸ್ತಾವನೆ ಸಿದ್ಧಪಡಿಸಬೇಕು' ಎಂದು ಹೆಚ್ಚುವರಿ ಅಡ್ವೊಕೇಟ್ ಜನರಲ್ ಪ್ರತಿಮಾ ಹೊನ್ನಾಪುರ ಅವರಿಗೆ ಸೂಚಿಸಿತು.

ಕೋರಿಕೆ ಏನು?: 'ಹೈಕೋರ್ಟ್‌ನ ಕಟ್ಟಡದ ನೆಲ ಮಾಳಿಗೆಯನ್ನು ದಸ್ತಾವೇಜು ಸಂಗ್ರಹ ಹಾಗೂ ಕಚೇರಿಗಳಿಗೆ ಬಳಕೆ ಮಾಡಿಕೊಳ್ಳುವುದು ಕಾನೂನಿಗೆ ವಿರುದ್ಧವಾಗಿದೆ. ಕೂಡಲೇ, ಈ ಕಚೇರಿಗಳ ಕಾರ್ಯಾಚರಣೆ ಸ್ಥಗಿತಗೊಳಿಸಬೇಕು. ನ್ಯಾಯಾಲಯದ ಅಗತ್ಯಗಳಿಗೆ ಬಳಕೆ ಮಾಡಿಕೊಳ್ಳುವುದಕ್ಕಾಗಿ ಹೆಚ್ಚುವರಿ ಜಾಗವನ್ನು ಒದಗಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂಬುದು ಅರ್ಜಿದಾರರ ಕೋರಿಕೆ.

ಮಾಳವೀಯ ವಿಚಾರಣೆಗೆ ಹೈಕೋರ್ಟ್ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರನ್ನು ಗುರಿಯಾಗಿಸಿಕೊಂಡು ಸಮಾಜದಲ್ಲಿ ದ್ವೇಷ ಬಿತ್ತುವ ಮತ್ತು ವೈರತ್ವ ಉಂಟು ಮಾಡುವಂತಹ ಟ್ವೀಟ್ ಮಾಡಿದ್ದಾರೆ' ಎಂದು ಆರೋಪಿಸಿ ಬಿಜೆಪಿ ಐಟಿ ಸೆಲ್ ಉಸ್ತುವಾರಿ ಅಮಿತ್ ಮಾಳವೀಯ ವಿರುದ್ಧ ನಗರದ 8ನೇ ಹೆಚ್ಚುವರಿ ಚೀಫ್ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ (ಸಿಎಂಎಂ) ಕೋರ್ಟ್‌ನಲ್ಲಿ ನಡೆಯುತ್ತಿರುವ ಪ್ರಕರಣದ ವಿಚಾರಣೆಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ತಮ್ಮ ವಿರುದ್ಧದ ಪ್ರಕರಣ ರದ್ದುಪಡಿಸುವಂತೆ ಕೋರಿ ಅಮಿತ್ ಮಾಳವೀಯ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ಮಾಡಿತು.

ಅಮಿತ್ ಮಾಳವೀಯ ಪರ ಹಾಜರಾಗಿ ವಾದ ಮಂಡಿಸಿದ ಹೈಕೋರ್ಟ್ ವಕೀಲರೂ ಆದ ಸಂಸದ ತೇಜಸ್ವಿ ಸೂರ್ಯ ಅವರು, 'ಮಾಳವೀಯ ಅವರು ತಮ್ಮ ಸ್ವಂತ ಖಾತೆಯಿಂದ ಟ್ವೀಟ್ ಮಾಡಿದ್ದಾರೆ ಮತ್ತು ಇದರಲ್ಲಿ ಯಾವುದೇ ದ್ವೇಷ ಬಿತ್ತುವ ಅಥವಾ ವೈರತ್ವ ಉಂಟು ಮಾಡುವ ಅವಹೇಳನಕಾರಿ ಅಂಶಗಳಿಲ್ಲ' ಎಂದು ನ್ಯಾಯಪೀಠಕ್ಕೆ ಮನದಟ್ಟು ಮಾಡಿದರು.

ಇದಕ್ಕೆ ಪ್ರತಿಯಾಗಿ ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್-1 ಬಿ.ಎ.ಬೆಳ್ಳಿಯಪ್ಪ, 'ಮಾಳವೀಯ ಅವರು ಟ್ವೀಟ್ ಮಾಡಿರುವ ವಿಡಿಯೊದಲ್ಲಿ ಇಸ್ಲಾಮಿಕ್ ನಂಬುಗೆಯ ಜನರೊಂದಿಗೆ ರಾಹುಲ್ ಗಾಂಧಿಯವರನ್ನು ತಪ್ಪಾಗಿ ನಿರೂಪಿಸಲಾಗಿದೆ. ಅವಹೇಳನಕಾರಿ ಚಿತ್ರಣವು ನಿಸ್ಸಂದೇಹವಾಗಿ ವಿವಿಧ ವರ್ಗಗಳ ಮಧ್ಯೆ ದ್ವೇಷವನ್ನು ಬಿತ್ತುತ್ತದೆ ಮತ್ತು ಕೋಮು ಸೌಹಾರ್ದವನ್ನು ಹಾಳು ಮಾಡುತ್ತದೆ' ಎಂದು ಆರೋಪಿಸಿದರು.

ಇದಕ್ಕೆ ನ್ಯಾಯಮೂರ್ತಿಗಳು, 'ಸಿದ್ಧಾಂತಗಳು ಯಾವಾಗ ಮತೀಯವಾದವು' ಎಂದು ಕುಟುಕಿದರಲ್ಲದೆ, ವಿಚಾರಣಾ ನ್ಯಾಯಾಲಯದಲ್ಲಿರುವ ಪ್ರಕರಣದ ಮುಂದಿನ ಪ್ರಕ್ರಿಯೆಗೆ ತಡೆ ನೀಡಿ ಆದೇಶಿಸಿದರು. ವಿಚಾರಣೆಯನ್ನು ಇದೇ 27ಕ್ಕೆ ಮುಂದೂಡಲಾಗಿದೆ.

ಪ್ರಕರಣವೇನು?

'ಅಮಿತ್ ಮಾಳವೀಯ ಮಾಡಿರುವ ಟ್ವೀಟ್ ರಾಹುಲ್ ಗಾಂಧಿ ಹಾಗೂ ಹಿರಿಯ ನಾಯಕರ ಗೌರವಕ್ಕೆ ಧಕ್ಕೆ ತರುವ ರೀತಿಯಲ್ಲಿದೆ. ಸಮಾಜಕ್ಕೆ ತಪ್ಪು ಸಂದೇಶ ಮತ್ತು ಗುಂಪುಗಳ ನಡುವೆ ದ್ವೇಷವನ್ನು ಸೃಷ್ಟಿಸುವಲ್ಲಿ ಒಳಸಂಚನ್ನು ಮಾಡಲಾಗಿದ್ದು, ಅಮಿತ್ ಮಾಳವೀಯ ಅವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕು' ಎಂದು ಕೆಪಿಸಿಸಿ ಸದಸ್ಯ ರಮೇಶ್ ಬಾಬು 2023ರ ಜೂನ್ 27ರಂದು ಹೈಗ್ರೌಂಡ್ಸ್ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಇದರನ್ವಯ ಪೊಲೀಸರು, ಭಾರತೀಯ ದಂಡ ಸಂಹಿತೆ–1860ರ (ಐಪಿಸಿ) ಕಲಂ 505 (2), 153 ಎ, 120 ಬಿ ಮತ್ತು 34ರ ಅಡಿಯಲ್ಲಿ ಎಫ್‌ಐಆರ್ ದಾಖಲಿಸಿದ್ದರು. ಈ ಕುರಿತಂತೆ 8ನೇ ಹೆಚ್ಚುವರಿ ಸಿಎಂಎಂ ಕೋರ್ಟ್‌ನಲ್ಲಿ ಪ್ರಕರಣ ವಿಚಾರಣೆಯ ಹಂತದಲ್ಲಿದೆ.

ಗೃಹಲಕ್ಷ್ಮಿ ಫಲಾನುಭವಿ...

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಬುಧವಾರ ನಡೆದ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ಗೃಹ ಲಕ್ಷ್ಮಿ' ಯೋಜನೆಯ ಫಲಾನುಭವಿಗಳಿಗೆ ನೋಂದಣಿ ಪತ್ರ ವಿತರಿಸಿದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಆರ್. ಹೆಬ್ಬಾಳ್ಕರ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಶಾಸಕ ರಿಜ್ವಾನ್ ಅರ್ಷದ್ ಇದ್ದರು – ಪ್ರಜಾವಾಣಿ ಚಿತ್ರ

ಮೊಬೈಲ್ ಸುಲಿಗೆಕೋರನ ಬಂಧನ

ಬೆಂಗಳೂರು: ಪಾದಚಾರಿಗಳಿಂದ ಮೊಬೈಲ್ ಕಸಿದು ಪರಾರಿಯಾಗುತ್ತಿದ್ದ ಇಬ್ಬರು ಆರೋಪಿಗಳನ್ನು ಕಾಮಾಕ್ಷಿಪಾಳ್ಯ ಪೊಲೀಸರು ಬಂಧಿಸಿದ್ದಾರೆ.

ಕಾಮಾಕ್ಷಿಪಾಳ್ಯದ ಚರಣ್ (20), ನಂದಾ (21) ಬಂಧಿತರು.

ಕಾವೇರಿಪುರದಲ್ಲಿ ಮನೆಗೆ ನಡೆದು ತೆರಳುತ್ತಿದ್ದವರಿಂದ ಮೊಬೈಲ್ ಕಸಿದುಕೊಂಡು ಕ್ಷಣಾರ್ಧದಲ್ಲಿ ಇಬ್ಬರು ಪರಾರಿಯಾಗುತ್ತಿದ್ದರು. ಬಂಧಿತರಿಂದ ಒನ್‌ಪ್ಲಸ್ ಸೇರಿದಂತೆ ವಿವಿಧ ಕಂಪನಿಯ ಮೊಬೈಲ್‌ಗಳನ್ನು ವಶಕ್ಕೆ ಪಡೆಯಲಾಗಿದೆ. ಅವುಗಳ ಮೌಲ್ಯ ₹ 1.60 ಲಕ್ಷವೆಂದು ಅಂದಾಜಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಯಲಹಂಕ ಆಸ್ಪತ್ರೆಯಲ್ಲಿ ಲಂಚ ಪ್ರಕರಣ ವಿಚಾರಣೆ ಆರಂಭಿಸಿದ ಲೋಕಾಯುಕ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಡ ಮಹಿಳೆಯೊಬ್ಬರಿಗೆ ಸಿಸೇರಿಯನ್ ನಡೆಸಲು ಯಲಹಂಕ ಸಾರ್ವಜನಿಕ ಆಸ್ಪತ್ರೆಯ ವೈದ್ಯರು ₹ 10,000 ಲಂಚ ಪಡೆದ ಆರೋಪಕ್ಕೆ ಸಂಬಂಧಿಸಿದಂತೆ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿರುವ ಲೋಕಾಯುಕ್ತರು, ವಿಚಾರಣೆ ಆರಂಭಿಸಿದ್ದಾರೆ.

ಮಂಜುಳಾ ಎಂಬ ಮಹಿಳೆಗೆ ಸಿಸೇರಿಯನ್ ಮಾಡಲು ಲಂಚಕ್ಕೆ ಬೇಡಿಕೆ ಇಟ್ಟಿರುವ ದೂರು ಲೋಕಾಯುಕ್ತಕ್ಕೆ ಶನಿವಾರ ಬಂದಿತ್ತು. ಮಂಗಳವಾರ ಲೋಕಾಯುಕ್ತ ಪೊಲೀಸರು ಪರಿಶೀಲನೆಗೆ ತೆರಳುವಾಗಲೇ ವೈದ್ಯರು ಮಹಿಳೆಯ ಪತಿಯಿಂದ ₹ 10,000 ಲಂಚ ಪಡೆದುಕೊಂಡಿದ್ದರು. ಆಸ್ಪತ್ರೆಯ ವಾರ್ಡ್ ಬಾಯ್ ಹಣ ಪಡೆದಿರುವುದನ್ನು ಲೋಕಾಯುಕ್ತ ಪೊಲೀಸರ ಎದುರು ಒಪ್ಪಿಕೊಂಡಿದ್ದರು. ಬಳಿಕ ಲಂಚ ಪಡೆದಿರುವ ಕುರಿತು ತನಿಖಾ ತಂಡದ ಎದುರಿನಲ್ಲೇ ಆಸ್ಪತ್ರೆಯ ಪ್ರಸೂತಿ ತಜ್ಞ ಡಾ.ರಾಮಚಂದ್ರ ಜತೆ ಮೊಬೈಲ್‌ನಲ್ಲಿ ಮಾತುಕತೆ ನಡೆಸಿದ್ದರು.

ಕರ್ನಾಟಕ ಲೋಕಾಯುಕ್ತ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ಆರಂಭಿಸಿರುವ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ, ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ, ಆಯುಕ್ತರು, ನಿರ್ದೇಶಕರು, ಬೆಂಗಳೂರು ನಗರ ಜಿಲ್ಲಾ ಆರೋಗ್ಯಾಧಿಕಾರಿ, ಯಲಹಂಕ ಸಾರ್ವಜನಿಕ ಆಸ್ಪತ್ರೆಯ ಸ್ಥಾನಿಕ ವೈದ್ಯಾಧಿಕಾರಿ ಹಾಗೂ ಡಾ. ರಾಮಚಂದ್ರ ಅವರಿಗೆ ನೋಟಿಸ್ ಜಾರಿಗೆ ಆದೇಶಿಸಿದ್ದಾರೆ.

'ಆಸ್ಪತ್ರೆಯಲ್ಲಿನ ವ್ಯವಸ್ಥೆ ಕುರಿತು ಲೋಕಾಯುಕ್ತ ಪೊಲೀಸರು ಪರಿಶೀಲನೆ ನಡೆಸಿ ವರದಿ ನೀಡಿದ್ದಾರೆ. ವೈದ್ಯರು ಮತ್ತು ಸಿಬ್ಬಂದಿ ರೋಗಿಗಳಿಗೆ ಸಹಕಾರ ನೀಡುತ್ತಿಲ್ಲ. ಒಳ ರೋಗಿಗಳಿಗೆ ಸ್ವಚ್ಛ ಹೊದಿಕೆ ಒದಗಿಸುತ್ತಿಲ್ಲ. ವೈದ್ಯರು ಮತ್ತು ಸಿಬ್ಬಂದಿ ತಮ್ಮ ಇಚ್ಛೆಗೆ ತಕ್ಕಂತೆ ಕರ್ತವ್ಯಕ್ಕೆ ಹಾಜರಾಗುತ್ತಿರುವುದು ಕಂಡುಬಂದಿದೆ. ಅವರು ಸೇವೆಗೆ ಹಾಜರಾಗುವ ಮುನ್ನ ನಗದು ಘೋಷಣೆಯನ್ನೂ ಮಾಡುತ್ತಿಲ್ಲ' ಎಂದು ಲೋಕಾಯುಕ್ತರು ಆದೇಶದಲ್ಲಿ ಉಲ್ಲೇಖಿಸಿದ್ದಾರೆ.

ಆಸ್ಪತ್ರೆಯಲ್ಲಿರುವ ವೈದ್ಯರು ಮತ್ತು ಸಿಬ್ಬಂದಿಯ ವಿವರ, ಅವರು ಕೆಲಸಕ್ಕೆ ಹಾಜರಾಗುತ್ತಿರುವುದು, ಆಸ್ಪತ್ರೆಯಲ್ಲಿ ರೋಗಿಗಳಿಗೆ ಒದಗಿಸುತ್ತಿರುವ ಸೇವೆ ಹಾಗೂ ನಿಯಮ ಪಾಲನೆ ಕುರಿತು ವರದಿ ನೀಡುವಂತೆ ಪ್ರತಿವಾದಿಗಳಿಗೆ ಸೂಚಿಸಿದ್ದಾರೆ.

ಕ್ರಿಮಿನಲ್ ಪ್ರಕರಣಕ್ಕೆ ಸಿದ್ಧತೆ

ಲೋಕಾಯುಕ್ತ ಪೊಲೀಸರು ಮಂಗಳವಾರ ಯಲಹಂಕ ಆಸ್ಪತ್ರೆಗೆ ಭೇಟಿ ನೀಡುವ ಮೊದಲೇ ಮಂಜುಳಾ ಅವರ ಕುಟುಂಬದವರಿಂದ ಅಲ್ಲಿನ ವೈದ್ಯರು ಲಂಚದ ಹಣ ಪಡೆದಿದ್ದರು. ಮಹಿಳೆಯ ಪತಿ ದೂರು ಕೂಡ ದಾಖಲಿಸಿಲ್ಲ. ಈಗ ಲಭ್ಯವಿರುವ ಸಾಕ್ಷ್ಯಗಳ ಆಧಾರದಲ್ಲಿ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಲೋಕಾಯುಕ್ತ ಪೊಲೀಸರು ಕ್ರಮ ಜರುಗಿಸಲಿದ್ದಾರೆ ಎಂದು ಲೋಕಾಯುಕ್ತರು ತಿಳಿಸಿದ್ದಾರೆ.

'ಆರೋಪಿಗಳು ಹಣ ಪಡೆದಿದ್ದು, ಅದನ್ನು ವಾರ್ಡ್ ಬಾಯ್ ವಾಹಿದ್ ಒಪ್ಪಿಕೊಂಡಿದ್ದಾರೆ. ಹಣವನ್ನು ಮರಳಿಸಿದ್ದಾರೆ. ಯಲಹಂಕ ಆಸ್ಪತ್ರೆಯಿಂದಲೇ ಲೋಕಾಯುಕ್ತ ಪೊಲೀಸರ ಎದುರು ಡಾ.ರಾಮಚಂದ್ರ ಅವರಿಗೆ ಕರೆಮಾಡಿ ಲಂಚದ ಹಣದ ಕುರಿತು ಚರ್ಚಿಸಿದ್ದಾರೆ. ಅವರಿಂದಲೂ ಪೂರಕ ಸಂದೇಶ ಬಂದಿದೆ. ಈ ಎಲ್ಲವನ್ನೂ ವಿಡಿಯೊ ಚಿತ್ರೀಕರಣ ಮಾಡಲಾಗಿದೆ. ಈ ಸಾಕ್ಷ್ಯಗಳ ಆಧಾರದಲ್ಲಿ ಎಫ್‌ಐಆರ್ ದಾಖಲಿಸುವ ಕುರಿತು ಕಾನೂನು ತಜ್ಞರ ಅಭಿಪ್ರಾಯ ಪಡೆಯಲಾಗುತ್ತಿದೆ' ಎಂದು ಲೋಕಾಯುಕ್ತದ ಪೊಲೀಸ್ ಅಧಿಕಾರಿಗಳು ಹೇಳಿದ್ದಾರೆ.

ಒಡೆಯರ್ ಸಹೋದರಿಯರಿಂದ ಪಾಡ್‌ಕಾಸ್ಟ್ ಸರಣಿ

ಬೆಂಗಳೂರಿನ ಗತವೈಭವ ಮೆಲುಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಯಚಾಮರಾಜ ಒಡೆಯರ್ ಅವರ ಮಕ್ಕಳಾದ ಕಾಮಾಕ್ಷಿ ದೇವಿ ಮತ್ತು ಇಂದ್ರಾಕ್ಷಿ ದೇವಿ ಅವರು 'ದಿ ಕಿಂಗ್ ಸ್ಪೀಕ್ಸ್' ಶೀರ್ಷಿಕೆಯಡಿ ಪಾಡ್‌ಕಾಸ್ಟ್ ಸರಣಿ ಹಮ್ಮಿಕೊಂಡಿದ್ದು, ಇದರಲ್ಲಿ ಬೆಂಗಳೂರಿನ ಗತಕಾಲದ ವೈಭವವನ್ನು ಮೆಲುಕು ಹಾಕಿದ್ದಾರೆ.

ನಗರದ ಜತೆಗೆ ತಂದೆ ಹೊಂದಿದ್ದ ಒಡನಾಟ ಹಾಗೂ ನಗರದ ಬಗೆಗೆ ತಂದೆಗಿದ್ದ ಪ್ರೀತಿಯನ್ನು ಸಹೋದರಿಯರು ಸ್ಮರಿಸಿಕೊಂಡಿದ್ದಾರೆ. ನಗರ ಹೇಗೆ ತಮ್ಮನ್ನು ಆಕರ್ಷಿತು ಎನ್ನುವುದರ ಬಗ್ಗೆಯೂ ಮನದಾಳವನ್ನು ಹಂಚಿಕೊಂಡಿದ್ದಾರೆ. ಈ ಪಾಡ್‌ಕಾಸ್ಟ್ ಸರಣಿಯಲ್ಲಿ ಜಯಚಾಮರಾಜ ಒಡೆಯರ್ ಅವರು ವಿವಿಧ ಸಂದರ್ಭಗಳಲ್ಲಿ ಮಾಡಿದ ಭಾಷಣದ ತುಣುಕುಗಳನ್ನೂ ಬಳಸಿಕೊಳ್ಳಲಾಗಿದೆ.

ಕಾಮಾಕ್ಷಿ ದೇವಿ ಮತ್ತು ಇಂದ್ರಾಕ್ಷಿ ದೇವಿ

'ನಮ್ಮ ತಂದೆಗೆ ಬೆಂಗಳೂರಿನ ಮೇಲೆ ವಿಶೇಷ ಒಲವಿತ್ತು. ಬಹುತೇಕ ವಾರಾಂತ್ಯಗಳಲ್ಲಿ ನಗರಕ್ಕೆ ಭೇಟಿ ನೀಡುತ್ತಿದ್ದೇವು. ಬೆಂಗಳೂರು ಅರಮನೆಯಲ್ಲಿ ಓಡಾಡಿದ ಸುಂದರ ಸಮಯ, ಇಲ್ಲಿ ಶಾಪಿಂಗ್ ಮಾಡಿದ್ದ ದಿನಗಳನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ' ಎಂದು ಕಾಮಾಕ್ಷಿ ದೇವಿ ಸ್ಮರಿಸಿಕೊಂಡರು.

'ಈಗ ಬೆಂಗಳೂರು ಸಾಕಷ್ಟು ಬದಲಾಗಿದೆ. ವಾಹನ ದಟ್ಟಣೆಯಿಂದ ಕೂಡಿರುವ ರಸ್ತೆಗಳಲ್ಲಿ ಹೆಜ್ಜೆ ಹಾಕಲು ಎರಡು ಬಾರಿ ಯೋಚಿಸಬೇಕಾದ ಸ್ಥಿತಿಯಿದೆ' ಎಂದರು.

'ನಮ್ಮ ಕುಟುಂಬವು ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಪ್ರತಿಷ್ಠಾನದ ಮೂಲಕ ಒಡೆಯರ್ ಅವರ ಪರಂಪರೆಯನ್ನು ಮುಂದಕ್ಕೆ ಕೊಂಡೊಯ್ಯಲು ಕಾರ್ಯಪ್ರವೃತವಾಗಿದೆ. ನಮ್ಮ ತಂದೆ ಉತ್ತಮ ಆಡಳಿತಗಾರ ಮಾತ್ರ ಆಗಿರದೆ, ಸಂಗೀತ ಪ್ರೇಮಿಯೂ ಆಗಿದ್ದರು. ಅವರು 94 ಕೃತಿಗಳನ್ನು ರಚಿಸಿ, ಸಾಹಿತ್ಯ ಕ್ಷೇತ್ರಕ್ಕೆ ಕೊಡುಗೆ ನೀಡಿದ್ದಾರೆ' ಎಂದರು.

ಜೂನ್‌ನಲ್ಲಿ 4 ಸಾವಿರ ಪ್ರಕರಣ; ಪ್ಲಾಸ್ಟಿಕ್ ಬಳಕೆ ನಿಷೇಧಕ್ಕೂ ಆದ್ಯತೆ

ಕಸ ಎಸೆಯುವವರ ಮೇಲೆ ನಿಗಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕಸ ಎಸೆಯುವವರು, ತ್ಯಾಜ್ಯ ಸುಡುವವರ ಮೇಲೆ ನಿಗಾವಹಿಸಿರುವ ಬಿಬಿಎಂಪಿ ಅದರ ವಿರುದ್ಧ ಕಾರ್ಯಾಚರಣೆ ತೀವ್ರಗೊಳಿಸಿದೆ. ಜೂನ್‌ನಲ್ಲಿ ನಾಲ್ಕು ಸಾವಿರಕ್ಕೂ ಹೆಚ್ಚು ಪ್ರಕರಣ ದಾಖಲಿಸಿಕೊಂಡಿದ್ದು, ₹ 9 ಲಕ್ಷಕ್ಕೂ ಹೆಚ್ಚು ದಂಡ ವಸೂಲಿ ಮಾಡಿದೆ.

ಹಲವು ರಸ್ತೆಗಳು ಸೇರಿದಂತೆ ಖಾಲಿ ನಿವೇಶನಗಳಲ್ಲಿ ಕಸ ಎಸೆಯುವ ಪ್ರವೃತ್ತಿ ಹೆಚ್ಚುತ್ತಿದೆ. ಹೀಗಾಗಿ, ಮಾರ್ಷಲ್‌ಗಳ ಕಾರ್ಯಾಚರಣೆ ಹೆಚ್ಚಿಸಲಾಗಿದ್ದು, ಸ್ಥಳದಲ್ಲೇ ದಂಡ ವಿಧಿಸಲಾಗುತ್ತಿದೆ.

ದಕ್ಷಿಣ, ಪಶ್ಚಿಮ, ಪೂರ್ವ ವಲಯ ಕಾರ್ಯಾಚರಣೆಯಲ್ಲಿ ಮುಂದಿವೆ. ದಾಸರಹಳ್ಳಿ, ಯಲಹಂಕ, ಬೊಮ್ಮನಹಳ್ಳಿ, ರಾಜರಾಜೇಶ್ವರಿನಗರ, ಮಹದೇವಪುರದಲ್ಲಿ ಹೆಚ್ಚು ದಂಡ ವಸೂಲಿಯಾಗಿದ್ದರೂ ನಿರ್ವಹಣೆಯಲ್ಲಿ ಹಿಂದಿವೆ.

ಬೆಂಗಳೂರು ದಕ್ಷಿಣ ವಲಯದಲ್ಲಿ ಹೆಚ್ಚು ಪ್ರಕರಣಗಳು ಪತ್ತೆಯಾಗಿವೆ. ಈ ವಲಯದಲ್ಲಿ ಕಟ್ಟುನಿಟ್ಟಾಗಿ ತ್ಯಾಜ್ಯ ನಿರ್ವಹಣೆಗೆ ವಲಯ ಆಯುಕ್ತ ಜಯರಾಂ ರಾಯಪುರ ಸೂಚಿಸಿದ್ದಾರೆ. ಜುಲೈನಲ್ಲೂ ಕಾರ್ಯಾಚರಣೆ ತೀವ್ರಗೊಂಡಿದ್ದು, ಈ ವಲಯದ 6 ವಿಭಾಗಗಳಲ್ಲಿ 14ರಂದು ಒಂದೇ ದಿನ 268 ಪ್ರಕರಣ ದಾಖಲಿಸಲಾಗಿದೆ. ತ್ಯಾಜ್ಯ ಎಸೆಯುವವರು, ಕಸ ವಿಂಗಡಿಸದವರು, ನಿಷೇಧಿತ ಪ್ಲಾಸ್ಟಿಕ್ ಬಳಕೆ ಮಾಡುವವರಿಗೆ ದಂಡ ಒಟ್ಟು 40 ಸಾವಿರ ದಂಡ ವಿಧಿಸಲಾಗಿದೆ.

ಗುರಪ್ಪನಪಾಳ್ಯದಲ್ಲಿ ಮರ ಹಾಗೂ ಇತರೆ ಉಪಕರಣಗಳಿಗೆ ಬೆಂಕಿ ಹಚ್ಚಲಾಗಿತ್ತು. ಇದನ್ನು ನಂದಿಸಿದ ಬಿಬಿಎಂಪಿ ಸಿಬ್ಬಂದಿ, ಬೆಂಕಿ ಹಚ್ಚಿದವರಿಗೆ ದಂಡ ವಿಧಿಸಿದರು

ಗುರಪ್ಪನಪಾಳ್ಯದಲ್ಲಿ ಅಬ್ದುಲ್ ಅವರು ಖಾಲಿ ನಿವೇಶನದಲ್ಲಿ ಮರ ಹಾಗೂ ಇತರೆ ತ್ಯಾಜ್ಯಕ್ಕೆ ಬೆಂಕಿ ಹಚ್ಚಿದ್ದರು. ಈ ಸಂದರ್ಭದಲ್ಲಿ ಸ್ಥಳಕ್ಕೆ ಬಂದ ವಿಭಾಗ ಮೇಲ್ವಿಚಾರಕ, ಕಿರಿಯ ಆರೋಗ್ಯಾಧಿಕಾರಿ ಮತ್ತು ಮಾರ್ಷಲ್‌ಗಳು ಅಬ್ದುಲ್ ಅವರಿಗೆ ₹10 ಸಾವಿರ ದಂಡ ವಿಧಿಸಿದರು.

ಜಯನಗರದ ಸಾರಕ್ಕಿ ಮಾರುಕಟ್ಟೆಯಲ್ಲಿ ಪ್ಲಾಸ್ಟಿಕ್ ತಪಾಸಣೆ ಹಾಗೂ ಜಾಗೃತಿ ಅಭಿಯಾನ ನಡೆಸಿದ ಬಿಬಿಎಂಪಿ ಅಧಿಕಾರಿಗಳು, ನಿಷೇಧಿತ ಪ್ಲಾಸ್ಟಿಕ್ ಬಳಸಿದ 9 ಪ್ರಕರಣಗಳನ್ನು ದಾಖಲಿಸಿದರು. ₹1,800 ದಂಡ ವಿಧಿಸಿ, 40 ಕೆ.ಜಿ ಪ್ಲಾಸ್ಟಿಕ್ ವಶಪಡಿಸಿಕೊಂಡಿದ್ದಾರೆ.

‘ದಕ್ಷಿಣ ವಲಯದಲ್ಲಿ ಒಂದು ತಿಂಗಳಿಂದ ಹೆಚ್ಚಿನ ಕಾರ್ಯಾಚರಣೆ ನಡೆಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಎಲ್ಲ ವಲಯಗಳಲ್ಲೂ ಈ ಕಾರ್ಯಾಚರಣೆ ಹಾಗೂ ಜಾಗೃತಿಯನ್ನು ವೃದ್ಧಿಸಲಾಗುತ್ತಿದೆ. ನಗರ ಸ್ವಚ್ಛವಾಗಿಡಲು ನಾಗರಿಕರು ಸಹಕರಿಸಬೇಕು. ಏಕ ಬಳಕೆ ಪ್ಲಾಸ್ಟಿಕ್ ಬಳಕೆ ಹಾಗೂ ಸಂಗ್ರಹದ ಮೇಲೂ ನಿಗಾವಹಿಸಲಾಗಿದೆ’ ಎಂದು ಜಯರಾಂ ರಾಯಪುರ ಹೇಳಿದರು.

ನಿರಂತರ ಪ್ರಕ್ರಿಯೆ

ನಗರದಲ್ಲಿ ಕಸ ಎಸೆಯುವ ಬ್ಲ್ಯಾಕ್ ಸ್ಪಾಟ್ ನಿರ್ಮೂಲನೆ ನಿರಂತರ ಪ್ರಕ್ರಿಯೆ. ಕೇಂದ್ರ ಭಾಗಗಳಲ್ಲಿ ಇಂತಹ ಸಮಸ್ಯೆ ಹೆಚ್ಚಿದೆ. ನಿರ್ಮೂಲನೆಗೊಳಿಸುವ ಯತ್ನ ನಡೆದಿದೆ ಎಂದು ಬಿಬಿಎಂಪಿ ಘನತ್ಯಾಜ್ಯ ನಿರ್ವಹಣೆ ವಿಭಾಗದ ವಿಶೇಷ ಆಯುಕ್ತ ಡಾ. ಹರೀಶ್ ತಿಳಿಸಿದರು.

ವಿಭಾಗವಾರು ಕಾರ್ಯಾಚರಣೆ

ವಿಭಾಗ	ದಂಡ ವಸೂಲಿ (₹ ಗಳಲ್ಲಿ)	ವಿಭಾಗ	ದಂಡ ವಸೂಲಿ (₹ ಗಳಲ್ಲಿ)
ಪದ್ಮನಾಭನಗರ	82,200	ರಾಜಾಜಿನಗರ	32,500
ಮಹದೇವಪುರ	77,700	ಸರ್ವಜ್ಞನಗರ	29,100
ರಾಜರಾಜೇಶ್ವರಿನಗರ	72,208	ಮಲ್ಲೇಶ್ವರ	28,800
ಬೊಮ್ಮನಹಳ್ಳಿ	59,717	ಪುಲಕೇಶಿನಗರ	27,750
ಬೆಂಗಳೂರು ದಕ್ಷಿಣ	50,600	ಶಾಂತಿನಗರ	27,300
ಬಸವನಗುಡಿ	46,600	ದಾಸರಹಳ್ಳಿ	25,100
ವಿಜಯನಗರ	46,500	ಮಹಾಲಕ್ಷ್ಮಿಲೇಔಟ್	24,200
ಗೋವಿಂದರಾಜನಗರ	45,400	ಶಿವಾಜಿನಗರ	22,100
ಸಿ.ವಿ.ರಾಮನ್ ನಗರ	38,800	ಚಿಕ್ಕಪೇಟೆ	20,300
ಕೆಂಗೇರಿ	38,300	ಗಾಂಧಿನಗರ	18,900
ಕೆ.ಆರ್.ಪುರ	35,900	ಬ್ಯಾಟರಾಯನಪುರ	16,100
ಜಯನಗರ	34,617	ಯಲಹಂಕ	15,500
ಬಿಟಿಎಂ ಲೇಔಟ್	33,308	ಹೆಬ್ಬಾಳ	12,700
		ಚಾಮರಾಜಪೇಟೆ	8,300

ಏಕರೂಪ ಗುರುತಿನ ಚೀಟಿ ನೀಡಲು ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಹಿಂದೂ ಧಾರ್ಮಿಕ ದತ್ತಿ ಇಲಾಖೆಯಡಿ ಬರುವ ದೇವಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅರ್ಚಕರು, ಸಿಬ್ಬಂದಿಗೆ ಅವರ ಹುದ್ದೆಗೆ ಅನುಗುಣವಾಗಿ ಒಂದೇ ರೀತಿಯ ಗುರುತಿನ ಚೀಟಿ ನೀಡಬೇಕು ಎಂದು ಅಖಿಲ ಕರ್ನಾಟಕ ಹಿಂದೂ ದೇವಾಲಯಗಳ ಅರ್ಚಕ-ಆಗಮಿಕರ ಮತ್ತು ಉಪಾಧಿವಂತರ ಒಕ್ಕೂಟವು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಅವರಿಗೆ ಮನವಿ ಸಲ್ಲಿಸಿದೆ.

ಗುರುತಿನ ಚೀಟಿ ಇರಬೇಕು ಎಂದು ಮುಜರಾಯಿ ಇಲಾಖೆಯು 2000ನೇ ಇಸವಿಯಲ್ಲೇ ಸುತ್ತೋಲೆ ಹೊರಡಿಸಿತ್ತು. ಅದರಂತೆ ಆಯಾ ತಹಶೀಲ್ದಾರ್ ಕಚೇರಿಗಳಲ್ಲಿ ಗುರುತಿನ ಚೀಟಿ ಪಡೆದುಕೊಂಡಿದ್ದಾರೆ. ಒಂದೊಂದು ತಾಲ್ಲೂಕಿನಲ್ಲಿ ಒಂದೊಂದು ರೀತಿಯಲ್ಲಿ ಗುರುತಿನ ಚೀಟಿ ಇದ್ದು, ರಾಜ್ಯವ್ಯಾಪಿ ಅವರವರ ವೃತ್ತಿಗೆ ಅನುಗುಣವಾಗಿ ಏಕರೂಪದ ಗುರುತಿನ ಚೀಟಿ ಒದಗಿಸಬೇಕು ಎಂದು ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಕೆ.ಎಸ್.ಎನ್. ದೀಕ್ಷಿತ್ ಮತ್ತು ಪದಾಧಿಕಾರಿಗಳು ಮನವಿ ಮಾಡಿದರು.

ಅರ್ಚಕರ ಬೇಡಿಕೆ ಈಡೇರಿಸುವಂತೆ ಅಖಿಲ ಕರ್ನಾಟಕ ಹಿಂದೂ ದೇವಾಲಯಗಳ ಅರ್ಚಕ–ಆಗಮಿಕರ ಮತ್ತು ಉಪಾಧಿವಂತರ ಒಕ್ಕೂಟದ ಪದಾಧಿಕಾರಿಗಳು ಮುಜರಾಯಿ ಸಚಿವ ರಾಮಲಿಂಗಾ ರೆಡ್ಡಿಗೆ ಮನವಿ ಸಲ್ಲಿಸಿದರು.

ಅರ್ಚಕರನ್ನು 60 ವರ್ಷಕ್ಕೆ ನಿವೃತ್ತಿಗೊಳಿಸುವುದನ್ನು ಕೈಬಿಟ್ಟು ಸೇವೆ ಮುಂದುವರಿಸಲು ಆದೇಶ ಹೊರಡಿಸಬೇಕು. ಗ್ರಾಮಾಂತರ ಪ್ರದೇಶಗಳಲ್ಲಿರುವ ದೇವಾಲಯಗಳಿಗೆ ಪೂಜಾ ಸಾಮಗ್ರಿಗಾಗಿ ತಿಂಗಳಿಗೆ ₹ 5,000 ನೀಡಲಾಗುತ್ತಿದೆ. ಈಗಿನ ಧಾರಣೆಗಳು ಹೆಚ್ಚಾಗಿರುವುದರಿಂದ ಈ ಮೊತ್ತವನ್ನು ₹ 5,000ಕ್ಕೆ ಏರಿಸಬೇಕು. ಅರ್ಚಕರ ಸಂಭಾವನೆಯನ್ನೂ ಹೆಚ್ಚಿಸಬೇಕು. ಮುಜರಾಯಿ ದೇವಾಲಯಗಳನ್ನು ಖಾಸಗಿ ಟ್ರಸ್ಟ್ ಮಾಡಬಾರದು. ಸರ್ಕಾರದ ಅಧೀನದಲ್ಲಿಯೇ ಇರಬೇಕು. ದೇವಸ್ಥಾನಗಳಿಗೆ ಅಗತ್ಯ ಇರುವ ನೌಕರರನ್ನು ನೇಮಿಸಬೇಕು ಎಂದರು.

ಕಾಶಿ ದರ್ಶನದ ನಾಲ್ಕನೇ ಟ್ರಿಪ್ 29ಕ್ಕೆ

ಬೆಂಗಳೂರು: ಪವಿತ್ರ ಕ್ಷೇತ್ರಗಳಾದ ವಾರಾಣಸಿ, ಅಯೋಧ್ಯೆ, ಪ್ರಯಾಗ್‌ರಾಜ್ ಕ್ಷೇತ್ರಗಳಿಗೆ ಕಡಿಮೆ ವೆಚ್ಚದಲ್ಲಿ ತೆರಳಲು ಅನುಕೂಲವಾಗುವಂತೆ ಪ್ಯಾಕೇಜ್ ರೂಪಿಸಲಾಗಿದೆ. ಈ ‘ಕರ್ನಾಟಕ ಭಾರತ್ ಗೌರವ ಕಾಶಿ ದರ್ಶನ’ ಯೋಜನೆಯಡಿ ವಿಶೇಷ ರೈಲಿನ ನಾಲ್ಕನೇ ಟ್ರಿಪ್ ಜುಲೈ 29ರಂದು ಆರಂಭಗೊಳ್ಳಲಿದ್ದು, ಯಾತ್ರಾರ್ಥಿಗಳು ಇದರ ಉಪಯೋಗ ಪಡೆದುಕೊಳ್ಳುವಂತೆ ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಮನವಿ ಮಾಡಿದ್ದಾರೆ.

ಒಬ್ಬ ಯಾತ್ರಾರ್ಥಿಗೆ ₹ 20,000ಗಳಂತೆ ಪ್ಯಾಕೇಜ್ ಇರಲಿದ್ದು, ಅದರಲ್ಲಿ ₹ 5,000ವನ್ನು ರಾಜ್ಯ ಸರ್ಕಾರ ಭರಿಸಲಿದೆ. ₹ 15,000 ಯಾತ್ರಾರ್ಥಿ ಪಾವತಿಸಬೇಕು. ಉಪಹಾರ, ಊಟ, ತಂಗುವಿಕೆ, ಸ್ಥಳೀಯ ಸಾರಿಗೆ ಮತ್ತು ಸ್ಥಳೀಯ ವೀಕ್ಷಣೆ ಒಳಗೊಂಡಿದೆ. 7 ದಿನಗಳ ಪ್ರವಾಸ ಇದಾಗಿದೆ. ಈ ಯೋಜನೆಯಡಿ 3 ಟ್ರಿಪ್‌ಗಳಲ್ಲಿ 1,644 ಯಾತ್ರಾರ್ಥಿಗಳು ಪ್ರವಾಸ ಮಾಡಿದ್ದಾರೆ. ಸರ್ಕಾರವು ಪ್ರತಿಯೊಬ್ಬರಿಗೆ ₹ 5,000ದಂತೆ ₹ 82 ಲಕ್ಷ ಸಹಾಯಧನ ವಿತರಿಸಿದೆ.

ಜುಲೈ 29ರಂದು ಹೊರಡುವ ರೈಲಿನಲ್ಲಿ ಪ್ರವಾಸ ಮಾಡುವವರು ಐಆರ್‌ಟಿಸಿ ಪೋರ್ಟಲ್ ಮೂಲಕ ಟಿಕೆಟ್ ಕಾಯ್ದಿರಿಸಿಕೊಳ್ಳಬಹುದು. ವಿಶೇಷ ರೈಲಿನಲ್ಲಿ ಈಗ ಹೊಸತಾಗಿ ಎಲ್‌ಎಚ್‌ಬಿ ಕೋಚ್‌ಗಳನ್ನು ಅಳವಡಿಸಲಾಗಿದೆ. ಅಲ್ಲೇ ಅಡುಗೆ ಮಾಡುವ ಅಡುಗೆ ಮನೆಯನ್ನು ಒಳಗೊಂಡಿದೆ. ಯಾತ್ರಾರ್ಥಿಗಳ ಆರೋಗ್ಯ ನೆರವಿಗಾಗಿ ಇಬ್ಬರು ವೈದ್ಯರು ಕೂಡ ಇರುವರು ಎಂದು ರಾಮಲಿಂಗಾ ರೆಡ್ಡಿ ತಿಳಿಸಿದ್ದಾರೆ.

ರ‍್ಯಾಪಿಡೊ ಆಟೊಗಳ ಮೇಲೆ ಸಾರಥಿ ಚಾಲಕರ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಎಚ್‌ಎಸ್‌ಆರ್ ಲೇಔಟ್‌ನ 5ನೇ ಮುಖ್ಯರಸ್ತೆಯಲ್ಲಿರುವ ರ‍್ಯಾಪಿಡೊ ಕಚೇರಿ ಎದುರಿನ ರಸ್ತೆಯಲ್ಲಿ ನಿಲುಗಡೆ ಮಾಡಲಾಗಿದ್ದ ರ‍್ಯಾಪಿಡೊ ಆಟೊಗಳ ಮೇಲೆ ಸಾರಥಿ ಆಟೊ ಚಾಲಕರು ದಾಳಿ ನಡೆಸಿದ್ದು, ಈ ಸಂಬಂಧ ಎಫ್‌ಐಆರ್ ದಾಖಲಾಗಿದೆ.

ರ‍್ಯಾಪಿಡೊ ಆಟೊಗಳ ಚಾಲಕರಿಗೆ ಸೀಟ್ ಬೆಲ್ಟ್ ಹಾಗೂ ಸೈಡ್ ಕರ್ಟನ್ ವಿತರಣೆ ಮಾಡಲಾಗುತ್ತಿತ್ತು. ಆಗ ಏಕಾಏಕಿ ದಾಳಿ ನಡೆಸಿದ್ದಾರೆ ಎಂದು ರ‍್ಯಾಪಿಡೊ ಸಂಸ್ಥೆಯವರು ದೂರು ನೀಡಿದ್ದಾರೆ.

ಅವಾಚ್ಯ ಶಬ್ದಗಳಿಂದ ನಿಂದಿಸಿ, ಕೆಲವು ವಸ್ತುಗಳನ್ನು ಕಳವು ಮಾಡಿದ್ದಾರೆ. ಅಲ್ಲದೇ ಆಟೊಗಳ ಮೇಲಿನ ಕರ್ಟನ್ ಹರಿದು ಹಾಕಿದ್ದಾರೆ. ₹ 1.40 ಲಕ್ಷ ಮೌಲ್ಯದ ರೇನ್ ಕರ್ಟನ್, ಸೀಟ್ ಬೆಲ್ಟ್‌ಗೆ ಹಾನಿಯಾಗಿದೆ ಎಂದು ಸಂಸ್ಥೆಯ ರೆಡ್ಡಿಪ್ರಸಾದ್ ಅವರು ದೂರು ನೀಡಿದ್ದಾರೆ.

ರ‍್ಯಾಪಿಡೊ ಆಟೊಗಳ ಮೇಲೆ ದಾಳಿ ನಡೆಸಿ ಕರ್ಟನ್ ಹರಿದು ಹಾಕಿರುವ ದೃಶ್ಯ.

ಎನ್‌ಐಎಗೆ ಬೇಕಾಗಿದ್ದ ಇಬ್ಬರ ಬಂಧನ

ಪುಣೆ (ಪಿಟಿಐ): ಭಯೋತ್ಪದನಾ ಕೃತ್ಯದಲ್ಲಿ ಭಾಗಿಯಾದ ಆರೋಪದಲ್ಲಿ ರಾಷ್ಟ್ರೀಯ ತನಿಖಾ ಸಂಸ್ಥೆಗೆ (ಎನ್‌ಐಎ) ಬೇಕಾಗಿದ್ದ ಇಬ್ಬರನ್ನು ಪುಣೆ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಮಧ್ಯಪ್ರದೇಶದ ಮೊಹಮದ್ ಇಮ್ರಾನ್ ಮೊಹಮದ್ ಯೂನಿಸ್ ಖಾನ್ (23), ಮೊಹಮದ್ ಯೂನಿಸ್ ಮೊಹಮದ್ ಯಾಕುಬ್ ಸಾಕಿ (24) ಬಂಧಿತರು. ಇಬ್ಬರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ, ಜುಲೈ 25ರ ವರೆಗೆ ಪೊಲೀಸರು ವಶಕ್ಕೆ ಪಡೆದಿದ್ದಾರೆ. ರಾಜಸ್ಥಾನದಲ್ಲಿ ದಾಖಲಾಗಿದ್ದ ಭಯೋತ್ಪಾದನೆ ಪ್ರಕರಣದಲ್ಲಿ ಈ ಇಬ್ಬರೂ ಎನ್‌ಐಎಗೆ ಬೇಕಾಗಿದ್ದರು.

ಮಾಲಿನ್ಯ ನಿಯಂತ್ರಣ ಮಂಡಳಿ ಸದಸ್ಯ ಕಾರ್ಯದರ್ಶಿ ನೇಮಕ

ಬೆಂಗಳೂರು: ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸದಸ್ಯ ಕಾರ್ಯದರ್ಶಿ ಹುದ್ದೆಯನ್ನು ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಪ್ರಭಾಷ್ ಚಂದ್ರ ರೇ ಅವರಿಗೆ ಹೆಚ್ಚುವರಿಯಾಗಿ ವಹಿಸಿ ಸರ್ಕಾರ ಬುಧವಾರ ಆದೇಶ ಹೊರಡಿಸಿದೆ.

ಪ್ರಭಾಷ್ ಚಂದ್ರ ಬುಧವಾರ ಸಂಜೆ ಅಧಿಕಾರ ಸ್ವೀಕರಿಸಿದರು. ಇದರಿಂದ ಮಂಡಳಿಯ ಅಧ್ಯಕ್ಷ ಶಾಂತ್ ತಿಮ್ಮಯ್ಯ ಹಾಗೂ ಸದಸ್ಯ ಕಾರ್ಯದರ್ಶಿ ಹುದ್ದೆಯನ್ನು ಹೆಚ್ಚುವರಿಯಾಗಿ ಹೊಂದಿದ್ದ ಐ.ಟಿ ವ್ಯವಸ್ಥಾಪಕ ಸೂರಿ ಪಾಯಲ ನಡುವಿನ ಸಂಘರ್ಷ ಕೊನೆಗೊಂಡಂತಾಗಿದೆ.

ಸದಸ್ಯ ಕಾರ್ಯದರ್ಶಿ ಹುದ್ದೆಯನ್ನು ಸೂರಿ ಪಾಯಲ ಅವರಿಗೆ ಜೂನ್ 7ರಂದು ಹೆಚ್ಚುವರಿಯಾಗಿ ವಹಿಸಿದ್ದ ಆದೇಶವನ್ನು ಶಾಂತ್ ತಿಮ್ಮಯ್ಯ ಜುಲೈ 15ರಂದು ಸಂಜೆ ವಾಪಸ್ ಪಡೆದಿದ್ದರು. ಮುಖ್ಯ ಪರಿಸರ ಅಧಿಕಾರಿ–1 ಟಿ. ಮಹೇಶ್ ಅವರಿಗೆ ಹುದ್ದೆ ವಹಿಸಿದ್ದರು. ಸರ್ಕಾರದಿಂದ ಈ ಆದೇಶ ಆಗದಿದ್ದರಿಂದ ಮಹೇಶ್ ಹುದ್ದೆಯನ್ನು ವಹಿಸಿಕೊಂಡಿರಲಿಲ್ಲ. ಸೂರಿ ಪಾಯಲ ತಮ್ಮನ್ನು ವಾಪಸ್ ಕಳುಹಿಸಿದ್ದ ಆದೇಶ ಸ್ವೀಕರಿಸಿರಲಿಲ್ಲ. ಸರ್ಕಾರ ಸದಸ್ಯ ಕಾರ್ಯದರ್ಶಿಯನ್ನು ನೇಮಿಸುವವರೆಗೆ ತಾವೇ ಇರುವುದಾಗಿ ಹೇಳಿದ್ದರು. ಸೋಮವಾರದಿಂದ ಈ ಜಟಾಪಟಿ ನಡೆಯುತ್ತಲೇ ಇತ್ತು. ಸರ್ಕಾರ ಪ್ರಭಾಷ್‌ಗೆ ಹೆಚ್ಚುವರಿಯಾಗಿ ಸದಸ್ಯ ಕಾರ್ಯದರ್ಶಿ ಹುದ್ದೆ ವಹಿಸಿರುವುದರಿಂದ ಗೊಂದಲ ಪರಿಹಾರವಾದಂತಾಗಿದೆ.

ವಿದ್ಯಾರ್ಥಿನಿ ಅನುಮಾನಾಸ್ಪದ ಸಾವು

ಚಿಂತಾಮಣಿ: ತಾಲ್ಲೂಕಿನ ಗಡಿಗವಾರದ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಬುಧವಾರ ವಿದ್ಯಾರ್ಥಿನಿಯೊಬ್ಬಳು ಅನುಮಾನಾಸ್ಪದವಾಗಿ ಮೃತಪಟ್ಟಿದ್ದಾಳೆ.

ತನುಶ್ರೀ

8ನೇ ತರಗತಿ ವಿದ್ಯಾರ್ಥಿನಿ ತನುಶ್ರೀ(14) ಮೃತಪಟ್ಟಿದ್ದು, ಕೆಂಚಾರ್ಲಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ‘ಬುಧವಾರ ನಸುಕಿನಲ್ಲಿ ವಿದ್ಯಾರ್ಥಿನಿ ಅಸ್ವಸ್ಥಗೊಂಡಿದ್ದಳು. ಆಕೆಯ ಬಾಯಲ್ಲಿ ನೊರೆ ಕಂಡುಬಂತು. ಏನಾಗಿತ್ತು ಎಂಬುದು ನಮಗೂ ಗೊತ್ತಿಲ್ಲ’ ಎಂದು ಪ್ರಾಚಾರ್ಯೆ ತಿಳಿಸಿದ್ದಾರೆ.

ಬೆಂಗಳೂರು-ಮೈಸೂರು ಹೆದ್ದಾರಿ ಉದ್ದಕ್ಕೂ ಸಂಚರಿಸಿದ ಸದಸ್ಯರು

ಎಕ್ಸ್‌ಪ್ರೆಸ್ ವೇ ಪರಿಶೀಲಿಸಿದ ಸಮಿತಿ

ಪ್ರಜಾವಾಣಿ ವಾರ್ತೆ

ರಾಮನಗರ: ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಮೂವರು ತಜ್ಞರ ಸಮಿತಿ ಬುಧವಾರ ಬೆಂಗಳೂರು- ಮೈಸೂರು ಎಕ್ಸ್‌ಪ್ರೆಸ್ ವೇ ವಿವಿಧ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲಿಸಿತು.

ರಸ್ತೆ ಸುರಕ್ಷತೆ ಸಲಹೆಗಾರ ಸುದರ್ಶನ್ ಕೆ. ಪೊಪ್ಲಿ, ಪ್ರಾಧಿಕಾರದ ಉಪ ವ್ಯವಸ್ಥಾಪಕ ಹಾಗೂ ರಸ್ತೆ ಸುರಕ್ಷತಾ ಅಧಿಕಾರಿ ಪ್ರವೀಣ್ ಕುಮಾರ್ ಹಾಗೂ ಸೊಹ್ನಾ-ದೌಸಾ ಎಕ್ಸ್‌ಪ್ರೆಸ್ ಯೋಜನೆ ಜಾರಿ ಘಟಕದ ವ್ಯವಸ್ಥಾಪಕ ಜೈವರ್ಧನ್ ಸಿಂಗ್ ಅವರ ಸಮಿತಿಯು ಹೆದ್ದಾರಿ ಸುರಕ್ಷತೆ ಮತ್ತು ಸುಧಾರಣಾ ಕ್ರಮಗಳ ಪರಿಶೀಲನೆ ನಡೆಸಿತು.

ಮುಖ್ಯಾಂಶಗಳು

- ಸಾರ್ವಜನಿಕರು ಹಾಗೂ ವಾಹನ ಸವಾರರೊಂದಿಗೆ ಸಂವಾದ
- 9 ತಿಂಗಳಲ್ಲಿ ಸಂಭವಿಸಿದ 550ಕ್ಕೂ ಹೆಚ್ಚು ಅಪಘಾತ

ಕಣಿಮಿಣಿಕೆ, ಹೆಜ್ಜಾಲ, ಹನುಮಂತನಗರ, ವಂಡರ್ ಲಾ ಗೇಟ್, ಕೇತಗಾನಹಳ್ಳಿ ಮೇಲ್ಸೇತುವೆ, ದಾಸಪ್ಪನದೊಡ್ಡಿ, ಕೆಂಪನಹಳ್ಳಿ ಗೇಟ್, ಮಾಯಗಾನಹಳ್ಳಿ, ಸಂಗಬಸವನದೊಡ್ಡಿ ಸೇರಿದಂತೆ ಹೆದ್ದಾರಿಯುದ್ದಕ್ಕೂ ಸಮಿತಿ ಸದಸ್ಯರು ಸಂಚರಿಸಿದರು.

ಹೆದ್ದಾರಿಯಲ್ಲಿ ಅಪಘಾತ ಹೆಚ್ಚಾಗಿ ಸಂಭವಿಸುವ ಸ್ಥಳ, ವಾಹನ ಪ್ರವೇಶ, ನಿರ್ಗಮನ ರಸ್ತೆ, ಮೇಲ್ಸೇತುವೆ ಮತ್ತು ಕೆಳಸೇತುವೆಗಳಿಗೂ ಭೇಟಿ ನೀಡಿದ ಸದಸ್ಯರು, ಸಾರ್ವಜನಿಕರು ಹಾಗೂ ವಾಹನ ಸವಾರರೊಂದಿಗೂ ಸಂವಾದ ನಡೆಸಿ ಮಾಹಿತಿ ಕಲೆ ಹಾಕಿದರು. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಸ್ಥಳೀಯ ಅಧಿಕಾರಿಗಳು ಸದಸ್ಯರಿಗೆ ಸಾಥ್ ನೀಡಿದರು.

ಎಕ್ಸ್‌ಪ್ರೆಸ್ ವೇ ವಾಹನಗಳ ಸಂಚಾರಕ್ಕೆ ಮುಕ್ತಗೊಂಡ ಕಳೆದ ಒಂಬತ್ತು ತಿಂಗಳಲ್ಲಿ ಸಂಭವಿಸಿದ 550ಕ್ಕೂ ಹೆಚ್ಚು ಅಪಘಾತಗಳಲ್ಲಿ 158ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ. ರಸ್ತೆ ಸುರಕ್ಷತೆ ಕುರಿತು ವ್ಯಾಪಕ ಚರ್ಚೆ ಆರಂಭವಾಗಿದ್ದವು. ಅವೈಜ್ಞಾನಿಕವಾಗಿ ರಸ್ತೆ ನಿರ್ಮಿಸಿರುವುದೇ ಇದಕ್ಕೆ ಕಾರಣ ಎಂಬ ಆರೋಪ ಕೇಳಿ ಬಂದಿವೆ.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಹೆದ್ದಾರಿ ಸುರಕ್ಷತೆ ಮತ್ತು ಸುಧಾರಣಾ ಕ್ರಮಗಳ ಪರಿಶೀಲನೆಗಾಗಿ ಜುಲೈ 14ರಂದು ತಜ್ಞರ ಸಮಿತಿ ರಚಿಸಿ, ಹತ್ತು ದಿನದೊಳಗೆ ವರದಿ ನೀಡಬೇಕು ಎಂದು ಸೂಚಿಸಿತ್ತು.

ಷೇರುಪೇಟೆ ವಹಿವಾಟು 302



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ 19,749
ಇಂದಿನ ಅಂತ್ಯ 19,833
▲ 84
ದಿನದ ಗರಿಷ್ಠ 19,851

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ
ಬೆಂಗಳೂರು
100 ಮೊಟ್ಟೆಗೆ ₹485
12 ಮೊಟ್ಟೆಗೆ ₹70
ಮೈಸೂರು
100 ಮೊಟ್ಟೆಗೆ ₹487

ರಾಮನಗರ ರೇಷ್ಮೆಗೂಡು ಧಾರಣೆ
ಮಿಶ್ರತಳಿ (ಸಿ.ಬಿ) ₹261-466
ದ್ವಿತಳಿ (ಬಿ.ವಿ) ₹285-590

ಎನ್.ಆರ್.ಪುರ ರಬ್ಬರ್
ಆರ್‌ಎಸ್‌ಎಸ್-4 ₹149
ಆರ್‌ಎಸ್‌ಎಸ್-5 ₹145
ಗುಡ್ ಲಾಟ್ ₹127
(ಪ್ರತಿ ಕೆ.ಜಿಗೆ)

ಭಾರತದಾಚೆಗೆ ಕಂಪನಿಯ ಮೊದಲ ಅತಿದೊಡ್ಡ ಘಟಕ: ₹42,500 ಕೋಟಿ ಹೂಡಿಕೆ

ಬ್ರಿಟನ್‌ನಲ್ಲಿ ಟಾಟಾ ಗಿಗಾಫ್ಯಾಕ್ಟರಿ

ಮುಂಬೈ/ಲಂಡನ್ (ಪಿಟಿಐ/ಎಎಫ್‌ಪಿ): ಟಾಟಾ ಸಮೂಹವು ವಿದ್ಯುತ್ ಚಾಲಿತ ವಾಹನಗಳಿಗೆ ಬ್ಯಾಟರಿ ತಯಾರಿಕಾ ಘಟಕವನ್ನು (ಗಿಗಾಫ್ಯಾಕ್ಟರಿ) ಬ್ರಿಟನ್‌ನಲ್ಲಿ ಸ್ಥಾಪಿಸಲಿದೆ. ಇದಕ್ಕಾಗಿ ₹42,500 ಕೋಟಿ ಹೂಡಿಕೆ ಮಾಡುವುದಾಗಿ ಬುಧವಾರ ತಿಳಿಸಿದೆ.

ಜಾಗ್ವರ್ ಲ್ಯಾಂಡ್ ರೋವರ್ ಮತ್ತು ಬೇರೆ ಕಂಪನಿಗಳಿಗಾಗಿ ಬ್ಯಾಟರಿಗಳನ್ನು ತಯಾರಿಸಲು ಟಾಟಾ ಸಮೂಹ ಉದ್ದೇಶಿಸಿದೆ. ನೈರುತ್ಯ ಇಂಗ್ಲೆಂಡ್‌ನ ಸೊಮರ್‌ಸೆಟ್ ಅನ್ನು ಘಟಕ ಸ್ಥಾಪಿಸಲು ಕಂಪನಿ ಆಯ್ಕೆ ಮಾಡಿಕೊಂಡಿದೆ.

ಈ ಗಿಗಾಫ್ಯಾಕ್ಟರಿಯು ಯುರೋಪ್‌ನ ಅತಿದೊಡ್ಡ ಘಟಕಗಳಲ್ಲಿ ಒಂದಾಗಿರಲಿದ್ದು, ಭಾರತದಾಚೆಗೆ ಟಾಟಾ ಸಮೂಹ ಸ್ಥಾಪಿಸುತ್ತಿರುವ ಮೊದಲ ಗಿಗಾಫ್ಯಾಕ್ಟರಿ ಇದಾಗಿರಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

1980ರಲ್ಲಿ ನಿಸಾನ್ ಕಂಪನಿಯು ಬ್ರಿಟನ್ ಮಾರುಕಟ್ಟೆ ಪ್ರವೇಶಿಸಿತು.

> **ಈ ಹೂಡಿಕೆಯು ನೇರವಾಗಿ 4 ಸಾವಿರ ಹೊಸ ಉದ್ಯೋಗ ಸೃಷ್ಟಿಸಲಿದ್ದು, ಪೂರೈಕೆ ವ್ಯವಸ್ಥೆಯಲ್ಲಿ ಸಾವಿರಾರು ಉದ್ಯೋಗ ಸೃಷ್ಟಿಗೆ ಕಾರಣವಾಗಲಿದೆ**
> **ರಿಷಿ ಸುನಕ್,** ಬ್ರಿಟನ್ ಪ್ರಧಾನಿ

ಆ ಬಳಿಕ ಬ್ರಿಟನ್‌ನ ಆಟೊಮೊಟಿವ್ ವಲಯದಲ್ಲಿ ಆಗುತ್ತಿರುವ ಮಹತ್ವದ ಹೂಡಿಕೆ ಇದು ಎಂದು ವಿಶ್ಲೇಷಿಸಲಾಗುತ್ತಿದೆ.

ಈ ಘಟಕವು ಜೆಎಲ್‌ಆರ್‌ನ ಭವಿಷ್ಯದ ಎಲೆಕ್ಟ್ರಿಕ್ ವಾಹನಗಳಿಗೆ ಬ್ಯಾಟರಿ ಪೂರೈಸಲಿದೆ. ರೇಂಜ್ ರೋವರ್, ಡಿಫೆಂಡರ್, ಡಿಸ್ಕವರಿ ಮತ್ತು ಜಾಗ್ವರ್ ಬ್ರ್ಯಾಂಡ್‌ಗಳ ವಿದ್ಯುತ್ ಚಾಲಿತ ವಾಹನಗಳಿಗೆ ಬ್ಯಾಟರಿ ಪೂರೈಸಲಿದೆ. 2026ರಿಂದ ಬ್ಯಾಟರಿ ತಯಾರಿಕೆ ಆರಂಭ ಆಗಲಿದೆ.

ಟಾಟಾ ಸಮೂಹವು ಬ್ರಿಟನ್ ಸರ್ಕಾರದಿಂದ ₹5,307 ಕೋಟಿ ನೆರವು ಕೇಳಿರುವುದಾಗಿ ವರದಿಯಾಗಿದೆ. ಘಟಕದಲ್ಲಿ ಇಂಧನ ಬಳಕೆಗೆ ಸಬ್ಸಿಡಿ ನೀಡುವುದೂ ಇದರಲ್ಲಿ ಸೇರಿಕೊಂಡಿದೆ. ಘಟಕ ಸ್ಥಾಪನೆ ಆಗಲಿರುವ ಜಾಗದಲ್ಲಿ ರಸ್ತೆ ಮೂಲಸೌಕರ್ಯ ಸುಧಾರಣೆಯನ್ನೂ ಕಂಪನಿ ಕೇಳಿದೆ.

ಹೂಡಿಕೆ ಕುರಿತ ಘೋಷಣೆ ಸಂದರ್ಭದಲ್ಲಿ ಟಾಟಾ ಸನ್ಸ್ ಅಧ್ಯಕ್ಷ ಎನ್. ಚಂದ್ರಶೇಖರನ್ ಮತ್ತು ಬ್ರಿಟನ್ ಪ್ರಧಾನಿ ರಿಷಿ ಸುನಕ್ –ಎಪಿ/ಪಿಟಿಐ ಚಿತ್ರ

ಟಾಟಾ ಸನ್ಸ್‌ಗೆ ಸರ್ಕಾರ ನೀಡಲಿರುವ ಬೆಂಬಲದ ಕುರಿತು ಮುಂದಿನ ದಿನಗಳಲ್ಲಿ ಮಾಹಿತಿ ನೀಡಲಾಗುವುದು ಎಂದು ಬ್ರಿಟನ್ ಸರ್ಕಾರವು ಪ್ರಕಟಣೆಯಲ್ಲಿ ತಿಳಿಸಿದೆ. ನಿಸಾನ್ ಕಂಪನಿಯು ಬ್ರಿಟನ್‌ನಲ್ಲಿ 2013ರಲ್ಲಿ ಬ್ಯಾಟರಿ ತಯಾರಿಸುವ ಗಿಗಾಫ್ಯಾಕ್ಟರಿ ಸ್ಥಾಪಿಸಿತು. ಬ್ರಿಟನ್‌ನಲ್ಲಿ ಸ್ಥಾಪನೆ ಆದ ಮೊದಲ ಗಿಗಾಫ್ಯಾಕ್ಟರಿ ಇದು. ಟಾಟಾ ಸಮೂಹವು ಸ್ಥಾಪಿಸುತ್ತಿರುವುದು ಬ್ರಿಟನ್‌ನ ಎರಡನೇ ಗಿಗಾಫ್ಯಾಕ್ಟರಿ.

ತನ್ನ ಎಲ್ಲ ವಹಿವಾಟುಗಳಲ್ಲಿ ಸುಸ್ಥಿರ ಮಾದರಿಯನ್ನು ಅನುಸರಿಸಲು ಟಾಟಾ ಸಮೂಹವು ಬದ್ಧವಾಗಿದೆ ಎಂದು ಟಾಟಾ ಸನ್ಸ್‌ನ ಅಧ್ಯಕ್ಷ ಎನ್. ಚಂದ್ರಶೇಖರನ್ ಹೇಳಿದ್ದಾರೆ.

ಭಾರತದಾಚೆಗಿನ ಮೊದಲ ಗಿಗಾಫ್ಯಾಕ್ಟರಿಯನ್ನು ಬ್ರಿಟನ್‌ನಲ್ಲಿ ನಿರ್ಮಿಸಲು ಟಾಟಾ ಸಮೂಹ ನಿರ್ಧರಿಸಿರುವುದು ಬ್ರಿಟನ್ ಬಗ್ಗೆ ಹೊಂದಿರುವ ವಿಶ್ವಾಸದ ಸೂಚಕವಾಗಿದೆ. ಬ್ರಿಟನ್‌ನ ಆಟೊಮೊಟಿವ್ ವಲಯದಲ್ಲಿ ಅತಿ ದೊಡ್ಡ ಹೂಡಿಕೆಗಳಲ್ಲಿ ಒಂದಾಗಲಿದೆ ಎಂದು ಬ್ರಿಟನ್ ಪ್ರಧಾನಿ ರಿಷಿ ಸುನಕ್ ಪ್ರತಿಕ್ರಿಯೆ ನೀಡಿದ್ದಾರೆ.

ಐಐಎಫ್‌ಸಿಎಲ್: ರಾಜ್ಯದ ಯೋಜನೆಗಳಿಗೆ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂಲಸೌಕರ್ಯ ವಲಯದ ಯೋಜನೆಗಳಿಗೆ ಹಣಕಾಸಿನ ನೆರವು ಒದಗಿಸುವ, ಕೇಂದ್ರ ಸರ್ಕಾರದ ಮಾಲೀಕತ್ವದ 'ಇಂಡಿಯಾ ಇನ್ಫ್ರಾಸ್ಟ್ರಕ್ಚರ್ ಫೈನಾನ್ಸ್ ಕಂಪನಿ ಲಿಮಿಟೆಡ್' (ಐಐಎಫ್‌ಸಿಎಲ್) ಕರ್ನಾಟಕದ 35ಕ್ಕೂ ಹೆಚ್ಚಿನ ಯೋಜನೆಗಳಿಗೆ ಹಣಕಾಸಿನ ನೆರವು ಒದಗಿಸಿದೆ ಎಂದು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಪಿ.ಆರ್. ಜಯಶಂಕರ್ ತಿಳಿಸಿದರು.

ಕಂಪನಿಯು ಬೆಂಗಳೂರಿನಲ್ಲಿ ಬುಧವಾರ ಆಯೋಜಿಸಿದ್ದ ಪಾಲುದಾರರ ಸಭೆಯ ನಂತರ ಅವರು ಸುದ್ದಿಗಾರರ ಜೊತೆ ಮಾತನಾಡಿದರು.

ಕರ್ನಾಟಕದಲ್ಲಿ ಒಟ್ಟು ₹62,963 ಕೋಟಿ ಮೊತ್ತದ ಯೋಜನೆಗಳಿಗೆ ಐಐಎಫ್‌ಸಿಎಲ್ ನೆರವು ನೀಡಿದೆ ಎಂದು ಅವರು ತಿಳಿಸಿದರು.

ಕಂಪನಿಯ ಷೇರುಗಳನ್ನು ಆರಂಭಿಕ ಸಾರ್ವಜನಿಕ ಕೊಡುಗೆಯ (ಐಪಿಒ) ಮೂಲಕ ಷೇರುಪೇಟೆಯಲ್ಲಿ ನೋಂದಾಯಿಸುವ ಆಲೋಚನೆ ಕುರಿತ ಪ್ರಶ್ನೆಗೆ ಅವರು, 'ವಾತಾವರಣ ಪೂರಕವಾಗಿದ್ದಾಗ ಐಪಿಒ ನಡೆಯುಬಹುದು' ಎಂದರು.

ಐಐಎಫ್‌ಸಿಎಲ್ ಕಂಪನಿಯು 2022–23ನೆಯ ಹಣಕಾಸು ವರ್ಷದಲ್ಲಿ ₹1,076 ಕೋಟಿ ತೆರಿಗೆ ನಂತರದ ಲಾಭ ಕಂಡಿದೆ. ಕಂಪನಿಯ ಎನ್‌ಪಿಎ ಪ್ರಮಾಣವು ಶೇ 1.41ಕ್ಕೆ ಇಳಿಕೆಯಾಗಿದೆ.

ಭಾವಪೂರ್ಣ ಶ್ರದ್ಧಾಂಜಲಿ

ಜನನ: 05.04.1973 ನಿಧನ: 18.07.2023

ಶ್ರೀ ಎಂ.ಬಿ. ಲೋಕೇಶ್

ಎಂ.ಆರ್.ಸೀತಾರಾಮ್, ಮಾಜಿ ಸಚಿವರವರ ವಿಶೇಷಾಧಿಕಾರಿ
ಕರ್ನಾಟಕ ಸರ್ಕಾರ

ನಿಮ್ಮ ಕರ್ತವ್ಯ, ನಿಷ್ಠೆ, ವ್ಯಕ್ತಿತ್ವ ಸದಾ ಜೀವಂತ
ದೈಹಿಕವಾಗಿ ನೀವು ದೂರವಾದರೂ ಬಿಡಿಸಲಾಗದ ಗಟ್ಟಿ ಅನುಬಂಧ ನಮ್ಮದು
ಈಗ ಹೋಗಿ ಬನ್ನಿ ನಿಮಗೆ ಕಣ್ಣಾಲಿಗಳು ತುಂಬಿದ ಭಾವಪೂರ್ಣ ಶ್ರದ್ಧಾಂಜಲಿ

M. S. RAMAIAH
DEVELOPERS & BUILDERS

#2/4, M S Ramaiah Industrial Estate, MSRIT Campus,
MSRIT Post, Mathikere, Bengaluru - 560 054

OM SHANTHI OM

ಐದನೇ ದಿನವೂ ಗೂಳಿ ಓಟ

ಮುಂಬೈ (ಪಿಟಿಐ): ಜಾಗತಿಕ ಷೇರುಪೇಟೆಗಳಲ್ಲಿ ಕಂಡುಬಂದ ಆಶಾವಾದ ಮತ್ತು ವಿದೇಶಿ ಬಂಡವಾಳದ ಒಳಹರಿವಿನಿಂದಾಗಿ ದೇಶದ ಷೇರುಪೇಟೆಗಳಲ್ಲಿ ಬುಧವಾರ ಸಕಾರಾತ್ಮಕ ವಹಿವಾಟು ಮುಂದುವರಿಯಿತು.

ರಿಲಯನ್ಸ್ ಇಂಡಸ್ಟ್ರೀಸ್ ಮತ್ತು ಐಟಿಸಿ ಷೇರುಗಳನ್ನು ಹೂಡಿಕೆದಾರರು ಹೆಚ್ಚಾಗಿ ಖರೀದಿಸಿದ್ದು ಸಹ ಸೂಚ್ಯಂಕಗಳ ಏರಿಕೆಗೆ ನೆರವು ನೀಡಿತು. ಷೇರುಪೇಟೆಗಳು ಸತತ ಐದನೇ ದಿನವೂ ಗಳಿಕೆ ಕಂಡುಕೊಂಡವು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 302 ಅಂಶ ಹೆಚ್ಚಾಗಿ 67,097 ಅಂಶಗಳ ಹೊಸ ಎತ್ತರಕ್ಕೆ ತಲುಪಿತು.



ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 84 ಅಂಶ ಹೆಚ್ಚಾಗಿ 19,833 ಅಂಶಗಳ ಸಾರ್ವಕಾಲಿಕ ದಾಖಲೆ ಮಟ್ಟ ತಲುಪಿತು.

ಆರಂಭದಲ್ಲಿ ಲಾಭ ಗಳಿಕೆಯ ವಹಿವಾಟು ನಡೆಯಿತಾದರೂ ವಾಹನ ಮತ್ತು ಐ.ಟಿ. ಹೊರತುಪಡಿಸಿ ಉಳಿದೆಲ್ಲ ವಲಯಗಳಲ್ಲಿ ಖರೀದಿ ಹೆಚ್ಚಾಗಿದ್ದರಿಂದ ಚೇತರಿಕೆ ಕಂಡುಬಂದಿತು. ಜಾಗತಿಕ ಹಣದುಬ್ಬರವು ಮಂದಗತಿಗೆ ಬರುವ ನಿರೀಕ್ಷೆಯಿಂದಾಗಿ ಷೇರುಪೇಟೆಗಳು ಗಳಿಕೆ ಕಂಡವು ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಬುಧವಾರ ₹1,165 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಬಿಎಸ್‌ಇ ಮಾರುಕಟ್ಟೆ ಮೌಲ್ಯ ಬುಧವಾರದ ವಹಿವಾಟಿನ ಅಂತ್ಯದ ವೇಳೆಗೆ ₹304.53 ಲಕ್ಷ ಕೋಟಿಗೆ ಏರಿಕೆ ಕಂಡಿದೆ.

ಟೊಮೆಟೊ ರಿಯಾಯಿತಿ ದರ ₹70ಕ್ಕೆ ತಗ್ಗಿಸಿದ ಕೇಂದ್ರ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಟೊಮೆಟೊ ರಿಯಾಯಿತಿ ದರವನ್ನು ಕೆ.ಜಿಗೆ ₹80ಕ್ಕೆ ಬದಲಾಗಿ ₹70ಕ್ಕೆ ತಗ್ಗಿಸಿದೆ. ಗುರುವಾರದಿಂದ ಇದು ಜಾರಿಗೆ ಬರಲಿದೆ.

ದೇಶದಾದ್ಯಂತ ಟೊಮೆಟೊ ದರವು ಭಾರಿ ಏರಿಕೆ ಕಂಡಿದ್ದರಿಂದ ಕಳೆದ ಶುಕ್ರವಾರದಿಂದ ಕೇಂದ್ರ ಸರ್ಕಾರವು ರಿಯಾಯಿತಿ ದರದಲ್ಲಿ ಟೊಮೆಟೊ ಮಾರಾಟ ಆರಂಭಿಸಿದೆ. ನಾಫೆಡ್ ಮತ್ತು ಎನ್‌ಸಿಸಿಎಫ್ ಸಂಸ್ಥೆಗಳು ಸರ್ಕಾರದ ಪರವಾಗಿ ಟೊಮೆಟೊ ಮಾರಾಟ ಮಾಡುತ್ತಿವೆ.

ಟೊಮೆಟೊ ದರವು ಇಳಿಕೆ ಕಾಣುತ್ತಿರುವುದರಿಂದ ಜುಲೈ 20ರಿಂದ ಕೆ.ಜಿಗೆ ₹70ರಂತೆ ಮಾರಾಟ ಮಾಡಲು ನಾಫೆಡ್ ಮತ್ತು ಎನ್‌ಸಿಸಿಎಫ್‌ಗೆ ಗ್ರಾಹಕ ವ್ಯವಹಾರಗಳ ಇಲಾಖೆಯು ಸೂಚನೆ ನೀಡಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಜುಲೈ 16ರಂದು ಟೊಮೆಟೊ ದರವನ್ನು ₹90ರಿಂದ ₹80ಕ್ಕೆ ತಗ್ಗಿಸಲಾಗಿತ್ತು. ಇಲಾಖೆಯ ಸೂಚನೆಯಂತೆ ನಾಫೆಡ್ ಮತ್ತು ಎನ್‌ಸಿಸಿಎಫ್ ಕರ್ನಾಟಕ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರದಿಂದ ಟೊಮೆಟೊ ಖರೀದಿಸುತ್ತಿವೆ.

ದೆಹಲಿ–ಎನ್‌ಸಿಆರ್ ಪ್ರದೇಶದಲ್ಲಿ ಜುಲೈ 14ರಿಂದ ರಿಯಾಯಿತಿ ದರದಲ್ಲಿ ಟೊಮೆಟೊ ಮಾರಾಟ ಆರಂಭವಾಗಿದೆ. ಜುಲೈ 18ರವರೆಗೆ ಒಟ್ಟು 390 ಟನ್ ಟೊಮೆಟೊ ಖರೀದಿಸಲಾಗಿದ್ದು, ಹೆಚ್ಚು ಬಳಕೆ ಮಾಡುವ ದೆಹಲಿ–ಎನ್‌ಸಿಆರ್, ರಾಜಸ್ಥಾನ, ಉತ್ತರ ಪ್ರದೇಶ ಮತ್ತು ಬಿಹಾರದಲ್ಲಿ ಮಾರಾಟ ಮಾಡಲಾಗುತ್ತಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ
ಕೂಳೆ 300-350
ನಡುಗೋಲು 450-500
ರಾಶಿ 500-550
ರಾಶಿ ಉತ್ತಮ 750-800
ಜರಡಿ 1000 - 1050
ಹೆರಕಿದ್ದು 1200-1300
ಹಸಿರು ಸಾಧಾರಣ 800-900
ಹಸಿರು ಉತ್ತಮ 1000-1100
ಹಸಿರು ಅತಿ ಉತ್ತಮ 1600-1650
ಕಾಳುಮೆಣಸು - 500
ಅಡಿಕೆ
ಬಂಟ್ವಾಳ
ಕೋಕ 12500-25000
ಹೊಸತು 27500-42500
ಹಳತು 46000-49000
ಕುಮಟಾ
ಚಿಪ್ಪು 29999-33509
ಕೋಕ 22019-33501
ಫ್ಯಾಕ್ಟರಿ 14509-23069

ಹಳೆಚಾಲಿ 38699-41169
ಹೊಸಚಾಲಿ 38089-40509
ಶಿವಮೊಗ್ಗ
ಬೆಟ್ಟೆ 47319-54358
ಗೊರಬಲು 20100-43650
ರಾಶಿ 40099-55099
ಸರಕು 54100-80810
ಸಿದ್ದಾಪುರ
ಬಿಳಿಗೋಟು 30209-34699
ಚಾಲಿ 37609-40299
ಕೋಕ 28499-34819

ಕೆಂಪುಗೋಟು 31699-34619
ರಾಶಿ 49069-52109
ತಟ್ಟಿಬೆಟ್ಟೆ 38509-39669
ಶಿರಸಿ
ಬೆಟ್ಟೆ 41589-45989
ಬಿಳಿಗೋಟು 27000-35250
ಚಾಲಿ 36899-40709
ಕೆಂಪುಗೋಟು 26099-36899
ರಾಶಿ 45469-51609

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	14000	13875	156.30ಸೆಂಟ್ಸ್
ಎಸಿ	---	6900	7000	
ಆರ್‌ಪಿ	---	10100	10200	ಲಂಡನ್
ಆರ್‌ಸಿ	---	234	5950	2532 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ
19-7-2023
ಜಾವಾ 70/80(ಹೊಸ) 12600-12700
ಜಾವಾ 80/90(ಹೊಸ) 12100-12200
ದಪ್ಪ ಮಧ್ಯಪ್ರದೇಶ(ಹೊಸ) 12100-12200
ದಪ್ಪ ಗುಜರಾತ್(ಹೊಸ) 12900-13000

ಶೇಂಗಾ ಎಣ್ಣೆ (10 ಕೆಜಿಗೆ)
ಕಚ್ಚಾ (ತೆರಿಗೆ ಬಿಟ್ಟು) 1800 (1780)
ಒಂದು ವಾರದ ಡೆಲಿವರಿ 1795 (1775)
ಸೋಯಾ ಕಚ್ಚಾ 880 (880)
ಪಾಮ್ ವಾರದ ಡೆಲಿವರಿ 858 (858)
ಸೂರ್ಯಕಾಂತಿ ಎಣ್ಣೆ ಕಚ್ಚಾ 850 (850)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)
ಅಪರಂಜಿ ಚಿನ್ನ 10ಗ್ರಾಂ
59,600 (59,300)
ಬೆಳ್ಳಿ ಕೆ.ಜಿ
75,500 (75,100)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಖಾದ್ಯ ತೈಲ ಮುಂಬೈ (10 ಕೆಜಿಗೆ)
ಶೇಂಗಾ (ರಿಫೈನ್ಡ್) 1790 (1770)
ಸೋಯಾ (ರಿಫೈನ್ಡ್) ₹937 (935)
ಸೂರ್ಯಕಾಂತಿ (ರಿಫೈನ್ಡ್) ₹930 (830)
ಪಾಮೋಲಿನ್ ₹860 (860)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)
ದಪ್ಪ ₹1600-1800
ಮಧ್ಯಮ ₹1400-1600
ಸಣ್ಣ ₹800-1200

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)
ತಿಪಟೂರು ₹8100-9100
ತುಮಕೂರು ₹7500-8650
ತುರುವೇಕೆರೆ ₹8800-8800

ವಿವಾಹೇತರ ಸಂಬಂಧ: ಭಾರತೀಯ ಮೂಲದ ಸಂಸದ ರಾಜೀನಾಮೆ

ಸಿಂಗಪುರ (ಪಿಟಿಐ): ಸಿಂಗಪುರದ ಅತಿದೊಡ್ಡ ವಿರೋಧ ಪಕ್ಷವಾದ 'ವರ್ಕರ್ಸ್ ಪಾರ್ಟಿ'ಯ (ಡಬ್ಲ್ಯುಪಿ) ಸಂಸದ, ಭಾರತೀಯ ಮೂಲದ ಲಿಯಾನ್ ಪೆರೇರಾ ಅವರು ಸಂಸದೆಯೊಬ್ಬರ ಜತೆ ವಿವಾಹೇತರ ಸಂಬಂಧ ಹೊಂದಿದ್ದ ಕಾರಣಕ್ಕೆ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ ಎಂದು ಪಕ್ಷ ಬುಧವಾರ ಪ್ರಕಟಿಸಿದೆ.

ಪರೇರಾ (53) ಅವರು ತಮ್ಮದೇ ಪಕ್ಷದ ಸಂಸದೆ ನಿಕೋಲ್ ಸಿಹಾ (36) ಅವರೊಂದಿಗೆ ವಿವಾಹೇತರ ಸಂಬಂಧ ಹೊಂದಿದ್ದರು. ಈ ಇಬ್ಬರೂ ಸಂಸದ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರೀತಮ್ ಸಿಂಗ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಂಸತ್ತಿನ ಸ್ಪೀಕರ್ ತಾನ್ ಚುವಾನ್ ಜಿನ್ ಮತ್ತು ಪೀಪಲ್ಸ್ ಆ್ಯಕ್ಷನ್ ಪಾರ್ಟಿಯ (ಪಿಎಪಿ) ಸಂಸದೆ ಚೆಂಗ್ ಲಿ ಹುಯಿಅವರೊಂದಿಗೆಸಂಬಂಧಹೊಂದಿದ್ದಕ್ಕಾಗಿ ಸೋಮವಾರ ರಾಜೀನಾಮೆ ನೀಡಿದ್ದರು. ತಾಜ್ ಮತ್ತು ಚೆಂಗ್ ಇಬ್ಬರೂ ಸಂಸದ ಸ್ಥಾನದ ಜತೆಗೆ ಪಕ್ಷಕ್ಕೂ ರಾಜೀನಾಮೆ ಸಲ್ಲಿಸಿದ್ದರು. ಇದರ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ.

ಇಬ್ಬರೂ ಬೇರೆಯವರೊಂದಿಗೆ ವಿವಾಹಿತರಾಗಿದ್ದು, ಮಕ್ಕಳನ್ನು ಹೊಂದಿದ್ದಾರೆ. 'ಪರೇರಾ ಮತ್ತು ಸಿಹಾ ಅವರು 2020ರ ಸಾರ್ವತ್ರಿಕ ಚುನಾವಣೆಯ ಬಳಿಕ ತಮ್ಮನಡುವೆ ಸಂಬಂಧ ಬೆಳೆದಿತ್ತು ಎಂಬುದನ್ನು ಒಪ್ಪಿಕೊಂಡಿದ್ದಾರೆ. ಆದರೆ ಕೆಲ ಕಾಲದ ಬಳಿಕ ಆ ಸಂಬಂಧ ನಿಂತು ಹೋಯಿತು' ಎಂದೂ ತಿಳಿಸಿರುವುದಾಗಿ ಸಿಂಗ್ ವಿವರಿಸಿದರು. 2021ರಲ್ಲಿ ಈ ರೀತಿಯ ಆರೋಪಗಳು ಕೇಳಿಬಂದಾಗ, ಅದರಲ್ಲಿ ಹುರುಳಿಲ್ಲ ಎಂದು ಈ ಇಬ್ಬರು ಆರೋಪಗಳನ್ನು ನಿರಾಕರಿಸಿದ್ದರು ಎಂದು ಅವರು ಸ್ಮರಿಸಿದರು. ಈ ಇಬ್ಬರ ವಿಡಿಯೊ ಕ್ಲಿಪ್ ಇತ್ತೀಚೆಗೆ ಫೇಸ್‌ಬುಕ್‌ನಲ್ಲಿ ಹಂಚಿಕೆಯಾಗಿದ್ದು, ಅದಾದ ಎರಡೇ ದಿನಗಳಲ್ಲಿಯೇ ಈ ಬೆಳವಣಿಗೆ ನಡೆದಿದೆ.

2020ರ ಚುನಾವಣೆ ಸಂದರ್ಭದಲ್ಲಿ ಊಟ ಮಾಡುವಾಗ ಅಭ್ಯರ್ಥಿಯಾದ ಸಿಹಾ ಅವರ ಕೈಯನ್ನು ಪರೇರಾ ಸವರುತ್ತಿರುವ 15 ಸೆಕೆಂಡ್‌ಗಳ ವಿಡಿಯೊ ಫೇಸ್‌ಬುಕ್‌ನಲ್ಲಿ ಹಂಚಿಕೆಯಾಗಿದೆ. ಆದರೆ ಈ ವಿಡಿಯೊ ಎಲ್ಲಿ ಮತ್ತು ಯಾವಾಗ ಚಿತ್ರಿಸಲಾಗಿದೆ ಎಂಬುದು ಗೊತ್ತಾಗಿಲ್ಲ.

ಪಾಸ್‌ಪೋರ್ಟ್: 70 ವರ್ಷದ ಬಳಿಕ ಬಂದ ಬ್ರಿಟನ್ 'ರಾಜ'

ಲಂಡನ್ (ಪಿಟಿಐ): 'ಈ ಪಾಸ್‌ಪೋರ್ಟ್ ಹೊಂದಿದ ವ್ಯಕ್ತಿಗೆ ಯಾವುದೇ ಅಡಚಣೆಯಿಲ್ಲದೆ ಮುಕ್ತವಾಗಿ ಓಡಾಡಲು ಅವಕಾಶ ನೀಡುವಂತೆ, ಅಗತ್ಯ ಸಹಾಯ ಹಾಗೂ ರಕ್ಷಣೆ ನೀಡುವಂತೆ ಬ್ರಿಟಿಷ್ ಸಾಮ್ರಾಜ್ಯದ ರಾಜನ ಪರವಾಗಿ (ಹಿಸ್ ಮೆಜೆಸ್ಟಿ) ಸಾಮ್ರಾಜ್ಯ ಹಾಗೂ ಸರ್ಕಾರದ ಕಾರ್ಯದರ್ಶಿಯವರು ವಿನಂತಿಸುತ್ತಾರೆ'

–70 ವರ್ಷಗಳ ತರುವಾಯ ಬ್ರಿಟಿಷ್ ಪಾಸ್‌ಪೋರ್ಟ್‌ನಲ್ಲಿ ಇಂತಹ ಒಕ್ಕಣಿಕೆ ಮತ್ತೆ ಕಾಣಿಸಿಕೊಂಡಿದೆ.

ಬ್ರಿಟನ್ ಗೃಹ ಕಾರ್ಯದರ್ಶಿ ಸುಯೆಲ್ಲಾ ಬ್ರವರ್ಮನ್ ಮಂಗಳವಾರ ನೂತನ ವಿನ್ಯಾಸದ ಪಾಸ್‌ಪೋರ್ಟ್ ಬಿಡುಗಡೆ ಮಾಡಿದರು. ರಾಣಿ ಎರಡನೇ ಎಲಿಜಬೆತ್ 7 ದಶಕಗಳವರೆಗೆ ಬ್ರಿಟನ್ ಸಾಮ್ರಾಜ್ಞಿ ಆಗಿದ್ದರು. ಹೀಗಾಗಿ 'ರಾಣಿಯ ಪರವಾಗಿ (Her Majesty)' ಎಂದೇ ಪಾಸ್‌ಪೋರ್ಟ್ ಒಕ್ಕಣಿಕೆ ಇರುತ್ತಿತ್ತು. ರಾಣಿ ನಿಧನದ ನಂತರ, ಪುತ್ರ ಮೂರನೇ ಚಾರ್ಲ್ಸ್ ರಾಜನಾಗಿದ್ದು, ಸಂಪ್ರದಾಯದಂತೆ ಪಾಸ್‌ಪೋರ್ಟ್‌ನಲ್ಲಿ ಈ ಬದಲಾವಣೆ ಮಾಡಲಾಗಿದೆ.

ಆಹಾರ ಧಾನ್ಯ ಪೂರೈಕೆ: ಭಾರತ ಬೆಂಬಲ

ವಿಶ್ವಸಂಸ್ಥೆ (ಪಿಟಿಐ): ಉಕ್ರೇನ್‌ನಿಂದ ಕಪ್ಪು ಸಮುದ್ರದ ಮೂಲಕ ಹಡಗುಗಳಲ್ಲಿ ವಿಶ್ವದ ಹಲವು ರಾಷ್ಟ್ರಗಳಿಗೆ ಆಹಾರ ಧಾನ್ಯ, ರಸಗೊಬ್ಬರ ಪೂರೈಕೆಯಾಗುವುದನ್ನು ಮುಂದುವರಿಸುವ ವಿಶ್ವ ಸಂಸ್ಥೆಯ ಪ್ರಯತ್ನಕ್ಕೆ ಭಾರತ ಬೆಂಬಲ ಸೂಚಿಸಿದೆ.

ಕಪ್ಪು ಸಮುದ್ರದ ಮೂಲಕ ಆಹಾರ ಧಾನ್ಯ ಸಾಗಣೆಗೆ ಅನುಮತಿಸಿದ್ದ, ಯುದ್ಧ ಕಾಲದ ಒಪ್ಪಂದವನ್ನು ಸ್ಥಗಿತಗೊಳಿಸಿರುವುದಾಗಿ ರಷ್ಯಾ ಸೋಮವಾರ ಹೇಳಿತ್ತು. ಜತೆಗೆ, ಕಪ್ಪು ಸಮುದ್ರದ ವಾಯುವ್ಯ ಭಾಗದಲ್ಲಿ ಹಡಗುಗಳ ಸಂಚಾರಕ್ಕೆ ನೀಡಿದ್ದ ಭದ್ರತಾ ಖಾತ್ರಿಯನ್ನೂ ರಷ್ಯಾ ಹಿಂಪಡೆದಿತ್ತು.

'ಶಾಂತಿ ಮತ್ತು ಸ್ಥಿರತೆಗೆ ಭಂಗ ತರುವ ಯುಕ್ರೇನ್‌ನಲ್ಲಿನ ಸದ್ಯದ ಬೆಳವಣಿಗೆಗಳ ಬಗ್ಗೆ ಭಾರತಕ್ಕೆ ಆತಂಕವಿದೆ. ಉಕ್ರೇನ್ ಯುದ್ಧಕ್ಕೆ ಸಂಬಂಧಿಸಿದ ಭಾರತದ ನಿಲುವು ಎಂದಿಗೂ ನಾಗರಿಕ ಕೇಂದ್ರಿತವಾಗಿರಲಿದೆ' ಎಂದು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಪಾಲ್ಗೊಂಡಿದ್ದ ಭಾರತದ ಶಾಶ್ವತ ಪ್ರತಿನಿಧಿ ರುಚಿರಾ ಕಾಂಬೋಜ್ ಹೇಳಿದರು.

'ಬೀಚ್ ಬಳಿ ರಾಕೆಟ್‌ನ ಭಾಗ ಪತ್ತೆ'

ಮೆಲ್ಬೋರ್ನ್ (ಪಿಟಿಐ): ಆಸ್ಟ್ರೇಲಿಯಾದ ಕಡಲತೀರಕ್ಕೆ ಗುಮ್ಮಟ ಆಕಾರದ ನಿಗೂಢ ವಸ್ತು ಕೊಚ್ಚಿಕೊಂಡು ಬಂದಿದೆ. ಇದು ರಾಕೆಟ್‌ನ ಒಂದು ಭಾಗವಾಗಿರಬಹುದು ಎಂದು ಆಸ್ಟ್ರೇಲಿಯಾ ಬಾಹ್ಯಾಕಾಶ ಸಂಸ್ಥೆ (ಎಎಸ್‌ಎ) ಬುಧವಾರ ಹೇಳಿದೆ.

ಪಶ್ಚಿಮ ಆಸ್ಟ್ರೇಲಿಯಾದ ಪೊಲೀಸರು ಬಾಹ್ಯಾಕಾಶ ಅವಶೇಷಗಳನ್ನು ಸುರಕ್ಷಿತ ಸ್ಥಳಕ್ಕೆ ಸಾಗಿಸಿದ್ದಾರೆ.

ಪರ್ತ್ ನಗರದ ಉತ್ತರಕ್ಕೆ ಸುಮಾರು 250 ಕಿಲೋಮೀಟರ್ ದೂರದಲ್ಲಿರುವ ಪಶ್ಚಿಮ ಆಸ್ಟ್ರೇಲಿಯಾದ ಗ್ರೀನ್ ಹೆಡ್ ಬೀಚ್ ಬಳಿ ಕಳೆದ ಶನಿವಾರ ನಿಗೂಢ ವಸ್ತು ಪತ್ತೆಯಾಗಿದ್ದು, ಇದು ಉಪಗ್ರಹ ಉಡಾವಣೆಗೆ ಬಳಸಲಾದ ಭಾರತೀಯ ರಾಕೆಟ್‌ನ ಭಾಗವಾಗಿರುವ ಸಾಧ್ಯತೆ ಎಂದು ಎಎಸ್‌ಎ ಸಂಶಯಪಟ್ಟಿದೆ.

ನಿಗೂಢ ವಸ್ತು ಸಿಕ್ಕಿರುವುದನ್ನು ಆಸ್ಟ್ರೇಲಿಯಾದ ಬಾಹ್ಯಾಕಾಶ ಸಂಸ್ಥೆ (ಎಎಸ್‌ಎ) ದೃಢಪಡಿಸಿವೆ ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಮೂಲಗಳು ಸುದ್ದಿಸಂಸ್ಥೆಗೆ ತಿಳಿಸಿವೆ.

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್, ಚಿತ್ರದುರ್ಗ.
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಚಿತ್ರದುರ್ಗ.
ದೂ: ಸಂ: 08194-235018 ಇ-ಮೇಲ್: dhochitradurga@gmail.com
ಸಂ:ಜಿಆಕುಕಅ/ಚಿ/ಪಥ್ಯಾಹಾರ/ಟೆಂಡರ್/01/2023-24/Call-2 ದಿ:15.07.2023
ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ
2023–24ನೇ ಸಾಲಿಗೆ ಜಿಲ್ಲೆಯ ಅಧಿನ ಎರಡು ಸಾರ್ವಜನಿಕ ಆಸ್ಪತ್ರೆ ಹಾಗೂ ಹನ್ನೊಂದು ಸಮುದಾಯ ಆರೋಗ್ಯ ಕೇಂದ್ರಗಳಿಗೆ ಪಥ್ಯಾಹಾರ, ಹಾಲು, ಬ್ರೆಡ್ ಸರಬರಾಜಿಗಾಗಿ ಅಲ್ಪಾವಧಿ ಇ-ಟೆಂಡರ್‌ನ್ನು (ಎರಡನೇ ಬಾರಿಗೆ) ಕರೆಯಲಾಗಿರುತ್ತದೆ. ಅರ್ಹ ನೊಂದಾಯಿತ ಸಂಸ್ಥೆಗಳು Karnataka Public Procurement Portal ನಲ್ಲಿ ಟೆಂಡರ್‌ಗಳನ್ನು ದಿನಾಂಕ:-17-07-2023 ರಿಂದ ದಿನಾಂಕ:-26-07-2023 ರ ಸಮಯ ಸಂಜೆ 5=00 ಗಂಟೆಯವರೆಗೆ ಅಪ್‌ಲೋಡ್ ಮಾಡಬಹುದು. ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ:-28-07-2023 ರ ಬೆಳಿಗ್ಗೆ 11-00 ಗಂಟೆಗೆ ಟೆಂಡರ್‌ನ ಪ್ರತಿಯೊಂದು ಷರತ್ತು ಮತ್ತು ನಿಬಂಧನೆಗಳನ್ನು (https://kppp.karnataka.gov.in) ಅಂತರ್‌ಜಾಲದಲ್ಲಿ ಪಡೆದು ಕೊಳ್ಳಬಹುದು. (ಅಂದಾಜು ಟೆಂಡರ್ ಮೊತ್ತ ರೂ. 156.00 ಲಕ್ಷಗಳು) ಹೆಚ್ಚಿನ ವಿವರಗಳಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿಯಲ್ಲಿ ಕಚೇರಿ ವೇಳೆಯಲ್ಲಿ ಸಂಪರ್ಕಿಸುವುದು,
DIPR/CTA/KSMCA/101/2023-24
ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಚಿತ್ರದುರ್ಗ.

ನಗರಸಭೆ ಕಾರ್ಯಾಲಯ, ಹಾವೇರಿ–581 110
ವೆಬ್ ಸೈಟ್ : www.havericity.mrc.gov.in ದೂರವಾಣಿ ಕಛೇರಿ: 08375–232444
ಇ- ಮೇಲ್: itstaff_ulb_haveri@yahoo.com ಜನಹಿತ ಸಹಾಯವಾಣಿ: 080 375–23108108
ಜಿಲ್ಲೆ: ಹಾವೇರಿ ರಾಜ್ಯ ಕರ್ನಾಟಕ
ಕ್ರಸಂ/ನಸಹಾ/ತಾವಿ/ಟೆ.ಪ್ರ/ವಹಿ :2023–24 ದಿನಾಂಕ:18–07–2023
ಟೆಂಡರ್ ಪ್ರಕಟಣೆ
ಈ ಮೂಲಕ ಯಾವತ್ತೂ ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ, ಇ–ಪ್ರಕ್ಯೂರಮೆಂಟ್ ಮೂಲಕ ರೂ. 201.77 ಲಕ್ಷಗಳ 16 ಕಾಮಗಾರಿಗಳ ಟೆಂಡರ್ ಕರೆಯಲಾಗಿದ್ದು, ಆಸಕ್ತವುಳ್ಳ ಗುತ್ತಿಗೆದಾರರು ತಮ್ಮ–ತಮ್ಮ ದರಗಳನ್ನು ಈ ಕೆಳಕಾಣಿಸಿದ ವೆಬ್‌ಸೈಟ್ ಮೂಲಕ ನಮೂದಿಸಬಹುದಾಗಿದೆ. kppp.karnataka.gov.in ನಲ್ಲಿ ನೋಡಿ ತಿಳಿದುಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಈ ಕಾರ್ಯಾಲಯದ ಕಛೇರಿಯಲ್ಲಿ ಕೇಳಿ ತಿಳಿದುಕೊಳ್ಳಬಹುದಾಗಿದೆ.
ಸಹಿ/– ಪೌರಾಯುಕ್ತರು, ನಗರಸಭೆ, ಹಾವೇರಿ
ವಾ.ಸಾ.ಇ/ಹಾವೇರಿ/85/2023–24/ದೇಶಪಾಂಡೆಪಬ್ಲಿಸಿಟಿ

ಕ–ರೈಡ್
ರೈಲು ಮೂಲಸೌಲಭ್ಯ ಅಭಿವೃದ್ಧಿ ಕಂಪನಿ (ಕರ್ನಾಟಕ) ನಿಯಮಿತ
(ಕರ್ನಾಟಕ ಮತ್ತು ರೈಲ್ವೆ ಸಚಿವಾಲಯದ ಜಂಟಿ ಉದ್ಯಮ)
ಬೆಂಗಳೂರು ಉಪನಗರ ರೈಲ್ವೆ ಯೋಜನೆ
ಕ–ರೈಡ್ K RIDE
CIN: U60100KA2000SGC028171
ನೋಂದಾಯಿತ ಕಚೇರಿ: 1ನೇ ಮಹಡಿ, ಸಂಪರ್ಕ ಸೌಧ, ಓರಿಯನ್ ಮಾಲ್ ಎದುರು, ರಾಜಾಜಿನಗರ, ಬೆಂಗಳೂರು–10
ಇ–ಟೆಂಡರ್ ಸೂಚನ ಸಂ. KRIDE/2023-24/OW/WORK_INDENT5 ದಿನಾಂಕ 18.07.2023
ಬೆಂಗಳೂರು ಉಪನಗರ ರೈಲ್ವೆ ಯೋಜನೆ
ಇ–ಟೆಂಡರ್ ಅಧಿಸೂಚನೆ
ಈ ಕೆಳಗಿನ ಕಾಮಗಾರಿಗೆ ಅನುಭವಿ ಏಜೆನ್ಸಿಗಳಿಂದ ಇ–ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಬಿಎಸ್‌ಆರ್‌ಪಿ ಕಾರಿಡಾರ್–1 ರಲ್ಲಿರುವ ಮರಗಳ ಎಣಿಕೆ, ಗುರುತು ಹಾಕುವಿಕೆ ಮತ್ತು ವರದಿಗಳ ತಯಾರಿಕೆ.
ಬಿಡ್ ಸಲ್ಲಿಸಲು ಕೊನೆಯ ದಿನಾಂಕ 23.08.2023
ವಿವರಗಳಿಗಾಗಿ ಭೇಟಿ ನೀಡಿ: https://kppp.karnataka.gov.in ಅಥವಾ www.kride.in
ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು, ಸಿವಿಲ್
DIPR/CP/VCPL/595/2022-23

ಕರ್ನಾಟಕ ಸರ್ಕಾರ
ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಎಂಡೊಕ್ರೈನಾಲಜಿ & ರೀಸರ್ಚ್, ಬೆಂಗಳೂರು.
(ಕರ್ನಾಟಕ ಸರ್ಕಾರದ ನೋಂದಾಯಿತ ಸ್ವಾಯತ್ತ ಸಂಸ್ಥೆ)
ಹಳೇ ಮದ್ರಾಸ್ ರಸ್ತೆ ಇಂದಿರಾನಗರ, ಬೆಂಗಳೂರು – 560 038.
ದೂರವಾಣಿ: +91 8025283013, +91–80–24492900 । ವೆಬ್‌ಸೈಟ್: www.kierbengaluru.karnataka.gov.in
ಟೆಂಡರ್ ಅಧಿಸೂಚನೆ
ಕೆಐಇಆರ್ ಸಂಸ್ಥೆಯು ಕೆಳಕಂಡ ಸಾಮಗ್ರಿಗಳ ಸರಬರಾಜಿಗೆ ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಮೂಲಕ ದ್ವಿ–ಲಕೋಟೆ ಪದ್ಧತಿ ಅಡಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿರುತ್ತದೆ.
1. KIER/TS/DSS/02/2023-24 Date: 19.07.2023 For Supply of Drugs & Solutions and Suture Materials
2. KIER/TS/HKM/03/2023-24 Date: 19.07.2023 For Supply of House Keeping Materials
3. KIER/TS/STRYCTR/04/2023-24 Date:19.07.2023 For Supply of Stationery, Patient Folders and Cartridges
4. KIER/TS/HNS/05/2023-24 Date: 19.07.2023 For Supply of Hospital Necessaries
5. KIER/TS/LD/06/2023-24 Date: 19.07.2023 For Supply of Laboratory Disposables
ಇಎಂಡಿ ಹಾಗೂ ಭದ್ರತಾ ಠೇವಣಿ: ಟೆಂಡರ್ ದಾಖಲೆಗಳಲ್ಲಿ ವಿವರಿಸಿರುವಂತೆ
ಇ–ಟೆಂಡರ್ ಫಾರಂಗಳನ್ನು https://kppp.karnataka.gov.in ನಿಂದ ಡೌನ್‌ಲೋಡ್ ಮಾಡುವ **ದಿನಾಂಕ: 20.07.2023 ರಿಂದ.** ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ **ದಿನಾಂಕ: 09.08.2023 ಸಂಜೆ 4:00 ಗಂಟೆವರೆಗೆ**
ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 11.08.2023 ಬೆಳಗ್ಗೆ 11:00 ಗಂಟೆಗೆ**
ಹೆಚ್ಚಿನ ವಿವರಗಳಿಗೆ ಮೇಲ್ಕಂಡ ಕಛೇರಿಯನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸುವುದು. ಟೆಂಡರ್ ಅಂಗೀಕರಿಸುವ ಪ್ರಾಧಿಕಾರವು ಭಾಗಶ: ಅಥವಾ ಸಂಪೂರ್ಣವಾಗಿ ಟೆಂಡರ್‌ಗಳನ್ನು ಸ್ವೀಕರಿಸುವ/ತಿರಸ್ಕರಿಸುವ/ರದ್ದುಗೊಳಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿದೆ.
ಸಹಿ/– ಆಡಳಿತಾಧಿಕಾರಿಗಳು, ಕೆಐಇಆರ್, ಬೆಂಗಳೂರು
ವಾಸಾಸಂಇ/ವಾಪ್ರ/ಜಿಎ/598/2023–24

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಟೆಂಡರ್‌ಗಳಿಗಾಗಿ ಆಹ್ವಾನ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ಬೆಂಗಳೂರು ಜಲಮಂಡಳಿಯು ಈ ಕೆಳಕಂಡ ಕಾಮಗಾರಿಗಳಿಗಾಗಿ ಅರ್ಹ ಗುತ್ತಿಗೆದಾರರಿಂದ ಎರಡು ಹಂತದ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕಾಮಗಾರಿಯ ಹೆಸರು	ಟೆಂಡರ್ ಮೊತ್ತ / ಇ.ಎಂ.ಡಿ
ಮುಖ್ಯ ಅಭಿಯಂತರರ ಕಛೇರಿ (ತ್ಯಾನೀನಿ–ಪಶ್ಚಿಮ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560009.	
ಸಂ.ಬೆಂಜಮಂ/ಮುಅ(ತ್ಯಾನೀನಿ–ಪ)/ಅಮುಅ(ತ್ಯಾನೀನಿ–ಎನ್–ಪ)/ಉಮುಅ(ತ್ಯಾನೀನಿ–ಪೂ&ಪ)/ತಾಂಸ–2/236/2023–24	ದಿನಾಂಕ: 19.07.2023
ಬೆಂಗಳೂರಿನ ಮುತ್ತುರಾಯನ ನಗರದಿಂದ ದುಬಾಸಿಪಾಳ್ಯ ಕೆರೆಯ ಮುನೇಶ್ವರ ದೇವಸ್ಥಾನದ ಹತ್ತಿರದಲ್ಲಿರುವ ಮಳೆನೀರು ಕಾಲುವೆ ಒಳಭಾಗದಲ್ಲಿ ಹಾಲಿ ಇರುವ ಒಳಚರಂಡಿ ಮಾರ್ಗದವರೆಗೆ 500 ಮಿ.ಮೀ ಆರ್‌ಸಿಸಿ ಎನ್‌ಪಿ–3 ದರ್ಜೆಯ ಒಳಚರಂಡಿ ಕೊಳವೆ ಮಾರ್ಗವನ್ನು ಒದಗಿಸಿ ಅಳವಡಿಸುವ ಕಾಮಗಾರಿ.	ರೂ.181.55 ಲಕ್ಷಗಳು / ರೂ.3.21 ಲಕ್ಷಗಳು
ಟೆಂಡರ್ ದಾಖಲೆಗಳನ್ನು ಸ್ವೀಕರಿಸಲು ಕೊನೆಯ **ದಿನಾಂಕ ಮತ್ತು ಸಮಯ:03.08.2023** ರಂದು ಸಂಜೆ 05.30 **ಗಂಟೆಯವರೆಗೆ,** ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ **ದಿನಾಂಕ: 05.08.2023 ರ ಸಂಜೆ 05.30 ಗಂಟೆಗೆ**	
ಸಂ.ಬೆಂಜಮಂ/ಮುಅ(ತ್ಯಾನೀನಿ–ಪ)/ಅಮುಅ(ತ್ಯಾನೀನಿ–ಎನ್–ಪ)/ಉಮುಅ(ತ್ಯಾನೀನಿ–ಪೂ&ಪ)/ತಾಂಸ–2/234/2023–24	ದಿನಾಂಕ: 19.07.2023
ಎನ್‌ಜಿಇಎಫ್ ಲೇಔಟ್ ಪಾರ್ಕ್, ಲೋಕಪತ್ ರಸ್ತೆ ಹತ್ತಿರದಲ್ಲಿ ಹಾಲಿ ಇರುವ 1000/1200 ಮಿ.ಮೀ ವ್ಯಾಸದ ಒಳಚರಂಡಿ ಕೊಳವೆ ಮಾರ್ಗಕ್ಕೆ ಸಂಪರ್ಕಿಸಲು 2ನೇ ಮುಖ್ಯರಸ್ತೆ, ಬಿಡಿಎ ಪಾರ್ಕ್ ಸಮೀಪ, ನಾಗರಭಾವಿ 2ನೇ ಹಂತದಿಂದ ಹೊರವರ್ತುಲ ರಸ್ತೆಯ ಸರ್ವಿಸ್ ರಸ್ತೆಯುದ್ದಕ್ಕೂ 450/600/900 ಮಿ.ಮೀ ವ್ಯಾಸದ ಆರ್‌ಸಿಸಿ ಎನ್‌ಪಿ3 ದರ್ಜೆಯ ಕೊಳವೆ ಮಾರ್ಗವನ್ನು ಒದಗಿಸಿ ಅಳವಡಿಸುವ ಕಾಮಗಾರಿ.	ರೂ.336.55 ಲಕ್ಷಗಳು / ರೂ.6.00 ಲಕ್ಷಗಳು
ಟೆಂಡರ್ ದಾಖಲೆಗಳನ್ನು ಸ್ವೀಕರಿಸಲು ಕೊನೆಯ **ದಿನಾಂಕ ಮತ್ತು ಸಮಯ : 18.08.2023** ರಂದು ಸಂಜೆ 05.30 **ಗಂಟೆಯವರೆಗೆ,** ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ **ದಿನಾಂಕ: 21.08.2023 ರ ಸಂಜೆ 05.30 ಗಂಟೆಗೆ** ಸಹಿ/– ಮುಖ್ಯ ಅಭಿಯಂತರರು (ತ್ಯಾನೀನಿ–ಪಶ್ಚಿಮ)	
ಪ್ರಧಾನ ಮುಖ್ಯ ಅಭಿಯಂತರರ ಕಛೇರಿ, 2ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560009.	
ಸಂ.ಬೆಂಜಮಂ/ಪ್ರಮುಅ/ಅಮುಅ(ತ್ಯಾನೀನಿ–ಯೋ–ಪಶ್ಚಿಮ)/ಉಮುಅ(ತ್ಯಾನೀನಿ–ಪೂ&ಪ)/ತಾಂಸ–2/1196/2023–24	ದಿನಾಂಕ: 19.07.2023
ಹೆಬ್ಬಾಳ ವ್ಯಾಲಿ ಎಸ್‌ಟಿಪಿ ಅಡಿಯಲ್ಲಿ ರಾಜಾಕೆನಲ್‌ನ 40 ಎಂಎಲ್‌ಡಿ ಎಸ್‌ಟಿಪಿಯ ಘಟ್ಟ 1ನೇ ಮತ್ತು ಘಟ್ಟ 2 ಹಾಗೂ ಯಲಹಂಕದ 10 ಎಂಎಲ್‌ಡಿ ಟಿಟಿಪಿ ಮತ್ತು ಅರ್ಕಾವತಿ ವ್ಯಾಲಿಯ ಎಸ್‌ಟಿಪಿ ಅಡಿಯಲ್ಲಿನ ಚಿಕ್ಕಬಾಣಾವರದ 5 ಎಂಎಲ್‌ಡಿ ಎಸ್‌ಟಿಪಿ ಮತ್ತು ನಾಗಸಂದ್ರದ 20 ಎಂಎಲ್‌ಡಿ ಎಸ್‌ಟಿಪಿ ಘಟ್ಟ 1 (3 ಐಎಸ್‌ಪಿಎಸ್) ಮತ್ತು ಘಟ್ಟ 2 ರಲ್ಲಿನ ಎಸ್‌ಟಿಪಿಗಳನ್ನು ಬಿಎನ್‌ಆರ್ ರಿಮೂವಲ್ ವ್ಯವಸ್ಥೆಯೊಂದಿಗೆ ಎಸ್‌ಟಿಪಿಗಳ ಉನ್ನತೀಕರಣ ಕಾಮಗಾರಿಗಾಗಿ ಯೋಜನೆ ಉಸ್ತುವಾರಿ ಸಲಹಾ ಸೇವೆಗಳನ್ನು ಒದಗಿಸುವುದು. (3ನೇ ಕರೆ)	ರೂ.213.80 ಲಕ್ಷಗಳು / ರೂ.3,21,000/–
ಟೆಂಡರ್ ದಾಖಲೆಗಳನ್ನು ಸ್ವೀಕರಿಸಲು ಕೊನೆಯ **ದಿನಾಂಕ ಮತ್ತು ಸಮಯ : 26.07.2023** ರಂದು ಸಂಜೆ 05.30 **ಗಂಟೆಯವರೆಗೆ,** ಟೆಂಡರ್‌ಗಳನ್ನು ತೆರೆಯುವ **ದಿನಾಂಕ: 28.07.2023 ರ ಸಂಜೆ 05.30 ಗಂಟೆಗೆ** ಸಹಿ/– ಪ್ರಧಾನ ಮುಖ್ಯ ಅಭಿಯಂತರರು	

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಗಳನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
DIPR/CP/KAVITA/604/2023-24

ಗದ್ದಲದ ನಡುವೆ 5 ಮಸೂದೆಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿರೋಧ ಪಕ್ಷಗಳ ಸದಸ್ಯರ ಧರಣಿ, ಗದ್ದಲದ ಮಧ್ಯದಲ್ಲೇ ಚರ್ಚೆಯೇ ಇಲ್ಲದೆ ಐದು ಮಸೂದೆಗಳಿಗೆ ವಿಧಾನಸಭೆ ಬುಧವಾರ ಅಂಗೀಕಾರ ನೀಡಿತು.

ಸಣ್ಣ ರೈತರು ಮತ್ತು ಆರ್ಥಿಕವಾಗಿ ದುರ್ಬಲರಾಗಿರುವವರು ದಾಖಲಿಸಿರುವ ಅಥವಾ ಪ್ರತಿವಾದಿಗಳಾಗಿರುವ ಪ್ರಕರಣಗಳನ್ನು ದಿನದ ವಿಚಾರಣಾ ಪಟ್ಟಿಯಲ್ಲಿ ಆದ್ಯತೆ ಮೇಲೆ ತೆಗೆದುಕೊಳ್ಳಲು ಅವಕಾಶ ಕಲ್ಪಿಸುವ ಸಿವಿಲ್ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ಮಸೂದೆ–2023 ಹಾಗೂ ಸರ್ಕಾರಿ ವ್ಯಾಜ್ಯಗಳ ನಿರ್ವಹಣೆಗೆ ಹೊಣೆಗಾರಿಕೆ ನಿಗದಿಪಡಿಸುವ ಕರ್ನಾಟಕ ಸರ್ಕಾರಿ ವ್ಯಾಜ್ಯ ನಿರ್ವಹಣೆ ಮಸೂದೆ–2023ಕ್ಕೆ ಗದ್ದಲದಲ್ಲೇ ಧ್ವನಿಮತದ ಮೂಲಕ ಒಪ್ಪಿಗೆ ನೀಡಲಾಯಿತು.

ಪತ್ತಿನ ಸಹಕಾರ ಸಂಘಗಳು, ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳು, ಸಿಬ್ಬಂದಿಗೆ ಸೇವಾ ಭದ್ರತೆ ಕಲ್ಪಿಸುವ 'ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಮಸೂದೆ–2023' ಅನ್ನು ಕೂಡ ಅಂಗೀಕರಿಸಲಾಯಿತು.

ಭೂ ಪರಿವರ್ತನೆ ಸರಳೀಕರಣ

ವಿವಿಧ ಉದ್ದೇಶಗಳಿಗಾಗಿ ಜಮೀನುಗಳನ್ನು ಭೂ ಪರಿವರ್ತನೆ ಮಾಡುವ ಪ್ರಕ್ರಿಯೆಯನ್ನು ಸರಳೀಕರಿಸುವ 'ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಮಸೂದೆ–2023'ಕ್ಕೆ ವಿಧಾನಸಭೆ ಬುಧವಾರ ಅಂಗೀಕಾರ ನೀಡಿತು.

ಕೃಷಿಯೇತರ ಉದ್ದೇಶಗಳಿಗಾಗಿ ಮಹಾ ಯೋಜನೆ (ಮಾಸ್ಟರ್ ಪ್ಲ್ಯಾನ್) ಮಾಡಲಾಗಿರುವ ಜಮೀನುಗಳನ್ನು ಅಲ್ಲಿ ಉಲ್ಲೇಖಿಸಿರುವ ಉದ್ದೇಶಗಳಿಗೆ ಬಳಸಿಕೊಳ್ಳಲು ಜಿಲ್ಲಾಧಿಕಾರಿಗಳ ಅನುಮತಿ ಅಗತ್ಯವಿಲ್ಲ ಎಂದು ತಿದ್ದುಪಡಿ ಮಸೂದೆ ಹೇಳುತ್ತದೆ. ಯಾವುದೇ ಮಹಾ ಯೋಜನೆ ಇಲ್ಲದ ಸ್ಥಳೀಯ ಯೋಜನಾ ಪ್ರದೇಶದ ಹೊರಗಿನ ಜಮೀನುಗಳನ್ನು ಭೂ ಪರಿವರ್ತನೆ ಮಾಡಿಕೊಳ್ಳಲು ಅರ್ಜಿದಾರರು ಸ್ವಯಂಘೋಷಣೆಯ ಪ್ರಮಾಣಪತ್ರ ಸಲ್ಲಿಸಬೇಕು. ಜಿಲ್ಲಾಧಿಕಾರಿಯು 30 ದಿನಗಳೊಳಗೆ ಆದೇಶವನ್ನು ನೀಡದಿದ್ದರೆ, ಭೂ-ಪರಿವರ್ತನೆ ಪ್ರಸ್ತಾವವನ್ನು ಅನುಮೋದಿಸಲಾಗಿದೆ ಎಂದು ಪರಿಗಣಿಸಲಾಗುತ್ತದೆ.

ನಕಲಿ ದಾಖಲೆಗೆ ಜೈಲು ಶಿಕ್ಷೆ

ನಕಲಿ ದಾಖಲೆಗಳನ್ನು ತಡೆಯಲು ಮತ್ತು ಅಂತಹ ಕೃತ್ಯಗಳಲ್ಲಿ ಭಾಗಿಯಾಗುವ ಅಧಿಕಾರಿಗಳು, ಸಾರ್ವಜನಿಕರಿಗೆ ಜೈಲು ಶಿಕ್ಷೆ ವಿಧಿಸಲು ಅವಕಾಶ ಕಲ್ಪಿಸುವ 'ನೋಂದಣಿ (ಕರ್ನಾಟಕ ತಿದ್ದುಪಡಿ) ಮಸೂದೆ–2023'ಕ್ಕೆ ವಿಧಾನಸಭೆ ಧ್ವನಿಮತದ ಮೂಲಕ ಒಪ್ಪಿಗೆ ನೀಡಿತು. ನೋಂದಣಿ ಅಧಿಕಾರಿ (ಸಾಮಾನ್ಯವಾಗಿ ಉಪ ನೋಂದಣಾಧಿಕಾರಿ) ನಕಲಿ ದಾಖಲೆಗಳನ್ನು ನೋಂದಾಯಿಸಲು ನಿರಾಕರಿಸಬೇಕು. ಯಾವುದೇ ಸ್ಥಿರಾಸ್ತಿಗಳಿಗೆ ಸಂಬಂಧಿಸಿದ ದಾಲೆಗಳನ್ನು ಕೇಂದ್ರ ಅಥವಾ ರಾಜ್ಯ ಕಾಯ್ದೆಗಳಿಂದ ನಿಷೇಧಿಸಲಾಗಿದ್ದರೆ, ಅಂತಹ ಆಸ್ತಿಗಳ ದಾಖಲೆಗಳನ್ನು ನೋಂದಾಯಿಸಲು ಅಧಿಕಾರಿಗಳು ನಿರಾಕರಿಸಬೇಕು ಎಂದು ಮಸೂದೆಯಲ್ಲಿದೆ.

ಅಧಿಕಾರಿಗಳು ನಿಯಮ ಮೀರಿ ನಕಲಿ ದಾಖಲಾತಿಗಳನ್ನು ನೋಂದಣಿ ಮಾಡಿದರೆ, ಅಂತಹವರಿಗೆ ಮೂರು ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು ದಂಡವನ್ನು ವಿಧಿಸಲು ತಿದ್ದುಪಡಿಯಲ್ಲಿ ಅವಕಾಶ ಕಲ್ಪಿಸಲಾಗಿದೆ. ದಾಖಲೆಗಳ ಮೋಸದ ನೋಂದಣಿಯಲ್ಲಿ ತೊಡಗಿರುವ ಕಂಪನಿಗಳನ್ನು ಶಿಕ್ಷಿಸುವ ಅವಕಾಶವನ್ನೂ ಇದು ಒದಗಿಸುತ್ತದೆ.

ಪರಿಷತ್: 2 ಮಸೂದೆ ಅಂಗೀಕಾರ

ಬೆಂಗಳೂರು: ವಿಧಾನ ಪರಿಷತ್‌ನಲ್ಲಿ ಕರ್ನಾಟಕ ಅಗ್ನಿಶಾಮಕ ದಳ (ತಿದ್ದುಪಡಿ) ಮಸೂದೆ ಮತ್ತು ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ (ತಿದ್ದುಪಡಿ) ಮಸೂದೆ ಬುಧವಾರ ಅಂಗೀಕಾರಗೊಂಡಿತು.

ಅಗ್ನಿಶಾಮಕ ದಳ (ತಿದ್ದುಪಡಿ) ಮಸೂದೆಯನ್ನು ಮಂಡಿಸಿದ ಗೃಹ ಸಚಿವ ಜಿ. ಪರಮೇಶ್ವರ, ಅಗ್ನಿಶಾಮಕ ಮತ್ತು ತುರ್ತುಸೇವೆಗಳ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆಯಲು ಅಗತ್ಯವಿರುವ ಕಟ್ಟಡಗಳ ಎತ್ತರವನ್ನು 15 ಮೀಟರ್‌ನಿಂದ 21 ಮೀಟರ್‌ಗೆ ಹೆಚ್ಚಿಸುವ ಉದ್ದೇಶದಿಂದ ಮಸೂದೆ ಮಂಡಿಸಲಾಗಿದೆ ಎಂದರು. ಈ ತಿದ್ದುಪಡಿ ಸಂಬಂಧ ಹಿಂದಿನ ಸರ್ಕಾರ ಕಳೆದ ಮಾರ್ಚ್ 24ರಂದು ಸುಗ್ರೀವಾಜ್ಞೆ ಹೊರಡಿಸಿತ್ತು.

ಅಪಘಾತಗಳಿಗೆ ಕಡಿವಾಣ ಹಾಕುವ ಉದ್ದೇಶದಿಂದ ರಸ್ತೆ ಸುರಕ್ಷತಾ ಪ್ರಾಧಿಕಾರ ಕಾಯ್ದೆಗೆ ತಿದ್ದುಪಡಿ ತರಲಾಗುತ್ತಿದ್ದು, ಕಾಯ್ದೆ (ತಿದ್ದುಪಡಿ) ಮಸೂದೆಯನ್ನು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮಂಡಿಸಿದರು. ಬಿಜೆಪಿ, ಜೆಡಿಎಸ್‌ನ ಕೆಲವು ಸದಸ್ಯರು ಎರಡೂ ಮಸೂದೆಗಳ ಕುರಿತು ನಡೆದ ಚರ್ಚೆಯಲ್ಲಿ ಭಾಗವಹಿಸಿ, ಕೆಲವು ಸಲಹೆಗಳನ್ನು ನೀಡಿದರು.

ಸುದ್ದಿ 2 ನಿಮಿಷ

ಕಟ್ಟಡ ಕಾರ್ಮಿಕರಿಗೆ ವಸತಿ ಕಲ್ಪಿಸಲು ನೀಲನಕ್ಷೆ: ಜಮೀರ್

ಬೆಂಗಳೂರು: ರಾಜ್ಯದ ಎಲ್ಲ ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದಲ್ಲಿ ಕಟ್ಟಡ ಕಾರ್ಮಿಕರಿಗೆ ವಸತಿ ಸೌಕರ್ಯ ಕಲ್ಪಿಸುವ ಸಂಬಂಧ ನೀಲ ನಕ್ಷೆ ರೂಪಿಸಲು ವಸತಿ ಸಚಿವ ಜಮೀರ್ ಅಹಮದ್ ಖಾನ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ.

ವಸತಿ, ಕಾರ್ಮಿಕ ಹಾಗೂ ಪೌರಾಡಳಿತ ಇಲಾಖೆ ಜತೆಗೂಡಿ ಹೊಸ ವಸತಿ ಸಮುಚ್ಚಯ ಯೋಜನೆ ರೂಪಿಸಲು ನಿರ್ಧರಿಸಲಾಗಿದೆ ಎಂದು ಜಮೀರ್ ಅಹಮದ್ ತಿಳಿಸಿದ್ದಾರೆ.

ಜಿಲ್ಲಾ ಮತ್ತು ತಾಲ್ಲೂಕು ಹಂತದಲ್ಲಿ ಲಭ್ಯವಿರುವ ಜಮೀನು, ಹಣಕಾಸು ಹೊಂದಾಣಿಕೆ, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಹಾಯಧನ, ಪೌರಾಡಳಿತ ಹಾಗೂ ಕಾರ್ಮಿಕ ಇಲಾಖೆಗಳಲ್ಲಿ ದೊರೆಯಬಹುದಾದ ಸಹಾಯ ಕುರಿತು ಸಮಗ್ರ ಮಾಹಿತಿಯೊಂದಿಗೆ ಪ್ರಸ್ತಾವನೆ ಸಿದ್ಧಪಡಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಯಿತು.

ವಸತಿ ರಹಿತ ಕಟ್ಟಡ ಕಾರ್ಮಿಕರ ಸಮೀಕ್ಷೆ ನಡೆಸಿ ಬೇಡಿಕೆ ಆಧಾರದಲ್ಲಿ ವಸತಿ ಯೋಜನೆ ರೂಪಿಸಬೇಕು. ಕಟ್ಟಡ ಕಾರ್ಮಿಕರಿಗೆ ವಸತಿ ಯೋಜನೆಗೆ ಬಡ್ಡಿ ರಹಿತ ಸಾಲದ ವ್ಯವಸ್ಥೆ ಸಿಗುವುದರಿಂದ ಫಲಾನುಭವಿಗಳಿಗೆ ಅನುಕೂಲ ಮಾಡಿಕೊಡಬೇಕು. ಹೆಚ್ಚು ಫಲಾನುಭವಿಗಳಿಗೆ ವಸತಿ ಸೌಲಭ್ಯ ಸಿಗುವಂತೆ ಮಾಡಬೇಕು ಎಂದು ಸಚಿವ ಜಮೀರ್ ಅಹಮದ್ ಸೂಚಿಸಿದರು.

ಕಾರ್ಮಿಕ ಸಚಿವ ಸಂತೋಷ್ ಲಾಡ್, ಪೌರಾಡಳಿತ ಸಚಿವ ರಹೀಂ ಖಾನ್, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ವಸತಿ ಇಲಾಖೆ ಕಾರ್ಯದರ್ಶಿ ಮನೋಜ್ ಜೈನ್, ಪೌರಾಡಳಿತ ಇಲಾಖೆ ಕಾರ್ಯದರ್ಶಿ ಅಜಯ್ ನಾಗಭೂಷಣ್, ಕಾರ್ಮಿಕ ಇಲಾಖೆ ಆಯುಕ್ತ ನಾಗರಾಜ್, ಕೊಳಗೇರಿ ಅಭಿವೃದ್ಧಿ ಮಂಡಳಿ ಆಯುಕ್ತ ವೆಂಕಟೇಶ್, ಪ್ರಧಾನ ಎಂಜಿನಿಯರ್ ಬಾಲರಾಜು, ರಾಜೀವ್ ಗಾಂಧಿ ವಸತಿ ನಿಗಮ ವ್ಯವಸ್ಥಾಪಕ ನಿರ್ದೇಶಕಿ ಸುಶೀಲಮ್ಮ ಇದ್ದರು.

'ಒಬ್ಬರೇ ಬರ್ತೀದ್ದೀರಲ್ಲ ಸಾರ್!'

ಬೆಂಗಳೂರು: ಕಲಾಪದಲ್ಲಿ ಭಾಗವಹಿಸಲು ಬುಧವಾರ ವಿಧಾನಸೌಧಕ್ಕೆ ಬಂದ ಶಿವಮೊಗ್ಗ ಕ್ಷೇತ್ರದ ಶಾಸಕ ಎಸ್.ಎನ್.ಚನ್ನಬಸಪ್ಪ ಅವರನ್ನು ಪೊಲೀಸರು ವಿಧಾನಸಭೆಯ ಪ್ರವೇಶ ದ್ವಾರದಲ್ಲೇ ತಡೆದರು.

'ನಾನು ಶಿವಮೊಗ್ಗ ಕ್ಷೇತ್ರದ ಎಂಎಲ್‌ಎ' ಎಂದು ಚನ್ನಬಸಪ್ಪ ನಗುತ್ತಲೇ ಪರಿಚಯಿಸಿಕೊಂಡರು.

'ಹೌದಾ ಸಾರ್. ಜತೆಗೆ ಯಾರೂ ಇಲ್ಲವಲ್ಲ. ಒಬ್ಬರೇ ಬರ್ತೀದ್ದೀರಲ್ಲ ಹಾಗಾಗಿ, ಯಾರೋ ಎಂದು ಕೊಂಡೆವು' ಎಂದು ಮಹಿಳಾ ಕಾನ್‌ಸ್ಟೆಬಲ್ ಕ್ಷಮೆ ಕೇಳಿದರು.

'ನಿಮ್ಮ ಕೆಲಸವನ್ನು ಶ್ರದ್ಧೆಯಿಂದ ಮಾಡಿದ್ದೀರಿ. ನನಗೇನು ಬೇಸರವಿಲ್ಲ. ಗುಡ್ ಇದೇ ರೀತಿ ಬಿಗಿ ಪರಿಶೀಲನೆ ಮಾಡಿ. ಜನರ ಗುಂಪು ಇದ್ದರೆ ಮಾತ್ರ ಶಾಸಕ ಎನ್ನುವ ಮನೋಭಾವ ಇಟ್ಟುಕೊಳ್ಳಬೇಡಿ' ಎಂದು ಮುಂದೆ ನಡೆದರು.

ಸರದಿಗೆ ಕಾದಿಹೆವು... ವಿಧಾನಸೌಧದಲ್ಲಿ ಬುಧವಾರ ನಡೆದ ವಿಧಾನಸಭೆ ಕಲಾಪವನ್ನು ವೀಕ್ಷಿಸಲು ಶಾಲಾ ವಿದ್ಯಾರ್ಥಿಗಳು ಸಾಲಾಗಿ ಕುಳಿತಿರುವ ದೃಶ್ಯ –ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ನಗೆ ಉಕ್ಕಿಸಿದ ಗುಂಡಿನ ಗಮ್ಮತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್‌ನಲ್ಲಿ ಬಜೆಟ್ ಕುರಿತ ನಡೆದ ಚರ್ಚೆಯಲ್ಲಿ ಬಿಜೆಪಿಯ ಎಚ್. ವಿಶ್ವನಾಥ್ ಅವರ ಮಾತು 'ಗುಂಡು'ನತ್ತ ತಿರುಗಿ ಮತ್ತಿನ ಗಮ್ಮತ್ತಿನಲ್ಲಿ ಕೆಲಹೊತ್ತು ತೇಲಿ ಹೋಯಿತು. ಗುಂಡಿನ ಕುರಿತ ಚರ್ಚೆಗೆ ಇಡೀ ಸದನ ನಗೆಗಡಲಲ್ಲಿ ತೇಲಾಡಿತು.

ವಿಶ್ವನಾಥ್ ಮೊದಲಿಗೆ ಶಾಸಕಾಂಗ ಸಭೆ, ಮಾಧ್ಯಮ ರಂಗದ ಬದಲಾದ ಚಿತ್ರಣ ತೆರೆದಿಟ್ಟರು. 'ಸತ್ಯ ಹೇಳುವ ಧೈರ್ಯವನ್ನು ನಾವು (ಸದಸ್ಯರು) ಕಳೆದುಕೊಂಡಿದ್ದೇವೆ. ಮಾಧ್ಯಮಗಳೂ ಮೊದಲಿನಂತೆ ಸುದ್ದಿ ಮಾಡುತ್ತಿಲ್ಲ. ಜಗಳಗಳೇ ಸುದ್ದಿ ಆಗುತ್ತಿವೆ' ಎಂದರು.

'ಇಂದು ನಮ್ಮ (ಸದಸ್ಯರ) ಭಾಷಾ ಪ್ರಯೋಗದಿಂದ ಗೌರವ ಹಾಳು ಮಾಡಿಕೊಂಡಿದ್ದೇವೆ. ಈ ವ್ಯವಸ್ಥೆಯಲ್ಲಿ ಬದಲಾವಣೆ ಮಾಡಿಕೊಳ್ಳಬೇಕಿದೆ. ಬೆಂಗಳೂರಿನಲ್ಲಿ ನಡೆದ ವಿರೋಧ ಪಕ್ಷಗಳ ನಾಯಕರ ಸಭೆಯನ್ನು ಪ್ರಧಾನಿ ನರೇಂದ್ರ ಮೋದಿ ಭ್ರಷ್ಟರ ಸಂತೆ ಎನ್ನುತ್ತಾರೆ. ಪರಮೋಚ್ಛ ಸ್ಥಾನದಲ್ಲಿರುವ ಪ್ರಧಾನಿ ಹೀಗೆ ಹೇಳುವುದನ್ನು ನಾನು ಒಪ್ಪಲ್ಲ' ಎಂದು ವಿರೋಧ ವ್ಯಕ್ತಪಡಿಸಿದರು.

'ಬೆಳಿಗ್ಗೆ ಎದ್ದಲ್ಲಿಂದ ರಾತ್ರಿ ಮಲಗುವವರೆಗೂ ಜಿಎಸ್‌ಟಿ ಕಟ್ಟುತ್ತೇವೆ' ಎಂದು ವಿಶ್ವನಾಥ್ ಹೇಳಿದಾಗ, 'ಗುಂಡಿನ ಬಗ್ಗೆ ಹೇಳಲಿಲ್ಲವಲ್ಲ' ಎಂದು ಬಿಜೆಪಿ ಸದಸ್ಯರು ಕಾಲೆಳೆದರು. ಆಗ ವಿಶ್ವನಾಥ್, 'ಸಮ್ಮಿಶ್ರ ಸರ್ಕಾರದ ಪತನ ಸಮಯದಲ್ಲಿ ನಾರಾಯಣಸ್ವಾಮಿ (ವೈ.ಎ. ನಾರಾಯಣಸ್ವಾಮಿ) ಮನೆಯಲ್ಲಿ ಸೇರುವಾಗ ಗುಂಡು ಹೊಡೆಯುತ್ತಿದ್ದೆವು' ಎಂದರು. ಅದಕ್ಕೆ ಬಿಜೆಪಿಯ ಛಲವಾದಿ ನಾರಾಯಣಸ್ವಾಮಿ, 'ಯಾವ ನಾರಾಯಣಸ್ವಾಮಿ? ಎಣ್ಣೆ ವಿಚಾರದಲ್ಲಿ ನಾನಿಲ್ಲ' ಎಂದರು. ಈ ವೇಳೆ, ಸದನದಲ್ಲಿ ನಗೆ ಉಕ್ಕಿತು. ಸುಮಾರು 10 ನಿಮಿಷ ಗುಂಡಿನ ಬಗ್ಗೆಯೇ ಚರ್ಚೆ ನಡೆಯಿತು.

'ವಿಶ್ವನಾಥ್ ಈಗ ಗುಂಡು ಹೊಡೆಯುವುದು ಬಿಟ್ಟಿದ್ದಾರೆ. ಬಜೆಟ್ ಬಗ್ಗೆ ಮಾತನಾಡುವಾಗ ಲಾಟರಿ, ಸಾರಾಯಿ ನಿಷೇಧ ಮಾಡಿದ್ದನ್ನು ಸರ್ಕಾರಕ್ಕೆ ಹೇಳಿ' ಎಂದು ವೈ.ಎ. ನಾರಾಯಣಸ್ವಾಮಿ ಕಿಚಾಯಿಸಿದರು. ಬಿಜೆಪಿಯ ಎನ್. ರವಿಕುಮಾರ್, 'ಮದ್ಯದ ಸುಂಕ ಹೆಚ್ಚಾಗಿದೆ. ಮದ್ಯಪ್ರಿಯರ ಬಗ್ಗೆ ಕಾಳಜಿಯಿಂದ ಬೆಳಕು ಚೆಲ್ಲಲಿ' ಎಂದರು. ಆಗ ತೇಜಸ್ವಿನಿ ಗೌಡ, 'ಈಗ ಬೆಳಕು ಚೆಲ್ಲಲು ಆಗುವುದಿಲ್ಲ. ಇದು ರಾತ್ರಿಯಲ್ಲಿ ನಡೆಯುವ ವಿಷಯ' ಎಂದು ಚಟಾಕಿ ಹಾರಿಸಿದರು.

ಬಿಜೆಪಿಯ ಭಾರತಿ ಶೆಟ್ಟಿ, 'ಗುಂಡು ಹೊಡೆದವರ ಜೊತೆ ನಾವು ಬದುಕುತ್ತಿದ್ದೇವೆ' ಎಂದರು. ಬಿಜೆಪಿ ಸದಸ್ಯರ ಹೇಳಿಕೆಗೆ ಪ್ರತಿಕ್ರಿಯಿಸಿದ ಸಭಾನಾಯಕ ಎನ್.ಎಸ್. ಬೋಸರಾಜ್, 'ಗುಂಡು ಹಾನಿಕರ ಎಂದು ಅದಕ್ಕೆ ಕಡಿವಾಣ ಹಾಕಲು ಸುಂಕ ಹೆಚ್ಚಿಸಿದ್ದೇವೆ' ಎಂದು ಸಮರ್ಥನೆ ನೀಡಿದರು. ಗುಂಡಿನ ಚರ್ಚೆ ಜೋರಾಗುತ್ತಿದ್ದಂತೆ, 'ಗುಂಡು ಹೊಡೆಯದೇ ಇರುವವರಿಗೆ ಇಷ್ಟು ಗುಂಡಿಗೆ ಇರುವುದಾದರೆ ಗುಂಡು ಹಾಕುವ ನಮಗೆ ಎಷ್ಟು ಗುಂಡಿಗೆ ಇರಬೇಕು' ಎಂದು ಹೇಳಿದ ವಿಶ್ವನಾಥ್, 'ನಾವು ಗೆದ್ದಾಗಲೂ ಕುಡಿಯುತ್ತೇವೆ. ಸೋತಾಗಲೂ ಕುಡಿಯುತ್ತೇವೆ. ಸತ್ತಾಗಲೂ ಕುಡಿಯುತ್ತೇವೆ. ಸರ್ವ ರೋಗಕ್ಕೂ ಸಾರಾಯಿ ಮದ್ದು ಎಂಬ ಮಾತಿದೆ' ಎಂದರು.

ಕಲ್ಯಾಣ ಕರ್ನಾಟಕ: ಪ್ರಗತಿ ಪರಿಶೀಲನೆಗೆ ಸಮಿತಿ

ಬೆಂಗಳೂರು: ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಸಂವಿಧಾನದ ಅನುಚ್ಛೇದ 371 ಜೆ ಅಡಿ ವಿಶೇಷ ಸ್ಥಾನಮಾನ ನೀಡಲಾಗಿದ್ದು, ಅದರನ್ವಯ ಹೊರಡಿಸಲಾದ ಆದೇಶಗಳ ಅನುಷ್ಠಾನದ ಪ್ರಗತಿ ಪರಿಶೀಲಿಸಲು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಉಪ ಸಮಿತಿ ರಚಿಸಲಾಗಿದೆ.

ಅರಣ್ಯ ಸಚಿವ ಈಶ್ವರ ಖಂಡ್ರೆ, ಪೌರಾಡಳಿತ ಸಚಿವ ರಹೀಂ ಖಾನ್, ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವ ಡಿ. ಸುಧಾಕರ್, ಯುವಜನ ಸೇವೆಗಳು, ಕ್ರೀಡೆ ಮತ್ತು ಪರಿಶಿಷ್ಟ ಪಂಗಡಗಳ ಸಚಿವ ಬಿ. ನಾಗೇಂದ್ರ, ಸಣ್ಣ ನೀರಾವರಿ ಸಚಿವ ಎನ್.ಎಸ್. ಬೋಸರಾಜ್ ಅವರು ಸಮಿತಿಯ ಸದಸ್ಯರು. ಈ ಸಮಿತಿಗೆ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಅಗತ್ಯ ನೆರವು ನೀಡಬೇಕು ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಪ್ರಜಾಪ್ರಭುತ್ವದ ಕಗ್ಗೊಲೆ: ಎಚ್‌ಡಿಕೆ

'ಒಂದು ದಿನದ ಹಿಂದೆ 'ಇಂಡಿಯಾ' ಎಂದು ಜಪ ಮಾಡಿದ್ದ ಕಾಂಗ್ರೆಸ್, 24 ಗಂಟೆಗಳ ಒಳಗೆ ಇದೇ ನಗರದಲ್ಲಿ ಇಂಡಿಯಾ ಎನ್ನುವ ಇಡಿಯಾದ ಆದರ್ಶ ಪರಿಕಲ್ಪನೆಗೆ ಎಳ್ಳುನೀರು ಬಿಟ್ಟಿದೆ. ಪ್ರಜಾಪ್ರಭುತ್ವದ ಮೇಲೆ ನಂಬಿಕೆಯೇ ಇಲ್ಲದ ಕಾಂಗ್ರೆಸ್ ಪಕ್ಷ ಸಾಂವಿಧಾನಿಕ ಮೌಲ್ಯಗಳನ್ನು ಕಸಕ್ಕೆ ಸಮ ಎನ್ನುವಂತೆ ವರ್ತಿಸಿದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹರಿಹಾಯ್ದಿದ್ದಾರೆ.

'ನಿನ್ನೆ ಪಂಚತಾರಾ ಹೋಟೆಲಿನಲ್ಲಿ ನಡೆದ ಇಂಡಿಯಾ ಒಕ್ಕೂಟದ ಸದಸ್ಯ ಪಕ್ಷಗಳ ಸಭೆಗೆ ಬಂದಿದ್ದ ಶಿಷ್ಟಾಚಾರಕ್ಕೆ ಅರ್ಹರಲ್ಲದ ಹೊರ ರಾಜ್ಯಗಳ ರಾಜಕಾರಣಿಗಳಿಗೆ ಚಾಕರಿ ಮಾಡಲು ಐಎಎಸ್ ಅಧಿಕಾರಿಗಳನ್ನು ನಿಯೋಜಿಸಿದ್ದ ನಿರ್ಲಜ್ಜ ಕ್ರಮವನ್ನು ಪ್ರಶ್ನಿಸಿದ ವಿರೋಧ ಪಕ್ಷಗಳನ್ನು ಹತ್ತಿಕ್ಕುವ ಹೇಯ ಕೆಲಸವನ್ನು ರಾಜ್ಯದ ಸರ್ಕಾರ ಮಾಡಿದೆ' ಎಂದು ದೂರಿದರು.

'ಕಾಂಗ್ರೆಸ್‌ನ ಅಸಾಂವಿಧಾನಿಕ ನಡೆಯನ್ನು ಪ್ರಶ್ನಿಸಿದ ಪ್ರತಿಪಕ್ಷಗಳ ಶಾಸಕರನ್ನು ಸದನದಿಂದ ಅಮಾನತು ಮಾಡಿರುವುದು ಪ್ರಜಾಪ್ರಭುತ್ವದ ಕಗ್ಗೊಲೆ. ಬರೀ ನಾಲಿಗೆಯ ಮೇಲೆ ಪ್ರಜಾಪ್ರಭುತ್ವ ಉಳಿಸುತ್ತೇನೆ ಎನ್ನುವ ಕಾಂಗ್ರೆಸ್ ತನ್ನದೇ 'ಹಸ್ತ'ದಿಂದ ಅದೇ ಪ್ರಜಾಪ್ರಭುತ್ವವನ್ನು ಅಡ್ಡಡ್ಡ ಸಿಗಿದು ನಿರ್ನಾಮ ಮಾಡುತ್ತಿದೆ. ಇದೇನಾ ಕರ್ನಾಟಕ ಮಾಡೆಲ್" ಎಂದು ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ. 'ಪ್ರತಿಪಕ್ಷಗಳು ಕೇಳುವ ಪ್ರಶ್ನೆಗಳನ್ನು ಸಮಾಧಾನದಿಂದ ಆಲಿಸಿ, ಉತ್ತರ ನೀಡುವುದು ನಾಗರಿಕ ಸರ್ಕಾರದ ಕರ್ತವ್ಯ. ಆದರೆ, ಅನಾಗರಿಕತೆಯನ್ನೇ ಅರೆದು ಕುಡಿದಷ್ಟು, ಅನಾಗರಿಕತೆಯೇ ನಾಚಿ ನಿಟ್ಟುಸಿರು ಬಿಡುವಷ್ಟು ಹೀನಾಯವಾಗಿ ರಾಜ್ಯ ಕಾಂಗ್ರೆಸ್ ಸರ್ಕಾರ ವರ್ತಿಸಿದೆ' ಎಂದು ಅವರು ಹೇಳಿದರು.

2 ದಿನ ಕಲಾಪ ಬಹಿಷ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಕ್ಷದ ಶಾಸಕರನ್ನು ಈ ಅಧಿವೇಶನದ ಅವಧಿಗೆ ಅಮಾನತ್ತು ಮಾಡಿರುವುದನ್ನು ಪ್ರತಿಭಟಿಸಿ ಬಿಜೆಪಿ ಮುಂದಿನ ಎರಡು ದಿನಗಳ ವಿಧಾನಸಭೆ ಕಲಾಪವನ್ನು ಬಹಿಷ್ಕರಿಸಲು ನಿರ್ಧರಿಸಿದೆ. ಜೆಡಿಎಸ್ ಕೂಡಾ ಬಿಜೆಪಿ ಜತೆ ಕೈಜೋಡಿಸಲಿದೆ.

ಅಲ್ಲದೆ, ಬಿಜೆಪಿ ರಾಜ್ಯಪಾಲರನ್ನು ಗುರುವಾರ ಭೇಟಿ ಮಾಡಿ ದೂರು ನೀಡಲು ತೀರ್ಮಾನಿಸಿದೆ.

ಪ್ರತಿಭಟನೆಗೆ ಒಂದಾದ ಬಿಜೆಪಿ–ಜೆಡಿಎಸ್: ಒಳಗೆ ಒಬ್ಬೊಬ್ಬರೇ ಶಾಸಕರನ್ನು ಎತ್ತಿಕೊಂಡು ಹೋಗುವಾಗ ಬಸವರಾಜ ಬೊಮ್ಮಾಯಿ ಮತ್ತು ಸುನಿಲ್‌ಕುಮಾರ್ ಸೇರಿ ಮಾತನಾಡಿಕೊಂಡು ಸಭಾಧ್ಯಕ್ಷರ ಕೊಠಡಿ ಬಳಿ ತೆರಳಿದರು. ಅಲ್ಲಿ ಮೆಟ್ಟಿಲ ಮೇಲೆ ಧರಣಿ ಆರಂಭಿಸಿದರು. ಇತರ ಸದಸ್ಯರೂ ಸೇರಿಕೊಂಡರು.

ಆ ಬಳಿಕ ಬಿಜೆಪಿ ಮತ್ತು ಜೆಡಿಎಸ್ ಶಾಸಕರು ಕೆಂಗಲ್ ಪ್ರತಿಮೆ ಬಳಿ ಪ್ರತಿಭಟನೆ ನಡೆಸಿದರು. ಎಚ್.ಡಿ. ಕುಮಾರಸ್ವಾಮಿ ಮತ್ತು ಬಸವರಾಜ ಬೊಮ್ಮಾಯಿ ಜತೆಯಾಗಿ ಕುಳಿತು ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು.

ಆತಿಥ್ಯಕ್ಕೆ ಐಎಎಸ್: ಗದ್ದಲ

ಒಂದನೇ ಪುಟದಿಂದ...

ಧರಣಿ ನಡೆಸುತ್ತಿದ್ದ ಬಿಜೆಪಿ ಸದಸ್ಯರು ಸಭಾಧ್ಯಕ್ಷರ ನಿರ್ಣಯ ಖಂಡಿಸಿ, 'ಸರ್ವಾಧಿಕಾರಿ ಸರ್ಕಾರಕ್ಕೆ ಧಿಕ್ಕಾರ', 'ಪ್ರತಿಪಕ್ಷವನ್ನು ದಮನಗೊಳಿಸುವ ಸರ್ಕಾರಕ್ಕೆ ಧಿಕ್ಕಾರ' ಎಂದು ಘೋಷಣೆ ಕೂಗಿದರು. ಇದಕ್ಕೆ ಪ್ರತಿಯಾಗಿ ಕಾಂಗ್ರೆಸ್ ಸದಸ್ಯರು ಬಿಜೆಪಿ ವಿರುದ್ಧ ಘೋಷಣೆ ಕೂಗಿದರು.

ಅಮಾನತುಗೊಂಡ 10 ಶಾಸಕರನ್ನು ಅಲ್ಲಿಂದ ಹೊರಗೆ ಕಳುಹಿಸಲು ಮಾರ್ಷಲ್‌ಗಳ ಹರಸಾಹಸಪಟ್ಟರು. ಶಾಸಕರು ಕದಲದೇ ಇದ್ದಾಗ ಬಲವಂತವಾಗಿ ಎಳೆಯಲು ಆರಂಭಿಸಿದರು. ಉಳಿದ ಶಾಸಕರು ಆ ಪ್ರಯತ್ನ ತಡೆಯಲು ರಕ್ಷಾ ಕವಚವಾಗಿ ನಿಂತರು. ಮೊದಲಿಗೆ ಮಂಗಳೂರು ದಕ್ಷಿಣ ಕ್ಷೇತ್ರದ ಶಾಸಕ ವೇದವ್ಯಾಸ ಕಾಮತ್ ಅವರನ್ನು ಐದರಿಂದ ಆರು ಮಾರ್ಷಲ್‌ಗಳು ಹೊತ್ತುಕೊಂಡು ಹೋದರು. ನಂತರ ಆರಗ ಜ್ಞಾನೇಂದ್ರ, ಡಾ. ಸಿ.ಎನ್. ಅಶ್ವತ್ಥನಾರಾಯಣ ಅವರನ್ನು ಹೊತ್ತೊಯ್ದರು. ಆಗ ಕಾಂಗ್ರೆಸ್‌ನ ಕೆಲವು ಸದಸ್ಯರು ಹೋ.. ಎಂದು ಕೂಗು ಹಾಕುವ ಮೂಲಕ ಹರ್ಷ ವ್ಯಕ್ತಪಡಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇವೆಲ್ಲವನ್ನೂ ನೋಡುತ್ತ ಕುಳಿತಿದ್ದರು.

ಅಶೋಕ ಅವರನ್ನು ಎಳೆಯುವ ಸಂದರ್ಭದಲ್ಲಿ ಅವರಿಗೆ ಉಸಿರಾಟದ ಸಮಸ್ಯೆ ಆಯಿತು. ಪಕ್ಕದಲ್ಲೇ ಇದ್ದ ಶಾಸಕರು ಅವರಿಗೆ ಪತ್ರಿಕೆಗಳಿಂದ ಗಾಳಿ ಹಾಕಲಾರಂಭಿಸಿದರು. ನಿತ್ರಾಣಗೊಂಡ ಅವರನ್ನು ಮಾರ್ಷಲ್‌ಗಳು ತಮ್ಮ ಭುಜಕೊಟ್ಟು ಹೊರಗೆ ಕರೆದುಕೊಂಡರು. ಸದಸ್ಯರನ್ನು ಎಳೆಯುವ ಮಾರ್ಷಲ್‌ಗಳ ತಳ್ಳಾಟದಲ್ಲಿ ಬಸವರಾಜ ಬೊಮ್ಮಾಯಿ ಅವರೂ ಆಯತಪ್ಪಿ ಬೀಳುವಾಗ ಅವರನ್ನು ಮಾರ್ಷಲ್‌ಗಳು ಮತ್ತು ಸದಸ್ಯರು ತಡೆದರು.

ವಿಧಾನಸಭೆಯಲ್ಲಿ ಬುಧವಾರ ಪ್ರತಿಭಟನೆ ನಡೆಸುವಾಗ ಅಸ್ವಸ್ಥಗೊಂಡು ಫೋರ್ಟಿಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಬಿಜೆಪಿ ಶಾಸಕ ಬಸವನಗೌಡ ಪಾಟೀಲ ಯತ್ನಾಳ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಭೇಟಿ ಮಾಡಿ, ಆರೋಗ್ಯ ವಿಚಾರಿಸಿದರು

ಬಿಜೆಪಿ ಸದಸ್ಯರನ್ನು ಅಮಾನತುಗೊಳಿಸಿದ್ದನ್ನು ವಿರೋಧಿಸಿ ಶಾಸಕರಾದ ಬಸವರಾಜ ಬೊಮ್ಮಾಯಿ ಹಾಗೂ ಎಚ್‌ಡಿ. ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ವಿಧಾನಸೌಧದ ಮುಂಭಾಗ ಬುಧವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಅಮಾನತು ಶಿಕ್ಷೆಗೆ ಒಳಗಾಗದ ಬಿಜೆಪಿಯ ಸಿದ್ದು ಸವದಿಯವರನ್ನೂ ಮಾರ್ಷಲ್‌ಗಳು ಅನಾಮತ್ತಾಗಿ ಎತ್ತಕೊಂಡು ಹೋಗುವಾಗ ಉಳಿದ ಶಾಸಕರು, 'ಅವರು ಅಮಾನತ್ತುಗೊಂಡಿಲ್ಲ, ಎಳೆದುಕೊಂಡು ಹೋಗಬೇಡಿ' ಎಂದು ಹೇಳಿದ ಮೇಲೆ ಇಳಿಸಿದರು.

ಇದೇ ವೇಳೆ ಇನ್ನೊಂದಷ್ಟು ಶಾಸಕರು ಸಭಾಧ್ಯಕ್ಷರ ಕಚೇರಿ ಬಳಿ ಧರಣಿ ನಡೆಸಿದರು. ಅಲ್ಲೂ ಕೂಗಾಟ ತಳ್ಳಾಟ ಆರಂಭವಾಯಿತು. ಸದನದ ಒಳಗಿದ್ದ ಮಾರ್ಷಲ್‌ಗಳು ಅತ್ತ ದೌಡಾಯಿಸಿದರು. ಅಲ್ಲಿಂದ ಅವರನ್ನೆಲ್ಲಾ ಮಾರ್ಷಲ್‌ಗಳು ಎಳೆದೊಯ್ದರು. ಆಗ ಭಾರಿ ತಳ್ಳಾಟ–ನೂಕಾಟ ನಡೆಯಿತು. ಈ ಘಟನೆಯ ಬಳಿಕ ಕಲಾಪ ಮುಂದುವರಿಯಿತು. ಒಳಗೆ ಕಾಂಗ್ರೆಸ್ ಸದಸ್ಯರು, ಗಾಲಿ ಜನಾರ್ದನ ರೆಡ್ಡಿ ಮಾತ್ರ ಇದ್ದರು.

ಮಾರ್ಷಲ್‌ಗಳ ವಿರುದ್ಧ ಸಚಿವರ ಆಕ್ರೋಶ: ಬಿಜೆಪಿ ಸದಸ್ಯರು ಮಸೂದೆಗಳ ಪ್ರತಿಗಳನ್ನು ಎಸೆದು ಉಪ ಸಭಾಧ್ಯಕ್ಷರ ಮೇಲೆ ತೂರಿದಾಗ ರಕ್ಷಣೆಗೆ ಬರಲಿಲ್ಲ ಎಂದು ಸಚಿವರಾದ ಕೃಷ್ಣ ಬೈರೇಗೌಡ, ಬೈರತಿ ಸುರೇಶ್ ಸೇರಿದಂತೆ ಹಲವರು ಆಕ್ರೋಶ ವ್ಯಕ್ತಪಡಿಸಿದರು. 'ಮಾರ್ಷಲ್‌ಗಳನ್ನೇ ಅಮಾನತು ಮಾಡಬೇಕು' ಎಂದು ಕೆಲವರು ಆಗ್ರಹಿಸಿದರು.

ಶಿಷ್ಟಾಚಾರ ಉಲ್ಲಂಘನೆ ಆಗಿಲ್ಲ: ಸರ್ಕಾರದ ಸಮರ್ಥನೆ

ಐಎಎಸ್ ಅಧಿಕಾರಿಗಳನ್ನು ನಿಯೋಜಿಸಿದ ಕ್ರಮವನ್ನು ಬೆಳಿಗ್ಗೆ ಚರ್ಚೆಯ ಸಂದರ್ಭದಲ್ಲಿ ಸರ್ಕಾರ ಬಲವಾಗಿ ಸಮರ್ಥಿಸಿಕೊಂಡಿತು.

ವಿರೋಧ ಪಕ್ಷಗಳ ಆರೋಪಕ್ಕೆ ಪ್ರತಿಕ್ರಿಯಿಸಿದ ಕಾನೂನು ಸಚಿವ ಎಚ್.ಕೆ. ಪಾಟೀಲ, 'ಶಿಷ್ಟಾಚಾರದ ಪ್ರಕಾರವೇ ಐಎಎಸ್ ಅಧಿಕಾರಿಗಳನ್ನು ನಿಯೋಜನೆ ಮಾಡಲಾಗಿತ್ತು. ಯಾವ ಲೋಪವೂ ಆಗಿಲ್ಲ. ವಿರೋಧ ಪಕ್ಷದ ಸದಸ್ಯರ ಆರೋಪದಲ್ಲಿ ಹುರುಳಿಲ್ಲ' ಎಂದರು.

ಬಿಜೆಪಿಯ ಎಸ್. ಸುರೇಶ್ ಕುಮಾರ್ ಮಾತನಾಡಿ, 'ಜೈಲಿಗೆ ಹೋಗಿ ಬಂದವರು, ಜಾಮೀನಿನ ಮೇಲೆ ಹೊರಗಿರುವವರ ಆತಿಥ್ಯಕ್ಕೆ ಐಎಎಸ್ ಅಧಿಕಾರಿಗಳನ್ನು ನಿಯೋಜಿಸಿದ್ದು ಯಾವ ಮಾನದಂಡದ ಆಧಾರದಲ್ಲಿ? ಆತಿಥ್ಯ ಪಡೆದವರ ಅರ್ಹತೆಗಳೇನು' ಎಂದು ಪ್ರಶ್ನಿಸಿದರು.

ನೋಟಿಸ್ ನೀಡದೆ ಬಿಜೆಪಿ ಸದಸ್ಯರು ವಿಷಯ ಪ್ರಸ್ತಾಪಿಸುತ್ತಿದ್ದಾರೆ ಎಂದು ಕಾಂಗ್ರೆಸ್ ಸದಸ್ಯರು ಆಕ್ಷೇಪ ಎತ್ತಿದರು. ಗದ್ದಲ ಜೋರಾಗಿ ಬಿಜೆಪಿ ಸದಸ್ಯರು ಸಭಾಧ್ಯಕ್ಷರ ಪೀಠದ ಎದುರು ಧರಣಿ ಆರಂಭಿಸಿದರು. ಸಭಾಧ್ಯಕ್ಷ ಯು.ಟಿ. ಖಾದರ್ ಅಲ್ಪಕಾಲ ಕಲಾಪ ಮುಂದೂಡಿದರು.

ಮಧ್ಯಾಹ್ನ 12.50ಕ್ಕೆ ಕಲಾಪ ಮತ್ತೆ ಆರಂಭವಾಯಿತು. 'ಕಾಂಗ್ರೆಸ್ ಪಕ್ಷದ ಆಡಳಿತದಲ್ಲಿ ರಾಜ್ಯದ ಗೌರವ ಹಾಳಾಗುತ್ತಿದೆ' ಎಂದು ಬಿಜೆಪಿ ಸದಸ್ಯರು ಧರಣಿಯಲ್ಲೇ ನಿಂತು ಹೇಳಿದರು. ಸಿಟ್ಟಿಗೆದ್ದ ಸ್ಪೀಕರ್, 'ನಿಮ್ಮಿಂದ ಗೌರವ ಹಾಳಾಗುತ್ತಿದೆ. ಸದನಕ್ಕೆ ನಿಮ್ಮನ್ನು ಕಳುಹಿಸಿರುವ ಜನರು ಗಮನಿಸುತ್ತಿದ್ದಾರೆ. ಆಸನಗಳಿಗೆ ಮರಳಿ, ಚರ್ಚೆಯಲ್ಲಿ ಭಾಗವಹಿಸಿ' ಎಂದು ರೇಗಿದರು.

ಬಿಜೆಪಿಯ ಬಸವರಾಜ ಬೊಮ್ಮಾಯಿ, 'ಅರ್ಹತೆಯೇ ಇಲ್ಲದವರಿಗೆ ಆತಿಥ್ಯ ನೀಡಲು ಐಎಎಸ್ ಅಧಿಕಾರಿಗಳನ್ನು ನಿಯೋಜಿಸಲಾಗಿದೆ. ಪುಡಿ ಪಕ್ಷಗಳ ಅಧ್ಯಕ್ಷರ ಎದುರು ಐಎಎಸ್ ಅಧಿಕಾರಿಗಳು ಗುಮಾಸ್ತರಂತೆ ಎರಡು ದಿನ ಬಾಗಿಲು ಕಾದಿದ್ದಾರೆ. ರಾಜಕೀಯ ರೊಟ್ಟಿ ಸುಡಲು ರಾಜ್ಯದ ಮಾನ ಹರಾಜು ಹಾಕುತ್ತೀರಾ' ಎಂದು ಕಿಡಿಕಾರಿದರು.

ಉತ್ತರ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, 'ಅತಿಥಿಗಳ ಆತಿಥ್ಯಕ್ಕೆ ಐಎಎಸ್ ಅಧಿಕಾರಿಗಳನ್ನು ನಿಯೋಜಿಸುವುದು ಹೊಸತಲ್ಲ. ಹಿಂದೆ ಎಚ್.ಡಿ. ಕುಮಾರಸ್ವಾಮಿ ಅವರ ಪ್ರಮಾಣವಚನ ಸಂದರ್ಭದಲ್ಲೂ ಮಾಡಲಾಗಿತ್ತು. ಆಗ ಪ್ರಶ್ನಿಸದವರು ಈಗ ಪ್ರಶ್ನಿಸುತ್ತೀರಾ' ಎಂದರು.

ಶಿಕ್ಷೆ ಕೊಡದೇ ಚಹಾ ಕುಡಿಸಬೇಕಿತ್ತೇ: ಖಾದರ್ ಪ್ರಶ್ನೆ

'ಬಿಜೆಪಿಯವರ ನಡವಳಿಕೆಗೆ ಶಿಕ್ಷೆ ಕೊಡದೇ ಒಳಗೆ ಕರೆದು ಚಹಾ ಕುಡಿಸಬೇಕಿತ್ತೆ' ಎಂದು ಸಭಾಧ್ಯಕ್ಷ ಯು.ಟಿ.ಖಾದರ್ ಆಕ್ರೋಶ ವ್ಯಕ್ತಪಡಿಸಿದರು.

'ಇಂತಹ ವರ್ತನೆಯನ್ನು ಸಹಿಸುವ ಪ್ರಶ್ನೆಯೇ ಇಲ್ಲ. ಇದನ್ನು ಮುಂದುವರಿಸಿದರೆ ಇನ್ನೂ ಕಠಿಣ ಶಿಕ್ಷೆ ನೀಡಲು ಹಿಂಜರಿಯುವುದಿಲ್ಲ' ಎಂದು ಅವರು ಎಚ್ಚರಿಕೆ ನೀಡಿದರು.

'ಬಿಜೆಪಿಯವರ ದುರ್ವರ್ತನೆ ಸರಿಪಡಿಸುವ ಜವಾಬ್ದಾರಿ ನಮ್ಮದು. ನಾವೆಲ್ಲ ಸೇರಿ ಅವರನ್ನು ಸತ್ಪ್ರಜೆಯನ್ನಾಗಿ ಮಾಡಬೇಕು. ನಾನು ಒಳ್ಳೆಯತನದಿಂದಲೇ ನಡೆದುಕೊಳ್ಳುತ್ತೇನೆ. ಉಪಸಭಾಧ್ಯಕ್ಷರು ಪೀಠದಲ್ಲಿದ್ದಾಗ ಅವರ ಮೇಲೆ ಹಲ್ಲೆ ಮಾಡುವ ರೀತಿಯಲ್ಲಿ ವರ್ತಿಸಿದ್ದಾರೆ. ಅಮಾನವೀಯವಾಗಿ ನಡೆದುಕೊಂಡಿದ್ದಾರೆ. ಹೀಗಾಗಿ ಬಿಜೆಪಿ ಸದಸ್ಯರ ಮೇಲೆ ಕಠಿಣ ಕ್ರಮ ಅಗತ್ಯವಿತ್ತು' ಎಂದು ಅಮಾನತು ಕ್ರಮವನ್ನು ಸಮರ್ಥಿಸಿಕೊಂಡರು.

'ಸಮಸ್ಯೆ ಬಗೆಹರಿಸುವ ಭರವಸೆ'

ರವಿಚಂದ್ರನ್, ಶಿವರಾಜ್‌ಕುಮಾರ್ ಭೇಟಿ ಮಾಡಿದ ಕುಮಾರ್

ಪ್ರಜಾವಾಣಿ ವಾರ್ತೆ

ಎಂ.ಎನ್. ಕುಮಾರ್

ಬೆಂಗಳೂರು: ಚಿತ್ರವೊಂದಕ್ಕಾಗಿ ಮುಂಗಡ ಹಣ ನೀಡಿರುವುದಕ್ಕೆ ಸಂಬಂಧಿಸಿದಂತೆ ಉಂಟಾಗಿರುವ ತಮ್ಮ ಹಾಗೂ ನಟ ಸುದೀಪ್ ನಡುವಿನ ವಿವಾದವನ್ನು ಶೀಘ್ರದಲ್ಲಿ ಬಗೆಹರಿಸುವುದಾಗಿ ಹಿರಿಯ ನಟ ರವಿಚಂದ್ರನ್ ಭರವಸೆ ನೀಡಿದ್ದಾರೆ ಎಂದು ನಿರ್ಮಾಪಕ ಎಂ.ಎನ್.ಕುಮಾರ್ ಹೇಳಿದರು.

ಬುಧವಾರ ನಟ ರವಿಚಂದ್ರನ್ ಅವರನ್ನು ಭೇಟಿಯಾಗಿ ಎಂ.ಎನ್. ಕುಮಾರ್ ಸುದೀರ್ಘ ಮಾತುಕತೆ ನಡೆಸಿದರು. ವಿವಾದಕ್ಕೆ ಸಂಬಂಧಿಸಿದಂತೆ ಕೆಲ ದಾಖಲೆಗಳನ್ನು ರವಿಚಂದ್ರನ್ ಅವರಿಗೆ ನೀಡಿದರು.

'ರವಿಚಂದ್ರನ್ ಅವರನ್ನು ಭೇಟಿಯಾಗಿ ನನ್ನ ಸಮಸ್ಯೆಗಳನ್ನು ಹೇಳಿಕೊಂಡಿರುವೆ. ಅವರು ಎಲ್ಲವನ್ನೂ ಕೇಳಿಸಿಕೊಂಡಿದ್ದಾರೆ. ನಂಬಿಕೆ ಇದ್ದರೆ ವಿವಾದವನ್ನು ನನಗೆ ಬಿಡು, ಸರಿಪಡಿಸುತ್ತೇನೆ ಎಂದಿದ್ದಾರೆ. ಅವರ ಮೇಲೆ ನಂಬಿಕೆ ಇದೆ. ಹೀಗಾಗಿ ಅವರ ಮುಂದಿನ ಸಲಹೆಗಾಗಿ ಕಾಯುತ್ತೇನೆ' ಎಂದು ಎಂ.ಎನ್.ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

'ರವಿಚಂದ್ರನ್ ಏನೇ ಸಲಹೆ ನೀಡಿದರೂ ಹಿತದೃಷ್ಟಿಯಿಂದಲೇ ನೀಡುತ್ತಾರೆ. ಹೀಗಾಗಿ ಅವರ ತೀರ್ಮಾನಕ್ಕೆ ನಾನು ಬದ್ಧನಾಗಿರುವೆ. ಇಬ್ಬರ ಸಮಸ್ಯೆ ಆಲಿಸಿದ ನಂತರ ಮುಂದಿನ ತೀರ್ಮಾನ ನೀಡುವುದಾಗಿ ಅವರು ಹೇಳಿದ್ದಾರೆ' ಎಂದು ಕುಮಾರ್ ಹೇಳಿದರು.

ಶಿವರಾಜ್‌ಕುಮಾರ್ ಭೇಟಿ: ವಿವಾದಕ್ಕೆ ಸಂಬಂಧಿಸಿದಂತೆ ಚಿತ್ರರಂಗದ ಮತ್ತೊಬ್ಬ ಹಿರಿಯ ನಟ ಶಿವರಾಜ್ ಕುಮಾರ್ ಅವರನ್ನೂ ಕುಮಾರ್ ಬುಧವಾರ ಕಂಠೀರವ ಸ್ಟುಡಿಯೋದಲ್ಲಿ ಭೇಟಿಯಾದರು.

'ಶಿವರಾಜ್ ಕುಮಾರ್ ಅವರನ್ನು ಭೇಟಿಯಾಗಿ ವಾಸ್ತವಾಂಶಗಳನ್ನು ತಿಳಿಸಿರುವೆ. ಅವರು ಕೆಲವು ಸಲಹೆಗಳನ್ನು ನೀಡಿದ್ದಾರೆ. ಅವುಗಳನ್ನು ಚಲನಚಿತ್ರ ವಾಣಿಜ್ಯ ಮಂಡಳಿಯಲ್ಲಿ ಚರ್ಚಿಸಿ, ಮುಂದಿನ ನಿರ್ಧಾರಕ್ಕೆ ಬರಲಾಗುವುದು. ನಟ ಸುದೀಪ್ ಅವರ ಕಾನೂನು ಹೋರಾಟಕ್ಕೆ ನ್ಯಾಯಾಲಯಕ್ಕೆ ಹಾಜರಾಗಿಯೇ ಉತ್ತರಿಸುತ್ತೇನೆ' ಎಂದು ಕುಮಾರ್ ತಿಳಿಸಿದರು.

ಕುಮಾರ್ ಆರೋಪಕ್ಕೆ ಪ್ರತಿಯಾಗಿ ನಟ ಸುದೀಪ್ ಕಾನೂನು ಹೋರಾಟಕ್ಕೆ ಮುಂದಾಗಿದ್ದಾರೆ. ಅದಕ್ಕೆ ಉತ್ತರವಾಗಿ ಕುಮಾರ್ ಚಲನಚಿತ್ರ ವಾಣಿಜ್ಯ ಮಂಡಳಿ ಮುಂದೆ ಧರಣಿ ಪ್ರಾರಂಭಿಸಿದ್ದರು. ಇದರ ಬೆನ್ನಲ್ಲೇ 'ಧರಣಿ ಕೈಬಿಟ್ಟು ಕುಮಾರ್ ದಾಖಲೆಗಳೊಂದಿಗೆ ನನ್ನ ಬಳಿ ಬರಲಿ' ಎಂದು ರವಿಚಂದ್ರನ್ ಅವರು ಸಲಹೆ ನೀಡಿದ್ದ ಕಾರಣ ಕುಮಾರ್ ರವಿಚಂದ್ರನ್ ಅವರನ್ನು ಭೇಟಿಯಾದರು.

'ಕರ್ನಾಟಕಕ್ಕೆ ರಾಜ್‌ಕುಮಾರ್ ಕುಟುಂಬವೇ ಮೊದಲು. ಶಿವರಾಜ್ ಕುಮಾರ್ ಅವರ ಬಳಿಯೇ ಮೊದಲು ಹೋಗಬೇಕು. ಮೊದಲು ನಿಮ್ಮ ಮನವಿ ಪತ್ರ ಶಿವರಾಜ್‌ಕುಮಾರ್ ಅವರಿಗೆ ನೀಡಿ ಎಂದು ನಿರ್ಮಾಪಕರಿಗೆ ತಿಳಿಸಿದ್ದೇನೆ. ಅದೇ ನಮಗೆ ಪ್ರಧಾನ ಕಚೇರಿ' ಎಂದು ರವಿಚಂದ್ರನ್ ಹೇಳಿದ್ದರು.

'ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ' ಟ್ರೈಲರ್ ವಿವಾದ

₹1 ಕೋಟಿ ಪರಿಹಾರ ಕೇಳಿದ ರಮ್ಯಾ

ಪ್ರಜಾವಾಣಿ ವಾರ್ತೆ

ರಮ್ಯಾ

ಬೆಂಗಳೂರು: 'ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ' ಸಿನಿಮಾದ ಟ್ರೇಲರ್‌ನಲ್ಲಿ ನನ್ನ ಅನುಮತಿಯಿಲ್ಲದೆ ನಾನಿರುವ ದೃಶ್ಯಗಳನ್ನು ಚಿತ್ರತಂಡ ಬಳಸಿಕೊಂಡಿದೆ ಎಂದು ಆರೋಪಿಸಿ ನಟಿ ರಮ್ಯಾ ಅವರು ಗುಲ್‌ಮೊಹರ್ ಫಿಲ್ಮಸ್ ಪ್ರೈ ಲಿಮಿಟೆಡ್ ಕಂಪನಿಗೆ ವಕೀಲರ ಮೂಲಕ ಬುಧವಾರ ನೋಟಿಸ್ ನೀಡಿದ್ದಾರೆ.

'ಕೇವಲ ಪ್ರಚಾರದ ವಿಡಿಯೊದಲ್ಲಿ ಮಾತ್ರ ಕಾಣಿಸಿಕೊಳ್ಳಲು ಚಿತ್ರತಂಡ ನನ್ನೊಂದಿಗೆ ಒಪ್ಪಂದ ಮಾಡಿಕೊಂಡಿತ್ತು. ಆದರೆ ಈ ಒಪ್ಪಂದವನ್ನು ಉಲ್ಲಂಘಿಸಿ ನನ್ನನ್ನು ಚಿತ್ರದಲ್ಲಿ ತೋರಿಸಲಾಗಿದೆ. ಇದರಿಂದ ನನಗೆ ಆಗಿರುವ ನಷ್ಟವನ್ನು ತುಂಬಿಕೊಡಬೇಕು ಹಾಗೂ ಎಲ್ಲ ಕಡೆಗಳಿಂದ ನಾನಿರುವ ದೃಶ್ಯ, ಫೋಟೊ, ಸುದ್ದಿ ಮತ್ತಿತ್ತರ ಪ್ರಚಾರದ ಸರಕುಗಳನ್ನು ತೆಗೆದು ಹಾಕಬೇಕು. ₹ 1 ಕೋಟಿ ರೂಪಾಯಿ ಪರಿಹಾರ ನೀಡಬೇಕು' ಎಂದು ಹೇಳಿದ್ದಾರೆ.

ಜುಲೈ 21ಕ್ಕೆ ಚಿತ್ರ ಬಿಡುಗಡೆಯಾಗಲಿದೆ ಎಂದು ಚಿತ್ರತಂಡ ಈ ಹಿಂದೆ ಘೋಷಿಸಿತ್ತು. ಈ ಹಠಾತ್ ಬೆಳವಣಿಗೆಯಿಂದ ಗುರುವಾರ ಆಯೋಜಿಸಲಾಗಿದ್ದ ಚಿತ್ರದ ಪ್ರೀಮಿಯರ್ ಶೋ ರದ್ದಾಗಿದೆ. 'ಇ–ಮೇಲ್ ಮೂಲಕ ನೋಟಿಸ್ ಕಳುಹಿಸಲಾಗಿದೆ. ಆದರೆ ಚಿತ್ರತಂಡಕ್ಕೆ ಅದರ ಪ್ರತಿ ಸಿಕ್ಕಿಲ್ಲ' ಎಂದು ಚಿತ್ರತಂಡದ ಮೂಲಗಳು ಹೇಳಿವೆ. ಚಿತ್ರದ ನಿರ್ದೇಶಕರು ಮತ್ತು ನಟಿ ರಮ್ಯಾ ಇಬ್ಬರೂ ಈ ಬಗ್ಗೆ ಪ್ರತಿಕ್ರಿಯೆಗೆ ಸಿಕ್ಕಿಲ್ಲ.

ದೃಶ್ಯ ತೆಗೆಯಲು ಕೋರ್ಟ್ ನಿರ್ದೇಶನ

ಬಿಡುಗಡೆಗೆ ಸಿದ್ಧವಾಗಿರುವ 'ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ' ಚಿತ್ರ ಮತ್ತು ಟ್ರೇಲರ್‌ನಲ್ಲಿ ಅನಧಿಕೃತವಾಗಿ ಬಳಸಲಾಗಿದೆ ಎನ್ನಲಾದ ನಟಿ ರಮ್ಯಾ (ದಿವ್ಯ ಸ್ಪಂದನಾ) ಅವರ ವಿಡಿಯೊ ತುಣುಕನ್ನು ತೆಗೆದುಹಾಕುವಂತೆ ಚಿತ್ರ ನಿರ್ಮಾಣ ಹಾಗೂ ವಿತರಕ ಸಂಸ್ಥೆಗೆ ನಗರದ ಸೆಷನ್ಸ್ ಕೋರ್ಟ್ ನಿರ್ದೇಶಿಸಿದೆ.

'ನನ್ನ ವಿಡಿಯೊ ಕ್ಲಿಪ್ ಅನ್ನು ಚಿತ್ರ ಮತ್ತು ಟ್ರೇಲರ್‌ನಲ್ಲಿ ಅನಧಿಕೃತವಾಗಿ ಬಳಸಲಾಗಿದೆ' ಎಂದು ಆರೋಪಿಸಿ ರಮ್ಯಾ ಸಲ್ಲಿಸಿರುವ ಅಸಲು ದಾವೆ ವಿಚಾರಣೆ ನಡೆಸಿದ 83ನೇ ಹೆಚ್ಚುವರಿ ಸೆಷನ್ಸ್ (ವಾಣಿಜ್ಯ ಕೋರ್ಟ್ ಸಂಖ್ಯೆ-84) ನ್ಯಾಯಾಲಯ ಈ ಕುರಿತಂತೆ ಆದೇಶಿಸಿದೆ.

'ಯೂ–ಟ್ಯೂಬ್ ಹಾಗೂ ಇತರೆ ಎಲ್ಲಾ ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಸಾರ ಮಾಡಿರುವ 'ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ' ಚಿತ್ರದ ಟ್ರೇಲರ್‌ನಿಂದ ರಮ್ಯಾ ಅವರ ವಿಡಿಯೊ ತುಣುಕು ತೆಗೆದುಹಾಕಬೇಕು. ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ರಮ್ಯಾ ಅವರ ವಿಡಿಯೊ ತುಣುಕು, ಫೋಟೊ, ಜಿಫ್ (ಗ್ರಾಫಿಕ್ಸ್ ಇಂಟರ್‌ಚೇಂಜ್ ಫಾರ್ಮ್ಯಾಟ್) ಇರುವ ಚಿತ್ರವನ್ನು ದಾವೆ ಇತ್ಯರ್ಥಪಡಿಸುವರೆಗೂ ಬಿಡುಗಡೆ ಮಾಡಬಾರದು' ಎಂದು ಚಿತ್ರದ ನಿರ್ಮಾಣ ಸಂಸ್ಥೆ ಗುಲ್‌ಮೊಹರ್ ಫಿಲ್ಮ್ಸ್ ಪ್ರೈ.ಲಿಮಿಟೆಡ್ ಕಂಪನಿ ಹಾಗೂ ವಿತರಕ ಸಂಸ್ಥೆ ಜೀ ಎಂಟರ್‌ಟೈನ್ಮೆಂಟ್ ಎಂಟರ್‌ಪ್ರೈಸೆಸ್ ಪ್ರೈ.ಲಿಮಿಟೆಡ್ ಹಾಗೂ ದಾವೆಯ ಇತರೆ ಪ್ರತಿವಾದಿಗಳಿಗೆ ಆದೇಶಿಸಿದೆ. ವಿಚಾರಣೆಯನ್ನು ಆಗಸ್ಟ್ 7ಕ್ಕೆ ಮುಂದೂಡಲಾಗಿದೆ.

ಪಿಟಿಸಿಎಲ್ ಮಸೂದೆ ಮಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಯವರ ಜಮೀನಿನ ಹಕ್ಕು ರಕ್ಷಣೆಗಾಗಿ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜಮೀನು ಪರಭಾರೆ ನಿಷೇಧ (ತಿದ್ದುಪಡಿ) ಮಸೂದೆಯನ್ನು ವಿಧಾನಸಭೆಯಲ್ಲಿ ಬುಧವಾರ ಮಂಡಿಸಲಾಯಿತು.

ಕಂದಾಯ ಸಚಿವ ಕೃಷ್ಣ ಬೈರೇಗೌಡ ಮಸೂದೆಯನ್ನು ಮಂಡಿಸಿದರು. ಪರಿಶಿಷ್ಟರ ಭೂಮಿ ಅಕ್ರಮ ಪರಭಾರೆ ಪ್ರಶ್ನಿಸಿ ನ್ಯಾಯಾಲಯದಲ್ಲಿ ಮನವಿ ಸಲ್ಲಿಸುವುದಕ್ಕೆ ಹಿಂದೆ ವಿಧಿಸಿದ್ದ ಕಾಲಮಿತಿಯನ್ನು ರದ್ದುಪಡಿಸಲಾಗಿದೆ.

ಕಾಡಿದ ಸಚಿವರ ಗೈರು

ಬೆಂಗಳೂರು: 'ಕನಿಷ್ಠ ಮೂವರು ಸಚಿವರು ಇಲ್ಲದೆ ಕಲಾಪ ನಡೆಸಲು ಆಗದು' ಎಂಬ ಬಿಜೆಪಿಯ ಕೋಟ ಶ್ರೀನಿವಾಸ ಪೂಜಾರಿ ಮಾತಿಗೆ ವಿರೋಧ ಪಕ್ಷದ ಇತರೆ ಸದಸ್ಯರೂ ಧ್ವನಿಗೂಡಿಸಿದ್ದರಿಂದ ಮಧ್ಯಾಹ್ನದ ನಂತರ ಆರಂಭವಾದ ವಿಧಾನ ಪರಿಷತ್ ಕಲಾಪಗಳನ್ನು ಸಭಾಪತಿ ಬಸವರಾಜ ಹೊರಟ್ಟಿ ಐದು ನಿಮಿಷ ಮುಂದೂಡಿದರು.

ಮಲೆನಾಡಿನಲ್ಲೂ ಭಾರಿ ಮಳೆ ● ಜಲಾಶಯಗಳ ನೀರಿನ ಮಟ್ಟ ಏರಿಕೆ ● ಖಾನಾಪುರ– ಅನಮೋಡ ಸಂಚಾರ ಬಂದ್

ಕಿತ್ತೂರು ಕರ್ನಾಟಕದಲ್ಲಿ ಮಳೆ ಬಿರುಸು



ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಕಣಕುಂಬಿ ಅರಣ್ಯ ವ್ಯಾಪ್ತಿಯ ಪಾರವಾಡ ಗ್ರಾಮದ ಬಳಿ ಇರುವ ವಜ್ರಧಾರಾ ಜಲಪಾತದಲ್ಲಿ ನೀರು ಧುಮ್ಮಿಕ್ಕಿತು ಪ್ರಜಾವಾಣಿ ಚಿತ್ರಗಳು: ಪ್ರಸನ್ನ ಕುಲಕರ್ಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಿತ್ತೂರು ಕರ್ನಾಟಕ, ಮಲೆನಾಡು ಭಾಗದಲ್ಲಿ ಮಳೆ ಆರ್ಭಟಿಸಿದ್ದರೆ, ಕಲ್ಯಾಣ ಕರ್ನಾಟಕ ಭಾಗದಲ್ಲಿ ತುಸು ತಗ್ಗಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಮುಂಗಾರು ಮಳೆ ಚುರುಕು ಪಡೆದುಕೊಂಡಿದ್ದು, ಮಲೆನಾಡು ಭಾಗದಲ್ಲಿ ಧಾರಾಕಾರವಾಗಿ ಮಳೆ ಸುರಿಯುತ್ತಿದೆ. ಮಂಗಳವಾರ ರಾತ್ರಿಯಿಂದ ಆರಂಭವಾದ ಮಳೆ ಬುಧವಾರ ಬಿಟ್ಟು ಬಿಡದೆ ಸುರಿಯಿತು. ಕೊಪ್ಪ, ಶೃಂಗೇರಿ, ಮೂಡಿಗೆರೆ, ಕೊಟ್ಟಿಗೆಹಾರ, ಆಲ್ದೂರು, ಎನ್‌.ಆರ್‌.ಪುರ, ಕಳಸ, ಬಾಳೆಹೊನ್ನೂರು ಭಾಗದಲ್ಲಿ ಎಡಬಿಡದೆ ಸುರಿಯುತ್ತಿದೆ.

ಮಲೆನಾಡಿನ ಭಾಗಕ್ಕೆ ಜೀವ ಕಳೆ ಬಂದಂತಾಗಿದೆ. ಒಂದೂವರೆ ತಿಂಗಳ ಹಿಂದೆಯೇ ಆರಂಭವಾಗಬೇಕಿದ್ದ ಮಳೆ, ತಡವಾಗಿಯಾದರೂ ಆರಂಭವಾಗಿರುವುದು ಈ ಭಾಗದ ಜನರಲ್ಲಿ ಸಂತಸದ ಮೂಡಿಸಿದೆ. ಜಿಲ್ಲೆಯಲ್ಲಿ ಇನ್ನೂ ಐದು ದಿನ ಭಾರಿ ಮಳೆ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ಅಂದಾಜಿಸಿದ್ದು, 'ಯೆಲ್ಲೊ ಅಲರ್ಟ್' ಘೋಷಿಸಿದೆ. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗಿದೆ.

ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಮಳೆ ತುಸು ತಗ್ಗಿದೆ. ಕಲಬುರಗಿ, ರಾಯಚೂರಿನಲ್ಲಿ ಆಗಾಗ ತುಂತುರು ಮಳೆಯಾಗಿದೆ. ಕೊಪ್ಪಳದಲ್ಲಿ ಜಿಟಿ ಜಿಟಿ ಮಳೆಯಾಗಿದೆ.

ಬೀದರ್ ಜಿಲ್ಲೆಯ ಬಹುತೇಕ ಕಡೆ ಜಿಟಿಜಿಟಿ ಮಳೆಯಾಗಿದೆ. ಸತತ ಮಳೆಗೆ ಹುಮನಾಬಾದ್ ತಾಲ್ಲೂಕಿನ ಕಠಳ್ಳಿ ಗ್ರಾಮದಲ್ಲಿ ಅಮೃತ ಅವರ ಮನೆ ಗೋಡೆ ಕುಸಿದು ಬಿದ್ದಿದೆ.

ಬೆಳಗಾವಿ, ಉತ್ತರಕನ್ನಡ, ಹುಬ್ಬಳ್ಳಿ, ಧಾರವಾಡ ಮತ್ತು ಬಾಗಲಕೋಟೆ ಜಿಲ್ಲೆಯಲ್ಲಿ ಜೋರು ಮಳೆಯಾಗಿದೆ.

ಧಾರವಾಡ ತಾಲ್ಲೂಕಿನ ಬೊಗೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಕೊಠಡಿಯ ಸೀಲಿಂಗ್ ಕುಸಿದು ವಿದ್ಯಾರ್ಥಿಯೊಬ್ಬನಿಗೆ ಗಾಯವಾಗಿದೆ. ಬಾಗಲಕೋಟೆ ಜಿಲ್ಲೆಯ ಸಾವಳಗಿಯಲ್ಲಿ ಮನೆ ಚಾವಣಿ ಕುಸಿದು ತಾಯಿ ಮತ್ತು ಇಬ್ಬರು ಮಕ್ಕಳು ಗಾಯಗೊಂಡಿದ್ದಾರೆ. ಬೆಳಗಾವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ಅರಣ್ಯ ಪ್ರದೇಶದಲ್ಲಿ ಮಳೆ, ಬಿರುಗಾಳಿಗೆ 20ಕ್ಕೂ ಹೆಚ್ಚು ವಿದ್ಯುತ್ ಕಂಬಗಳು, ಹಲವು ಮರಗಳು ಧರೆಗುರುಳಿವೆ.

ಧಾರವಾಡದ ಸನ್ಮತಿನಗರದಲ್ಲಿ ಗಾಳಿ, ಮಳೆಗೆ ವಿದ್ಯುತ್ ಕಂಬ ಬಿದ್ದು ಕಾರು ಜಖಂಗೊಂಡಿದೆ. ಕಲಘಟಗಿ ತಾಲ್ಲೂಕಿನ ಮಲಕನಕೊಪ್ಪ ಗ್ರಾಮದಲ್ಲಿ ತರಕಾರಿ ಬೆಳೆ ನೆಲಕಚ್ಚಿವೆ. ಹುಬ್ಬಳ್ಳಿ ನಗರ ಹಾಗೂ ತಾಲ್ಲೂಕಿನಲ್ಲಿ ದಿನವಿಡೀ ಮಳೆಯಾಗಿದೆ. ಬಾಗಲಕೋಟೆ ಜಿಲ್ಲೆಯ ಬಹುತೇಕ ಕಡೆ ಸತತ ಮಳೆಯಾಗಿದೆ.

ಹೊಟ್ಟೆಪಾಡಿಗೆ ಮಳೆಯಾದರೇನು ಬಿಸಿಲಾದರೇನು... ಕೊಪ್ಪಳದಲ್ಲಿ ಬುಧವಾರ ಸುರಿದ ಜಿಟಿಜಿಟಿ ಮಳೆಯ ನಡುವೆಯೂ ಮಾರಾಟದ ಸಾಮಗ್ರಿ ಹೊತ್ತು ವ್ಯಾಪಾರಕ್ಕೆ ತೆರಳಿದ ಮಹಿಳೆಯರು –ಪ್ರಜಾವಾಣಿ ಚಿತ್ರ/ಭರತ್ ಕಂದಕೂರ

ಮೈದುಂಬಿದ ಶರಾವತಿ

ಶಿವಮೊಗ್ಗ ನಗರ ಸೇರಿದಂತೆ ಮಲೆನಾಡಿನಲ್ಲಿ ಮಳೆ ಚುರುಕುಗೊಂಡಿದೆ. ಜಿಲ್ಲೆಯಲ್ಲಿ ಕಳೆದ 24 ಗಂಟೆಗಳ ಅವಧಿಯಲ್ಲಿ 16.4 ಸೆಂ.ಮೀ ಮಳೆ ಸುರಿದಿದೆ. ಯಡೂರಿನಲ್ಲಿ 14.8 ಸೆಂ.ಮೀ, ಹುಲಿಕಲ್‌ನಲ್ಲಿ 10.8 ಸೆಂ.ಮೀ ಹಾಗೂ ತೀರ್ಥಹಳ್ಳಿ ತಾಲ್ಲೂಕಿನ ಆಗುಂಬೆಯಲ್ಲಿ 13.02 ಸೆಂ.ಮೀ ಮಳೆ ಬಿದ್ದಿದೆ.

ಹೊಸನಗರ ತಾಲ್ಲೂಕಿನ ಜೀವನದಿ ಶರಾವತಿಗೆ ಜೀವಕಳೆ ಬಂದಿದ್ದು, ಮೈದುಂಬಿ ಹರಿಯುತ್ತಿದೆ. ದಾವಣಗೆರೆ ನಗರ ಹಾಗೂ ಜಿಲ್ಲೆಯ ವಿವಿಧೆಡೆ ಹದ ಮಳೆಯಾಗಿದೆ.

ಬೆಳಗಾವಿ ನಗರ ಹಾಗೂ ಜಿಲ್ಲೆಯ ಎಲ್ಲೆಡೆ ಧಾರಾಕಾರ ಮಳೆಯಾಗಿದ್ದು, ನದಿಗಳ ನೀರಿನ ಹರಿವು ಹೆಚ್ಚಿದೆ. ಜಲಾಶಯಗಳ ನೀರಿನ ಪ್ರಮಾಣವೂ ಏರಿಕೆಯಾಗಿದೆ. ಹಿಡಕಲ್‌ನ ರಾಜಾ ಲಖಮಗೌಡ ಜಲಾಶಯದಲ್ಲಿ ಒಳಹರಿವು 13,753 ಕ್ಯುಸೆಕ್ ಏರಿದ್ದು, ನವಿಲುತೀರ್ಥದ ರೇಣುಕಾಸಾಗರ ಜಲಾಶಯದಲ್ಲೂ 3,851 ಕ್ಯುಸೆಕ್ ಒಳಹರಿವು ದಾಖಲಾಗಿದೆ.

ಮಲಪ್ರಭಾ ಹಾಗೂ ಘಟಪ್ರಭಾ ನದಿಗಳಲ್ಲಿ ನೀರಿನ ಹರಿವು ಹೆಚ್ಚಾಗಿದ್ದರಿಂದ ಯಮಕನಮರಡಿ ಸಮೀಪದ ಹುನ್ನೂರಿನ ವಿಠ್ಠಲ- ರುಕ್ಮಿಣಿ ಮಂದಿರ, ಎಂ.ಕೆ. ಹುಬ್ಬಳ್ಳಿಯ ಗಂಗಾಂಬಿಕಾ ಐಕ್ಯಮಂಟಪ, ಖಾನಾಪುರ ತಾಲ್ಲೂಕಿನ ಹೆಬ್ಬನಟ್ಟಿಯ ಮಾರುತಿ ಮಂದಿರಗಳು ಜಲಾವೃತಗೊಂಡಿವೆ.

ಖಾನಾಪುರ ಅರಣ್ಯ ಪ್ರದೇಶದಲ್ಲಿ ಬಿರುಗಾಳಿ ಮಳೆಗೆ ವಿದ್ಯುತ್ ಕಂಬಗಳು, ಹಲವು ಮರಗಳು ಧರೆಗುರುಳಿವೆ. ಲೋಂಡಾ, ಕಣಕುಂಬಿ, ಭೀಮಘಡ ಮತ್ತು ಜಾಂಬೋಟಿ ಭಾಗದ ವಿವಿಧ ಗ್ರಾಮಗಳಿಗೆ ವಿದ್ಯುತ್ ಕಡಿತ ಮಾಡಲಾಗಿದೆ. ಮಲಪ್ರಭೆಯ ನೀರು ಸೇತುವೆ ಮೇಲೆ ಹರಿದಿದ್ದರಿಂದ ಖಾನಾಪುರ– ಅನಮೋಡ ಮಾರ್ಗದ ಸಂಚಾರ ಬಂದ್ ಮಾಡಲಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ, ಸಿದ್ದಾಪುರ, ಶಿರಸಿಯಲ್ಲಿ ಧಾರಾಕಾರ ಮಳೆಯಾಗಿದೆ. ಅಘನಾಶಿನಿ, ಶಾಲ್ಮಲಾ, ವರದಾ ನದಿಯಲ್ಲಿ ನೀರಿನ ಹರಿವು ಹೆಚ್ಚಿದೆ. ಜೊಯಿಡಾ ತಾಲ್ಲೂಕಿನ ಕದ್ರಾ ಜಲಾಶಯದಲ್ಲಿ ಒಳ ಹರಿವಿನ ಪ್ರಮಾಣ 14,516 ಕ್ಯುಸೆಕ್‌ಗೆ ಏರಿದೆ.

ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳಲ್ಲಿಯೂ ದಿನವಿಡೀ ಜಿಟಿ ಜಿಟಿ ಮಳೆಯಾಗಿದ್ದು ಹರಪನಹಳ್ಳಿಯಲ್ಲಿ ಮೂರು ಮನೆಗಳಿಗೆ ಭಾಗಶಃ ಹಾನಿಯಾಗಿವೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಮೀ.)	ಇಂದಿನ ಮಟ್ಟ (ಮೀ.)	ಒಳಹರಿವು (ಕ್ಯು) (ಕ್ಯುಸೆಕ್‌ಗಳಲ್ಲಿ)	ಹೊರಹರಿವು
ಕೆಆರ್‌ಎಸ್	124.80	90	1,841	400
ಹಾರಂಗಿ	2,859	2,848.25	5,612	50
ಕಬಿನಿ	2,284	2,271.24	4,065	800
ಹೇಮಾವತಿ	2,922	2,894.30	2,189	200
ಲಿಂಗನಮಕ್ಕಿ	1,819	1,757.30	12,229	1,549
ಸೂಪಾ	564	529.70	28,320.17	572.55
ಮಾಣಿ	595	574.42	2,948	-
ತುಂಗಭದ್ರಾ(ಅಡಿ)	1,633	1,590.87	8,650	259
ಮಲಪ್ರಭಾ	2,079.50	2,044.10	3,851	194
ಘಟಪ್ರಭಾ	2,175	2,098.80	13,753	96
ಭದ್ರಾ	186 (ಅಡಿ)	141.50 (ಅಡಿ)	835	164
ಆಲಮಟ್ಟಿ	519.60	509.76	21,672	561
ನಾರಾಯಣಪುರ	492.25 ಮೀ	486.78 ಮೀ	161	50

* ನೆಲಮಟ್ಟದಿಂದ

ತೋಟದಗದ್ದೆ ಬಳಿ ಭೂ ಕುಸಿತ

ಸಕಲೇಶಪುರ/ಮಡಿಕೇರಿ: ತಾಲ್ಲೂಕಿನಲ್ಲಿ ಬುಧವಾರ ಸುರಿದ ಮಳೆಗೆ, ಹಾಸನ–ಬಿ.ಸಿ. ರೋಡ್ ನಡುವಿನ ಚುತುಷ್ಪಥ ರಸ್ತೆ ವ್ಯಾಪ್ತಿಯ ತೋಟದಗದ್ದೆ ಬಳಿ ಎರಡು ಕಡೆ ಭೂ ಕುಸಿತ ಉಂಟಾಗಿದೆ.

ಭೂ ಕುಸಿತ ಹೆಚ್ಚಾಗುವ ಸಾಧ್ಯತೆ ಕಂಡು ಬಂದಿದ್ದು, ಇನ್ನೆರಡು ಎರಡು ದಿನ ಮಳೆ ಸುರಿದರೆ, ಕಾಫಿ ಬೆಳೆಗಾರ ವಿನಯ್ ಬೆಳ್ಳೂರು ಅವರ ಕಾರ್ಮಿಕರ ವಾಸದ ಮನೆ ಕುಸಿದು ರಸ್ತೆಗೆ ಬೀಳುವ ಆತಂಕ ಎದುರಾಗಿದೆ.

ದೋಣಿಗಾಲ್‌ನ ದರ್ಗಾ ಬಳಿ ಇದೇ ಹೆದ್ದಾರಿಯ ಬದಿಯಲ್ಲಿ ಅಲ್ಪ ಪ್ರಮಾಣದಲ್ಲಿ ಭೂಮಿ ಕುಸಿದಿದೆ. ತಕ್ಷಣ ಪರಿಹಾರ ಕ್ರಮ ಕೈಗೊಳ್ಳದಿದ್ದರೆ, ಮಂಗಳೂರು–ಹಾಸನ ನಡುವಿನ ಸಂಪರ್ಕ ಕಡಿತವಾಗುವ ಸಾಧ್ಯತೆ ಹೆಚ್ಚಾಗಿದೆ.

ಮಡಿಕೇರಿ ನಗರ ಸೇರಿದಂತೆ ಕೊಡಗು ಜಿಲ್ಲೆಯ ಕೆಲವೆಡೆ ಗಾಳಿ ಹಾಗೂ ಮಳೆ ಕೊಂಚ ಬಿರುಸುಗೊಂಡಿದೆ.

ಕೇರಳ ಭಾಗದಲ್ಲಿ ಸುರಿದ ಧಾರಾಕಾರ ಮಳೆಯಿಂದ ಸುಳ್ಯದಿಂದ ಪಾಣತ್ತೂರಿನ ಮಧ್ಯೆ ಕೇರಳದ ಬಾಟೋಳಿಯಲ್ಲಿ ರಸ್ತೆಗೆ ಮಣ್ಣು ಕುಸಿದಿದೆ. ಇದರಿಂದ ಕೊಡಗಿನ ಕರಿಕೆಯಿಂದ ಸುಳ್ಯಕ್ಕೆ ತೆರಳುವ ರಸ್ತೆ ಸಂಚಾರ ಬಂದ್ ಆಗಿದೆ. ಸದ್ಯ, ಸುತ್ತಿ ಬಳಸಿ ಬಂದಡ್ಕದ ಮೂಲಕ ಸುಳ್ಯಕ್ಕೆ ತೆರಳಬೇಕಿದೆ ಎಂದು ಭಾಗಮಂಡಲದ ಕಂದಾಯ ನಿರೀಕ್ಷಕ ಅನುಪ್ 'ಪ್ರಜಾವಾಣಿ'ಗೆ ತಿಳಿಸಿದರು.

ಖಾನಾಪುರ ತಾಲ್ಲೂಕಿನ ಹೆಬ್ಬನಟ್ಟಿಯ ಮಾರುತಿ ಮಂದಿರವು ಮಲಪ್ರಭಾ ನದಿ ನೀರಿನಲ್ಲಿ ಮುಳುಗಡೆಯಾಯಿತು

ಸರ್ಕಾರದಿಂದ ಬಂದ ಜಮೀನು ಭೂಸ್ವಾಧೀನ ಪರಿಹಾರದ ಹಣಕ್ಕಾಗಿ ಕುಕೃತ್ಯ

ತಂದೆ ಕೊಂದು ಹೆದ್ದಾರಿ ಪಕ್ಕ ಹೂತಿಟ್ಟ ಮಗ

ಪ್ರಜಾವಾಣಿ ವಾರ್ತೆ

ರಾಯಚೂರು: ಸರ್ಕಾರ ನೀಡಿದ ಜಮೀನು ಭೂಸ್ವಾಧೀನದ ಪರಿಹಾರ ಹಣವನ್ನು ತನಗೆ ಕೊಡಲಿಲ್ಲ ಎಂಬ ಕಾರಣಕ್ಕೆ ವ್ಯಕ್ತಿಯೊಬ್ಬ ತನ್ನ ತಂದೆಯನ್ನು ಕೊಂದು ಹೆದ್ದಾರಿ ಪಕ್ಕದಲ್ಲಿ ಹೂತಿಟ್ಟ ಘಟನೆ ತಾಲ್ಲೂಕಿನ ವಡ್ಲೂರು ಗ್ರಾಮದಲ್ಲಿ ನಡೆದಿದೆ.

ವಡ್ಲೂರು ಗ್ರಾಮದ ಶಿವನಪ್ಪ ರಾಮಣ್ಣ ಕುಂಬಾರ (70) ಕೊಲೆಯಾದವರು. ಅವರ ಪುತ್ರ ಈರಣ್ಣ ಕುಂಬಾರ (35) ಕೊಲೆ ಮಾಡಿದ ಆರೋಪಿ.

ರಾಷ್ಟ್ರೀಯ ಹೆದ್ದಾರಿ ನಿರ್ಮಾಣಕ್ಕೆ ಜಮೀನು ಸ್ವಾಧೀನಪಡಿಸಿಕೊಂಡ ಸರ್ಕಾರ ಶಿವನಪ್ಪ ಅವರಿಗೆ ಪರಿಹಾರ ಹಣ ನೀಡಿತ್ತು. ಅದನ್ನು ತನಗೆ ಕೊಡುವಂತೆ ಈರಣ್ಣ ಹಲವು ಬಾರಿ ತಂದೆಯನ್ನು ಕೇಳಿಕೊಂಡಿದ್ದ. ಆದರೆ, ಹಣ ಕೊಡಲು ಅವರು ನಿರಾಕರಿಸಿದ್ದರು.

ಜುಲೈ 7ರಂದು ಹಣದ ವಿಚಾರವಾಗಿ ತಂದೆ ಮಗನ ಮಧ್ಯೆ ಜಗಳ ನಡೆದಿತ್ತು. ಪರಿಸ್ಥಿತಿ ವಿಕೋಪಕ್ಕೆ ಹೋಗಿ ಕೋಪಗೊಂಡ ಮಗ ತಂದೆಯನ್ನು ಕೊಲೆ ಮಾಡಿ ಹೆದ್ದಾರಿ ಬಳಿ ಹೂತಿಟ್ಟಿದ್ದ. ಯಾರಿಗೂ ಅನುಮಾನ ಬಾರದಂತೆ ಆತನೇ ಮರುದಿನ ರಾಯಚೂರು ಗ್ರಾಮೀಣ ಪೊಲೀಸ್ ಠಾಣೆಗೆ ಬಂದು ತನ್ನ ತಂದೆ ಕಾಣೆಯಾಗಿದ್ದಾರೆ, ಹುಡುಕಿಕೊಡಿ ಎಂದು ಮೌಖಿಕವಾಗಿ ಮನವಿ ಮಾಡಿದ್ದ.

ಶಿವನಪ್ಪ ಕುಂಬಾರ

ಈರಣ್ಣ ಕುಂಬಾರ

ಶಿವನಪ್ಪ ಅವರಿಗೆ ಒಬ್ಬ ಮಗ ಹಾಗೂ ಇಬ್ಬರು ಹೆಣ್ಣುಮಕ್ಕಳು ಇದ್ದಾರೆ. ಶಿವನಪ್ಪ ಅವರ ಸಂಬಂಧಿಕರು ಮತ್ತೆ ಪೊಲೀಸ್ ಠಾಣೆಗೆ ಬಂದು ಕಾಣೆಯಾದ ವಿಷಯ ತಿಳಿಸಿದ್ದಾರೆ. 12 ದಿನ ಕಳೆದರೂ ಶಿವನಪ್ಪ ಪತ್ತೆಯಾಗದ ಕಾರಣ ಪೊಲೀಸರು ಈರಣ್ಣನನ್ನು ವಶಕ್ಕೆ ತೆಗೆದುಕೊಂಡು ವಿಚಾರಿಸಿದಾಗ ಕೊಲೆ ಮಾಡಿರುವ ವಿಚಾರ ಬಾಯಿ ಬಿಟ್ಟಿದ್ದಾನೆ. ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಜುಲೈ 20ರಂದು ಪೊಲೀಸರು ಆರೋಪಿಯನ್ನು ಕರೆದುಕೊಂಡು ಹೋಗಿ ಶವ ಹೂತಿರುವ ಸ್ಥಳ ಪರಿಶೀಲನೆ ನಡೆಸಿ ನ್ಯಾಯಿಕ ದಂಡಾಧಿಕಾರಿಗಳ ಸಮ್ಮುಖದಲ್ಲಿ ಶವ ಹೊರಗೆ ತೆಗೆದು ಮರಣೋತ್ತರ ಪರೀಕ್ಷೆ ನಡೆಸುವ ಸಾಧ್ಯತೆ ಇದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಗೋಣಿಚೀಲದಲ್ಲಿ ಶವ ಸಾಗಿಸಿದ್ದ

ಮಾನ್ವಿ ತಾಲ್ಲೂಕಿನ ಬಾಗಲವಾಡ ಮೂಲದ ಶಿವನಪ್ಪ ಕುಂಬಾರ ಮದುವೆ ನಂತರ ರಾಯಚೂರು ತಾಲ್ಲೂಕಿನ ವಡ್ಲೂರಿನ ಪತ್ನಿಯ ಮನೆಗೆ ಬಂದು ವಾಸವಾಗಿದ್ದರು. ಬಾಗಲವಾಡದಲ್ಲಿದ್ದ 4 ಎಕರೆ ಜಮೀನನ್ನು ₹ 30 ಲಕ್ಷಕ್ಕೆ ಮಾರಾಟ ಮಾಡಿದ್ದರು. ವಡ್ಲೂರು ಬಳಿ ಹೆದ್ದಾರಿ ನಿರ್ಮಾಣಕ್ಕಾಗಿ ಜಮೀನು ಭೂಸ್ವಾಧೀನ ಮಾಡಿಕೊಂಡಿದ್ದಕ್ಕೆ ₹ 15 ಲಕ್ಷ ಪರಿಹಾರ ಬಂದಿತ್ತು. ಎಲ್ಲ ಹಣವನ್ನೂ ಬ್ಯಾಂಕಿನಲ್ಲಿ ಠೇವಣಿ ಇಟ್ಟಿದ್ದರು ಎನ್ನಲಾಗಿದೆ.

ವಡ್ಲೂರು ಕೈಗಾರಿಕೆ ಪ್ರದೇಶದಲ್ಲಿ ಚಿಕ್ಕ ಹೋಟೆಲ್ ಇಟ್ಟುಕೊಂಡಿದ್ದ ಈರಣ್ಣ ಕುಂಬಾರ ಹಣ ಕೊಡುವಂತೆ ಆಗಗ ತಂದೆಯನ್ನು ಪೀಡಿಸುತ್ತಿದ್ದ. 'ನಾನು ಸಾಯು ವವರೆಗೂ ಹಣ ಕೊಡುವುದಿಲ್ಲ. ಸತ್ತ ಮೇಲೆ ಅದಕ್ಕೆ ನೀನೇ ಮಾಲೀಕ' ಎಂದು ಶಿವನಪ್ಪ ವಾದಿಸುತ್ತಿದ್ದರು ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

ಜುಲೈ 7ರ ಬೆಳಿಗ್ಗೆ 11 ಗಂಟೆಗೆ ಶಿವನಪ್ಪ ಕೊಲೆ ಮಾಡಿ ಶವವನ್ನು ಗೋಣಿ ಚೀಲದಲ್ಲಿ ಕಟ್ಟಿ ಇಟ್ಟಿದ್ದ. ರಾತ್ರಿ 9 ಗಂಟೆಗೆ ಮನೆಯಿಂದ ದೂರ ಹೋಗಿ ಹೆದ್ದಾರಿ ಬದಿಯಲ್ಲಿ ಒಬ್ಬನೇ ಗುಂಡಿ ತೋಡಿ ದ್ದಾನೆ. ಬಳಿಕ ಮನೆಗೆ ಬಂದು ಶವವನ್ನು ಬೈಕ್ ಮೇಲೆ ಇಟ್ಟುಕೊಂಡು ಹೋಗಿ ಹೂತು ಹಾಕಿದ್ದಾನೆ ಎಂದು ಮೂಲಗಳು ತಿಳಿಸಿವೆ.

ಕೊಲೆ ಬೆಳಕಿಗೆ ಬಂದಿದ್ದು ಹೇಗೆ?

ಶಿವನಪ್ಪ ಅವರು ಬಾಗಲವಾಡದಲ್ಲಿರುವ ಸಹೋದರರಿಗೆ ಆಗಾಗ ಕರೆ ಮಾಡಿ ಕುಶಲೋಪರಿ ವಿಚಾರಿಸುತ್ತಿದ್ದರು. 12 ದಿನಗಳಾದರೂ ಶಿವನಪ್ಪ ಸಂಪರ್ಕಿಸದೇ ಇರುವುದು ಸಂಶಯಕ್ಕೆ ಎಡೆಮಾಡಿಕೊಟ್ಟಿದೆ.

ಬಾಗಲವಾಡದ ಸಹೋದರರು ವಡ್ಲೂರಿಗೆ ಬಂದು ಗ್ರಾಮದ ಹಿರಿಯರೊಂದಿಗೆ ಚರ್ಚಿಸಿದ್ದಾರೆ. ಎಲ್ಲರೂ ಸೇರಿ ಈರಣ್ಣನ ಮೇಲೆ ಒತ್ತಡ ಹಾಕಿ ಕೇಳಿದ್ದಾರೆ. ಆದರೂ ಆತ ಬಾಯಿಬಿಟ್ಟಿರಲಿಲ್ಲ. ಪತಿಯನ್ನು ಕಳೆದುಕೊಂಡಿದ್ದ ಶಿವನಪ್ಪ ಅವರ ಹೆಂಡತಿಯು, ಮಗನೂ ಜೈಲಿಗೆ ಸೇರಲಿದ್ದಾನೆ ಎಂಬ ಆತಂಕದಲ್ಲಿ ನೋವು ನುಂಗಿಕೊಂಡು ಸುಮ್ಮನಿದ್ದಳು ಎನ್ನಲಾಗಿದೆ.

ಗ್ರಾಮದಲ್ಲಿ ಈ ಬಗ್ಗೆ ಚರ್ಚೆ ನಡೆಯುತ್ತಿರುವುದನ್ನು ಅರಿತ ಈರಣ್ಣ, ಬುಧವಾರ ಬೆಳಗಿನಜಾವ ನೇರವಾಗಿ ಪೊಲೀಸ್ ಠಾಣೆಗೆ ಹೋಗಿ ಶರಣಾಗಿದ್ದಾನೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

'ಸಿಬಿಐ ತನಿಖೆಗೆ ಒತ್ತಾಯಿಸಿದ್ದೇ ನಾನು'

ಕೊಲೆ ಪ್ರಕರಣ: ಮೌನ ಮುರಿದ ವೀರೇಂದ್ರ ಹೆಗ್ಗಡೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಧರ್ಮಸ್ಥಳ ಕ್ಷೇತ್ರದ ಹೆಸರು ಕೆಡಿಸಲು ಇಲ್ಲ ಸಲ್ಲದ ಆರೋಪ
- ವಿಚಲಿತನಾಗಲ್ಲ; ವ್ಯವಹಾರ ಶುದ್ಧವಾಗಿದೆ

ಮಂಗಳೂರು: 'ಈ ಕೊಲೆ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸುವಂತೆ ಅಂದಿನ ಮುಖ್ಯಮಂತ್ರಿ ಅವರನ್ನು ಕೋರಿದ್ದೇ ನಾನು. ಕೆಲವರು ದುರುದ್ದೇಶಪೂರ್ವಕವಾಗಿ ಧರ್ಮಸ್ಥಳ ಕ್ಷೇತ್ರದ ಹೆಸರು ಕೆಡಿಸಲು ಇಲ್ಲಸಲ್ಲದ ಆರೋಪ ಮಾಡುತ್ತಿರುವುದು ನೋವು ತಂದಿದೆ' ಎಂದು ಕ್ಷೇತ್ರದ ಧರ್ಮಾಧಿಕಾರಿ ವಿರೇಂದ್ರ ಹೆಗ್ಗಡೆ ಹೇಳಿದರು.

ವೀರೇಂದ್ರ ಹೆಗ್ಗಡೆ

ಧರ್ಮಸ್ಥಳದಲ್ಲಿ ಕ್ಷೇತ್ರದ ವಿವಿಧ ಸಂಸ್ಥೆಗಳ ಸಿಬ್ಬಂದಿ ಜೊತೆ ಬುಧವಾರ ಏರ್ಪಡಿಸಿದ್ದ ಸಭೆಯಲ್ಲಿ ಅವರು ಮಾತನಾಡಿದರು.

ಸೌಜನ್ಯಾ ಪ್ರಕರಣ ಉಲ್ಲೇಖಿಸದೇ ಮಾತನಾಡಿದ ಅವರು, 'ಕ್ಷೇತ್ರದಲ್ಲಿ ಹಿಂದೆ ಏನೇನಾಗಿದೆ ಎಂಬುದು ನಿಮಗೆ ಗೊತ್ತು. ಕೆಲವರು ಆ ವಿಷಯವನ್ನು ಈಗ ತೆಗೆದುಕೊಂಡು ಮಾತಾಡುವ ವಿಚಾರಗಳಿಗೂ ನಮಗೂ ಸಂಬಂಧವೇ ಇಲ್ಲ. ಈ ಪ್ರಕರಣದ ತನಿಖೆಯನ್ನು ನಡೆಸುವಂತೆ ಗೃಹ ಇಲಾಖೆಗೆ ಮೊದಲು ಪತ್ರ ಬರೆದದ್ದೇ ನಾನು. ಈಗಲೂ ತನಿಖೆ ಇನ್ನಷ್ಟು ಮುಂದುವರಿಸಲಿ. ಆದರೆ, ಕ್ಷೇತ್ರದ ಹೆಸರನ್ನು ಏಕೆ ಸುಮ್ಮನೆ ಎಳೆಯುತ್ತಾರೋ ಗೊತ್ತಿಲ್ಲ. ಅವರಿಗೆ ಅಮಾಯಕ ಹುಡುಗಿಯ ಸಾವಿಗಿಂತ ಈ ಕ್ಷೇತ್ರವನ್ನು ಹೇಗಾದರೂ ಮಲಿನ ಮಾಡಬೇಕು ಎಂಬ ಉದ್ದೇಶವಿರುವುದು ಕಾಣುತ್ತದೆ' ಎಂದರು.

'ನನಗೆ ಯಾವ ಸಂಕೋಚ, ಸಂದೇಹವೂ ಇಲ್ಲ. ನಾನು ಹಿಂದೆ ಹೇಗಿದ್ದೇನೋ ಹಾಗೆಯೇ ಇದ್ದೇನೆ. ಬೆಳಿಗ್ಗೆಯಿಂದ ಸಂಜೆವರೆಗೆ ಅನೇಕ ಕಾರ್ಯಗಳಲ್ಲಿ ತೊಡಗಿರುವುದರಿಂದ ನನಗೆ ಮೈಲಿಗೆ ಅಂಟುವುದಿಲ್ಲ. ಅನವಶ್ಯಕವಾಗಿ ಏಕೆ ಶತ್ರುತ್ವ ಬೆಳೆಸುತ್ತಿದ್ದಾರೆ ಎಂಬುದಕ್ಕೆ ಕಾರಣ ತಿಳಿಯುತ್ತಿಲ್ಲ. ಸಂಭಾಷಣೆ ಪ್ರಾರಂಭ ಆಗಬಾರದು ಎಂಬ ಕಾರಣಕ್ಕೆ ನಾನು ಈ ವರೆಗೆ ಮಾತನಾಡಲಿಲ್ಲ' ಎಂದು ಹೇಳಿದರು.

'ಬೆಳಿಗ್ಗೆಯೂ ಆರು ಜನ ಬಂದು, 'ನಿಮಗೇ ಹೀಗಾದರೆ ಹೇಗೆ ತಡೆದು ಕೊಳ್ಳುವುದು' ಎಂದು ಕಣ್ಣೀರು ಹಾಕಿ ಹೋದರು. ಗುಬ್ಬಿಗೆ ಬ್ರಹ್ಮಾಸ್ತ್ರ ಬಿಡುವ ಅಗತ್ಯ ಇಲ್ಲ. ಇದರಿಂದ ಅವರಿಗೆ ಸುಮ್ಮನೆ ಪ್ರಚಾರ. ನನ್ನ ಆತ್ಮ ಮತ್ತು ವ್ಯವಹಾರ ಶುದ್ಧವಾಗಿದೆ. ಯಾವುದಕ್ಕೂ ವಿಚಲಿತನಾಗುವ ಪ್ರಶ್ನೆಯೇ ಇಲ್ಲ. ಯಾವುದೇ ಕಾರ್ಯಕ್ರಮ ಗಳನ್ನೂ ಧರ್ಮಸ್ಥಳದವರು ಚೆನ್ನಾಗಿ ಮಾಡುತ್ತಾರೆ ಎಂಬ ಹೆಸರು ಇದೆ. ಅದು ನಿಮ್ಮಿಂದಾಗಿ ಬಂದಿರುವುದು. 1.5 ಕೋಟಿ ಮಂದಿಗೆ ವಿಮೆ ಮಾಡಿಸಿದ್ದು, 87 ಲಕ್ಷ ಮಂದಿಗೆ ಆಯುಷ್ಮಾನ್ ಭಾರತ್ ಕಾರ್ಡ್ ಮಾಡಿಸಿದ್ದು ಧರ್ಮಸ್ಥಳ ಗ್ರಾಮೀಣಾ ಭಿವೃದ್ಧಿ ಯೋಜನೆಯವರು. ನೀವು ಮಾಡುವ ಸತ್ಕಾರ್ಯಗಳಿಗಾಗಿ ಕೆಲವರು ನನ್ನನ್ನು ದ್ವೇಷ ಮಾಡಿದರೆ ಹೇಗೆ' ಎಂದು ಪ್ರಶ್ನಿಸಿದರು.

'ನಾವು ಹೋಗುವ ದಾರಿಯನ್ನು ಬಿಟ್ಟು ಅಚೀಚೆ ನೋಡುವುದಿಲ್ಲ. ದಾರಿ ಮಧ್ಯೆ ಮೋಡ ಬಂದಿದೆ. ಅದನ್ನು ದೇವರೇ ತೆಗೆಯಬೇಕು. ಯಾವ ಅನ್ಯಾಯಕ್ಕೂ ಸಹಾಯ ಮಾಡುವವ ನಾನಲ್ಲ. ಅಪಪ್ರಚಾರ ಮಾಡುವವರಿಗೆ ಏನಾದರೂ ಮಾಡಲಿಕ್ಕೆ ಅಭಿಮಾನಿಗಳು ಸಿದ್ಧರಿದ್ದಾರೆ. ಅಭಿಮಾನಿಗಳಿಗೆ ನಾನು ಹೇಳುವುದಿಷ್ಟೇ-ನೀವೂ ಏನೂ ಮಾಡಬೇಡಿ. ನೈತಿಕ ಶಕ್ತಿಗಿಂತ ದೊಡ್ಡ ಶಕ್ತಿ ಯಾವುದೂ ಅಲ್ಲ' ಎಂದರು.

ದುಷ್ಕೃತ್ಯಕ್ಕೆ ಲಷ್ಕರ್ ಎ ತೊಯ್ಬಾ ಮುಖಂಡನ ತರಬೇತಿ

ಒಂದನೇ ಪುಟದಿಂದ...

'2008ರಲ್ಲಿ ದೊಡ್ಡ ಪ್ರಮಾಣದಲ್ಲಿ ಸ್ಫೋಟಕ್ಕೆ ಲಷ್ಕರ್-ಎ-ತೊಯ್ಬಾ (ಎಲ್‌ಇಟಿ) ಸಂಘಟನೆ ಮುಖಂಡ ನಜೀರ್ ಸಂಚು ನಡೆಸಿದ್ದ. ಅದೇ ಮಾದರಿಯಲ್ಲಿ ನಗರದ ಆಯ್ದ ಜನದಟ್ಟಣೆ ಪ್ರದೇಶಗಳಲ್ಲಿ ಸ್ಫೋಟ ನಡೆಸುವಂತೆ ಐವರನ್ನು ಮನಪರಿವರ್ತನೆ ಮಾಡಿದ್ದ. ಇವರನ್ನೂ ತನ್ನ ಸಂಘಟನೆಗೆ ಸೇರುವಂತೆ ತಿಳಿಸಿದ್ದ. ಹೊರಬಂದ ಮೇಲೂ ಆತ ಹೇಳಿದಂತೆಯೇ ಶಂಕಿತರು ಯೋಜನೆ ರೂಪಿಸುತ್ತಿದ್ದರು.'

ಜುನೈದ್

'ಕೊಲೆ ಪ್ರಕರಣ ದಲ್ಲಿ ಬಂಧಿಸಿದ್ದ 21 ಮಂದಿ ಜಾಮೀನಿನ ಮೇಲೆ ಬಿಡುಗಡೆ ಗೊಂಡಿದ್ದರು. ಜುನೈದ್ ದುಬೈಗೆ ತೆರಳಿದ ಮೇಲೆ ಸುಹೇಲ್ ತಂಡದ ನೇತೃತ್ವ ವಹಿಸಿಕೊಂಡಿದ್ದ. ಆರ್.ಟಿ.ನಗರದ ಬಾಡಿಗೆ ಮನೆಗೆ ಉಳಿದವರನ್ನೂ ಕರೆಸಿಕೊಂಡು ಸಭೆ ನಡೆಸುತ್ತಿದ್ದ. ಅದೇ ಮನೆಗೆ ಶಸ್ತ್ರಾಸ್ತ್ರಗಳು, ಮದ್ದುಗುಂಡುಗಳು ಪೂರೈಕೆಯಾಗುತ್ತಿದ್ದವು. ಅಲ್ಲದೇ ಬೆಂಗಳೂರಿನಲ್ಲಿ ಸದ್ಯದಲ್ಲೇ ದೊಡ್ಡ ಕೃತ್ಯ ಎಸಗುವಂತೆ ಜುನೈದ್ ಸೂಚನೆ ನೀಡಿದ್ದ. ಅದರಂತೆ ಐವರು ಕಾರ್ಯ ಪ್ರವೃತ್ತರಾಗಿದ್ದರು. ಬಿಡುಗಡೆಯಾಗಿರುವ ಉಳಿದ 16 ಮಂದಿಯ ಪಾತ್ರದ ಕುರಿತೂ ತನಿಖೆ ಮುಂದುವರಿದಿದೆ. ಇಸ್ಲಾಮಿಕ್ ಸ್ಟೇಟ್ ಉಗ್ರ ಸಂಘಟನೆಯು ಶಸ್ತ್ರಾಸ್ತ್ರಗಳ ಪೂರೈಕೆಯ ಜತೆಗೆ ಆರ್ಥಿಕ ನೆರವು ನೀಡಿರುವ ಮಾಹಿತಿಯಿದೆ' ಎಂದು ಮೂಲಗಳು ಹೇಳಿವೆ.

ನಜೀರ್ ವಶಕ್ಕೆ: ನ್ಯಾಯಾಲಯದ ಅನುಮತಿಗೆ ಪಡೆದು ಕಾರಾಗೃಹದಲ್ಲಿರುವ ನಜೀರ್‌ನನ್ನು ಕಸ್ಟಡಿಗೆ ಪಡೆಯಲು ಸಿಸಿಬಿ ಸಿದ್ಧತೆ ನಡೆಸಿದೆ. ಯಾವ ಸ್ಥಳದಲ್ಲಿ ಕೃತ್ಯ ಎಸಗಲು ಸಂಚು ರೂಪಿಸಿದ್ದರು ಎಂಬುದನ್ನು ತನಿಖೆಯಿಂದ ತಿಳಿಯಬೇಕಿದೆ ಎಂದು ಸಿಸಿಬಿ ಅಧಿಕಾರಿಗಳು ಹೇಳಿದರು.

ಎನ್‌ಐಎ ತನಿಖೆ ಸಾಧ್ಯತೆ: ಪ್ರಕರಣದ ತನಿಖೆಯನ್ನು ರಾಷ್ಟ್ರೀಯ ತನಿಖಾ ದಳ ಕೈಗೆತ್ತಿಕೊಳ್ಳುವ ಸಾಧ್ಯತೆಯಿದೆ. ಸಿಸಿಬಿ ಪೊಲೀಸರು, ಎನ್‌ಐಎ ಅಧಿಕಾರಿಗಳಿಗೂ ಪ್ರಕರಣದ ಮಾಹಿತಿ ನೀಡಿದ್ದಾರೆ.

ಒಂದೂವರೆ ತಿಂಗಳ ಹಿಂದೆ ಬಾಡಿಗೆ ಮನೆಗೆ

ಒಂದೂವರೆ ತಿಂಗಳ ಹಿಂದಷ್ಟೇ ಸೈಯದ್ ಸುಹೇಲ್, ಆರ್‌.ಟಿ.ನಗರದ ಕನಕ ಬಡಾವಣೆ ಮಸೀದಿಯೊಂದರ ಪಕ್ಕದ ಮನೆಯನ್ನು ಬಾಡಿಗೆ ಪಡೆದುಕೊಂಡು ನೆಲೆಸಿದ್ದ. ಪೋಷಕರೂ ಜೊತೆಗಿದ್ದರು.

'ಮನೆ ಬಾಡಿಗೆಗೆ ಇರುವ ಫಲಕ ನೋಡಿ ಸುಹೇಲ್ ಪತ್ನಿ ಬಂದಿದ್ದರು. ನಾವು ಬಡವರು, ಪತಿ ಸಣ್ಣಪುಟ್ಟ ಕೆಲಸ ಮಾಡಿಕೊಂಡಿದ್ದಾರೆ. ಮನೆಗೆ ಮುಂಗಡ ಪಾವತಿಸಲು ಹಣ ಇಲ್ಲ. ಎರಡು ತಿಂಗಳಲ್ಲಿ ಮುಂಗಡ ಹಣ ಕೊಡುವುದಾಗಿ ಕೇಳಿಕೊಂಡಿದ್ದರು. ಅವರ ಗೋಳಾಟವು ನನಗೆ ಕಣ್ಣೀರು ತರಿಸಿತ್ತು. ಪುಟ್ಟ ಮಕ್ಕಳಿದ್ದರು. ಮಾನವೀಯತೆಯಿಂದ ಮನೆ ನೀಡಿದ್ದೆ. ಅವರ ಸಂಚು ಗೊತ್ತಿರಲಿಲ್ಲ' ಎಂದು ಮನೆ ಮಾಲೀಕರು ಅಳಲು ತೋಡಿಕೊಂಡಿದ್ದಾರೆ.

'ಎರಡು ತಿಂಗಳಲ್ಲಿ ಮುಂಗಡ ಹಣ ನೀಡುವಂತೆ ಹೇಳಿದ್ದೆ. ಹಣ ನೀಡದಿದ್ದರೆ ಮನೆ ಖಾಲಿ ಮಾಡುವಂತೆಯೂ ಸೂಚಿಸಿದ್ದೆ. ಎರಡನೇ ಮಹಡಿಯಲ್ಲಿ ಮನೆ ಇತ್ತು. ಹೀಗಾಗಿ, ಅಲ್ಲಿಗೆ ಯಾರು ಬರುತ್ತಿದ್ದರು ಎಂಬುದು ಗೊತ್ತಿಲ್ಲ' ಎಂದು ಕಣ್ಣೀರು ಹಾಕಿದರು.



ಶಂಕಿತ ಉಗ್ರ ಸೈಯದ್ ಸುಹೈಲ್ ಖಾನ್ ವಾಸಿಸುತ್ತಿದ್ದ ಬಾಡಿಗೆ ಮನೆ (ನೀಲಿ ಬಣ್ಣದ ಮನೆಯ 2ನೇ ಮಹಡಿ)

ಕಟ್ಟೆಚ್ಚರ: ಹಲವೆಡೆ ತಪಾಸಣೆ

ರಾಜ್ಯದಾದ್ಯಂತ ಕಟ್ಟೆಚ್ಚರ ವಹಿಸುವಂತೆ ಗೃಹ ಇಲಾಖೆ ಸೂಚನೆ ನೀಡಿದ್ದು, ನಗರದ ಮೆಜೆಸ್ಟಿಕ್, ವಿಧಾನಸೌಧ, ಹೈಕೋರ್ಟ್, ರೈಲು ನಿಲ್ದಾಣ, ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸುತ್ತಮುತ್ತ ಬಂದೋಬಸ್ತ್ ಹೆಚ್ಚಿಸಲಾಗಿದೆ. ಸೂಕ್ಷ್ಮಪ್ರದೇಶದಲ್ಲಿ ಬಾಂಬ್ ಪತ್ತೆದಳ ಹಾಗೂ ಶ್ವಾನದಳದಿಂದ ಪರಿಶೀಲನೆ ನಡೆಸಲಾಗಿದೆ.

ವಿಜಯಪುರ ಜಿಲ್ಲಾ ಪೊಲೀಸರು, ರೈಲು ನಿಲ್ದಾಣ ಸೇರಿದಂತೆ ಸೂಕ್ಷ್ಮಪ್ರದೇಶದಲ್ಲಿ ತಪಾಸಣೆ ನಡೆಸಿದ್ದಾರೆ.

ಸ್ಫೋಟಕ್ಕೆ ಸಂಚು: ಐವರ ಸೆರೆ

ಒಂದನೇ ಪುಟದಿಂದ...

'ಉದ್ಯಮದ ವ್ಯವಹಾರಕ್ಕೆ ಸಂಬಂಧಿಸಿದಂತೆ ವ್ಯಾಪಾರಿ ನೂರ್ ಅಹಮದ್ ಹಾಗೂ ಜುನೈದ್ ಅಹಮದ್ ಗುಂಪಿನ ನಡುವೆ ವೈಷಮ್ಯ ಬೆಳೆದಿತ್ತು. ನೂರ್ ಅಹಮದ್‌ರನ್ನು ಅಪಹರಿಸಿ, ಹೊಸಕೋಟೆ ಬಳಿ ಕೊಲೆ ಮಾಡಲಾಗಿತ್ತು. ಈ ಪ್ರಕರಣದಲ್ಲಿ ಜುನೈದ್ ಸೇರಿದಂತೆ 21 ಆರೋಪಿಗಳನ್ನು ಬಂಧಿಸಿದ್ದ ಪೊಲೀಸರು, ಪರಪ್ಪನ ಅಗ್ರಹಾರ ಜೈಲಿಗೆ ಕಳುಹಿಸಿದ್ದರು. 2008ರ ಬೆಂಗಳೂರು ಸರಣಿ ಬಾಂಬ್ ಸ್ಫೋಟದ ಪ್ರಕರಣದ ಪ್ರಮುಖ ಆರೋಪಿ ಟಿ.ನಜೀರ್, ಅದೇ ಜೈಲಿನಲ್ಲಿದ್ದ. ಆತನ ಸಂಪರ್ಕಕ್ಕೆ ಈ ಶಂಕಿತರು ಬಂದಿದ್ದರು. 18 ತಿಂಗಳ ಬಳಿಕ ಆರೋಪಿಗಳು ಬಿಡುಗಡೆಯಾಗಿದ್ದರು' ಎಂದು ಕಮಿಷನರ್ ತಿಳಿಸಿದರು.

'ಜಾಮೀನಿನ ಮೇಲೆ ಬಿಡುಗಡೆ ನಂತರವೂ ಜುನೈದ್ ವಿರುದ್ಧ ರಕ್ತಚಂದನ ಕಳವು, ದರೋಡೆ ಪ್ರಕರಣಗಳು ದಾಖಲಾಗಿದ್ದವು. ಮತ್ತೆ ಪೊಲೀಸರಿಗೆ ಸಿಕ್ಕಿಬೀಳುವ ಭಯದಲ್ಲಿ ದುಬೈಗೆ ಪರಾರಿಯಾಗಿದ್ದ. ಅಲ್ಲಿಂದಲೇ ಇವರಿಗೆ ಕರೆ ಮಾಡಿ ವಿಧ್ವಂಸಕ ಕೃತ್ಯ ಎಸಗುವಂತೆ ಪ್ರೇರಣೆ ನೀಡುತ್ತಿದ್ದ' ಎಂದು ಪೊಲೀಸರು ಹೇಳಿದರು.

ಶಂಕಿತರನ್ನು ಪೊಲೀಸ್ ಬಂದೋಬಸ್ತ್‌ನಲ್ಲಿ ಎಸಿಪಿ ಕುಮಾರ್ ನೇತೃತ್ವದ ತಂಡವು ಎನ್‌ಐಎ ನ್ಯಾಯಾಲಯಕ್ಕೆ ಹಾಜರು ಪಡಿಸಿತ್ತು. ಹೆಚ್ಚಿನ ತನಿಖೆಗೆ ಸಿಸಿಬಿ ಪೊಲೀಸರು 7 ದಿನ ತಮ್ಮ ಕಸ್ಟಡಿಗೆ ಪಡೆದುಕೊಂಡಿದ್ದಾರೆ.

ಬಂಧಿತರನ್ನು ವಿಚಾರಣೆ ನಡೆಸಲಾಗುವುದು, ಶಂಕಿತರು ಭೇಟಿ ನೀಡಿರುವ ಸ್ಥಳಗಳನ್ನು ಪತ್ತೆ ಹಚ್ಚಲಾಗುವುದು, ಯಾರನ್ನಾದರೂ ಗುರಿಯಾಗಿಸಿ ದಾಳಿ ನಡೆಸಲು ಸಂಚು ರೂಪಿಸಿದ್ದರೇ ಎಂಬುದರ ಕುರಿತು ತನಿಖೆ ನಡೆಸಲಾಗುವುದು ಎಂದು ಸಿಸಿಬಿ ಮೂಲಗಳು ತಿಳಿಸಿವೆ.

ಕಮಿಷನರ್ ಶ್ಲಾಘನೆ: 'ಸಕಾಲದಲ್ಲಿ ಸಿಸಿಬಿ ಪೊಲೀಸರು ಮಾಹಿತಿ ಸಂಗ್ರಹಿಸಿ ಶಂಕಿತರನ್ನು ಬಂಧಿಸಿದ್ದರಿಂದ ಸಂಭವನೀಯ ದುಷ್ಕೃತ್ಯ ತಪ್ಪಿದೆ. ಶಂಕಿತರು ಯಾವ ನಿಷೇಧಿತ ಭಯೋತ್ಪಾದನಾ ಸಂಘಟನೆಗೆ ಸೇರಿದ್ದಾರೆ ಎಂಬುದು ವಿಸ್ತೃತ ತನಿಖೆಯಿಂದ ಗೊತ್ತಾಗಬೇಕಿದೆ. ಸಿಸಿಬಿ ಪೊಲೀಸರ ಕಾರ್ಯ ಶ್ಲಾಘನೀಯ' ಎಂದು ದಯಾನಂದ್ ಹೇಳಿದರು.

ಮಾಸ್ಟರ್ ಮೈಂಡ್ ಜುನೈದ್ ಯಾರು, ಎಲ್ಲಿದ್ದಾನೆ?

- ಉದ್ಯಮದ ವೈಷಮ್ಯಕ್ಕೆ ನೂರ್ ಅಹಮದ್ ಕೊಲೆ ಮಾಡಿದ್ದ ಪ್ರಮುಖ ಆರೋಪಿ ಜುನೈದ್.
- ಭಯೋತ್ಪಾದಕ ಸಂಘಟನೆ ಲಷ್ಕರ್-ಎ-ತೊಯ್ಬಾದ ನಜೀರ್ ಜೊತೆಗೆ ಜುನೈದ್‌ಗೆ ಸಂಪರ್ಕ.
- 2020ರಲ್ಲಿ ಕೆಂಪು ಮರಳು ಕಳ್ಳ ಸಾಗಣೆ ಪ್ರಕರಣದಲ್ಲಿ ಬಂಧನ.
- 2021ರಲ್ಲಿ ಡಕಾಯಿತಿ ಪ್ರಕರಣದಲ್ಲಿ ಸೆರೆ.
- ಸದ್ಯ ದುಬೈನಲ್ಲಿ ತಲೆಮರೆಸಿ ಕೊಂಡಿರುವ ಶಂಕಿತ. ಅಲ್ಲಿಂದಲೇ ಕುಳಿತು ಸಂಚು.

ಗೃಹಲಕ್ಷ್ಮಿ ಪ್ರತಿ ಮನೆಯೊಡತಿಗೆ ಪ್ರತಿ ತಿಂಗಳು

ಆ.16ರಿಂದ 'ಗೃಹಲಕ್ಷ್ಮಿ' ಹಣ

ಒಂದನೇ ಪುಟದಿಂದ...

ಅನ್ನಭಾಗ್ಯ ಯೋಜನೆಯನ್ನು ಮೈಸೂರಿನಲ್ಲಿ, ಗೃಹಜ್ಯೋತಿ ಯೋಜನೆಯನ್ನು ಕಲಬುರಗಿಯಲ್ಲಿ ಮತ್ತು ಗೃಹಲಕ್ಷ್ಮಿ ಯೋಜನೆಯನ್ನು ಬೆಳಗಾವಿಯಲ್ಲಿ ಉದ್ಘಾಟಿಸಲಾಗುವುದು ಎಂದು ತಿಳಿಸಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ ಮಾತನಾಡಿ, 'ಇದು ಸ್ತ್ರೀಯರನ್ನು ಆರ್ಥಿಕವಾಗಿ ಸಶಕ್ತಗೊಳಿಸುವ ಕಾರ್ಯಕ್ರಮ. ಈ ಯೋಜನೆಯು ರಾಜ್ಯದ ಕೋಟ್ಯಂತರ ಕುಟುಂಬಗಳಲ್ಲಿ ನೆಮ್ಮದಿ ತರಲಿದೆ' ಎಂದು ಹೇಳಿದರು.

ಶಾಸಕ ರಿಜ್ವಾನ್ ಅರ್ಷದ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಸಚಿವರಾದ ಕೆ.ಎಚ್.ಮುನಿಯಪ್ಪ, ರಾಮಲಿಂಗಾರೆಡ್ಡಿ, ಡಾ.ಎಚ್.ಸಿ. ಮಹದೇವಪ್ಪ, ಪ್ರಿಯಾಂಕ್ ಖರ್ಗೆ, ಬೈರತಿ ಸುರೇಶ್ , ರಹೀಂ ಖಾನ್, ವಿಧಾನ ಪರಿಷತ್‌ನಲ್ಲಿ ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹ್ಮದ್, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ನಜೀರ್ ಅಹ್ಮದ್, ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಡಾ.ಎನ್. ಮಂಜುಳಾ, ನಿರ್ದೇಶಕಿ ಅರ್ಚನಾ ಎಂ.ಎಸ್. ಉಪಸ್ಥಿತರಿದ್ದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦
ಪ್ರತಿಯೊಂದು ಧರ್ಮದಲ್ಲೂ ಪ್ರೀತಿ ಇದೆ. ಅಷ್ಟಾಗಿಯೂ ಪ್ರೀತಿಗೆ ಮಾತ್ರ ಯಾವುದೇ ಧರ್ಮವಿಲ್ಲ.
-ರೂಮಿ

ವಿರೋಧ ಪಕ್ಷಗಳ ಮೈತ್ರಿಸಭೆ ಸ್ಪಷ್ಟವಾಗುತ್ತಿದೆ ಚುನಾವಣಾ ರೂಪುರೇಷೆ

ಬಿಹಾರದ ಪಟ್ನಾದಲ್ಲಿ ಕಳೆದ ತಿಂಗಳು ಸಭೆ ಸೇರಿದ್ದ ವಿರೋಧ ಪಕ್ಷಗಳ ಪ್ರಮುಖರು ಈಗ ಬೆಂಗಳೂರಿನಲ್ಲಿ ತಮ್ಮ ಒಕ್ಕೂಟಕ್ಕೆ ಒಂದು ಹೆಸರು ಅಂತಿಮಗೊಳಿಸಿದ್ದಾರೆ. ಆ ಮೂಲಕ ಇನ್ನೊಂದು ಹೆಜ್ಜೆ ಮುಂದಕ್ಕೆ ಇರಿಸಿದ್ದಾರೆ. ಈ ಹೆಸರು 2024ರ ಲೋಕಸಭಾ ಚುನಾವಣೆಯಲ್ಲಿ ತಾವು ಬಿಜೆಪಿಯನ್ನು ಎದುರಿಸಲು ನೆಚ್ಚಿಕೊಳ್ಳುತ್ತಿರುವ ನೆಲೆ ಯಾವುದು ಎಂಬುದನ್ನು ಸೂಚಿಸುವಂತಿದೆ. ಬಿಜೆಪಿಯನ್ನು ವಿರೋಧಿ-ಸುತ್ತಿರುವ 26 ಪಕ್ಷಗಳ ಒಕ್ಕೂಟದ ಹೆಸರು 'ಐಎನ್‌ಡಿಐಎ' ಎಂದಿರಬೇಕು ಎಂಬ ತೀರ್ಮಾನಕ್ಕೆ ಬೆಂಗಳೂರಿನಲ್ಲಿ ಸೋಮವಾರ ಮತ್ತು ಮಂಗಳವಾರ ನಡೆದ ಸಭೆಯು ಬಂದಿದೆ. ಇದು ರಾಷ್ಟ್ರೀಯತೆಯ ಸಂಕಥನದ ವಿಚಾರದಲ್ಲಿ ಬಿಜೆಪಿಯನ್ನು ಎದುರಿಸಲು ತಮಗೆ ಸಹಾಯ ಮಾಡಲಿದೆ ಎಂದು ಈ ಪಕ್ಷಗಳು ಭಾವಿಸಿವೆ. ಅಲ್ಲದೆ, ತಮ್ಮ ಅಭಿಯಾನದಲ್ಲಿ ಅಭಿವೃದ್ಧಿಯು ಪ್ರಮುಖ ವಿಷಯವಾಗುವಂತೆಯೂ ಇದು ನೋಡಿಕೊಳ್ಳಲಿದೆ ಎಂದು ಪಕ್ಷಗಳು ಭಾವಿಸಿವೆ. ಅಭಿವೃದ್ಧಿಯ ವಿಚಾರವನ್ನು ಬಿಜೆಪಿಯು ಪ್ರಮುಖವಾಗಿ ಬಳಸಿಕೊಳ್ಳುತ್ತ ಬಂದಿದೆ. ಇವೆಲ್ಲಕ್ಕಿಂತ ಮುಖ್ಯವಾಗಿ, ತಮ್ಮ ಪರಿಕಲ್ಪನೆಯ ಭಾರತವು ಸರ್ವಜನರನ್ನೂ ಒಳಗೊಳ್ಳುವಂಥದ್ದು; ಬಿಜೆಪಿಯ ವಿಭಜನಕಾರಿ ಹಿಂದುತ್ವ ಸಿದ್ಧಾಂತದ ಭಾರತ ಅಲ್ಲ ಎಂಬ ಸಂದೇಶ ಸಾರುವ ಇರಾದೆಯನ್ನು ಈ 26 ಪಕ್ಷಗಳು ಹೊಂದಿರುವಂತಿದೆ. ಐಎನ್‌ಡಿಐಎ (ಇಂಡಿಯಾ) ಎಂಬ ಹೆಸರಿನ ಜೊತೆಯಲ್ಲಿ 'ಜೀತೇಗಾ ಭಾರತ್' (ಭಾರತ ಗೆಲ್ಲಲಿದೆ) ಎಂಬ ಘೋಷ-ವಾಕ್ಯವನ್ನು ಕೂಡ ಒಕ್ಕೂಟವು ಬಳಸಿಕೊಳ್ಳಲಿದೆ. ಭಾರತ ಎಂಬ ಪರಿಕಲ್ಪನೆಯ ಮೇಲೆ ಬಿಜೆಪಿಯು ಹಕ್ಕು ಸಾಧಿಸುವುದನ್ನು ತಡೆಯಲು ಹಾಗೂ ತಾನು ಭಾರತವನ್ನೂ ಇಂಡಿಯಾವನ್ನೂ ಪ್ರತಿನಿಧಿಸುತ್ತೇನೆ ಎಂಬ ಸಂದೇಶ ರವಾನಿಸುವ ಉದ್ದೇಶ ಕೂಡ ಒಕ್ಕೂಟಕ್ಕೆ ಇರುವಂತಿದೆ. ಈ ಹೆಸರು ಮಹತ್ವಾಕಾಂಕ್ಷೆ-ಯನ್ನು ಸೂಚಿಸುತ್ತಿದೆ. ಈ ಹೆಸರು ಚುನಾವಣಾ ಮೈತ್ರಿ-ಕೂಟವೊಂದರ ಸ್ವರೂಪವನ್ನು ಹೇಳುತ್ತಿದೆ. ಆದರೆ ಯಾವುದೇ ವ್ಯಕ್ತಿ ಅಥವಾ ಪಕ್ಷವು ಒಂದು ಹೆಸರನ್ನು ಮಾತ್ರ ನೆಚ್ಚಿಕೊಂಡು ಮುಂದುವರಿಯಲು ಸಾಧ್ಯವಿಲ್ಲ ಎಂಬುದನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಹೆಸರು ಎಂಬುದು ಮೈತ್ರಿಕೂಟದ ಕಾರ್ಯಚಟುವಟಿಕೆಯನ್ನು, ಅದರ ಗುಣವನ್ನು ಅಥವಾ ಅದು ಪ್ರತಿನಿಧಿಸುವ ಅಸ್ಮಿತೆಯನ್ನು ಹೇಳುವುದಿಲ್ಲ.

ಬಿಜೆಪಿಗೆ ಎದುರಾಗಿ ಶಕ್ತಿಶಾಲಿ ಮೈತ್ರಿಕೂಟವನ್ನು ಕಟ್ಟಬೇಕು ಎಂದಾದರೆ, ಈ ಪಕ್ಷಗಳು ಸಾಗಬೇಕಿರುವ ಹಾದಿ ಸುದೀರ್ಘವಾಗಿದೆ

ವಿರೋಧ ಪಕ್ಷಗಳ ನಡೆಗೆ ಒಂದಿಷ್ಟು ಅಡ್ಡಿಗಳು ಎದುರಾಗಿವೆ. ಪಟ್ನಾ ಸಭೆಯ ಸಂದರ್ಭದಲ್ಲಿ ಪ್ರಮುಖವಾಗಿ ಗುರುತಿಸಿಕೊಂಡಿದ್ದ ಶರದ್ ಪವಾರ್ ಅವರು ತಮ್ಮ ಪಕ್ಷದ ವಿಭಜನೆಯ ನಂತರದಲ್ಲಿ ತುಸು ದುರ್ಬಲ ಆಗಿರುವಂತೆ ಕಾಣುತ್ತಿದ್ದಾರೆ. ಕರ್ನಾಟಕದಲ್ಲಿ ಜೆಡಿಎಸ್ ಪಕ್ಷವು ಬಿಜೆಪಿ ನೇತೃತ್ವದ ಎನ್‌ಡಿಎ ಕಡೆ ವಾಲುತ್ತಿದೆ. ಆದರೆ ಇದೇ ಸಂದರ್ಭದಲ್ಲಿ ಮೈತ್ರಿಕೂಟದಲ್ಲಿ ಒಂದಿಷ್ಟು ಒಳ್ಳೆಯ ಅಂಶಗಳೂ ಕಾಣುತ್ತಿವೆ. 26 ಪಕ್ಷಗಳ ಪೈಕಿ ಅತಿದೊಡ್ಡ ಪಕ್ಷವಾಗಿರುವ ಕಾಂಗ್ರೆಸ್, ತನ್ನ ಪ್ರಾದೇಶಿಕ ಎದುರಾಳಿಗಳಾದ ಎಎಪಿ ಅಥವಾ ತೃಣಮೂಲ ಕಾಂಗ್ರೆಸ್ ಪಕ್ಷಗಳನ್ನು ಒಳಗೊಳ್ಳುತ್ತಿರುವ ಪರಿ ಮೊದಲಿಗಿಂತ ಹೆಚ್ಚು ವಿಶ್ವಾಸ ಮೂಡಿಸುವಂತಿದೆ. ಇಡೀ ಭಾರತವನ್ನು ಹಾಗೂ ನಿಜ ಭಾರತವನ್ನು ಪ್ರತಿನಿಧಿಸುತ್ತಿರುವುದಾಗಿ ಹೇಳಿ-ಕೊಳ್ಳುತ್ತಿರುವ ಎಲ್ಲ ರಾಜಕೀಯ ಪ್ರಮುಖರು ಸಭೆಯಲ್ಲಿ ಆತ್ಮವಿಶ್ವಾಸದಿಂದ ಪಾಲ್ಗೊಂಡಿದ್ದಾರೆ. ಪಕ್ಷಗಳ ನಡುವೆ ಭಿನ್ನಾಭಿಪ್ರಾಯ ಇರುವುದು ನಿಜವಾದರೂ ಅವುಗಳನ್ನೆಲ್ಲ ಬದಿಗೆ ಸರಿಸಿ, ಚುನಾವಣೆಯನ್ನು ಒಗ್ಗಟ್ಟಿನಿಂದ ಎದುರಿಸುವುದಾಗಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

ಇವೆಲ್ಲ ಏನೇ ಇದ್ದರೂ, ಬಿಜೆಪಿಗೆ ಎದುರಾಗಿ ಶಕ್ತಿಶಾಲಿ ಮೈತ್ರಿಕೂಟವನ್ನು ಕಟ್ಟಬೇಕು ಎಂದಾದರೆ ಈ ಪಕ್ಷಗಳು ಸಾಗಬೇಕಿರುವ ಹಾದಿ ಸುದೀರ್ಘವಾಗಿದೆ. ಪಕ್ಷಗಳ ಘೋಷಣೆಗಳು ಹೆಚ್ಚಿನ ಪರಿಣಾಮ ಉಂಟುಮಾಡುವುದಿಲ್ಲ. ಘೋಷಣೆಗಳನ್ನು ಜನರಿಗೆ ಇಷ್ಟವಾಗುವ ರೀತಿಯಲ್ಲಿ, ಕ್ರಿಯಾರೂಪಕ್ಕೆ ಬರುವಂತೆ ಮಾಡಬೇಕು. ಈ ಪಕ್ಷಗಳ ನಾಯಕರು ಒಟ್ಟಾಗಿ ಇರುತ್ತಾರೆ ಹಾಗೂ ಘೋಷಣೆಗಳನ್ನು ಅನುಷ್ಠಾನಕ್ಕೆ ತರುತ್ತಾರೆ ಎಂಬ ನಂಬಿಕೆ ಜನರಲ್ಲಿ ಮೂಡಬೇಕು. ಮುಂದಿನ ದಿನಗಳಲ್ಲಿ ಈ ಮೈತ್ರಿಕೂಟವು ಈಗಿರುವ ರೀತಿಯಲ್ಲಿಯೇ ಉಳಿದುಕೊಳ್ಳುತ್ತದೆಯೇ ಎಂಬುದು ಸ್ಪಷ್ಟವಿಲ್ಲ. ಪಕ್ಷಗಳ ನಡುವಿನ ಭಿನ್ನಾಭಿಪ್ರಾಯಗಳನ್ನು ಎಲ್ಲ ಸಂದರ್ಭಗಳಲ್ಲಿಯೂ ಬದಿಗೆ ಸರಿಸಲು ಆಗುವುದಿಲ್ಲ. ಈ ಭಿನ್ನಾಭಿ ಪ್ರಾಯಗಳು ಒಗ್ಗಟ್ಟಿಗೆ ಧಕ್ಕೆ ತರಬಹುದು. ಬಿಹಾರ ರಾಜಕಾರಣದ ಪ್ರಮುಖರಾದ ನಿತೀಶ್ ಕುಮಾರ್ ಹಾಗೂ ಲಾಲೂ ಪ್ರಸಾದ್ ಅವರಲ್ಲಿ ಒಂದಿಷ್ಟು ಅಸಂತೃಪ್ತಿ ಇದೆ ಎಂಬ ವರದಿಗಳಿವೆ. ಇವೆಲ್ಲವುಗಳ ನಡುವೆಯೇ, ವಿರೋಧ ಪಕ್ಷಗಳ ಮೈತ್ರಿಕೂಟವೊಂದು ರೂಪ ಪಡೆದುಕೊಳ್ಳುತ್ತಿದೆ ಹಾಗೂ 2024ರ ಲೋಕಸಭಾ ಚುನಾವಣೆಯ ರೂಪುರೇಷೆ ದಿನಕಳೆದಂತೆ ಹೆಚ್ಚು ಸ್ಪಷ್ಟವಾಗುತ್ತಿದೆ.

ದಿನದ ಟ್ವೀಟ್

ಅತ್ಯಂತ ಕೆಟ್ಟ ನಿದರ್ಶನ

ಯಾವ ಕುಸ್ತಿಪಟುವಿಗೂ ವಿನಾಯಿತಿ ನೀಡುವುದು ಸರಿಯಲ್ಲ– ಅವರು ಇತರ ಕುಸ್ತಿಪಟುಗಳ ಅವಕಾಶವನ್ನು ಕಸಿದುಕೊಳ್ಳುತ್ತಾರೆ. ಇತರ ಅರ್ಹ ಪ್ರತಿಸ್ಪರ್ಧಿಗಳಿಗೆ ಇಲ್ಲದಂತಹ, ನ್ಯಾಯಸಮ್ಮತವಲ್ಲದ ಅವಕಾಶವನ್ನು ಪ್ರತಿಭಟನಕಾರರಿಗೆ ಒದಗಿಸಿಕೊಡುವುದು ಅತ್ಯಂತ ಕೆಟ್ಟ ನಿದರ್ಶನವೇ ಸರಿ.

(ಕುಸ್ತಿಪಟುಗಳಾದ ಬಜರಂಗ್ ಪೂನಿಯಾ ಹಾಗೂ ವಿನೇಶಾ ಫೋಗಟ್ ಅವರಿಗೆ ಏಷ್ಯನ್ ಕ್ರೀಡಾಕೂಟದಲ್ಲಿ ಸ್ಪರ್ಧಿಸಲು ಭಾರತ ಕುಸ್ತಿ ಫೆಡರೇಷನ್ ಅಡ್‌ಹಾಕ್ ಸಮಿತಿಯು ನೇರ ಅರ್ಹತೆ ನೀಡಿರುವುದಕ್ಕೆ ಪ್ರತಿಕ್ರಿಯೆ)

ಇಷ್ಕರಣ್ ಸಿಂಗ್ ಭಂಡಾರಿ, ವಕೀಲ

ಕಿಡಿನುಡಿ



ವಿಧಾನಸಭಾ ಸ್ಪೀಕರ್ ಅವರು ಬಿಜೆಪಿ ಶಾಸಕರನ್ನು ಅಮಾನತುಗೊಳಿಸುವಂತೆ ಮಾಡುವ ಮೂಲಕ, ಕರ್ನಾಟಕದಲ್ಲಿ ಆಡಳಿತಾರೂಢ ಕಾಂಗ್ರೆಸ್ ಪಕ್ಷವು ಕನಿಷ್ಠ ಹಿಂಜರಿಕೆಯೂ ಇಲ್ಲದೆ ಅಧಿಕಾರವನ್ನು ಹೇಗೆ ದರ್ಪದಿಂದ ಚಲಾಯಿಸಬೇಕು ಎಂಬುದನ್ನು ತೋರಿಸಿಕೊಟ್ಟಿದೆ. ಲೋಕಸಭೆಯ ಸ್ಪೀಕರ್ ಅವರು ಇದರಿಂದ ಪಾಠ ಕಲಿಯಬೇಕಿದೆ. ಮುಂಗಾರು ಅಧಿವೇಶನದ ಸಂದರ್ಭದಲ್ಲಿ ಕಲಾಪಕ್ಕೆ ಒಂದೇ ಒಂದು ನಿಮಿಷ ಅಡ್ಡಿ ಉಂಟುಮಾಡಿದರೂ ಸಂಸದರನ್ನು ಅಮಾನತುಗೊಳಿಸಿ ಅಥವಾ ಉಚ್ಚಾಟನೆ ಮಾಡಿ.

ಮಿನ್ಹಾಜ್ ಮರ್ಚಂಟ್, ಪತ್ರಕರ್ತ, ಲೇಖಕ

25 ವರ್ಷಗಳ ಹಿಂದೆ

ಸೋಮವಾರ, 20-7-1998

• **ಸೀಬರ್ಡ್: ನಿಷ್ಫಲವಾದ ರಕ್ಷಣಾ ಸಚಿವರ ಸಭೆ**

ಕಾರವಾರ, ಜುಲೈ 19– 'ಸೀಬರ್ಡ್' ನಿರಾಶ್ರಿತರ ಪುನರ್ವಸತಿ ಮತ್ತು ಪರಿಹಾರ ಕುರಿತ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಇಂದು ಇಲ್ಲಿ ರಕ್ಷಣಾ ಸಚಿವ ಜಾರ್ಜ್ ಫರ್ನಾಂಡಿಸ್, ಮುಖ್ಯಮಂತ್ರಿ ಪಟೇಲ್ ಅವರ ಉಪಸ್ಥಿತಿಯಲ್ಲಿ ನಡೆದ ಅತಿ ಮಹತ್ವದ ಸಭೆಯಲ್ಲಿ ಯಾವುದೇ ತೀರ್ಮಾನಕ್ಕೆ ಬರಲಾಗಲಿಲ್ಲ.

ಇದರಿಂದಾಗಿ ಇಲ್ಲಿಯವರೆಗಿದ್ದ ಅನಿಶ್ಚಿತತೆ ಮತ್ತೆ ಮುಂದುವರಿದಂತಾಗಿದೆ.

ಏಷ್ಯಾದಲ್ಲಿಯೇ ಅತಿ ದೊಡ್ಡ ನೌಕಾ ನೆಲೆಯಾಗಲಿರುವ 'ಸೀಬರ್ಡ್' ನೌಕಾ ನೆಲೆ ಯೋಜನೆಯ ಜಾರಿಗೆ ಅಡ್ಡಿಯಾಗಿರುವ ಪುನರ್ವಸತಿ ಮತ್ತು ನಿರಾಶ್ರಿತರಿಗೆ ನೀಡಬೇಕಾಗಿರುವ ಪರಿಹಾರದ ಕುರಿತು ಚರ್ಚಿಸಲೆಂದೇ ರಕ್ಷಣಾ ಸಚಿವರು ಇಂದು ಮುಖ್ಯಮಂತ್ರಿ, ಕಂದಾಯ ಸಚಿವರೊಂದಿಗೆ ಇಲ್ಲಿಗೆ ಆಗಮಿಸಿದ್ದರು.

• **ಬಾಗೂರು ನವಿಲೆ: ಚಳವಳಿ ಅಂತ್ಯ**

ಚನ್ನರಾಯಪಟ್ಟಣ, ಜುಲೈ 19– ನಾಲೆಗೆ ಮಣ್ಣು ಸುರಿದು ಕಳೆದ 96 ದಿನಗಳಿಂದ ಅನಿರ್ದಿಷ್ಟ ಅವಧಿಯ ನೀರು ತಡೆ ಚಳವಳಿ ನಡೆಸುತ್ತಿದ್ದ ಬಾಗೂರು-ನವಿಲೆ ಸುರಂಗ ಸಂತ್ರಸ್ತ ರೈತರು ಇಂದು ಸ್ವಯಂ ಬಂಧನಕ್ಕೆ ಒಳಗಾಗಿ, ನಾಲೆಯನ್ನು ತೆರವು ಮಾಡಿದ್ದರಿಂದ ಈ ಚಳವಳಿ ಅಂತ್ಯವಾಯಿತು.

ಈ ತಿಂಗಳ 14ರಿಂದ ಆಮರಣಾಂತ ಉಪವಾಸ ಸತ್ಯಾಗ್ರಹ ಆರಂಭಿಸಿರುವ ಅಖಿಲ ಭಾರತ ಕಿಸಾನ್ ಸಭಾದ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಎಂ.ಗೋಪಾಲ್, ರಾಜ್ಯ ರಸ್ತೆ ಸಾರಿಗೆ ನೌಕರರ ಸಂಘದ ಮುಖಂಡ ಎಚ್.ವಿ.ಅನಂತಸುಬ್ಬರಾವ್ ಅವರೂ ಸೇರಿದಂತೆ ಸುಮಾರು 100 ಜನ ಬಂಧನಕ್ಕೆ ಒಳಗಾದರು.

ಚನ್ನರಾಯಪಟ್ಟಣ ತಾಲ್ಲೂಕು ಮತ್ತು ಹಾಸನ ನಗರದಲ್ಲಿ ಇಂದಿನಿಂದ ಮೂರು ದಿನ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 20-7-1973

• **ರಾಜ್ಯಕ್ಕೆ ತೀವ್ರ ಆರ್ಥಿಕ ಅಡಚಣೆ; ಮಿತವ್ಯಯ ಕ್ರಮ ಪರಿಶೀಲನೆಯಲ್ಲಿ**

ಬೆಂಗಳೂರು, ಜುಲೈ 19– ಕೇಂದ್ರದ ನೆರವು ಕಡಿಮೆಯಾಗುತ್ತಿರುವುದರ ಪರಿಣಾಮವಾಗಿ, ತೀವ್ರ ಹಣಕಾಸು ಅಡಚಣೆ ಎದುರಿಸುತ್ತಿರುವ ರಾಜ್ಯ ಸರ್ಕಾರವು, ಎಲ್ಲ ಕ್ಷೇತ್ರಗಳಲ್ಲಿ ವೆಚ್ಚ ಕಡಿತ ಹಾಗೂ ಸಾಧ್ಯವಿರುವಲ್ಲಿ ಮಿತವ್ಯಯ ಸಾಧಿಸಲು ವ್ಯಾಪಕ ಕ್ರಮಗಳನ್ನು ರೂಪಿಸುತ್ತಿದೆ.

ಇಂದು ಬೆಳಿಗ್ಗೆ ಸುಮಾರು 5 ಗಂಟೆ ಕಾಲ ನಡೆದ ಸಚಿವ ಸಂಪುಟದ ಸಭೆಯಲ್ಲಿ ಈ ಬಗ್ಗೆ ಆಳ ಚರ್ಚೆ ನಡೆಯಿತಾದರೂ, ಅರ್ಥಮಂತ್ರಿ ಅವರು ಇಲ್ಲದಿದ್ದ ಕಾರಣ, ಈ ಕ್ರಮಗಳ ಬಗ್ಗೆ ಅಂತಿಮ ನಿರ್ಧಾರವನ್ನು ಕೈಗೊಳ್ಳುವುದನ್ನು ಮುಂದೂಡಲಾಯಿತು.

• **ದಸರಾ ಇಲ್ಲ?**

ಬೆಂಗಳೂರು, ಜುಲೈ 19– ವಿಶ್ವವಿಖ್ಯಾತ ಮೈಸೂರು ದಸರಾ ಉತ್ಸವ ಬಹುತೇಕ ಮಟ್ಟಿಗೆ ಈ ವರ್ಷದಿಂದ ಇತಿಹಾಸದ ಪುಟ ಸೇರಲಿದೆ. ಮಿತವ್ಯಯದ ಅಂಗವಾಗಿ, ಈ ಉತ್ಸವವನ್ನು ನಿಲ್ಲಿಸಲು ಸರ್ಕಾರ ತೀವ್ರವಾಗಿ ಆಲೋಚಿಸುತ್ತಿದೆ ಎಂದು ಮುಖ್ಯಮಂತ್ರಿ ಶ್ರೀ ದೇವರಾಜ ಅರಸು ಅವರು ಇಂದು ಇಲ್ಲಿ ವರದಿಗಾರರಿಗೆ ತಿಳಿಸಿದರು.

ವ್ಯಕ್ತಿತ್ವ–ವೃತ್ತಿಪರತೆ ಟೊಳ್ಳು, ಕಿಚ್ಚು–ಮಚ್ಚು–ಕೊಚ್ಚು ಸಂಸ್ಕೃತಿಯೇ ನಟರ ಬಂಡವಾಳ

ತೊಂಬತ್ತರಲ್ಲಿ ಕೆಟ್ಟು ನಿಂತ ಸಿನಿಮಾಬಂಡಿ

ಪಡಸಾಲೆ

ರಘುನಾಥ ಚ.ಹ.

ಬೆಂಗಳೂರಿನ ಪ್ರೆಸ್ ಕ್ಲಬ್ ಆವರಣ. 2015ರ ಮೇ 24ರ ಭಾನುವಾರ. ಬೆಳಗ್ಗೆ ಎಂಟರ ಸುಮಾರಿಗೆ ಕೊಕ್ಕರೆ ಬಿಳುಪಿನ ಪಂಚೆಯ ಹಿರಿಯರೊಬ್ಬರು ಪ್ರೆಸ್ ಕ್ಲಬ್ ಆವರಣದಲ್ಲಿ ಒಂಟಿಯಾಗಿ ಕುಳಿತಿದ್ದರು. ಬೆಳಗಿನ ಅಭ್ಯಾಗತರು ಯಾರಿರಬಹುದೆಂದು ಹತ್ತಿರ ಹೋಗಿ ನೋಡಿದರೆ, ಹಿರಿಯ ನಟ-ನಿರ್ದೇಶಕ ಕೆ.ಎಸ್.ಎಲ್. ಸ್ವಾಮಿ. 'ಮೈಸೂರಿನಿಂದ ಬೆಂಗಳೂರಿಗೆ ಬರ್ತಿದ್ದೆ. ದಾರಿಯಲ್ಲಿ ಪತ್ರಿಕೆ ಬಿಡಿಸಿದಾಗ, ಎಂ.ಬಿ. ಸಿಂಗ್ ಅವರ 90ನೇ ವರ್ಷದ ಹುಟ್ಟುಹಬ್ಬದ ಕಾರ್ಯಕ್ರಮ ಇರುವುದು ತಿಳಿಯಿತು. ಹಾಗಾಗಿ ಇಲ್ಲಿಗೆ ಬಂದೆ' ಎಂದರು. 'ಪ್ರಜಾವಾಣಿ ಹಾಗೂ ಎಂ.ಬಿ. ಸಿಂಗ್ ನಮ್ಮ ಸಿನಿಮಾದವರನ್ನು ಬೆಳೆಸಿದ್ದನ್ನು ಮರೆಯಲಾದೀತೆ?' ಎಂದು ಅಕ್ಕರೆಯಿಂದ ಹೇಳಿದರು. ಆ ಋಣಸ್ಮರಣೆಯಿಂದಲೇ, ಮೈಸೂರಿನಿಂದ ಬಂದವರು ಮನೆಗೂ ಹೋಗದೆ ಕಾರ್ಯಕ್ರಮದಲ್ಲಿ ಭಾಗವಹಿಸಲು ತಾವಾಗಿಯೇ ಧಾವಿಸಿ ಬಂದಿದ್ದರು.

ರವೀ ಎಂದೇ ಪ್ರಸಿದ್ಧರಾದ ಕೆ.ಎಸ್.ಎಲ್. ಸ್ವಾಮಿ ಕನ್ನಡ ಚಿತ್ರರಂಗದಲ್ಲಿ ಅಷ್ಟೇನೂ ಬಳಕೆಯಲ್ಲಿಲ್ಲದ ವಾತ್ಸಲ್ಯ–ವಿಶ್ವಾಸ–ಕೃತಜ್ಞತೆಯ ಮೂರ್ತರೂಪದಂತಿದ್ದವರು. ಕೆಲವು ವರ್ಷಗಳ ಹಿಂದಷ್ಟೇ ವಿರಳವಾಗಿಯಾದರೂ ಇದ್ದ ಸ್ವಾಮಿಯಂಥವರನ್ನು ಈಗ ಕಾಣಬಹುದೆ? ಸ್ವಾಮಿ ಅವರಂತೆ, ಇಂದಿನ ನಟರು ತಾವಾಗಿಯೇ ಯಾವುದಾದರೂ ಸಾಂಸ್ಕೃತಿಕ–ಸಾಹಿತ್ಯಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದ ಉದಾಹರಣೆಯಿದೆಯೆ? ಸಾಹಿತ್ಯ–ಸಂಸ್ಕೃತಿಯ ಮಾತಿರಲಿ, ಚಿತ್ರರಂಗವನ್ನು ಪ್ರತಿನಿಧಿಸುವ ಹಬ್ಬದಂಥ ಉತ್ಸವಗಳಿಗಾದರೂ ಸ್ವಪ್ರೇರಣೆಯಿಂದ ಬಂದಿರುವುದಿದೆಯೆ? ಇಂಥ ಉದಾಹರಣೆಗಳಿದ್ದಲ್ಲಿ, ಆ ಕಲಾವಿದರು ಇನ್ನೂ ಪೂರ್ಣ ಪ್ರಮಾಣದಲ್ಲಿ ಗಾಂಧಿನಗರಕ್ಕೆ ಹೊಂದಿಕೊಂಡಿಲ್ಲ ಅಥವಾ ನಟನೆ ಅವರಿಗೆ ಹವ್ಯಾಸವಾಗಿಯಷ್ಟೇ ಉಳಿದಿದೆ ಎಂದರ್ಥ.

ಸಿನಿಮಾ ಕಲಾವಿದನೊಬ್ಬ ಸಾಹಿತ್ಯ–ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸದೇ ಇರುವುದು ದೊಡ್ಡ ಲೋಪವೇನಲ್ಲ. ಆದರೆ, ಕಲಾವಿದನೊಬ್ಬನ ಸಿನಿಮಾಗಳು ತನ್ನ ನೆಲದ ಸಂಸ್ಕೃತಿ–ಸಾಹಿತ್ಯದೊಂದಿಗೆ ನಂಟು ಹೊಂದಿಲ್ಲದಿರುವುದು ಐಬೇ ಸರಿ. ಈ ಲೋಪವನ್ನು ಈ ಹೊತ್ತಿನ ತಾರಾ ವರ್ಚಸ್ಸಿನ ಕಲಾವಿದರು ಸರಿಪಡಿಸಿಕೊಳ್ಳುವುದಿರಲಿ, ಐಬನ್ನೇ ತಮ್ಮ ಹೆಗ್ಗಳಿಕೆಯೆಂಬಂತೆ ಮೆರೆಸುತ್ತಿರುವಂತಿದೆ. ಸಿನಿಮಾ ಎನ್ನುವುದು ಉದ್ಯಮವಾಗಿಯಷ್ಟೇ ಉಳಿದು, ಕಲೆಯ ಸಾಧ್ಯತೆಗಳು ಹಿಂದೆ ಸರಿದಂತೆಲ್ಲ ಉಂಟಾಗುವ ಅಪಸವ್ಯವಿದು.

ಮೈಸೂರು ರಾಜ್ಯಕ್ಕೆ 'ಕರ್ನಾಟಕ'ವೆಂದು ನಾಮಕರಣವಾದ ಚಾರಿತ್ರಿಕ ಘಟನೆಗೆ ಬರುವ ನವೆಂಬರ್ 1ಕ್ಕೆ ಭರ್ತಿ ಐವತ್ತು ವರ್ಷ. ನಾಡಿನ ನಾಮಕರಣದ ಈ ಸುವರ್ಣ ಮಹೋತ್ಸವಕ್ಕೆ ಕನ್ನಡ ಚಿತ್ರರಂಗದ ಸ್ಪಂದನ ಯಾವ ಬಗೆಯದು? 2024ರ ಮಾರ್ಚ್ 3ಕ್ಕೆ ಕನ್ನಡದ ಮೊದಲ ವಾಕ್ಚಿತ್ರ 'ಸತಿ ಸುಲೋಚನಾ' ತೆರೆಕಂಡು ತೊಂಬತ್ತು ವರ್ಷಗಳಾಗುತ್ತದೆ; ಆ ತೊಂಬತ್ತರ ಸಂಭ್ರಮವನ್ನು ಆಚರಿಸಲು ಕನ್ನಡ ಚಿತ್ರರಂಗ ಯಾವ ರೀತಿ ಸಿದ್ಧತೆ ನಡೆಸಿದೆ? ಸಿದ್ಧತೆಯ ಮಾತಿರಲಿ, ತೊಂಬತ್ತರ ಸಂಕ್ರಮಣದ ನೆನಪಾದರೂ ಚಿತ್ರರಂಗಕ್ಕೆ ಇದೆಯೆ?

ಕನ್ನಡದ ಹೆಸರಿನಲ್ಲಿ ಹೆಚ್ಚಿನ ಅನುಕೂಲ ಪಡೆದು, ನಾಡಿಗೆ ಕನಿಷ್ಠ ಪ್ರಮಾಣದ ಕೊಡುಗೆ ನೀಡುತ್ತಿರುವ ಕ್ಷೇತ್ರಗಳಲ್ಲಿ ಚಿತ್ರರಂಗವೇ ಮುಂಚೂಣಿಯಲ್ಲಿರಬೇಕು. ತೊಂಬತ್ತು ವರ್ಷಗಳ ನಂತರವೂ ಕನ್ನಡ ಚಿತ್ರರಂಗ ತನ್ನ ಉಳಿವಿಗಾಗಿ ಜನರ ಔದಾರ್ಯ ಹಾಗೂ ಸರ್ಕಾರದ ಅನುಕಂಪವನ್ನೇ ನೆಚ್ಚಿಕೊಂಡಿರುವಂತಿದೆ. ನೆರೆಯ ತಮಿಳು, ಮಲಯಾಳಂ ಸಿನಿಮಾಗಳು ತಮ್ಮದೇ ಆದ ಪ್ರಾದೇಶಿಕ ಆವರಣ ಹಾಗೂ ತಾತ್ವಿಕತೆಯೊಂದನ್ನು ರೂಪಿಸಿಕೊಂಡು ಅದ್ಭುತ ಸಿನಿಮಾಗಳನ್ನು ರೂಪಿಸುತ್ತಿದ್ದರೆ, ಕನ್ನಡದ ಸಿನಿಮಾ ನಿರ್ಮಾತೃಗಳು ತ್ರಿಶಂಕು ಸ್ಥಿತಿಯಲ್ಲಿದ್ದಾರೆ. 'ಕಿಚ್ಚು–ಮಚ್ಚು ಹಾಗೂ ಕೊಚ್ಚು' ಎನ್ನುವುದೇ ಕನ್ನಡ ಸಿನಿಮಾದ ತಾತ್ವಿಕತೆ ಆಗಿರುವಂತಿದೆ. ಕಳೆದ ಮೂರ್ನಾಲ್ಕು ವರ್ಷಗಳಲ್ಲಿ ಮೂರ್ನಾಲ್ಕು ಸಿನಿಮಾಗಳ ಮೂಲಕ ಕನ್ನಡ ಚಿತ್ರರಂಗ ರಾಷ್ಟ್ರೀಯ ಮಟ್ಟದಲ್ಲಿ ಒಂದಷ್ಟು ಸುದ್ದಿ ಮಾಡಿರುವುದು ನಿಜ. ಆದರೆ, ಆ ಸಿನಿಮಾಗಳು ಕನ್ನಡ ಚಿತ್ರರಂಗದ ಒಟ್ಟಾರೆ ಬೆಳವಣಿಗೆಗೆ ನೀಡಿರುವ ಕೊಡುಗೆಯೇನು ಎನ್ನುವ ಪ್ರಶ್ನೆಗೆ ದೊರೆಯುವ ಉತ್ತರ ಆಶಾದಾಯಕವಾಗಿಲ್ಲ. 'ಪ್ಯಾನ್ ಇಂಡಿಯಾ' ಹೆಸರಿನಲ್ಲಿ ದುಡ್ಡು ಮಾಡಿದ ಈ ಸಿನಿಮಾಗಳದು ವೈಯಕ್ತಿಕ ಸಾಧನೆಯೇ ಹೊರತು, ಅದರಿಂದ ಕನ್ನಡ ಚಿತ್ರರಂಗಕ್ಕೆ ಹೊಸ ಬೆಳಕೂ ದೊರೆಯಲಿಲ್ಲ, ಹೊಸ ದಿಕ್ಕೂ ಕಾಣಿಸಲಿಲ್ಲ. ವರ್ಷಕ್ಕೋ ಎರಡು ವರ್ಷಕ್ಕೋ ತೆರೆಕಾಣುವ ಒಂದು ಸಿನಿಮಾ ಗಳಿಸುವ ಗೆಲುವಿಗಿಂತಲೂ, ನಂತರ ಸೃಷ್ಟಿಯಾಗುವ ನಿರ್ವಾತದಿಂದ ಉಂಟಾಗುವ ಹಾನಿಯೇ ದೊಡ್ಡದು. ಸಣ್ಣ ಸಣ್ಣ ತಂಡಗಳ ಕ್ರಿಯಾಶೀಲ ಪ್ರಯತ್ನಗಳಿಗಿದು ಕಾಲವಲ್ಲ ಎನ್ನುವ ಸ್ಥಿತಿಯನ್ನು ದೊಡ್ಡ ಬಜೆಟ್‌ನ ಸಿನಿಮಾಗಳು ಸೃಷ್ಟಿಸಿವೆ. ಅಪ್ಪಟ ಸಿನಿಮಾ ಪ್ರೀತಿಯ ನಿರ್ಮಾಣ ಸಂಸ್ಥೆಗಳು ದಣಿದಂತೆ ಕಾಣಿಸುತ್ತಿರುವ, ಕೆಲವು ಸಂಸ್ಥೆಗಳು ನಿಷ್ಕ್ರಿಯವಾಗಿರುವ ಸಂದರ್ಭದಲ್ಲಿ, ಚಲನಚಿತ್ರ ನಿರ್ಮಾಣ ಸಂಸ್ಥೆಯೊಂದು ಯಶಸ್ಸು ಗಳಿಸಲಿಕ್ಕೆ ರಾಜಕೀಯ ಹಿನ್ನೆಲೆಯೂ ಬೇಕು ಎನ್ನುವ ಸ್ಥಿತಿ ಉಂಟಾಗಿದೆ. ಏಕಸ್ವಾಮ್ಯದ ಈ ಸ್ಥಿತಿ ಈ ಹೊತ್ತಿನ ಕನ್ನಡ ಚಿತ್ರರಂಗ ಸಾಗುತ್ತಿರುವ ದಿಕ್ಕನ್ನು ಸೂಚಿಸುವಂತಿದೆ.



'ಕಾಂತಾರ'ವನ್ನು ಹೊರತುಪಡಿಸಿದರೆ, 'ಪ್ಯಾನ್ ಇಂಡಿಯಾ' ಲೇಬಲ್‌ನ ಚಿತ್ರಗಳೆಲ್ಲ ವ್ಯಾಪಾರಿ ಸರಕುಗಳೇ ಹೊರತು, ಕನ್ನಡದ ಅನನ್ಯತೆಯ ಅಭಿವ್ಯಕ್ತಿಗಳಲ್ಲ. ಮಬ್ಬು ಬೆಳಕಿನಲ್ಲಿ ರೂಪುಗೊಂಡ ಸರಕು ಸಂಸ್ಕೃತಿಯ ಸಿನಿಮಾಗಳಿಂದ ಕವಿದಿರುವ ಮಬ್ಬಿನಿಂದ ಕನ್ನಡ ಚಿತ್ರರಂಗ ತಬ್ಬಿಬ್ಬಾಗಿದೆ. ಈ ಮಂಪರಿನಿಂದ ಹೊರಬರಲಿಕ್ಕೆ ಅಗತ್ಯವಾದ ಸೃಜನಶೀಲತೆ ಹಾಗೂ ಬದ್ಧತೆ – ಎರಡನ್ನೂ ಕನ್ನಡ ಸಿನಿಮಾ ನಿರ್ಮಾತೃಗಳಲ್ಲಿ ಅಪೇಕ್ಷಿಸುವುದು ದುಬಾರಿ ನಿರೀಕ್ಷೆ ಎನ್ನುವಂತಾಗಿದೆ.

ಯಾವುದೇ ಒಂದು ಭಾಷೆಯ ಸಿನಿಮಾ ಸಂಸ್ಕೃತಿ ಜೀವಂತವಾಗಿರುವಲ್ಲಿ ಕಲಾವಿದರ– ತಾರಾ ವರ್ಚಸ್ಸಿನ ನಾಯಕರ– ಕೊಡುಗೆ ಮುಖ್ಯವಾದುದು. ನೋಡುಗರನ್ನು ಚಿತ್ರಮಂದಿರಗಳಿಗೆ ಕರೆತರಬಲ್ಲ ಶಕ್ತಿಯುಳ್ಳ ನಟರು ಸತತವಾಗಿ ಸಿನಿಮಾಗಳನ್ನು ಮಾಡಿದರಷ್ಟೇ ಚಿತ್ರೋದ್ಯಮ ಲವಲವಿಕೆಯಿಂದಿರುವುದು ಸಾಧ್ಯ. ಕನ್ನಡದ ಸ್ಥಿತಿ ಗಮನಿಸಿ. 2020ರಿಂದೀಚೆಗೆ ದರ್ಶನ್ ಹಾಗೂ ಸುದೀಪ್ ನಟನೆಯ ತಲಾ 2 ಸಿನಿಮಾಗಳು ತೆರೆಕಂಡಿದ್ದರೆ, ಯಶ್ ನಟನೆಯ ಒಂದು ಚಿತ್ರವಷ್ಟೇ ತೆರೆಕಂಡಿದೆ. ಮೂರು ವರ್ಷದ ಅವಧಿಯಲ್ಲಿ, ಮುಂಚೂಣಿ ಕಲಾವಿದರು ನಟಿಸಿದ ಐದು ಸಿನಿಮಾಗಳಷ್ಟೇ ತೆರೆಕಂಡಿವೆ ಎನ್ನುವುದಕ್ಕಿಂತಲೂ ಕನ್ನಡ ಚಿತ್ರರಂಗದ ದುಃಸ್ಥಿತಿಗೆ ಬೇರೊಂದು ಉದಾಹರಣೆ ಅನಗತ್ಯ. ರಾಜ್‌ಕುಮಾರ್ ವೃತ್ತಿಜೀವನದ ಉತ್ತುಂಗದಲ್ಲಿ, ಅವರ ನಟನೆಯ ಕನಿಷ್ಠ ಏಳೆಂಟು ಚಿತ್ರಗಳಾದರೂ ಪ್ರತಿ ವರ್ಷ ಬಿಡುಗಡೆಯಾಗುತ್ತಿದ್ದವು; ಅಷ್ಟೇ ಸಂಖ್ಯೆಯಲ್ಲಿ ವಿಷ್ಣುವರ್ಧನ್ ಹಾಗೂ ಅಂಬರೀಷ್ ನಟನೆಯ ಸಿನಿಮಾಗಳೂ ತೆರೆಕಾಣುತ್ತಿದ್ದವು ಎನ್ನುವುದನ್ನು ನೆನಪಿಸಿಕೊಂಡರೆ, ಇಂದಿನ ನಟರ ಸಾಮರ್ಥ್ಯದ ಮಿತಿ ಅರಿವಿಗೆ ಬರುತ್ತದೆ.

ವರ್ಷಕ್ಕೊಂದೋ ಒಂದೂವರೆಯೋ ಸಿನಿಮಾವನ್ನೂ ಮಾಡದಿದ್ದರೂ ಪ್ರಚಾರದ ಪ್ರಭಾವಳಿಯಿಂದೇನೂ ಕಲಾವಿದರು ದೂರವಾಗಿಲ್ಲ; ಸಿನಿಮೇತರ ಕಾರಣಗಳಿಂದಾಗಿ ನಿರಂತರವಾಗಿ ಸುದ್ದಿಯಲ್ಲಿರುವ ಕಲೆಯಲ್ಲಿ ಅವರು ಪಳಗಿದ್ದಾರೆ. ಕಲಾವಿದನೊಬ್ಬ ತಾನು ನಿರ್ವಹಿಸುವ ಪಾತ್ರಗಳ ಮೂಲಕ ಜನಮನದಲ್ಲಿ ಸ್ಥಾನ ಪಡೆಯಬೇಕು ಹಾಗೂ ಕಲಾವಿದ ಜೀವ ತುಂಬುವ ಕಥನಗಳು ದೇಶ–ಭಾಷೆಯ ಚೆಲುವನ್ನು ಒಳಗೊಂಡಿರಬೇಕು. ಈಗಿನ ಬಹುತೇಕ ಕಲಾವಿದರು ಸುದ್ದಿಯಲ್ಲಿರುವುದು ಖಯಾಲಿಗಳ ಮೂಲಕ ಹಾಗೂ ನಿರ್ವಹಿಸುವ ಪಾತ್ರ ಮತ್ತು ನಿಜ ಜೀವನದ ವ್ಯಕ್ತಿತ್ವಕ್ಕೂ ವ್ಯತ್ಯಾಸವಿಲ್ಲದಂತೆ ನಡೆದುಕೊಳ್ಳುವುದರ ಮೂಲಕ. ಕಲಾವಿದರಲ್ಲಿನ ವೃತ್ತಿಪರತೆಯ ಕೊರತೆಯೇ ಕನ್ನಡ ಚಿತ್ರೋದ್ಯಮದ ಎಲ್ಲ ಸಂಕಟಗಳ ಮೂಲವಾಗಿರುವಂತಿದೆ. ನಟನೊಬ್ಬನ ಕಾಲ್‌ಶೀಟ್ ದೊರೆಯದ ಕಾರಣದಿಂದಾಗಿ ನಿರ್ಮಾಪಕರು ಬೀದಿಗೆ ಬಂದು ದೂರುವ ಪರಿಸ್ಥಿತಿ ಸೃಷ್ಟಿಯಾಗಿರುವುದನ್ನು ನೋಡಿದರೆ, 'ಅನ್ನದಾತರು' ಎಂದು ನಿರ್ಮಾಪಕರನ್ನು ಗೌರವಿಸುತ್ತಿದ್ದ ಮನೋಭಾವ ರಾಜ್‌ಕುಮಾರ್ ಕಾಲಕ್ಕೇ ಮುಗಿದಂತಿದೆ.

ವಯಸ್ಸು ಹೆಚ್ಚಾದಂತೆಲ್ಲ ಮನುಷ್ಯ ದಣಿಯುವುದು, ಕ್ರಿಯಾಶಕ್ತಿ ಕುಂದುವುದು ಸಹಜ. ಆದರೆ, ಯಾವುದೇ ಕಲೆಯು ಪ್ರಾಯ ಹೆಚ್ಚಾದಂತೆಲ್ಲ ವಿಕಸನದ ದಾರಿಯಲ್ಲಿ ಸಾಗಬೇಕು. ಕನ್ನಡ ಚಿತ್ರೋದ್ಯಮ ತನ್ನ ದೋಣಿಗೆ ತಾನು ಕಿಂಡಿ ಕೊರೆಯುವುದನ್ನು ಬಿಟ್ಟರೆ, ಈಗ ತೊಂಬತ್ತರ ಏದುಸಿರಿನಲ್ಲಿ ಕಾಣಿಸಿರುವ ದಣಿವು, ನೂರರ ವೇಳೆಗೆ ಪ್ರಪಾತಕ್ಕೆ ಮುಟ್ಟಿಸೀತು.

ಚುರುಮುರಿ

ಯೇ ಮೇರಾ ಇಂಡಿಯಾ

• ಗುರು ಪಿ.ಎಸ್.

'ಹರೇ ರಾಮ, ಹರೇ ರಾಮ, ರಾಮ ರಾಮ ಹರೇ, ಹರೇ ಕೃಷ್ಣ, ಹರೇ ಕೃಷ್ಣ, ಕೃಷ್ಣ ಕೃಷ್ಣ ಹರೇ' ಸ್ಕೂಲ್ ಡೇ ಕಾರ್ಯಕ್ರಮದಲ್ಲಿ ಮಗಳು ಈ ಹಾಡಿಗೆ ಹೆಜ್ಜೆ ಹಾಕುತ್ತಿದ್ದಂತೆ ಖುಷಿಯಲ್ಲಿ ತೇಲತೊಡಗಿದ ಮುದ್ದಣ್ಣ.

ಹಾಡು ಮುಂದುವರಿಯಿತು, 'ವಿ ವಾಂಟ್ ಟು ಗೋ ಅಮೆರಿಕ, ಅಮೆರಿಕ...'

ಮುದ್ದಣ್ಣಂಗೆ ಇನ್ನೂ ಖುಷಿಯಾಯಿತು. ಹಾಡು ಮುಂದುವರಿಯಿತು.

'ಲಂಡನ್ ದೇಖಾ, ಪ್ಯಾರಿಸ್ ದೇಖಾ...'

'ಹ್ಞೂಂ... ಹ್ಞೂಂ... ಕಂಟಿನ್ಯೂ, ಕಂಟಿನ್ಯೂ...' ಮುದ್ದಣ್ಣನ ಖುಷಿಯೊಂದಿಗೆ ಹಾಡೂ ಮುಂದುವರಿಯಿತು.

'ಯೇ ಮೇರಾ ಇಂಡಿಯಾ, ಯೇ ಮೇರಾ ಇಂಡಿಯಾ, ಐ ಲವ್ ಮೈ ಇಂಡಿಯಾ, ಐ ಲವ್ ಮೈ ಇಂಡಿಯಾ...'

'ಸ್ಟಾಪ್ ಇಟ್' ಸಿಟ್ಟಿನಲ್ಲಿ ಎದ್ದ ಮುದ್ದಣ್ಣ, ಮಗಳನ್ನು ಎಳೆದುಕೊಂಡು ಮನೆಗೆ ಕರೆದೊಯ್ದ.

'ಯಾಕಪ್ಪ, ನನ್ನ ಡಾನ್ಸ್, ಹಾಡನ್ನ ಅಷ್ಟು ಎಂಜಾಯ್ ಮಾಡ್ತಿದ್ದೆ. ಯಾಕೆ ಸಡನ್ ಆಗಿ ಸ್ಟಾಪ್ ಮಾಡಿಸಿಬಿಟ್ಟೆ?' ಮುಗ್ಧವಾಗಿ ಕೇಳಿದಳು ಮಗಳು.

'ಇನ್ಮುಂದೆ ಇಂಡಿಯಾ ಅನ್ನೋ ಪದ ಈ ಮನೆಯಲ್ಲಿ ಕೇಳಿಬರಬಾರದು' ಕಟ್ಟಪ್ಪಣೆ ಹೊರಬಿತ್ತು.

'ಅಪ್ಪಾ, ಇಂಡಿಯಾ ಅಂದ್ರೆ ಜೀವಾನೇ ಬಿಡ್ತಿದ್ದೆ, ಈಗೇನಾಯ್ತಪ್ಪ?'

ಮನದಲ್ಲಾಗುತ್ತಿರುವ ತಳಮಳವನ್ನು ತೋರಿಸಿಕೊಳ್ಳಲಾಗದೆ, 'ಅದೆಲ್ಲ ನಿನಗೆ ಗೊತ್ತಾಗಲ್ಲ. ಇನ್ಮುಂದೆ ಭಾರತ ಅನ್ನು'.

'ಭಾರತ, ಇಂಡಿಯಾ ಎರಡೂ ಒಂದೇ ಅಲ್ವೇನಪ್ಪ...?'

'ಒಂದ್ ಸಲ ಹೇಳಿದ್ರೆ ಅರ್ಥವಾಗಲ್ವೇನಮ್ಮ ನಿಂಗೆ, ಇಂಡಿಯಾ ಮಾತ್ರ ಅನ್ನಬೇಡ, ಭಾರತ ಅನ್ನು, ತಿಳೀತಾ?' ಸಿಟ್ಟಲ್ಲಿ ಹೇಳಿದ ಮುದ್ದಣ್ಣ.

ಅಪ್ಪನ ಕೋಪ ಕಂಡು ಮಗಳು ಅಳತೊಡಗಿದಳು. ಚಾಕೊಲೇಟ್ ಕೊಟ್ಟು ಮಗಳನ್ನು ಮುದ್ದಿಸಿದ ಮುದ್ದಣ್ಣ, ಹೊಟ್ಟೆಯಲ್ಲಾಗುತ್ತಿರುವ ಅಪಾರ ಸಂಕಟಕ್ಕೆ ತನ್ನನ್ನೇ ಶಪಿಸಿಕೊಳ್ಳತೊಡಗಿದ.

ಮಗಳು ಮತ್ತೆ ಗುನುಗುತ್ತಾ ಹೊರಟಳು, 'ಯೇ ಮೇರಾ ಇಂಡಿಯಾ, ಐ ಲವ್ ಮೈ ಇಂಡಿಯಾ...'

ಸಂಗತ

ಚಂದ್ರನ ಚಹರೆ ಬದಲಾಗುವುದೇ?

ಚಂದ್ರನಲ್ಲಿನ ಸಂಪನ್ಮೂಲಗಳ ಕೊಳ್ಳೆಗೆ ಹೊರಟಿದ್ದಾರೆ ಭೂಒಡೆಯರು

• ಡಾ. ಎಂ.ವೆಂಕಟಸ್ವಾಮಿ

ಚಂದ್ರಯಾನ- 3 ಮೊನ್ನೆ ನಭಕ್ಕೆ ಹಾರಿದ ದಿನ ಕನ್ನಡ ವಾಹಿನಿಯೊಂದರಲ್ಲಿ ಒಬ್ಬರು, 'ಚಂದ್ರನಲ್ಲಿ ಅಗಾಧವಾದ ಖನಿಜ ಸಂಪತ್ತಿದ್ದು, ಅದನ್ನು ಭೂಮಿಗೆ ತರಲು ಪ್ರಯತ್ನಗಳು ನಡೆಯುತ್ತಿವೆ. ಅವುಗಳನ್ನು ಹೇಗೆ ತರಬೇಕು, ಅದಕ್ಕಾಗಿ ಎಷ್ಟು ಖರ್ಚಾಗುತ್ತದೆ ಎನ್ನುವುದು ಬೇರೆ ವಿಷಯ. ಆದರೆ ನೀರು ಮತ್ತು ಅನೇಕ ರೀತಿಯ ಬಹು ಅಮೂಲ್ಯ ಖನಿಜಗಳು ಇವೆ' ಎಂದು ಹೇಳುತ್ತಿದ್ದರು.

ಭೂಮಿಗೆ ಬರೀ 3.84 ಲಕ್ಷ ಕಿ.ಮೀ. ದೂರದಲ್ಲಿರುವ ಚಂದ್ರನ ಬಗ್ಗೆ ಮಾನವನ ಇತಿಹಾಸದಲ್ಲಿ ಬರೆದಷ್ಟು ಸಾಹಿತ್ಯ, ವೈಜ್ಞಾನಿಕ ವಿಷಯಗಳು ಬೇರೆ ಯಾವ ಗ್ರಹದ ಬಗ್ಗೆಯೂ ಬಂದಿಲ್ಲ. ಮಗುವಿಗೆ ಚಂದ್ರನನ್ನು ತೋರಿಸಿ ತಿನ್ನಿಸುವುದು, ಪ್ರಣಯಿಗಳು ಚಂದ್ರನನ್ನು ನೋಡುತ್ತ ಹಾಡುವುದು, ಕವಿಗಳು ಚಂದ್ರನನ್ನು ವರ್ಣಿಸುವುದು ಸಾಮಾನ್ಯ. ವಿಜ್ಞಾನಿಗಳು, ತತ್ವಶಾಸ್ತ್ರಜ್ಞರು, ಗಣಿತಜ್ಞರು ಮತ್ತು ಖಗೋಳವಿಜ್ಞಾನಿಗಳು ಚಂದ್ರನ ಬಗ್ಗೆ ವಿಪುಲ ಕಲ್ಪನೆಗಳನ್ನು ಸೃಷ್ಟಿಸಿದ್ದಾರೆ.

ಮಾನವನು ಚಂದ್ರನಲ್ಲಿಗೆ ಹೋಗಿ ಅಲ್ಲೇ ಕಾಲೊನಿಗಳನ್ನು ಕಟ್ಟಿ, ಕೈಗಾರಿಕಾ ಕೇಂದ್ರಗಳನ್ನು ಸ್ಥಾಪಿಸಿ, ಆರ್ಥಿಕ ಕೇಂದ್ರಗಳನ್ನು ಚಂದ್ರನ ಅಂಗಳಕ್ಕೆ ವಿಸ್ತರಿಸಲು ಯೋಜಿಸುತ್ತಿದ್ದಾನೆ. ಚಂದ್ರನಲ್ಲಿನ ಅನ್ವೇಷಣೆ 2,000 ವರ್ಷಗಳ ಹಿಂದಿನಿಂದಲೇ ನಡೆಯುತ್ತಿದ್ದು, 17ನೇ ಶತಮಾನದಲ್ಲಿ ಗೆಲಿಲಿಯೊ ತನ್ನ ಪುಟ್ಟ ದೂರದರ್ಶಕದ ಮೂಲಕ ಇದಕ್ಕೆ ನಾಂದಿ ಹಾಡಿದ. ಅಲ್ಲಿಂದ ಇಲ್ಲಿಯವರೆಗೂ ಚಂದ್ರನ ಬಗ್ಗೆ ಊಹಾಪೋಹಗಳು, ಕಲ್ಪನೆಗಳು ಸೃಷ್ಟಿಯಾಗುತ್ತಲೇ ಇವೆ. ಭೂಮಿಯ ಮೇಲಿನ ಬಿಸಿಲು, ಗಾಳಿ, ಸುನಾಮಿ, ಚಂಡಮಾರುತ, ಜ್ವಾಲಾಮುಖಿಯಂತಹ ಎಲ್ಲ ನೈಸರ್ಗಿಕ ಪ್ರಕ್ರಿಯೆಗಳೂ ಅಲ್ಲಿ ನಡೆಯುತ್ತವೆ, ಅಲ್ಲಿ ಜೀವಜಂತುಗಳಿವೆ, ಸಮುದ್ರಗಳಿವೆ, ಬೆಟ್ಟಗುಡ್ಡಗಳಿವೆ, ಖನಿಜ ಭಂಡಾರವೇ ಇದೆ ಎಂದೆಲ್ಲ ಕೇಳಿಬರುತ್ತದೆ.

ಕೊನೆಗೆ ತಿಳಿದುಬಂದ ವಿಷಯವೆಂದರೆ, ಅಲ್ಲಿ ವಾತಾವರಣವೇ ಇಲ್ಲ ಎನ್ನುವುದು. 1957ರಲ್ಲಿ ಸೋವಿಯತ್ ರಷ್ಯಾದ ಸ್ಪುಟ್ನಿಕ್- 1 ಚಂದ್ರನ ಮೇಲೆ ಮೊದಲ ಬಾರಿಗೆ ಇಳಿದಾಗ, ಚಂದ್ರನ ಮೇಲ್ಮೈ ಗಟ್ಟಿಯಾಗಿದೆ ಎಂದು ತಿಳಿಯಿತು. ಆರು ದಶಕಗಳಿಂದ ರಷ್ಯಾ, ಅಮೆರಿಕ, ಚೀನಾ, ಜಪಾನ್, ಯುರೋಪಿಯನ್ ಸ್ಪೇಸ್ ಏಜೆನ್ಸಿ ಮತ್ತು ಭಾರತವು ಚಂದ್ರನ ಅನ್ವೇಷಣೆಯಲ್ಲಿ ತೊಡಗಿಕೊಂಡಿವೆ. 1969ರಲ್ಲಿ ಅಮೆರಿಕದ ನೀಲ್ ಆರ್ಮ್‌ಸ್ಟ್ರಾಂಗ್ ಮೊದಲ ಬಾರಿಗೆ ಚಂದ್ರನ ಮೇಲೆ ಕಾಲಿಡುವುದರೊಂದಿಗೆ ಅನೇಕ ಕಲ್ಪನೆಗಳಿಗೆ ಉತ್ತರ ದೊರಕಿತು.

ಭೂಮಿಯಲ್ಲಿ ದೊರಕುವ ಎಲ್ಲಾ ಖನಿಜ, ಲೋಹ ಸಂಪನ್ಮೂಲಗಳು ಚಂದ್ರನಲ್ಲಿ ದೊರಕಬಹುದು. ಯಾವುದೇ ಜೀವಜಂತುಗಳು ಮತ್ತು ಅರಣ್ಯಗಳು ಚಂದ್ರನಲ್ಲಿ ಇಲ್ಲ ಎನ್ನುವುದು ಈಗ ಖಾತರಿಯಾಗಿದೆ. ಆದರೆ ಮಂಜುಗಡ್ಡೆಯನ್ನು ಕಟ್ಟಿಕೊಂಡ ನೀರಿನ ಸಂಪನ್ಮೂಲಗಳು ಧ್ರುವಗಳ ಆಳದಲ್ಲಿ ಹುದುಗಿರಬಹುದು ಎನ್ನುವ ಕಲ್ಪನೆಗಳು ಹುಟ್ಟಿಕೊಂಡಿವೆ. ಇನ್ನು ಉಸಿರಾಡಲು ಗಾಳಿಯಂತೂ ಇಲ್ಲವೇ ಇಲ್ಲ. ನೀರು, ಗಾಳಿ ಇಲ್ಲದೇ ಇರುವಾಗ ಅಲ್ಲಿ ಮನುಷ್ಯ ಕಾಲೊನಿಗಳು, ಕಾರ್ಖಾನೆಗಳನ್ನು ನಿರ್ಮಿಸಿಕೊಳ್ಳಲು, ಕೃಷಿ ಮಾಡಲು ಸಾಧ್ಯವೇ?!

ಭೂಮಿಯ ಮೇಲೆ ಇದ್ದಂತೆ ಚಂದ್ರನ ಮೇಲೆ ಸೌರಶಕ್ತಿ, ಆಮ್ಲಜನಕ ಮತ್ತು ಕೆಲವು ಖನಿಜ, ಲೋಹಗಳು ಇವೆ. ಆದರೆ ಅವು ಕಲ್ಲು, ಮಣ್ಣಿನಲ್ಲಿ ಸಮ್ಮಿಶ್ರಣಗೊಂಡಿವೆ. ಅಪೋಲೊ- 17ರ ಅನ್ವೇಷಣೆಯ ಪ್ರಕಾರ, ಚಂದ್ರನ ಹೊರವಾತಾವರಣದಲ್ಲಿ ಜಲಜನಕ, ಹೀಲಿಯಂ, ಆರ್ಗಾನ್, ಅಮೋನಿಯಾ, ಇಂಗಾಲದ ಡೈಆಕ್ಸೈಡ್ ಮತ್ತು ಮೀಥೇನ್ ಇರುವುದಾಗಿ ಕಂಡುಬಂದಿದೆ. ಭೂಮಿಯ ಹೊರವಲಯದಲ್ಲಿರುವ ಸಾರಜನಕ ಇಲ್ಲದೇ ಇರುವುದು ಆಶ್ಚರ್ಯಕರ ಎನ್ನಬಹುದು. ಉಳಿದಂತೆ ಇವೆಲ್ಲ ಭೂಮಿಯ ವಾತಾವರಣದಲ್ಲಿರುವ ಅನಿಲಗಳೇ ಆಗಿವೆ.

ಚಂದ್ರನ ಮೇಲಿನ ಹಲವಾರು ಪ್ರಕ್ರಿಯೆಗಳು, ಅತ್ಯಂತ ಕಡಿಮೆ ಸಾಂದ್ರತೆಯಲ್ಲಿರುವ ಅಪರೂಪದ ಅನಿಲಗಳ ಉಪಸ್ಥಿತಿಯನ್ನು ತೋರಿಸುತ್ತವೆ. ಇನ್ನು ಭೂಮಿಯಲ್ಲಿ ದೊರಕುವ ಚಿನ್ನ, ವಜ್ರ, ಕಬ್ಬಿಣ, ಇಂಧನ, ಕಲ್ಲಿದ್ದಲು ಮತ್ತು ಅಪರೂಪದ ಖನಿಜ, ಲೋಹಗಳ ನಿಕ್ಷೇಪಗಳನ್ನು ಚಂದ್ರನ ಆಳದಲ್ಲಿ ಹುಡುಕಿ ತೆಗೆಯುವುದು ಮತ್ತು ಅದನ್ನು ಜನರಿಂದ ಅಥವಾ ರೊಬಾಟ್‌ಗಳಿಂದ ಗಣಿ ಮಾಡಿಸಿ ಹೊರತೆಗೆದು ಸಂಸ್ಕರಿಸಿ ರವಾನಿಸುವ ಖರ್ಚು ಎಷ್ಟಾಗಬಹುದು?!



ಒಟ್ಟಿನಲ್ಲಿ ಚಂದ್ರನ ಮೇಲೆ ಮೋಹಗೊಂಡಿರುವ ಅಭಿವೃದ್ಧಿ ಹೊಂದಿದ ದೇಶಗಳು ಮತ್ತು ಬಹುರಾಷ್ಟ್ರೀಯ ಕಂಪನಿಗಳು ಅಲ್ಲಿನ ಖನಿಜ ಸಂಪನ್ಮೂಲಗಳನ್ನು ಕೊಳ್ಳೆಹೊಡೆಯಲು ಹಾಗೂ ಅಲ್ಲೇ ವಸತಿ ಹೂಡಲು ಹೇರಳ ಹಣವನ್ನು ಹೂಡುತ್ತಿವೆ. ಭೂಮಿ ಮತ್ತು ಚಂದ್ರನ ಸುತ್ತಲೂ ಆಕಾಶದಲ್ಲಿ ನೌಕೆಗಳನ್ನು, ಶಾಶ್ವತ ನೆಲೆಗಳನ್ನು ಅಥವಾ ಮಾನವ ಕಾಲೊನಿಗಳನ್ನು ಸ್ಥಾಪಿಸಿ, ಅಲ್ಲಿಂದಿಲ್ಲಿಗೆ ಹಾರಾಡುವ ಯೋಜನೆಗಳನ್ನು ರೂಪಿಸಲು ಹೊರಟಿವೆ. ಬರುವ ದಿನಗಳಲ್ಲಿ ಚಂದ್ರನನ್ನು ಬಳಸಿಕೊಂಡು ಅಲ್ಲಿಂದ ಇತರ ಕಾಯಗಳನ್ನು ಅನ್ವೇಷಿಸಬಲ್ಲ, ಮಾನವನನ್ನು ಕೊಂಡೊಯ್ಯಬಲ್ಲ ನೌಕೆಗಳು ಮತ್ತು ರೊಬಾಟ್‌ಗಳ ದಂಡೇ ಕಕ್ಷೆಗೆ ಧಾವಿಸಲಿದೆ. ಅಂದರೆ ಮಾನವನ ನೂಕುನುಗ್ಗಲು ಪ್ರಾರಂಭವಾಗುತ್ತದೆ.

ಇಷ್ಟೆಲ್ಲ ಸಾಧಿಸಬೇಕಾದರೆ ಭೂಮಿಯ ಮೇಲಿನ ಎಷ್ಟು ಸಂಪತ್ತು ಕೊಳ್ಳೆಯಾಗುತ್ತದೆ ಎನ್ನುವ ವಿಷಯವನ್ನು ಮಾತ್ರ ಯಾರೂ ಮಾತನಾಡುತ್ತಿಲ್ಲ. ಒಟ್ಟಿನಲ್ಲಿ, ಇದೊಂದು ಬೆಟ್ಟ ಅಗೆದು ಇಲಿಯನ್ನು ಹಿಡಿಯುವ ದೊಡ್ಡ ಯೋಜನೆಯಾಗಿದೆ.

ಅಂದಹಾಗೆ, ಇಂದು (ಜುಲೈ 20) ಅಂತರರಾಷ್ಟ್ರೀಯ ಚಂದ್ರನ ದಿನಾಚರಣೆ.

ವಾಚಕರ ವಾಣಿ

ವಿರೋಧಾಭಾಸಕ್ಕೆ ಮಿತಿ ಇಲ್ಲವೇ?

'ಬೆಂಗಳೂರಿನಲ್ಲಿ ಕಡು ಭ್ರಷ್ಟಾಚಾರದ ಸಮ್ಮೇಳನ ನಡೆದಿದೆ. ಭ್ರಷ್ಟರು ಒಂದೇ ಸೂರಿನಡಿ ಸೇರಿದ್ದಾರೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಟೀಕಿಸಿರುವುದು ಪ್ರಕಟವಾಗಿದೆ (ಕಿಡಿನುಡಿ, ಜುಲೈ 19). ಇದಕ್ಕೆ ಹೇಗೆ ಪ್ರತಿಕ್ರಿಯಿಸಬೇಕು ಎಂಬುದೇ ಗೊತ್ತಾಗುತ್ತಿಲ್ಲ. ಈಗ ಕೆಲ ದಿನಗಳ ಹಿಂದೆ, 'ಎನ್‌ಸಿಪಿಯ ನಾಯಕರು ಕಡು ಭ್ರಷ್ಟರು, ಅಂದಾಜು 70 ಸಾವಿರ ಕೋಟಿ ರೂಪಾಯಿ ಭ್ರಷ್ಟಾಚಾರದ ಆರೋಪ ಅವರ ಮೇಲಿದೆ' ಎಂದೆಲ್ಲ ಬಹಿರಂಗ ಸಮಾವೇಶವೊಂದರಲ್ಲಿ ಮೋದಿ ಆಪಾದಿಸಿದ್ದರು. ಅದೇ ಎನ್‌ಸಿಪಿಯ ಅಜಿತ್ ಪವಾರ್ ಮತ್ತಿತರರು ಮಹಾರಾಷ್ಟ್ರದ ಬಿಜೆಪಿ– ಶಿವಸೇನಾ ನೇತೃತ್ವದ ಸರ್ಕಾರದಲ್ಲಿ ಸೇರ್ಪಡೆಯಾದರು. ಇದಕ್ಕಿಂತ ವಿರೋಧಾಭಾಸ ಮತ್ತೇನಿದೆ? ಮೋದಿ ಅವರು ದೇಶದ ಜನರನ್ನು ಮೂರ್ಖರೆಂದು ಭಾವಿಸಿದಂತಿದೆ.

ಆನಂದ ರಾಮತೀರ್ಥ, ಜಮಖಂಡಿ

ಇನ್ನಾದರೂ ಇಚ್ಛಾಶಕ್ತಿ ತೋರಲಿ

ದಲಿತರ ಮೇಲಿನ ದೌರ್ಜನ್ಯ ತಡೆಗೆ ಬೇಕು ಇಚ್ಛಾಶಕ್ತಿ ಎಂಬ ಮಂಗ್ಳೂರ ವಿಜಯ ಅವರ ಲೇಖನ (ಪ್ರ.ವಾ., ಜುಲೈ 18) ಓದಿ ಆಶ್ಚರ್ಯವೇನೂ ಆಗಲಿಲ್ಲ. ದಲಿತರ ಮೇಲಿನ ದೌರ್ಜನ್ಯಗಳನ್ನು ತಡೆಗಟ್ಟಲೆಂದೇ ಇರುವ ಅತಿಮುಖ್ಯ ಕಾನೂನಿನ ಪರಾಮರ್ಶೆ ಮತ್ತು ಅನುಷ್ಠಾನದ ಕುರಿತು ಮುಖ್ಯಮಂತ್ರಿ ಹಾಗೂ ಸಮಾಜ ಕಲ್ಯಾಣ ಸಚಿವರು ಅಧಿಕಾರಿಗಳೊಂದಿಗೆ ಚರ್ಚಿಸಲೇಬೇಕಾದ ಅನಿವಾರ್ಯ ಸ್ಥಿತಿ ಇದೆ. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ದೌರ್ಜನ್ಯಗಳು ದ್ವಿಗುಣವಾಗಬಹುದು. ಆರೋಪಿಗಳಿಗೆ ಶಿಕ್ಷೆ ಆಗುವ ಪ್ರಮಾಣ ಅತ್ಯಂತ ಕಡಿಮೆ ಇರುವುದು ಕಳವಳಕಾರಿ ಸಂಗತಿ. ಕಾನೂನು ಇನ್ನಾದರೂ ಪರಿಣಾಮಕಾರಿಯಾಗಿ ಅನುಷ್ಠಾನವಾಗುವಂತೆ ಸರ್ಕಾರ ನೋಡಿಕೊಳ್ಳಲಿ.

ಡಾ. ಮಣಗಳ್ಳಿ ಶ್ರೀನಿವಾಸ, ಕಡಗಂಚಿ, ಆಳಂದ

ಅಕ್ಕಿಯಲ್ಲಿ ಕೀಟ: ಬೇಕು ಸಂರಕ್ಷಣೆಯ ಅರಿವು!

ಅಂಗನವಾಡಿಗಳಿಗೆ ಪೂರೈಕೆಯಾಗುವ ಅಕ್ಕಿಯಲ್ಲಿನ ಹುಳುಗಳ ರಾಶಿಗೆ (ಪ್ರ.ವಾ., ಜುಲೈ 18) ಆಹಾರಧಾನ್ಯ ಸಂಗ್ರಹಣೆ ಹಂತದಲ್ಲಿ ಸೂಕ್ತ ಸಂರಕ್ಷಣೆ ವಿಧಾನದ ಕೊರತೆಯೇ ಕಾರಣ. ಕೀಟಗಳ ಬಾಧೆಯಿಂದ ಕೃಷಿ ಬೆಳೆಗಳನ್ನು ರಕ್ಷಿಸುವಂತೆ ಉಗ್ರಾಣಗಳಲ್ಲಿಯೂ ಆಹಾರ ಧಾನ್ಯಗಳನ್ನು ಸಂರಕ್ಷಿಸುವ ಬಗ್ಗೆ ಅರಿವು ಅಗತ್ಯ. ಸಾಮಾನ್ಯವಾಗಿ ಪತಂಗ ಮತ್ತು ಚಿಪ್ಪಿನ ಹುಳು ಎಂಬ ಎರಡು ಬಗೆಯ ಹುಳುಗಳು ಧಾನ್ಯಗಳಿಗೆ ಹಾನಿ ಮಾಡುತ್ತವೆ. ಧಾನ್ಯಗಳನ್ನು ಉಗ್ರಾಣದಲ್ಲಿ ಶೇಖರಣೆ ಮಾಡುವುದಕ್ಕೆ ಮುಂಚಿತವಾಗಿ ಅವುಗಳನ್ನು ಸ್ವಚ್ಛಗೊಳಿಸಿ ಶೇ 8ರಿಂದ 10ರಷ್ಟು ತೇವಾಂಶವಿರುವಂತೆ ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಬೇಕು. ಒಂದು ವೇಳೆ ಕೀಟಗಳು ಹಾರಾಡುವುದು ಅಥವಾ ಹರಿದಾಡುವುದು ಕಂಡುಬಂದರೆ 'ಕೇರುವ' ವಿಧಾನದ ಮೂಲಕ ಅವುಗಳನ್ನು ತೆಗೆಯಬೇಕು ಅಥವಾ ಎಥಿಲಿನ್ ಡೈ ಬ್ರೋಮೈಡ್ (ಇ.ಡಿ.ಬಿ) ಎಂಬ ಧೂಪಕವು (Fumigant) ಮಾರುಕಟ್ಟೆಯಲ್ಲಿ ಇ.ಡಿ.ಬಿ. ಆ್ಯಂಪ್ಯೂಲ್ (3 ಎಂ.ಎಲ್) ಎಂಬ ಹೆಸರಿನಲ್ಲಿ ಲಭ್ಯವಿದ್ದು, ಇದನ್ನು ಗಾಳಿಯಾಡದ ಕೊಠಡಿಯಲ್ಲಿ ಇರಿಸಿದ ಪ್ರತಿ ಕ್ವಿಂಟಲ್ ದಾಸ್ತಾನಿನ ಚೀಲಕ್ಕೆ ಒಂದು ಆ್ಯಂಪ್ಯೂಲ್‌ನಷ್ಟು ಹಾಕುವುದರಿಂದ ಹುಳುಗಳನ್ನು ನಿಯಂತ್ರಿಸಬಹುದು.

ಈ ರೀತಿ ಹೊಗೆಯ ರೂಪದ ಧೂಪಕವು ಹೆಚ್ಚು ಸಮಯ ಉಳಿಯುವುದಿಲ್ಲವಾದ್ದರಿಂದ, 24 ಗಂಟೆಗಳ ನಂತರ ಧಾನ್ಯವನ್ನು ಒಣಗಿಸಿ ಉಪಯೋಗಿಸಬಹುದು. ಹಾಗೆಯೇ ಧಾನ್ಯಗಳು ಕಡಿಮೆ ಪ್ರಮಾಣದಲ್ಲಿದ್ದರೆ ಮುಚ್ಚಳವಿರುವ ಡ್ರಮ್‌ಗಳಿಗೆ ಧಾನ್ಯವನ್ನು ತುಂಬಿ ಅದನ್ನು ಧೂಪಕದಿಂದ ಉಪಚರಿಸಿ ಕೀಟಗಳನ್ನು ನಿಯಂತ್ರಿಸಬಹುದು.

ಡಾ. ಡಿ.ರಾಜಗೋಪಾಲ್, ನಿವೃತ್ತ ಡೀನ್, ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು

ಹೊಸ ಬಾಟಲಿಯಲ್ಲಿ...

ಬೆಂಗಳೂರಿನಲ್ಲಿ ಇತ್ತೀಚೆಗೆ
ರಚನೆಯಾಗಿದೆ,
26 ಪಕ್ಷಗಳು ಸೇರಿ
I.N.D.I.A.
ಹಿಂದಿನ U.P.A.ಗೆ ಹೊಸ ರೂಪು!
ಅತ್ತ ದಿಲ್ಲಿಯಲ್ಲೂ ಸೇರಿದ್ದವು
38 ಪಕ್ಷಗಳ N.D.A,
ಹೆಚ್ಚು ವ್ಯತ್ಯಾಸವೇನಿಲ್ಲ
ಎರಡು ಕೂಟಗಳೂ
ಇಂಡಿಯಾದ ಒಳಗೇ ಇವೆ.
NDA ಆರಂಭದಲ್ಲಿ ಮತ್ತು ನಡುವೆ
ಎರಡು I ಸೇರಿಸಿದರೆ ಆಗುತ್ತದೆ
I.N.D.I.A.
ಒಟ್ಟಿನಲ್ಲಿ, ಕೊನೆಗೆ
ಮತದಾರನಿಗೆ ಹೊಸ
ಬಾಟಲಿಯಲ್ಲಿ ದೊರೆಯುವುದು
ಹಳೆಯ ಮದ್ಯವೆ!

ಮುಳ್ಳೂರು ಪ್ರಕಾಶ್, ಮೈಸೂರು

ಸೇಡು ತೀರಿಸಿಕೊಳ್ಳುತ್ತಿದ್ದಾರೆಯೇ ವರಿಷ್ಠರು?

ಬಿಜೆಪಿಯ ವರಿಷ್ಠರು, ರಾಜ್ಯ ಬಿಜೆಪಿ ಮುಖಂಡರ ವಿರುದ್ಧ ಸೇಡು ತೀರಿಸಿಕೊಳ್ಳುತ್ತಿದ್ದಾರೇನೋ ಎಂಬ ಅನುಮಾನ ಮೂಡುತ್ತಿದೆ. ಏಕೆಂದರೆ, ಕರ್ನಾಟಕ ವಿಧಾನಸಭೆಗೆ ನಡೆದ ಇತ್ತೀಚಿನ ಚುನಾವಣೆಯಲ್ಲಿ ಬಿಜೆಪಿ ಹೀನಾಯ ಸೋಲು ಕಂಡಿದೆ. ಕಾಂಗ್ರೆಸ್‌ಗೆ ಅಧಿಕಾರ ಬಿಟ್ಟುಕೊಟ್ಟು ವಿರೋಧಪಕ್ಷದ ಸ್ಥಾನಕ್ಕೆ ಹಿಂಬಡ್ತಿ ಪಡೆದಿದೆ. ಭಾರಿ ಮಹತ್ವಾಕಾಂಕ್ಷೆ ಹೊಂದಿದ್ದ ಬಿಜೆಪಿಯ ವರಿಷ್ಠರನ್ನು ಈ ಸೋಲು ಕೊತ ಕೊತ ಕುದಿಯುವಂತೆ ಮಾಡಿದೆ. ಅನ್ನಲೂ ಆಗದ, ಅನುಭವಿಸಲೂ ಆಗದ ಸ್ಥಿತಿಯಲ್ಲಿ ವರಿಷ್ಠರು ಇರುವಂತಿದೆ. ಹೀಗಾಗಿ, ಚುನಾವಣೆಗೆ ಮುನ್ನ ಮೆರೆದಾಡುತ್ತಿದ್ದ ಬಿಜೆಪಿಯ ರಾಜ್ಯ ಧುರೀಣರಿಗೆ ಈಗೊಂದು ಪಾಠ ಕಲಿಸಲು ಮುಂದಾಗಿರುವಂತಿದ್ದಾರೆ. ಅದಕ್ಕೇ ಇರಬೇಕು, ವಿಧಾನಸಭೆಯ ವಿರೋಧಪಕ್ಷದ ನಾಯಕನ ಹೆಸರು ಸೂಚಿಸದೆ ವರಿಷ್ಠರು ಮೌನ ತಳೆದಿದ್ದಾರೆ. ಎಂದೋ ಥಟ್ಟನೆ ಘೋಷಿಸಬಹುದಾಗಿದ್ದ ಈ ಹೆಸರನ್ನು ಅಧಿವೇಶನ ನಡೆಯುವಾಗಲೂ ಇನ್ನೂ ಘೋಷಿಸದಿರುವುದು ಸಾಮಾನ್ಯ ವಿಷಯವಲ್ಲ.

ಈ ಮೂಲಕ ರಾಜ್ಯ ಬಿಜೆಪಿ ಧುರೀಣರು ಸದನದ ಒಳಗೆ ಹಾಗೂ ಹೊರಗೆ ನಾಯಕನೇ ಇಲ್ಲದ ಸ್ಥಿತಿಯಲ್ಲಿ ತೀವ್ರ ಮುಖಭಂಗಕ್ಕೆ ಒಳಗಾಗುವಂತೆ ಆಗಿದೆ. ಸೇಡು ತೀರಿಸಿಕೊಳ್ಳಲು ವರಿಷ್ಠರಿಗೆ ಇದಕ್ಕಿಂತ ಒಳ್ಳೆಯ ಕ್ರಮ ಇನ್ನೇನಿದ್ದೀತು?

ಆರ್.ಎಸ್.ಅಯ್ಯರ್, ತುಮಕೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಭಾರತ–ವಿಂಡೀಸ್ ‘ಶತಕ’ಪಥ

ವಿವಿಯನ್ ರಿಚರ್ಡ್ಸ್ ಬ್ಯಾಟಿಂಗ್ ಶೈಲಿ



ವಿಂಡೀಸ್ ಎದುರು ಭಾರತದ ಶ್ರೇಷ್ಠ ಸಾಧನೆಗಳು

- **ಪ್ರಥಮ ಶತಕ:** ಹೇಮು ಅಧಿಕಾರಿ (1948, ದೆಹಲಿ)
- **ಟೆಸ್ಟ್ ಮೊದಲ ಜಯ:** 1971 (ಪೋರ್ಟ್ ಆಫ್ ಸ್ಪೇನ್)
- **ಶ್ರೇಷ್ಠ ಬೌಲಿಂಗ್–ಇನಿಂಗ್ಸ್:** ಕಪಿಲ್ ದೇವ್ 30.3–6–83–9 (ಅಹಮದಾಬಾದ್, 1983)
- **ಶ್ರೇಷ್ಠ ಬೌಲಿಂಗ್–ಪಂದ್ಯ:** ನರೇಂದ್ರ ಹಿರ್ವಾನಿ 33.5–6–136–16 (ಚೆನ್ನೈ 1988)
- **ಹೆಚ್ಚು ರನ್ ಗಳಿಸಿದವರು:** ಸುನಿಲ್ ಗಾವಸ್ಕರ್, 2749 ರನ್ (27 ಪಂದ್ಯಗಳು)
- **ಹೆಚ್ಚು ವಿಕೆಟ್ ಪಡೆದವರು:** ಕಪಿಲ್ ದೇವ್ (89 ವಿಕೆಟ್, 25 ಪಂದ್ಯ)

ಅಂಕಿ ಸಂಖ್ಯೆ: ಎಚ್.ಆರ್. ಗೋಪಾಲಕೃಷ್ಣ

• ಗಿರೀಶ ದೊಡ್ಡಮನಿ

ಕ್ಲೈಡ್ ವಾಲ್ಕಾಟ್, ಲ್ಯಾರಿ ಗೋಮ್ಸ್, ಎವರ್ಟನ್ ವೀಕ್ಸ್ ಹಾಗೂ ರಾಬರ್ಟ್ ಕ್ರಿಸ್ಟಿಯಾನಿ..

75 ವರ್ಷಗಳ ಹಿಂದೆ ಭಾರತದಲ್ಲಿ ಆಗಷ್ಟೇ ಕ್ರಿಕೆಟ್‌ನತ್ತ ಆಸಕ್ತಿ ಬೆಳೆಸಿಕೊಳ್ಳುತ್ತಿದ್ದ ಜನರ ನಾಲಿಗೆಯ ಮೇಲೆ ನಲಿದಿದ್ದವು. ಅವರೆಲ್ಲರೂ ವೆಸ್ಟ್ ಇಂಡೀಸ್ ತಂಡದ ದೈತ್ಯ ಬ್ಯಾಟರ್‌ಗಳು.

1948ರಲ್ಲಿ ಭಾರತ ಮತ್ತು ವಿಂಡೀಸ್ ತಂಡಗಳು ಮೊದಲ ಬಾರಿ ಟೆಸ್ಟ್ ಪಂದ್ಯದಲ್ಲಿ ಮುಖಾಮುಖಿಯಾಗಿದ್ದವು. ಆಗ ಈ ನಾಲ್ವರೂ ಮೊದಲ ಇನಿಂಗ್ಸ್‌ನಲ್ಲಿ ತಲಾ ಒಂದು ಶತಕ ಗಳಿಸಿದ್ದರು. ಆ ಪಂದ್ಯದಲ್ಲಿ ಕಮಾಂಡರ್ ರಂಗಾಚಾರಿ ಐದು ವಿಕೆಟ್ ಗೊಂಚಲು ಗಳಿಸಿದ್ದು ಮತ್ತು ಹೇಮು ಅಧಿಕಾರಿ ಶತಕ ಬಾರಿಸಿದ್ದು ಭಾರತದ ಪಾಲಿನ ದೊಡ್ಡ ಸಾಧನೆಯಾಗಿತ್ತು. ಆ ಪಂದ್ಯ ಡ್ರಾ ಆದಾಗಲಂತೂ ಭಾರತಕ್ಕೆ ಗೆದ್ದಷ್ಟೇ ಖುಷಿ. ಏಕೆಂದರೆ ಆ ಕಾಲದಲ್ಲಿ ವೆಸ್ಟ್ ಇಂಡೀಸ್ ಎದುರು ಜಯಿಸುವುದು ಯುದ್ಧಕ್ಕೆ ಸಮಾನವಾಗಿತ್ತು. ಅಜಾನುಬಾಹು ಆಟಗಾರರ ದಂಡು ಅದು. ಈಗಿನಂತೆ ಸ್ಲೆಡ್ಜಿಂಗ್, ಬೈಗುಳಗಳಿರದಿದ್ದರೂ ವಿಂಡೀಸ್ ದೈತ್ಯರ ಕೆಂಗಣ್ಣು ನೋಟವೇ ಎದುರಾಳಿಗಳಿಗೆ ನಡುಕ ಮೂಡಿಸುತ್ತಿದ್ದದ್ದು ಸುಳ್ಳಲ್ಲ. ಅವರ ವೇಗದ ದಾಳಿಗೆ ತಿನ್ನುತ್ತಿದ್ದ ಪೆಟ್ಟುಗಳೂ ಭಯಕ್ಕೆ ಕಾರಣವಾಗಿದ್ದವು.

ಆದರೆ ಆರು ದಿನಗಳ ಹಿಂದೆ ವೆಸ್ಟ್ ಇಂಡೀಸ್‌ನ ಡಾಮಿನಿಕಾದಲ್ಲಿ ಉಭಯ ತಂಡಗಳ ನಡುವಣ ಟೆಸ್ಟ್ ನಡೆಯಿತು. ಇದರಲ್ಲಿ ಭಾರತ ತಂಡವು ಎರಡೂವರೆ ದಿನಗಳಲ್ಲಿ ಗೆದ್ದೂ ಬಿಟ್ಟಿತು. ಪದಾರ್ಪಣೆ ಪಂದ್ಯ ಆಡಿದ ಯಶಸ್ವಿ ಜೈಸ್ವಾಲ್ ಮತ್ತು ಅನುಭವಿ ರೋಹಿತ್ ಶರ್ಮಾ ಅವರಿಬ್ಬರೂ ಶತಕ ಬಾರಿಸಿದರು. ಅವರ ಜೊತೆಯಾಟವನ್ನು ಮುರಿಯಲು ವಿಂಡೀಸ್ ಬೌಲರ್‌ಗಳು ಪರದಾಡಿದರು. ಇದು ಯಾರಲ್ಲೂ ಅಚ್ಚರಿ ಮೂಡಿಸಲಿಲ್ಲ. ಏಕೆಂದರೆ ಇವತ್ತಿನ ಕಾಲಘಟ್ಟದಲ್ಲಿ ವಿಂಡೀಸ್ ತಂಡವನ್ನು ಸೋಲಿಸುವುದು ದೊಡ್ಡ ಮಾತಲ್ಲ!

ಸಚಿನ್ ತೆಂಡೂಲ್ಕರ್ ಮತ್ತು ರಾಹುಲ್ ದ್ರಾವಿಡ್

ಬೆಂಗಳೂರಿನಲ್ಲಿ ಪಂದ್ಯ

ಪ್ರಾಯೋಜಕತ್ವ ಮತ್ತು ಆದಾಯ ಗಳಿಕೆಗಾಗಿ ಸದ್ಯ ವಿಶ್ವದ ಪ್ರತಿಯೊಂದು ದೇಶದ ಕ್ರಿಕೆಟ್ ಮಂಡಳಿಯೂ ಭಾರತ ತಂಡವು ತಮ್ಮ ಆತಿಥ್ಯದಲ್ಲಿ ಆಡಬೇಕು ಎಂದು ಬಯಸುತ್ತವೆ. ಅದಕ್ಕಾಗಿ ಐಸಿಸಿ ವೇಳಾಪಟ್ಟಿಯಲ್ಲಿ ಜಾಗ ಪಡೆಯಲು ಹರಸಾಹಸ ಪಡುತ್ತವೆ. ಇದೇ ರೀತಿಯ ತಾರಾವರ್ಚಸ್ಸು ಒಂದು ಕಾಲದಲ್ಲಿ ವಿಂಡೀಸ್ ತಂಡಕ್ಕೂ ಇತ್ತು.

ಹಾಗಾಗಿಯೇ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಯೋಜಿಸಿದ ಮೊದಲ ಟೆಸ್ಟ್ ಪಂದ್ಯವು ವೆಸ್ಟ್ ಇಂಡೀಸ್ ಮತ್ತು ಭಾರತ ನಡುವಣ-ದ್ದಾಗಿತ್ತು. 1974ರಲ್ಲಿ ನಡೆದ ಪಂದ್ಯದಲ್ಲಿ ವಿಂಡೀಸ್ 267 ರನ್‌ಗಳಿಂದ ಜಯಸಾಧಿಸಿತ್ತು. ಅಲ್ವಿನ್ ಕಾಳಿಚರಣ್ ಮತ್ತು ಗ್ರಿನೀಜ್ ಶತಕ ಗಳಿಸಿದ್ದರು. ಭಾರತದ ಬಿ.ಎಸ್. ಚಂದ್ರಶೇಖರ್ ಮೊದಲ ಇನಿಂಗ್ಸ್‌ನಲ್ಲಿ ನಾಲ್ಕು ವಿಕೆಟ್ ಗಳಿಸಿದ್ದರು. ಇದೇ ಪಂದ್ಯದಲ್ಲಿ ವಿವ್ ರಿಚರ್ಡ್ಸ್ ಪದಾರ್ಪಣೆ ಮಾಡಿದ್ದರು.

ಕಾಲಚಕ್ರ ತಿರುಗಿದಂತೆ ಭಾರತ ತಂಡವು ಎಲ್ಲ ರೀತಿಯಿಂದಲೂ ಬಲಾಢ್ಯವಾಯಿತು. ವೆಸ್ಟ್ ಇಂಡೀಸ್ ತಂಡದಲ್ಲಿ ದೈಹಿಕವಾಗಿ ಸದೃಢ ಆಟಗಾರರಿದ್ದರೂ ಕ್ರಿಕೆಟ್‌ನಲ್ಲಿ ದುರ್ಬಲವಾಯಿತು. ಈ ವರ್ಷದ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಗೆ ಅರ್ಹತೆ ಪಡೆಯುವಲ್ಲಿಯೂ ವಿಂಡೀಸ್ ವಿಫಲವಾಗಿದೆ. ಹೀಗಾಗಲು ಕಾರಣಗಳೇನು ಎಂಬ ಚರ್ಚೆ ನಡೆಯುತ್ತಲೇ ಇದೆ. ಈ ಹೊತ್ತಿನಲ್ಲಿಯೇ ಭಾರತ ಮತ್ತು ವಿಂಡೀಸ್ ತಂಡಗಳು ನೂರನೇ ಟೆಸ್ಟ್ ಆಡಲು ಸಜ್ಜಾಗಿವೆ. ಗುರುವಾರ ಟ್ರಿನಿಡಾಡ್‌ನಲ್ಲಿ ಟೆಸ್ಟ್ ಆರಂಭವಾಗಲಿದೆ. 1971ರಲ್ಲಿ ಭಾರತವು ಮೊದಲ ಸಲ ವಿಂಡೀಸ್ ತಂಡವನ್ನು ಸೋಲಿಸಿದ್ದು ಇಲ್ಲಿಯೇ.

ಸೋಲು, ಗೆಲುವುಗಳ ಅಂಕಿ ಸಂಖ್ಯೆಗಳನ್ನು ಬದಿಗಿಟ್ಟು ನೋಡುವುದಾದರೆ ಕ್ರಿಕೆಟ್ ಬೆಳವಣಿಗೆಗೆ ಉಭಯ ದೇಶಗಳ ಕೊಡುಗೆ ಅನನ್ಯ ಎಂಬುದರಲ್ಲಿ ಎರಡು ಮಾತೇ ಇಲ್ಲ. ನೂರರ ನೆಪದಲ್ಲಿ ಹಿಂದಿರುಗಿ ನೋಡಿದರೆ ಪುಳಕ ಮೂಡಿಸುವ ಸಂಗತಿಗಳಿವೆ.

ಪ್ರಥಮ ಜಯ

ವೆಸ್ಟ್ ಇಂಡೀಸ್ ತಂಡವನ್ನು ಅದರ ತವರಿನಲ್ಲಿಯೇ ಸೋಲಿಸಲು ಭಾರತವು 1971ರವರೆಗೂ ಕಾಯಬೇಕಾಯಿತು. ಅಜಿತ್ ವಾಡೇಕರ್ ನಾಯಕತ್ವದ ಭಾರತ ತಂಡವು ಪೋರ್ಟ್ ಆಫ್ ಸ್ಪೇನ್‌ನಲ್ಲಿ ನಡೆದ ಟೆಸ್ಟ್‌ನಲ್ಲಿ ಏಳು ವಿಕೆಟ್ ಜಯ ಸಾಧಿಸಿತು. ಆಗ ವಿಂಡೀಸ್ ತಂಡಕ್ಕೆ ಗ್ಯಾರಿ ಸೋಬರ್ಸ್ ನಾಯಕರಾಗಿದ್ದರು. ಆ ಪಂದ್ಯದಲ್ಲಿ ದಿಲೀಪ್ ಸರ್ದೇಸಾಯಿ ಅವರ ಅಮೋಘ ಶತಕ, ಎಸ್.ವೆಂಕಟರಾಘವನ್ ಅವರ ಐದು ವಿಕೆಟ್ ಗೊಂಚಲು ಸಾಧನೆ ಜಯಕ್ಕೆ ಕಾರಣವಾಗಿದ್ದವು.

ಅದೇ ಪಂದ್ಯದಲ್ಲಿ ಸುನಿಲ್ ಗಾವಸ್ಕರ್ ಪದಾರ್ಪಣೆ ಮಾಡಿದರು. ವಿಂಡೀಸ್ ವೇಗಿಗಳಾದ ವ್ಯಾನ್‌ಬರ್ನ್ ಹೋಲ್ಡರ್, ಗ್ರೇಸನ್ ಶಿಲ್ಲಾಂಗ್‌ಫೋರ್ಡ್ ಅವರ ವೇಗದ ದಾಳಿಯನ್ನು ಸಮರ್ಥವಾಗಿ ಎದುರಿಸಿದ್ದರು. 65 ರನ್ ಗಳಿಸಿ ಆಫ್‌ಸ್ಪಿನ್ನರ್ ನೊರೀಗಾ ಬೌಲಿಂಗ್‌ನಲ್ಲಿ ಔಟಾಗಿದ್ದರು. ಆ ಪಂದ್ಯದಲ್ಲಿ ನೋರಿಗಾ ಒಟ್ಟು ಒಂಬತ್ತು ವಿಕೆಟ್ ಗಳಿಸಿದ್ದರು. ತಂಡದಲ್ಲಿ ಕನ್ನಡಿಗ ಎರ್ರಪಳ್ಳಿ ಪ್ರಸನ್ನ ಅವರು ಮೊದಲ ಇನಿಂಗ್ಸ್‌ನಲ್ಲಿ ನಾಲ್ಕು ವಿಕೆಟ್ ಗಳಿಸಿ ಮಿಂಚಿದ್ದರು.

ಇದಕ್ಕೂ ಮುನ್ನ ಉಭಯ ತಂಡಗಳು 23 ಪಂದ್ಯಗಳನ್ನು ಆಡಿದ್ದವು. ಭಾರತ 12 ಪಂದ್ಯಗಳಲ್ಲಿ ಸೋತಿತ್ತು. 11 ಡ್ರಾ ಆಗಿದ್ದವು.

ದಿಗ್ಗಜರ ಆಟ–ನೋಟ

ಅದರ ನಂತರ ಉಭಯ ತಂಡಗಳ ಆಟವೆಂದರೆ ಅದು ಹಬ್ಬದ ನೋಟವೇ ಆಗಿತ್ತು. ಎರಡೂ ದೇಶಗಳು ಅಪ್ರತಿಮ ಆಟಗಾರರನ್ನು ಕೊಡುಗೆ ನೀಡಿದವು. ಭಾರತದಲ್ಲಿ ಬಿ.ಎಸ್. ಚಂದ್ರಶೇಖರ್, ಜಿ.ಆರ್.ವಿಶ್ವನಾಥ್, ಕೃಷ್ಣಮಾಚಾರಿ ಶ್ರೀಕಾಂತ್, ಬ್ರಿಜೇಶ್ ಪಟೇಲ್, ಕಪಿಲ್ ದೇವ್, ದಿಲೀಪ್ ವೆಂಗಸರ್ಕಾರ್, ಮೊಹಮ್ಮದ್ ಅಜರುದ್ದೀನ್, ಸೌರವ್ ಗಂಗೂಲಿ, ಅನಿಲ್ ಕುಂಬ್ಳೆ, ಜಾವಗಲ್ ಶ್ರೀನಾಥ್ ಅವರು ಪ್ರಮುಖರು.

ಅತ್ತ ವಿಂಡೀಸ್ ತಂಡದಲ್ಲಿ ವಿವಿಯನ್ ರಿಚರ್ಡ್ಸ್, ಗಾರ್ಡನ್ ಗ್ರಿನೀಜ್, ಮೈಕೆಲ್ ಹೋಲ್ಡರ್, ಡೆಸ್ಮಂಡ್ ಹೇಯ್ನ್ಸ್, ರೋಹನ್ ಕನ್ಹಾಯ್, ಕ್ಲೈವ್ ಲಾಯ್ಡ್, ಅಲ್ವಿನ್ ಕಾಳೀಚರಣ್, ಚಂಡಮಾರುತ ಸದೃಶವೇಗಿಗಳಾದ ಆ್ಯಂಡಿ ರಾಬರ್ಟ್ಸ್, ಮಾಲ್ಕಂ ಮಾರ್ಷಲ್, ಕರ್ಟ್ನಿ ವಾಲ್ಶ್, ಆ್ಯಂಬ್ರೋಸ್, ಪ್ಯಾಟ್ರಿಕ್ ಪ್ಯಾಟರ್ಸನ್, ಇಯಾನ್ ಬಿಷಪ್ ಅವರ ಮುಂದೆ ಬ್ಯಾಟ್ ಬೀಸುವುದೇ ಸಾಹಸವಾಗಿತ್ತು. ಅಂತಹವರ ಮುಂದೆಯೂ ಸುನಿಲ್ ಗಾವಸ್ಕರ್ ಹೆಲ್ಮೆಟ್ ಧರಿಸದೇ ಆಡಿದ್ದು ಸಾಹಸಗಾಥೆ.

1983ರ ವಿಶ್ವಕಪ್ ಟೂರ್ನಿಯ ಫೈನಲ್‌ನಲ್ಲಿ ವಿವ್ ರಿಚರ್ಡ್ಸ್ ಅವರ ಅಮೋಘ ಕ್ಯಾಚ್ ಪಡೆದ ಕಪಿಲ್ ದೇವ್ ವಿಂಡೀಸ್ ತಂಡದ ಪಾರಮ್ಯಕ್ಕೆ ಮರ್ಮಾಘಾತ ನೀಡಿದರು. ಅಲ್ಲಿಂದ ಆ ತಂಡದ ಅಧಃಪತನ ಆರಂಭವಾಯಿತು.



ಸುನಿಲ್ ಗಾವಸ್ಕರ್

ಲಾರಾ–ಸಚಿನ್ ಯುಗ

ಆದರೂ 2002ರವರೆಗೂ ವಿಂಡೀಸ್ ತಂಡದಲ್ಲಿ ಜೀವಸೆಲೆಯಿತ್ತು. ಇತ್ತ ಭಾರತದಲ್ಲಿ ಸಚಿನ್ ತೆಂಡೂಲ್ಕರ್ ರನ್‌ಗಳ ಬೆಟ್ಟ ನಿರ್ಮಿಸುತ್ತಿದ್ದರು. ಅತ್ತ ವಿಂಡೀಸ್‌ನಲ್ಲಿ ಬ್ರಯನ್ ಲಾರಾ ಅವರು ಸಚಿನ್‌ಗೆ ಪಕ್ಕಾ ಪ್ರತಿಸ್ಪರ್ಧಿಯಾಗಿದ್ದರು.

ಲಾರಾ ಟೆಸ್ಟ್ ಕ್ರಿಕೆಟ್‌ನಲ್ಲಿ ಇಂದಿಗೂ ಸರ್ವಶ್ರೇಷ್ಠ ದಾಖಲೆಯಾದ 400 ರನ್ ವೈಯಕ್ತಿಕ ಸ್ಕೋರ್ ನಿರ್ಮಿಸಿಟ್ಟಿದ್ದಾರೆ. ಸಚಿನ್ ಕ್ರಿಕೆಟ್‌ನಲ್ಲಿ ಒಟ್ಟು 100 ಶತಕಗಳ ಒಡೆಯನಾಗಿದ್ದಾರೆ. ಇಬ್ಬರೂ ಹಲವು ಆಕರ್ಷಕ ಇನಿಂಗ್ಸ್‌ಗಳನ್ನು ಆಡಿದ್ದಾರೆ. ಈ ಕಾಲಘಟ್ಟದಲ್ಲಿ ಭಾರತದಲ್ಲಿ ರಾಹುಲ್ ದ್ರಾವಿಡ್, ವೀರೇಂದ್ರ ಸೆಹ್ವಾಗ್, ಗೌತಮ್ ಗಂಭೀರ್, ಮಹೇಂದ್ರಸಿಂಗ್ ಧೋನಿ, ಯುವರಾಜ್ ಸಿಂಗ್ ಅಂತಹ ಅಪ್ರತಿಮರು ಬೆಳೆದರು.

ವಿಂಡೀಸ್‌ನಲ್ಲಿಯೂ ಶಿವನಾರಾಯಣ ಚಂದ್ರಪಾಲ್, ಕ್ರಿಸ್ ಗೇಲ್, ಕೀರನ್ ಪೊಲಾರ್ಡ್, ಲೆಂಡ್ಲ್ ಸಿಮನ್ಸ್, ಡ್ವೇನ್ ಬ್ರಾವೊ, ಆ್ಯಂಡ್ರೆ ರಸೆಲ್ ಸೇರಿದಂತೆ ಕೆಲವು ಆಟಗಾರರು ಪ್ರವರ್ಧಮಾನಕ್ಕೆ ಬಂದರು. ಆದರೆ, ವಿಂಡೀಸ್ ತಂಡವು ಮೊದಲಿನಂತೆ ಆಗಲೇ ಇಲ್ಲ.

2002ರ ನಂತರ ಭಾರತದ ಎದುರು ಟೆಸ್ಟ್ ಸರಣಿಯನ್ನು ಗೆದ್ದಿಲ್ಲ. ಕಳೆದ ಪಂದ್ಯದಲ್ಲಿ ತೇಜನಾರಾಯಣ ಚಂದ್ರಪಾಲ್ ಆಡಿದರು. ಅವರು ಶಿವನಾರಾಯಣ ಚಂದ್ರಪಾಲ್ ಮಗ. ಅವರು ಮತ್ತು ಅವರ ಒರಗೆಯ ಕೆಲವು ಯುವ ಆಟಗಾರರು ವಿಂಡೀಸ್‌ಗೆ ಭವಿಷ್ಯದಲ್ಲಿ ಬಲ ತುಂಬುವರೇ? ಉಭಯ ತಂಡಗಳ ನಡುವಣ ನೂರನೇ ಪಂದ್ಯವು ಅವರಿಗೆ ದಿಕ್ಸೂಚಿಯಾಗುವುದೇ ಎಂಬುದನ್ನು ಕಾದು ನೋಡಬೇಕು.

ಬ್ರಯನ್ ಲಾರಾ

ಹೊರಬಂತು ‘ಕ್ವಾಟರ್ ಬಾಟಲ್’

ಹೊಸಬರ ಚಿತ್ರವಾದ ‘ಅಯುಕ್ತ’ದ ‘ಕ್ವಾಟರ್ ಬಾಟಲ್’ ಹಾಡು ಇತ್ತೀಚೆಗಷ್ಟೆ ಬಿಡುಗಡೆಗೊಂಡಿದೆ. ರಂಗಭೂಮಿ ನಿರ್ದೇಶನದ ಅನುಭವ ಹೊಂದಿರುವ ಕನಸು ರಮೇಶ್ ಚಿತ್ರಕಥೆ ಬರೆದು ಈ ಚಿತ್ರವನ್ನು ನಿರ್ದೇಶಿಸಿದ್ದಾರೆ. ಬಾಲಾಜಿ ಕ್ರಿಯೇಶನ್ಸ್ ಮೂಲಕ ವಿಶ್ವಾಸ್.ಆರ್.ಗಂಗಡ್ಕರ್ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ‘ಸಂಪಾದನೆಗಾಗಿ ಪದವಿ ಮಾಡಬೇಡಿ. ಜ್ಞಾನಾರ್ಜನೆಗಾಗಿ ಓದಿ ಎಂಬ ಸಂದೇಶವಿದೆ. ಮಕ್ಕಳು ಯಾವ ರೀತಿ ದಿಕ್ಕು ತಪ್ಪುತ್ತಾರೆ ಎಂಬುದನ್ನು ತೋರಿಸಿದ್ದೇವೆ. ಸಸ್ಪೆನ್ಸ್, ಥ್ರಿಲ್ಲರ್ ಹಾಗೂ ಪ್ರೀತಿಯ ಅಂಶಗಳನ್ನು ಹೊಂದಿರುವ ಸಿನಿಮಾವಿದು. ಮೂವರು ಕಾಲೇಜು ವಿದ್ಯಾರ್ಥಿಗಳು ಜೀವನದಲ್ಲಿ ಏನೆಲ್ಲ ಎದುರಿಸುತ್ತಾರೆ ಎಂಬುದರ ಸುತ್ತ ಕಥೆ ಸಾಗುತ್ತದೆ. ಮಂಡ್ಯ, ಕಿರುಗಾವಲು, ಮಳವಳ್ಳಿ, ಬೆಳಕವಾಡಿ ಕಡೆಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ’ ಎಂದರು ನಿರ್ದೇಶಕ ರಮೇಶ್. ಶ್ರೀನಿವಾಸಗೌಡ, ಅದ್ದೂರಿ ಬಸವ, ಫೈಯು ಸುಫಿಯಾನ್ ಚಿತ್ರದ ನಾಯಕರು. ಅಮೃತ, ಸೌಂದರ್ಯಗೌಡ, ಋತ್ವಿಕ ನಾಯಕಿಯರು. ವಿಲಿಯಂದ್ರುತ್ ಸಂಗೀತ, ಅರಸಿಕೆರೆ ದೀಪು ಛಾಯಾಗ್ರಹಣ, ನಿಶಿತ್‌ಪೂಜಾರಿ ಸಂಕಲನ ಚಿತ್ರಕ್ಕಿದೆ.

ಅಮೃತಾ

ಹೊಸಬರ ‘ರಾಜರಾಣಿ’

ರಿತನ್ಯಾ ಶೆಟ್ಟಿ

‘ರಾಜರಾಣಿ’ ಎಂಬ ಶೀರ್ಷಿಕೆ ಯಡಿಯಲ್ಲಿ ಸಿನಿಮಾ, ಧಾರಾವಾಹಿ, ರಿಯಾಲಿಟಿ ಶೋ ಎಲ್ಲವೂ ಬಂದಿವೆ. ಇದೀಗ ಮತ್ತೆ ‘ರಾಜರಾಣಿ’ ಶೀರ್ಷಿಕೆಯನ್ನೇ ಹೊಂದಿರುವ ಚಿತ್ರವೊಂದು ತೆರೆಗೆ ಬರಲು ಸಜ್ಜಾಗಿದೆ. ‘ಇಟ್ಟಿಗೆ ಗೂಡಿನಲ್ಲಿ ರಾಜರಾಣಿ’ ಎಂಬ ಅಡಿಬರಹವಿದೆ. ಈ ಹಿಂದೆ ಕನ್ನಡ ಮತ್ತು ತಮಿಳಿನ ಕೆಲ ಚಿತ್ರಗಳಲ್ಲಿ ನಟಿಸಿ ಅನುಭವ ಹೊಂದಿರುವ ಬಳ್ಳಾರಿ ಮೂಲದ ರಣಧೀರ್ ಚಿತ್ರದ ನಾಯಕ ಮತ್ತು ನಿರ್ದೇಶಕ.

‘ಇಬ್ಬರು ನಾಯಕರಿದ್ದಾರೆ. ನಾಯಕಿ ಕಾಣೆಯಾಗುವುದರ ಸುತ್ತ ಕಥೆ ಸಾಗಲಿದೆ. ಕುತೂಹಲ ಹಾಗೂ ಪ್ರೀತಿಯನ್ನು ಒಳಗೊಂಡ ಕುಟುಂಬ ಸಮೇತ ನೋಡಬಹುದಾದ ಚಿತ್ರವಾಗಿದೆ. ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಮುಗಿದಿದ್ದು, ಸೆನ್ಸಾರ್‌ಗೆ ಹೋಗಿದೆ. ಶೀಘ್ರದಲ್ಲಿ ಬಿಡುಗಡೆ ಮಾಡಲು ಆಲೋಚಿಸುತ್ತಿದ್ದೇವೆ’ ಎನ್ನುತ್ತಾರೆ ನಿರ್ದೇಶಕ ರಣಧೀರ್.

ವಿಜಯ್ ಬಳ್ಳಾರಿ ಮತ್ತು ನೇತ್ರಾವತಿ ಮಲ್ಲೇಶ್, ಮಧುಸೂದನ್, ಲೀಲಾ ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ರಿತನ್ಯಾ ಶೆಟ್ಟಿ ಚಿತ್ರದ ನಾಯಕಿ. ಗಿರಿಜಾ ಲೋಕೇಶ್, ಶೋಭರಾಜ್, ಬಿರಾದಾರ್, ಕಿಲ್ಲರ್ ವೆಂಕಟೇಶ್ ಮುಂತಾದವರು ನಟಿಸಿದ್ದಾರೆ. ಸುಧನ್ ಪ್ರಕಾಶ್ ಸಂಗೀತ, ಮಧು ಛಾಯಾಗ್ರಹಣ, ನಿಶಿತ್ ಪೂಜಾರಿ ಸಂಕಲನ ಚಿತ್ರಕ್ಕಿದೆ. ಬೆಂಗಳೂರು, ಚಿಕ್ಕಮಗಳೂರು, ಮಂಗಳೂರು, ಕೋಲಾರ, ಮಾಲೂರಿನಲ್ಲಿ ಚಿತ್ರೀಕರಣ ನಡೆದಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

‘ಚೆನ್ನೈನಿಂದ ಢಾಕಾಗೆ ಇಂಡಿಗೊ ವಿಮಾನ ಹೊರಟಿತ್ತು. ಈ ವಿಮಾನವು ಶ್ರೀಹರಿಕೋಟಾದಿಂದ ಹೋಗುತ್ತಿತ್ತು. ಹೀಗೆ ಹೋಗುವಾಗಲೇ ಕಾಕತಾಳೀಯವಾಗಿ ಚಂದ್ರಯಾನ–3ರ ರಾಕೆಟ್ ಉಡಾವಣೆಯು ನೆರವೇರುತ್ತಿತ್ತು. ಈ ಐತಿಹಾಸಿಕ ಘಟನೆ ಕುರಿತು ವಿಮಾನದ ಪೈಲಟ್ ಮಾಹಿತಿ ನೀಡಿದರು. ರಾಕೆಟ್ ಉಡಾವಣೆಯಾಗುತ್ತಿದ್ದಂತೆಯೇ ವಿಮಾನದ ಕಿಟಕಿ ಬಳಿ ಕುಳಿತಿದ್ದ ಪ್ರಯಾಣಿಕರೊಬ್ಬರು ವಿಡಿಯೊ ಮಾಡಿಕೊಂಡರು. ವಿಮಾನಯಾನವು ಖಗೋಳವಿಜ್ಞಾನವನ್ನು ಭೇಟಿ ಮಾಡಿದ ಕ್ಷಣ’ ಎಂಬೆಲ್ಲಾ ರೀತಿಯಲ್ಲಿ ರಾಕೆಟ್ ಉಡಾವಣೆಯ ವಿಡಿಯೊವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿದೆ. ವಿಮಾನದ ರೆಕ್ಕೆಯೊಂದಿಗೆ ಶೂಟ್ ಮಾಡಿರುವ ಇದೇ ರೀತಿಯ ಇನ್ನೊಂದು ವಿಡಿಯೊ ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಹಂಚಿಕೆಯಾಗುತ್ತಿದೆ. ಆದರೆ, ಈ ಎರಡೂ ವಿಡಿಯೊಗಳು ಚಂದ್ರಯಾನ–3ರ ರಾಕೆಟ್ ಉಡಾವಣೆಯ ವಿಡಿಯೊಗಳಲ್ಲ.

ಈ ವಿಡಿಯೊಗಳೆರಡೂ ಫ್ಲಾರಿಡಾದಲ್ಲಿರುವ ರಾಕೆಟ್ ಉಡಾವಣಾ ಕೇಂದ್ರಗಳಲ್ಲಿ ಉಡಾವಣೆಗೊಂಡ ರಾಕೆಟ್‌ನ ದೃಶ್ಯಗಳಾಗಿವೆ. ಒಂದು ವಿಡಿಯೊವನ್ನು 2022 ಡಿಸೆಂಬರ್ 15ರಂದು ವಿಮಾನವೊಂದರ ಸಿಬ್ಬಂದಿಯೊಬ್ಬರು ಸೆರೆ ಹಿಡಿದಿದ್ದು, ಅದನ್ನ ಅವರು ತಮ್ಮ ಟಿಕ್‌ಟಾಕ್ ಖಾತೆಯಲ್ಲಿ ಹಂಚಿಕೊಂಡಿದ್ದಾರೆ. ಈ ವಿಡಿಯೊ ಕುರಿತು ‘ದಿ ಇಂಟಿಪೆಂಡೆಂಟ್’ ಸುದ್ದಿ ಸಂಸ್ಥೆಯು 2022ರ ಡಿ. 16ರಂದು ವರದಿಯನ್ನೂ ಮಾಡಿತ್ತು. ಇದು ನಾಸಾದ ಕೇಪ್ ಕ್ಯಾನವೆರಲ್ ಬಾಹ್ಯಾಕಾಶ ಕೇಂದ್ರದಿಂದ ಸ್ಪೇಸ್‌ಎಕ್ಸ್ ಕಂಪೆನಿಯ ‘ಫಾಲ್ಕನ್ 9’ ರಾಕೆಟ್ ಉಡಾವಣೆಯ ದೃಶ್ಯವಾಗಿದೆ. ಇನ್ನೊಂದು ವಿಡಿಯೊವು ನಾಸಾದ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ‘ಅಟ್ಲಾಸ್ 5’ ರಾಕೆಟ್ ಉಡಾವಣೆಯ ದೃಶ್ಯವಾಗಿದೆ. 2021ರ ಮೇ 20ರಂದು ‘ಸ್ಕೈನ್ಯೂಸ್ ಅಸ್ಟ್ರಾನಮಿ’ ಎಂಬ ಫೇಸ್‌ಬುಕ್ ಖಾತೆಯು ಈ ವಿಡಿಯೊವನ್ನು ಹಂಚಿಕೊಂಡಿತ್ತು. ಆದ್ದರಿಂದ ಈ ಎರಡೂ ವಿಡಿಯೊಗಳು ಚಂದ್ರಯಾನ–3ರ ರಾಕೆಟ್ ಉಡಾವಣೆ ವಿಡಿಯೊಗಳಲ್ಲ ಎಂದು ನ್ಯೂಸ್‌ಚೆಕ್ಕರ್ ಹಾಗೂ ಬೂಮ್‌ಲೈವ್ ಫ್ಯಾಕ್ಟ್‌ಚೆಕ್ ಮಾಡಿವೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಮುಕ್ತಿ ಸಾಧನ - ಸಂಗೀತ

ವೇದಾಂತವಾಕ್ಯಗಳ ನಮಕಾನುವಾಕಗಳ |
ಕೇದಾರಗೌಳ ಮಣಿರಂಗಾರಭಿಗಳ ||
ನಾದಂಗಳಲಿ ಮನವ ಬೆರಸಿ ನೀನುತ್ಕ್ರಮಿಸೆ |
ಸಾಧನವೊ ಮುಕ್ತಿಗದು – ಮಂಕುತಿಮ್ಮ || 931 ||

ಪದ-ಅರ್ಥ: ನಮಕ + ಅನುವಾಕಗಳ (ವೇದದ ಭಾಗಗಳು), ಮಣಿರಂಗಾರಭಿಗಳ = ಮಣಿರಂಗ + ಆರಭಿಗಳ, ನೀನುತ್ಕ್ರಮಿಸೆ = ನೀನು + ಉತ್ಕ್ರಮಿಸೆ(ಮರಣ ಹೊಂದಿದರೆ)

ವಾಚ್ಯಾರ್ಥ: ವೇದಾಂತದ ವಾಕ್ಯಗಳ, ವೇದದ, ಉಪನಿಷತ್ತುಗಳ ಸಾರವನ್ನು, ಕೇದಾರ, ಗೌಳ, ಮಣಿರಂಗ, ಆರಭಿಗಳಂತಹ ರಾಗ ವಿಸ್ತಾರಗಳಲ್ಲಿ, ನಾದದಲ್ಲಿ ಮನತುಂಬಿದಾಗ ನೀನು ಮರಣ ಹೊಂದಿದರೆ ಅದು ಮುಕ್ತಿಗೆ ಸಾಧನ.

ವಿವರಣೆ: ಈ ಕಗ್ಗ ಮುಕ್ತಿಯ ಬಗ್ಗೆ ಮಾತನಾಡುತ್ತದೆ. ಮುಕ್ತಿ ಎಂದರೇನು? ಅದರ ಅರ್ಥ ಬೇರೆ ಬೇರೆ ಕ್ಷೇತ್ರಗಳಲ್ಲಿ ಬೇರೆ ಬೇರೆಯಾಗುತ್ತದೆ. ಒಟ್ಟಾರ್ಥದಲ್ಲಿ ಮುಕ್ತಿ ಎಂದರೆ ಬಿಡುಗಡೆ? ಯಾವುದರಿಂದ ಬಿಡುಗಡೆ? ಅಧ್ಯಾತ್ಮಿಕವಾಗಿ ಅದು ಜೀವನ-ಮರಣದ ಚಕ್ರದಿಂದ ಬಿಡುಗಡೆ. ಕಳ್ಳನಿಗೆ ಜೈಲಿನಿಂದ ಬಿಡುಗಡೆ, ನಾವು ಬಹಳಷ್ಟು ಮಂದಿಗೆ ನಾವಾಗಿಯೇ ಮಾನಸಿಕವಾಗಿ ಸೃಷ್ಟಿಸಿಕೊಂಡಿರುವ ನಕಾರಾತ್ಮಕ ಚಿಂತನೆಗಳಿಂದ ಬಿಡುಗಡೆ, ಬದುಕಿನಲ್ಲಿ ಕಷ್ಟಗಳಿಂದ ಬಿಡುಗಡೆ; ಕೆಲವೊಮ್ಮೆ ಅತಿಯಾಗಿ ಕಾಡುವ ಅನಪೇಕ್ಷಿತ ಜನರಿಂದ ಬಿಡುಗಡೆಯೂ ಮುಕ್ತಿಯಾಗುತ್ತದೆ. “ಅಂತೂ ಆ ತಲೆತಿನ್ನುವ ಗಿರಾಕಿಯಿಂದ ಮುಕ್ತಿಯಾಯಿತಪ್ಪ” ಎನ್ನುವುದಿಲ್ಲವೇ? ಸಂಗೀತಕ್ಕೆ ತಮ್ಮನ್ನು ಪೂರ್ತಿಯಾಗಿ ತೆತ್ತುಕೊಂಡವರಿಗೆ ಸಂಗೀತ ಸಾಧನೆಯೇ, ಅದರಲ್ಲಿಯ ಗುರಿ ಮುಟ್ಟುವುದೇ ಮುಕ್ತಿ. ಮುಕ್ತಿ ಒಂದು ಅಪೂರ್ವ ಆನಂದದ ನೆಲೆ. ಆ ಆನಂದ ನಮಗೆ ಯಾವ ಬಗೆಯಿಂದಲಾದರೂ ದೊರೆಯಬಹುದು. ಈ ಕಗ್ಗದಲ್ಲಿ, ಸಂಗೀತದಿಂದ ಅಮೂರ್ತವಾದ, ಅಲೌಕಿಕ ಆನಂದ ಸಾಕಾರಗೊಳ್ಳುವುದು ಸಾಧ್ಯ ಎಂದು ಹೇಳಲಾಗುತ್ತದೆ. ಇಂಗ್ಲೀಷಿನಲ್ಲಿ ಒಂದು ಮಾತಿದೆ. ‘Music is a vehicle through which highest of sentiments of human heart find expression’.. ಮನುಷ್ಯ ಹೃದಯದ ಉತ್ತಮೋತ್ತಮ ಭಾವನೆಗಳನ್ನು ವ್ಯಕ್ತಪಡಿಸಲು ಸಂಗೀತವೊಂದು ಮಹತ್ತರ ಸಾಧನ. ಭಾರತದಲ್ಲಿ ಸಂಗೀತದ ಸಂಬಂಧವನ್ನು ಧರ್ಮದ ಜೊತೆಗೆ ಕೂಡಿಸಿದರು. ಪುರುಷಾರ್ಥ ಸಾಧನೆಗೆ ಸಂಗೀತವೂ ಸಾಧನ ಎಂದು ಭಾವಿಸಿದರು. ಅಂತೆಯೇ ಶಾರದೆ ವೀಣಾಪಾಣಿ, ನಾರದ, ತುಂಬುರರು ಸಂಗೀತದ ತವನಿಧಿಗಳು. ಸಾಮವೇದ ಸಂಗೀತಮಯವಾದದ್ದು. ಕಗ್ಗ ವಿವರಿಸುತ್ತದೆ, ವೇದಾಂತದ, ಅಂದರೆ ಉಪನಿಷತ್ತುಗಳಲ್ಲಿರುವ, ವೇದದ ಸೂಕ್ತಗಳಲ್ಲಿರುವ ಸಂಗೀತದ ನಾದವನ್ನು ಅನುಭವಿಸು. ಅದರೊಂದಿಗೆ ಕೇದಾರ, ಗೌಳ, ಮಣಿರಂಗ, ಆರಭಿಯಂಥ ಸುಂದರ ರಾಗಗಳ ನಾದದಲ್ಲಿ ಮನಸ್ಸನ್ನು ತೊಡಗಿಸು. ಅದನ್ನು ಸಂಪೂರ್ಣವಾಗಿ ಆನಂದಿಸು. ಅತ್ಯುತ್ತಮ ಸಂಗೀತ ಶಿವಸಾಕ್ಷಾತ್ಕಾರದ ಸಾಧನ. ಅತ್ಯಂತ ಪ್ರತಿಭಾಶಾಲಿಯಾದ ಗಾಯಕ/ಗಾಯಕಿ ಹಾಡುತ್ತಿರುವಾಗ, ನಿಮ್ಮ ಮೆಚ್ಚಿನ ರಾಗದ ಪ್ರಸಾರ ಬಂದಾಗ, ಕಣ್ಮುಚ್ಚಿ ಕುಳಿತು, ರಾಗದಲ್ಲಿಯೇ ಮುಳುಗಿ ಹೋದಾಗ, ಆ ಕ್ಷಣಗಳಲ್ಲಿ, ಪ್ರಪಂಚದ ಜಂಜಡಗಳೆಲ್ಲ ಕರಗಿ ಹೋಗಿ, ವೈಯಕ್ತಿಕ ಸಮಸ್ಯೆಗಳೆಲ್ಲ ಮಾಯವಾಗಿ, ನೀವು ಸಂಗೀತವೇ ಆಗಿ ಹೋದಾಗ ಅದೇ ಮುಕ್ತಿ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಜುಲೈ 20, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಅಧಿಕ ಶ್ರಾವಣ ಶುದ್ಧ ತೃತೀಯ ಅಹೋರಾತ್ರ ನಕ್ಷತ್ರ: ಆಶ್ಲೇಷ ಗಂ. 10-55 ಯೋಗ: ಸಿದ್ಧಿ (ಆಸ್ರಿಕ್) ಗಂ. 11-22 ಕರಣ: ತೈತಿಲ ಗಂ. 17-45, ಕರ್ಕಾಟಕ ಮಾಸದ 03 ನೇ ದಿನ, ಮಳೆನಕ್ಷತ್ರ: ಪುಷ್ಯ 1. ರಾಹುಕಾಲ : ಮಧ್ಯಾಹ್ನ 01-30 - 03-00, ಸೂರ್ಯೋದಯ : 06-16 ಸೂರ್ಯಾಸ್ತ : 06-57, ಮುಸ್ಲಿಂ ದಿನಾಂಕ : 01 ಮೊಹರಮ್, ದಿನ ವಿಶೇಷ : ಇಸ್ಲಾಮಿಕ್ ಹೊಸ ವರ್ಷ ದಿನ (ಹಿಜಿರ 1445 ಆರಂಭ)
ಅದೃಷ್ಟ ಸಂಖ್ಯೆ : 12, 8

ಮೇಷ: ಪರಿಚಯಸ್ಥರ ಮಗಳಿಗೆ ಯೋಗ್ಯ ವರನನ್ನು ಹುಡುಕಿಕೊಡುವಿರಿ. ಮನೆಯಲ್ಲಿ ನೆಮ್ಮದಿ ಕಾಪಾಡುವ ಕಾರಣಕ್ಕಾಗಿ ಹಿರಿಯರನ್ನು ಸುಮ್ಮನಿರಿಸುವಂಥ ಕೆಲಸವನ್ನು ಮಾಡುವಿರಿ. ಮಗಳ ಮಾತಿಗೆ ಬೆಲೆ ಕೊಡಿ.

ವೃಷಭ: ನವದಂಪತಿ ದೀರ್ಘ ಪ್ರಯಾಣದ ನಂತರ ಮನೆಗೆ ವಾಪಸಾಗುವಿರಿ. ನೂತನ ಸ್ಥಳದಲ್ಲಿ ಗೆಳೆಯರನ್ನು ಸಂಪಾದಿಸುವಂಥ ಕೆಲಸವನ್ನು ಮಾಡುವಿರಿ. ಎದುರಾಳಿಗಳನ್ನು ಮಾತಿನಲ್ಲಿ ಸುಲಭವಾಗಿ ಕಟ್ಟಿಹಾಕುವಿರಿ.

ಮಿಥುನ: ಮನೆಯಲ್ಲಿ ಹಲವು ಜನಗಳ ಆಕಾಂಕ್ಷೆಗಳನ್ನು ನೀವೇ ಪೂರೈಸಬೇಕಾದರೂ ನೆಮ್ಮದಿಯ ವಿಷಯವೇನೆಂದರೆ ಖರ್ಚಿಗೆ ತಕ್ಕಂತೆ ಧನಾಗಮನ ಇರುವುದರಿಂದ ಚಿಂತೆ ಇರದು. ಮಾರ್ಗದರ್ಶನ ಪಡೆಯುವಿರಿ.

ಕರ್ಕಾಟಕ: ವಿದೇಶಕ್ಕೆ ಹೋಗುವ ಅವಕಾಶಗಳನ್ನು ತಂದೆ ತಾಯಿಯರ ಹಿತಕ್ಕಾಗಿ ನಿರಾಕರಿಸುವಂತಾಗುವುದು. ಮುಂಬರುವ ಕಾರ್ಯಕ್ರಮ ಆರ್ಥಿಕ ನಿರ್ವಹಣೆಗಾಗಿ ಕೆಲವು ಖರ್ಚು ನಿಲ್ಲಿಸುವಿರಿ.

ಸಿಂಹ: ವೈದ್ಯಕೀಯ ವಿದ್ಯಾರ್ಥಿಗಳಿಗೆ ವ್ಯಾಸಂಗದಲ್ಲಿ ಪ್ರಗತಿ ಕಂಡು ಬರುವುದು. ಅನಗತ್ಯವಾದ ಮಾತುಗಳಿಂದ ದೂರವಿರಿ. ಅವಿವಾಹಿತರ ಮನೋ ಕಾಮನೆ ಪೂರ್ಣಗೊಳ್ಳುವ ದಿನವಾಗುವುದು. ಹೈನುಗಾರರಿಗೆ ಬೇಡಿಕೆ ಹೆಚ್ಚಲಿದೆ.

ಕನ್ಯಾ: ಪಾಲುದಾರರಿಂದ ಮೋಸ ಹೋಗುವ ಸಾಧ್ಯತೆಯು ಇರಲಿದೆ. ಕುಟುಂಬದ ಕಿರಿಯ ಸೋದರನಿಗೆ ವಿವಾಹ ನಿಶ್ಚಯವಾಗುವುದು. ವಿದ್ಯಾರ್ಥಿಗಳಿಗೆ ಪರಿಶ್ರಮಕ್ಕೆ ತಕ್ಕ ಫಲ ಸಿಗದಿದ್ದಲ್ಲಿ ದುಡುಕು ನಿರ್ಧಾರ ತೆಗೆದುಕೊಳ್ಳಬೇಡಿ.

ತುಲಾ: ಸರ್ಕಾರಿ ಕೆಲಸಗಳು ಗುತ್ತಿಗೆಯಾಗಿ ಲಭಿಸುವುದರ ಜತೆಗೆ ಲಾಭದಾಯಕವಾಗಿಯೂ ಇರುತ್ತವೆ. ಕಲ್ಲು ಹಾಗೂ ಕಬ್ಬಿಣದ ಕೆಲಸದಲ್ಲಿ ಜಾಗ್ರತರಾಗಿರಿ. ಮಕ್ಕಳ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುವಿರಿ.

ವೃಶ್ಚಿಕ: ಸುತ್ತಲಿನ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಪರಿಗಣಿಸಿ ವ್ಯವಹರಿಸಿ. ಭಾವನೆಗಳ ಬಗ್ಗೆ ಪ್ರಾಮಾಣಿಕರಾಗಿರಿ. ನಿಮ್ಮ ಸಾಮರ್ಥ್ಯಕ್ಕೆ ಅನುಗುಣವಾದ ಕೆಲಸಗಳು ದೊರೆಯಲಿದೆ. ಕೃಷಿಗೆ ಕೀಟಗಳ ಬಾಧೆ ಇರಬಹುದು.

ಧನು: ಧಾರ್ಮಿಕ ಕಾರ್ಯಕ್ರಮವೊಂದರಲ್ಲಿ ಭಾಗವಹಿಸುವಿರಿ. ದೀರ್ಘಕಾಲಿಕ ಕೆಲಸಗಳು ನಿಧಾನವಾಗಿ ಸಾಗಲಿವೆ. ಇಂದು ಲಕ್ಷ್ಮಿ ಸಮೇತನಾದ ವೆಂಕಟರಮಣನ ಕೃಪಾಕಟಾಕ್ಷಕ್ಕೆ ಪಾತ್ರರಾಗಿ ಶುಭವಾಗುತ್ತದೆ.

ಮಕರ: ಸಂಶೋಧನೆಯ ಕೆಲಸಗಳು ಉತ್ತಮ ಫಲಿತಾಂಶವನ್ನು ಕಾಣಲಿದೆ. ಯಾವ ಕೆಲಸದಲ್ಲೂ ಅಡೆ ತಡೆಗಳೇನೂ ಇರದು. ಬಾಕಿ ಇರಿಸಿದ ವ್ಯವಹಾರವು ಪೂರ್ಣಗೊಳ್ಳುವುದು. ದೂರ ಪ್ರಯಾಣ ಮಾಡಬೇಕಾಗುವುದು.

ಕುಂಭ: ರಾಜಕೀಯ ವ್ಯಕ್ತಿಗಳು ಜನರಲ್ಲಿ ತಾಳ್ಮೆಯಿಂದ ವರ್ತಿಸಿ. ಹೊಸ ಕೆಲಸ ಪ್ರಾರಂಭ ಮಾಡಬೇಕಾದಾಗ ಸೂಕ್ತ ಮಾರ್ಗದರ್ಶನ ತೆಗೆದುಕೊಳ್ಳುವುದು ಉತ್ತಮ. ಉದ್ಯೋಗದಲ್ಲಿ ಬದಲಾವಣೆ ಕಂಡುಬರಲಿದೆ.

ಮೀನ: ಇತರರೊಂದಿಗೆ ಜೊತೆಗೂಡಿ ಕೆಲಸ ಮಾಡುವುದು, ನಾಲ್ಕಾರು ಜನರ ಜೊತೆಯಲ್ಲಿ ಬೆರೆಯುವುದನ್ನು ಅಭ್ಯಾಸ ಮಾಡಿಕೊಳ್ಳಿ. ಗುಪ್ತಚರದಳ ಮಂದಿಗೆ ಕಾರ್ಯಭಾರ ಹೆಚ್ಚಲಿದೆ. ಕೋರ್ಟಿನ ವಿಚಾರದಲ್ಲಿ ಜಯ ಲಭಿಸಲಿದೆ.

ಪದಬಂಧ 5385

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಒಜ್ಜೆಯನ್ನು ಹೊತ್ತಿರುವ ನಮ್ಮ ದೇಶ (3)
3.ಮನವನ್ನು ಕೊನೆಗಿಟ್ಟಾಗಿನ ಸಮಾಧಾನ (3)
5.ಈತ ಹಾದಿಯನ್ನು ತೋರಿಸುವವನು (5)
6.ಶರಧಿಯೊಳಗಿರುವ ಬಾಣ (2)
8.ಅಡುಗೆಯನ್ನು ಹೀಗೆ ಹೇಳಿ (2)
9.ಶಂಕೆ ಯಾಕೆ? ಇದು ಹತೋಟಿ! (2)
10.ಕಲಾವಿದನು ತೆರೆದ ಬಾಗಿಲು (2)
14.ಮಂದಿಗೆಲ್ಲಾ ಗೊತ್ತಾಗಿದ್ದುದು (5)
15.ಕರಿಯೊಳಗಿರುವ ಸುಗಂಧ ದ್ರವ್ಯ (3)
16.ದರ್ಶನವೂ ಆದ ಉಡುಗೊರೆ (3)

ಮೇಲಿಂದ ಕೆಳಕ್ಕೆ

1.ಚಿತ್ತವೃತ್ತಿಯ ತೀವ್ರತೆ (4)
2.ಹೊಂಗೆಯ ಮರ ಇಲ್ಲಿದೆ (3)
3.ಕಟ ಕಟ ಶಬ್ದ ಮಾಡುತ್ತಿರುವ ಬಂಡಿ (3)
4.ಬೆಂಬಿಡದೆ ಕಾಡುವವನು (4)
7.ರವಿಕೆಗೆ ಅಂಟಿರುವ ಕೀವು (3)
8.ಪಾಕದಲ್ಲಿರುವ ದೋಷ ಕಾಣುತ್ತಿದೆಯೇ?(3)
9.ಮಂಗಳ ಗ್ರಹವಿದು (4)
11.ಬಲಾತ್ಕಾರದ ಆಡಳಿತ (4)
12.ಹಳೆಯ ಸಾಮಾನುಗಳನ್ನು ಮಾರುವ ಅಂಗಡಿ (3)
13.ಅವಸರವಿಲ್ಲಿ ಉಲ್ಟಾ ಆಗಿಬಿಟ್ಟದೆ (3)



5384ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 2.ಮಗ 3.ತಪೋಬಲ 5.ನಗದು 6.ಮಾವಟಿಗ 8.ಗಡಿಪಾರು 12.ಪತಿಫಲ 14.ಅನುವಾದ 15.ಜಳಕ 16.ವಿದ್ಯಮಾನ 17.ಆಮೆ

ಮೇಲಿಂದ ಕೆಳಕ್ಕೆ: 1.ಸ್ಥಾನಬದ್ಧತೆ 2.ಮದುಮಗ 3.ತಲೆಮಾರು 4.ಲವಂಗ 7.ಟಿಕ್ಕೆ 9.ಪಾವತಿ 10.ಪ್ರಾಮಾಣಿಕತೆ 11.ಜೇನು 12.ಪ್ರದರ್ಶನ 13.ಲವಾಜಮೆ 14.ಅಡವಿ

ಸುಡೊಕು 5771

2		6					5	9
		7	5		6	3		2
3	8						6	
	2							4
			2	4	7			6
	7					5		
7		9			8		4	
4				3			8	
	6		4		2	7		3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5770 ಸುಡೊಕು

3	9	1	8	7	5	6	4	2
7	6	5	2	4	9	3	8	1
2	8	4	3	1	6	7	9	5
1	5	9	7	2	4	8	6	3
4	2	7	6	8	3	5	1	9
8	3	6	5	9	1	2	7	4
6	1	2	4	5	8	9	3	7
9	7	8	1	3	2	4	5	6
5	4	3	9	6	7	1	2	8

ಸಿಯಾಚಿನ್: ಸೇನೆ ಅಧಿಕಾರಿ ಸಾವು, ಮೂವರಿಗೆ ಗಾಯ

ಸಿಯಾಚಿನ್ (ಪಿಟಿಐ): ಸಿಯಾಚಿನ್ ನೀರ್ಗಲ್ಲಿನಲ್ಲಿ ಬುಧವಾರ ನಸುಕಿನ 3 ಗಂಟೆಯಲ್ಲಿ ನಡೆದಿರುವ ಬೆಂಕಿ ಆಕಸ್ಮಿಕದಲ್ಲಿ ಒಬ್ಬರು ಸೇನಾಧಿಕಾರಿ ಮೃತಪಟ್ಟಿದ್ದು, ಮೂವರು ಯೋಧರು ಗಂಭೀರ ಗಾಯಗೊಂಡಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ಸೇನೆಯ ರೆಜಿಮೆಂಟಲ್ ವೈದ್ಯಾಧಿಕಾರಿ, ಕ್ಯಾಪ್ಟನ್ ಅಂಶುಮನ್ ಸಿಂಗ್ ಅವರು ಗಂಭೀರ ಸುಟ್ಟ ಗಾಯಗಳಿಂದ ಮೃತರಾಗಿದ್ದಾರೆ. ಉಳಿದ ಮೂವರು ಯೋಧರಿಗೆ ಎರಡನೇ ಹಂತದ ಸುಟ್ಟಗಾಯಗಳಾಗಿದ್ದು, ಹೊಗೆ ಉಸಿರಾಡಿ ಗಂಭೀರ ಸ್ಥಿತಿಯಲ್ಲಿದ್ದಾರೆ. ಹೆಚ್ಚಿನ ಚಿಕಿತ್ಸೆಗಾಗಿ ಗಾಯಾಳುಗಳನ್ನು ಸ್ಥಳಾಂತರಿಸಲಾಗಿದ್ದು, ಅವರ ಆರೋಗ್ಯ ಸ್ಥಿತಿ ಸ್ಥಿರವಾಗಿದೆ ಎಂದು ಅವರು ತಿಳಿಸಿದ್ದಾರೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

ನಿಧನ

ಕಸ್ತೂರಿ (71ವರ್ಷ)

ದಿನಾಂಕ: 19.7.2023 ರಂದು ನಿಧನರಾಗಿದ್ದಾರೆಂದು ತಿಳಿಸಲು ವಿಷಾಧಿಸುತ್ತೇವೆ. "ಮೃತರ ಆತ್ಮಕ್ಕೆ ಶಾಂತಿ ಸಿಗಲಿ" ಎಂದು ಪ್ರಾರ್ಥಿಸುವ. ಇಂತಿ ದುಃಖತಪ್ತರು:

ಹೆಚ್.ಎಮ್. ಕೃಷ್ಣಮೂರ್ತಿ (ಪತಿ), ಎಮ್.ಕೆ. ರಾಜೇಶ್(ಮಗ), ಪದ್ಮಶ್ರೀ(ಸೊಸೆ), ಎಮ್.ಕೆ. ಅಂಜನ (ಮಗಳು), ಅನ್‌ಬರಸು (ಅಳಿಯ), ದಿವ್ಯ, ಸುರೇಶ್, ಅನೀಶ್ & ಲೋಕಿಥ (ಮೊಮ್ಮಕ್ಕಳು) ಪ್ರೀತಿಯ ಸಂಬಂಧಿಕರು ಹಾಗೂ ಸ್ನೇಹಿತರು

ಮೊ: 9448441184, 9845541541

ಇಂದಿನಿಂದ ಸಂಸತ್ ಮುಂಗಾರು ಅಧಿವೇಶನ: ಮಣಿಪುರ ಹಿಂಸಾಚಾರ, ಸುಗ್ರೀವಾಜ್ಞೆ ಚರ್ಚೆ

ಮೋದಿ ಮೌನವೇ 'ಇಂಡಿಯಾ'ಗೆ ಅಸ್ತ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಣಿಪುರದ ಹಿಂಸಾಚಾರ ಮತ್ತು ದೆಹಲಿ ಸುಗ್ರೀವಾಜ್ಞೆಗೆ ಸಂಬಂಧಿಸಿದಂತೆ ಆಡಳಿತಾರೂಢ ಬಿಜೆಪಿ ಹಾಗೂ ಪ್ರತಿಪಕ್ಷಗಳ ನಡುವೆ ಸಂಸತ್‌ನ ಹೊರಗೆ ಈಗಾಗಲೇ ರಾಜಕೀಯ ಸಂಘರ್ಷ ಉತ್ತುಂಗಕ್ಕೇರಿದೆ.

ಇದರ ಬೆನ್ನಲ್ಲೇ ಗುರುವಾರದಿಂದ ಮುಂಗಾರು ಅಧಿವೇಶನ ಆರಂಭವಾಗುತ್ತಿದೆ. ಈ ಸಂಘರ್ಷ ಸಂಸತ್‌ನ ಒಳಗೂ ಪ್ರವೇಶಿಸಲಿದ್ದು, ಸುಗಮ ಕಲಾಪ ನಡೆಸುವುದು ಕೇಂದ್ರ ಸರ್ಕಾರಕ್ಕೆ ಸವಾಲಾಗಿ ಪರಿಣಮಿಸಿದೆ.

ಬೆಂಗಳೂರಿನಲ್ಲಿ ಪ್ರತಿಪಕ್ಷಗಳು 'ಇಂಡಿಯಾ'ದ ಒಗ್ಗಟ್ಟು ಪ್ರದರ್ಶಿಸಿದ ಬಳಿಕ ಬಿಜೆಪಿಯು ಎನ್‌ಡಿಎ ಸಭೆ ಮೂಲಕ ತನ್ನ ಸಂಖ್ಯಾಬಲ ಪ್ರದರ್ಶಿಸಿದ ಖುಷಿಯಲ್ಲಿದೆ. ಆದರೆ, ಕಣಿವೆ ರಾಜ್ಯದ ಹಿಂಸಾಚಾರ ನಿಯಂತ್ರಿಸುವಲ್ಲಿ ಸೋತಿರುವುದು ಹಾಗೂ ಆ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ತಳೆದಿರುವ ಮೌನವು, ಪ್ರತಿಪಕ್ಷಗಳಿಗೆ ಕೇಂದ್ರ ಸರ್ಕಾರವೇ ಅಸ್ತ್ರ ನೀಡಿದಂತಾಗಿದೆ.

ಸಂಸತ್‌ನ ಮುಂಗಾರು ಅಧಿವೇಶನಕ್ಕೂ ಮೊದಲು ಬುಧವಾರ ಕೇಂದ್ರ ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರ ಅಧ್ಯಕ್ಷತೆಯಲ್ಲಿ ನವದೆಹಲಿಯಲ್ಲಿ ಸರ್ವಪಕ್ಷಗಳ ಸಭೆ ನಡೆಯಿತು. ಸಚಿವ ಪ್ರಲ್ಹಾದ ಜೋಶಿ ಇದ್ದರು –ಪಿಟಿಐ ಚಿತ್ರ

ಹಾಗಾಗಿ, ಈ ಅಧಿವೇಶನವು ಸರ್ಕಾರದ ಪಾಲಿಗೆ ಅಗ್ನಿಪರೀಕ್ಷೆಯಾಗಿರುವುದು ಗುಟ್ಟಾಗಿ ಉಳಿದಿಲ್ಲ. ಮೊದಲ ದಿನವೇ ಕಾವೇರುವ ಸಾಧ್ಯತೆ ದಟ್ಟವಾಗಿದೆ.

ಮಣಿಪುರ ಇನ್ನೂ ಸಹಜ ಸ್ಥಿತಿಗೆ ಮರಳಿಲ್ಲ. ಈ ನಡುವೆಯೇ ಮೋದಿ ಶಾಂತಿ ಕಾಪಾಡುವಂತೆ ಜನರಲ್ಲಿ ಮನವಿಯನ್ನೂ ಮಾಡಿಲ್ಲ. ಇದು ವಿಪಕ್ಷಗಳ ತಾಳ್ಮೆಯನ್ನು ಪರೀಕ್ಷೆಗೊಡ್ಡಿದೆ. ಹಿಂಸಾಚಾರದ ಬಗ್ಗೆ ಪ್ರತ್ಯೇಕ ಚರ್ಚೆಗೆ ಅವಕಾಶ ಕಲ್ಪಿಸುವಂತೆ ಕೋರಿ ಲೋಕಸಭೆಯ ಸ್ಪೀಕರ್‌ಗೆ ಪತ್ರ ಬರೆದಿವೆ.

ಅಧಿವೇಶನಕ್ಕೂ ಮುನ್ನ ಕೇಂದ್ರ ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸರ್ವ ಪಕ್ಷಗಳ ಸಭೆಯಲ್ಲಿಯೂ ಪ್ರತಿಪಕ್ಷಗಳು ಈ ವಿಷಯ ಪ್ರಸ್ತಾಪಿಸಿವೆ. ಮೋದಿ ಅವರು ಮೌನ ಮುರಿಯದಿದ್ದರೆ ಹೋರಾಟ ನಡೆಸುವುದಾಗಿ ಎಚ್ಚರಿಕೆ ನೀಡಿವೆ.

'ಇದನ್ನು ಸಮರ್ಥವಾಗಿ ನಿಭಾಯಿಸಲು ಸರ್ಕಾರವೂ ಸಿದ್ಧವಾಗಿದೆ' ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಹೇಳಿದ್ದಾರೆ.

'ಹಿಂಸಾಚಾರದ ಬಗ್ಗೆ ಚರ್ಚೆಯನ್ನಷ್ಟೇ ನಾವು ಅಪೇಕ್ಷಿಸುವುದಿಲ್ಲ. ಕಲಾಪದಲ್ಲಿ ಮೋದಿ ಅವರ ಉತ್ತರವನ್ನೂ ಬಯಸುತ್ತೇನೆ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಗುಡುಗಿದ್ದಾರೆ.

ಇದಕ್ಕೆ ಧ್ವನಿಗೂಡಿಸಿರುವ ರಾಜ್ಯಸಭೆಯ ತೃಣಮೂಲ ಕಾಂಗ್ರೆಸ್‌ನ ನಾಯಕ ಡೆರಿಕ್ ಒಬ್ರಿಯನ್, 'ಕಣಿವೆ ರಾಜ್ಯದ ಹಿಂಸಾಚಾರದ ಬಗ್ಗೆ ಪ್ರಧಾನಿ ಮಾತನಾಡದಿದ್ದರೆ 'ಇಂಡಿಯಾ' ಬದಲಾಗಿ ಉದ್ದೇಶ ಪೂರ್ವಕವಾಗಿಯೇ ಬಿಜೆಪಿ ಕಲಾಪಕ್ಕೆ ಅಡ್ಡಿಪಡಿಸುವ ಸಾಧ್ಯತೆ ಇದೆ' ಎಂದು ಪ್ರತಿಕ್ರಿಯಿಸಿದ್ದಾರೆ.

21 ಮಸೂದೆಗಳ ಮಂಡನೆ: ಆಗಸ್ಟ್ 11ರ ವರೆಗೆ ಅಧಿವೇಶನ ನಡೆಯಲಿದೆ. ದೆಹಲಿಯ ಸೇವಾ ವಿಷಯಗಳ ಆಡಳಿತಾತ್ಮಕ ನಿಯಂತ್ರಣ ಕುರಿತ ಸುಗ್ರೀವಾಜ್ಞೆ ಸೇರಿದಂತೆ 21 ಮಸೂದೆಗಳ ಮಂಡನೆಗೆ ಕೇಂದ್ರ ಸರ್ಕಾರವು ಸಿದ್ಧತೆ ನಡೆಸಿದೆ.

ಅಧಿವೇಶನ: ಜಂಟಿ ಹೋರಾಟಕ್ಕೆ ಸಜ್ಜು

ನವದೆಹಲಿ: ಗುರುವಾರದಿಂದ ಸಂಸತ್‌ನ ಮುಂಗಾರು ಅಧಿವೇಶನ ಆರಂಭವಾಗುತ್ತಿದ್ದು, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ವೈಫಲ್ಯಗಳ ವಿರುದ್ಧ ಅಧಿವೇಶನದಲ್ಲಿ ಸಂಘಟಿತ ಹೋರಾಟಕ್ಕಿಳಿಯುವ ಬಗ್ಗೆ ಕಾರ್ಯತಂತ್ರ ರೂಪಿಸುವ ಸಂಬಂಧ 'ಇಂಡಿಯಾ' ಸಭೆಯು ಬೆಳಿಗ್ಗೆ 10ಗಂಟೆ ನಿಗದಿಯಾಗಿದೆ.

ಅಧಿವೇಶನ ಶುರುವಾಗುವ ಒಂದು ಗಂಟೆಗೂ ಮೊದಲು ಸಭೆ ನಡೆಯಲಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಧ್ಯಕ್ಷತೆಯಲ್ಲಿ ಅವರ ಕಚೇರಿಯಲ್ಲಿ ನಿಗದಿಯಾಗಿರುವ ಈ ಸಭೆಯಲ್ಲಿ ಪ್ರತಿಪಕ್ಷಗಳ ಸಂಸದೀಯ ನಾಯಕರು ಪಾಲ್ಗೊಳ್ಳಲಿದ್ದಾರೆ ಎಂದು ಬುಧವಾರ ಮೂಲಗಳು ತಿಳಿಸಿವೆ.

ಬೆಂಗಳೂರಿನ ಸಭೆ ಬಳಿಕ ನಡೆಯುತ್ತಿರುವ 'ಇಂಡಿಯಾ'ದ ಮೊದಲ ಅಧಿಕೃತ ಸಭೆ ಇದಾಗಿದೆ. ಕಾಂಗ್ರೆಸ್ ಇಂತಹ ಸಭೆಗಳ ಉಸ್ತುವಾರಿ ಹೊರುವುದಕ್ಕೆ ಈ ಮೊದಲು ತೃಣಮೂಲ ಕಾಂಗ್ರೆಸ್ ಆಕ್ಷೇಪಿಸಿದ್ದ ಬಗ್ಗೆ ಊಹಾಪೋಹ ಹರಿದಾಡಿತ್ತು.

'ಆದರೆ, ಬೆಂಗಳೂರಿನ ಸಭೆಯಲ್ಲಿ ಮೂಡಿದ ಸೌಹಾರ್ದವನ್ನು ಮುಂದುವರಿಸಿಕೊಂಡು ಹೋಗಲು ಪ್ರತಿಪಕ್ಷಗಳ ನಾಯಕರು ವಾಗ್ದಾನ ಮಾಡಿದ್ದಾರೆ. ಹಾಗಾಗಿ, ಅಧಿವೇಶನದಲ್ಲಿ ಮೋದಿ ಸರ್ಕಾರದ ವಿರುದ್ಧ ಜಂಟಿಯಾಗಿ ಹೋರಾಟ ನಡೆಸಲಿವೆ' ಎಂದು ಹಿರಿಯ ನಾಯಕರೊಬ್ಬರು ತಿಳಿಸಿದ್ದಾರೆ.

ವಿರೋಧ ಪಕ್ಷಗಳು ಸಾಮೂಹಿಕ ಹೋರಾಟದ ಸಂಕಲ್ಪ ತೊಟ್ಟಿವೆ. ಆಗಸ್ಟ್ 11ರ ವರೆಗೆ ನಡೆಯಲಿರುವ ಅಧಿವೇಶನದಲ್ಲಿ ಇದು ಮಾರ್ದನಿಸಲಿದೆ ಎಂದು ವಿವರಿಸಿದ್ದಾರೆ.

'ಮೈತ್ರಿ'ಯಿಂದ 11 ಪಕ್ಷಗಳು ದೂರ

ನವದೆಹಲಿ (ಪಿಟಿಐ): ಮುಂದಿನ ವರ್ಷ ನಡೆಯುವ ಲೋಕಸಭಾ ಚುನಾವಣೆಗೆ ಒಂದೆಡೆ ಬಿಜೆಪಿ, ಮತ್ತೊಂದೆಡೆ ಕಾಂಗ್ರೆಸ್ ಸೇರಿದಂತೆ ಇತರ ವಿರೋಧ ಪಕ್ಷಗಳು ಭರ್ಜರಿ ಸಿದ್ಧತೆ ನಡೆಸಿವೆ.

ಮಿತ್ರಪಕ್ಷಗಳ ಜೊತೆ ಸಭೆ ನಡೆಸಿ ಎನ್‌ಡಿಎ ಶಕ್ತಿ ಪ್ರದರ್ಶನ ಮಾಡಿದೆ. ಬೆಂಗಳೂರಿನಲ್ಲಿ ಕಾಂಗ್ರೆಸ್ ನೇತೃತ್ವದಲ್ಲಿ ಸಭೆ ಸೇರಿದ್ದ 25 ವಿಪಕ್ಷಗಳು 'ಇಂಡಿಯಾ' ಹೆಸರಿನಲ್ಲಿ ಮೈತ್ರಿಕೂಟಕ್ಕೆ ರಚಿಸಿಕೊಂಡಿವೆ.

ಆದರೆ, 91 ಸಂಸದರನ್ನು ಹೊಂದಿರುವ 11 ಪಕ್ಷಗಳು ತಟಸ್ಥ ಉಳಿಯುವ ಮೂಲಕ ಗಮನ ಸೆಳೆದಿವೆ. ವೈಎಸ್‌ಆರ್ ಕಾಂಗ್ರೆಸ್ ಪಕ್ಷ (ವೈಎಸ್‌ಆರ್‌ಸಿಪಿ), ಬಿಜೆಡಿ, ಬಿಆರ್‌ಎಸ್, ಬಿಎಸ್‌ಪಿ, ಎಐಎಂಐಎಂ, ಟಿಡಿಪಿ, ಎಸ್‌ಎಡಿ, ಎಐಯುಡಿಎಫ್, ಜೆಡಿಎಸ್, ಆರ್‌ಎಲ್‌ಪಿ ಹಾಗೂ ಎಸ್‌ಎಡಿ(ಮಾನ್) ತಟಸ್ಥ ಉಳಿರುವ ಪಕ್ಷಗಳು. ಇವುಗಳ ಪೈಕಿ ಆಂಧ್ರಪ್ರದೇಶ, ತೆಲಂಗಾಣ ಹಾಗೂ ಒಡಿಶಾದಲ್ಲಿ ಮೂರು ಪಕ್ಷಗಳು ಅಧಿಕಾರದಲ್ಲಿವೆ. ಪ್ರತ್ಯೇಕ ರಾಜ್ಯವಾಗಿ ಅಸ್ತಿತ್ವಕ್ಕೆ ಬಂದಾಗಿನಿಂದಲೂ ತೆಲಂಗಾಣದಲ್ಲಿ ಬಿಆರ್‌ಎಸ್ ಅಧಿಕಾರದಲ್ಲಿದೆ. ಇತ್ತೀಚಿನ ವರೆಗೂ ವಿಪಕ್ಷಗಳ ಮೈತ್ರಿಕೂಟ ಸೇರುವ ಲೆಕ್ಕಾಚಾರದಲ್ಲಿದ್ದ ಬಿಆರ್‌ಎಸ್, ಈಗ ಪ್ರತ್ಯೇಕವಾಗಿಯೇ ಉಳಿದಿದೆ.

'ಜೀತೆಗಾ ಭಾರತ್' ಟ್ಯಾಗ್‌ಲೈನ್‌ಗೆ ಅಸ್ತು

ನವದೆಹಲಿ (ಪಿಟಿಐ): ಮುಂಬರುವ ಲೋಕಸಭಾ ಚುನಾವಣೆಯ ಪ್ರಚಾರಕ್ಕಾಗಿ 'ಇಂಡಿಯಾ'ಗೆ 'ಜೀತೆಗಾ ಭಾರತ್' ಅಡಿಬರಹ (ಟ್ಯಾಗ್‌ಲೈನ್) ಅಂತಿಮಗೊಳಿಸಲಾಗಿದೆ.

ಹಿಂದಿಯ ಈ ಅಡಿಬರಹವು 'ಭಾರತ ಗೆಲ್ಲುತ್ತದೆ' ಎಂಬ ಅರ್ಥವನ್ನು ಧ್ವನಿಸುತ್ತದೆ. ಎಲ್ಲಾ ಪ್ರಾದೇಶಿಕ ಭಾಷೆಗಳಲ್ಲಿ ಘೋಷಣೆಗೆ ಇದು ಸೂಕ್ತವಾಗಿ ಅನ್ವಯಿಸುತ್ತದೆ. ಹಾಗಾಗಿ, ಇದಕ್ಕೆ ಸಭೆಯಲ್ಲಿ ಪಾಲ್ಗೊಂಡಿದ್ದ ನಾಯಕರು ಒಪ್ಪಿಗೆ ಸೂಚಿಸಿದ್ದಾರೆ ಎಂದು ಹಿರಿಯ ಮುಖಂಡರೊಬ್ಬರು ತಿಳಿಸಿದ್ದಾರೆ.

'ಮೈತ್ರಿಕೂಟದಲ್ಲಿ 'ಭಾರತ್' ಎಂದು ಹೆಸರಿಡಲು ಹಲವು ನಾಯಕರು ಸಲಹೆ ನೀಡಿದ್ದರು. ಬಳಿಕ ಈ ಪದವನ್ನು ಟ್ಯಾಗ್‌ಲೈನ್‌ಗೆ ಬಳಸಲು ನಿರ್ಧರಿಸಲಾಯಿತು ಎಂದಿದ್ದಾರೆ.

ಹೊಸ ಬಾಟಲಿಯಲ್ಲಿ ಹಳೆ ಮದ್ಯದಂತೆ– ಬಿಜೆಪಿ ಟೀಕೆ: ಕಾಂಗ್ರೆಸ್ ಸೇರಿದಂತೆ 26 ವಿರೋಧ ಪಕ್ಷಗಳು ರಚಿಸಿಕೊಂಡಿರುವ ಮೈತ್ರಿಕೂಟಕ್ಕೆ 'ಇಂಡಿಯಾ' ಎಂದು ಹೆಸರು ಇಟ್ಟಿರುವುದನ್ನು ಟೀಕಿಸಿರುವ ಬಿಜೆಪಿ, 'ಈ ನಡೆ ಹೊಸ ಬಾಟಲಿಯಲ್ಲಿ ಹಳೆ ಮದ್ಯ ಎಂಬಂತಾಗಿದೆ' ಎಂದು ಬುಧವಾರ ವ್ಯಂಗ್ಯವಾಡಿದೆ.

'ಹೆಸರಿನಲ್ಲಿ ಮಾಡುವ ಬದಲಾವಣೆ ವ್ಯಕ್ತಿಯಲ್ಲಿ ಬದಲಾವಣೆ ತರುವುದಿಲ್ಲ' ಎಂದು ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಟೀಕಿಸಿದ್ದಾರೆ.

'ಹೆಸರಿನಲ್ಲಿ ಬದಲಾವಣೆಗಿಂತ ಭಾರತ ಕುರಿತು ಮೈತ್ರಿಕೂಟ ಹೊಂದಿರುವ ಮನಸ್ಥಿತಿ ಹಾಗೂ ಉದ್ದೇಶಗಳು ಬದಲಾಗಬೇಕು' ಎಂದು ಹೇಳಿದ್ದಾರೆ.

'ವಂದೇ ಮಾತರಂ' ಕುರಿತು ಮಹಾರಾಷ್ಟ್ರದ ಸಮಾಜವಾದಿ ಪಕ್ಷದ ಶಾಸಕ ಅಬು ಅಜ್ಮಿ ಹೇಳಿಕೆಯನ್ನು ಖಂಡಿಸಿರುವ ಅವರು, 'ಇಂಥ ಮನಸ್ಥಿತಿಯ ಜನರು ರಾಷ್ಟ್ರಕ್ಕೆ ಯಾವ ರೀತಿ ಗೌರವ ನೀಡಲು ಸಾಧ್ಯ' ಎಂದಿದ್ದಾರೆ.

ಕಾಂಗ್ರೆಸ್ ತಿರುಗೇಟು: ಇಂಡಿಯಾ (ಐಎನ್‌ಡಿಐಎ) ಎಂಬುದು ವಸಾಹತುಶಾಹಿಯ ಪ್ರತೀಕ ಎನ್ನುವ ಮೂಲಕ ವಿರೋಧ ಪಕ್ಷಗಳ ಮೈತ್ರಿಕೂಟವನ್ನು ಗೇಲಿ ಮಾಡಿದ್ದ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ ಅವರಿಗೆ ಕಾಂಗ್ರೆಸ್ ಬುಧವಾರ ತಿರುಗೇಟು ನೀಡಿದೆ.

'ಸ್ಕಿಲ್ ಇಂಡಿಯಾ' ಮತ್ತು 'ಸ್ಟಾರ್ಟ್ ಅಪ್ ಇಂಡಿಯಾ' ಎಂದು ಸರ್ಕಾರದ ಕಾರ್ಯಕ್ರಮಗಳನ್ನು ಹೆಸರಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಶರ್ಮ ಅವರು ಈ ಮಾತು ಹೇಳಲಿ ಎಂದು ಕಾಂಗ್ರೆಸ್ ಸವಾಲು ಹಾಕಿದೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, 'ಅಸ್ಸಾಂ ಸಿಎಂ ಬಾಯಲ್ಲೇನಾದರು ಹುಳಿದ್ರಾಕ್ಷಿ ತುಂಬಿಕೊಂಡಿದೆಯೇ? ಅವರ ಹೊಸ ಗೆಳೆಯ, ದೇಶಕ್ಕೆ 'ಸ್ಕಿಲ್ ಇಂಡಿಯಾ', 'ಸ್ಟಾರ್ಟ್ ಅಪ್ ಇಂಡಿಯಾ', 'ಡಿಜಿಟಲ್ ಇಂಡಿಯಾ' ಹೆಸರಿನ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಎಲ್ಲರೂ 'ಟೀಂ ಇಂಡಿಯಾ' ಆಗಿ ಕೆಲಸ ಮಾಡೋಣ ಎಂದು ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಪ್ರಧಾನಿ ಮನವಿ ಮಾಡುತ್ತಿದ್ದಾರೆ. ಜತೆಗೆ 'ವೋಟ್ ಇಂಡಿಯಾ' ಎಂದು ಹೇಳುತ್ತಿದ್ದಾರೆ. ಆದರೆ, ವಿರೋಧ ಪಕ್ಷಗಳೆಲ್ಲ ಸೇರಿ ತಮ್ಮ ಮೈತ್ರಿಕೂಟಕ್ಕೆ 'ಇಂಡಿಯಾ' ಎಂದು ಹೆಸರಿಟ್ಟ ಕೂಡಲೇ ತಕರಾರು ತೆಗೆದಿರುವ ಶರ್ಮ, ಇದು ವಸಾಹತುವಿನ ಪ್ರತೀಕ ಎಂದಿದ್ದಾರೆ. ಅವರು ತಮ್ಮ ಬಾಸ್‌ಗೆ ಈ ಮಾತು ಹೇಳಲಿ' ಎಂದು ಗೇಲಿ ಮಾಡಿದ್ದಾರೆ.

ವಿಪಕ್ಷಗಳ ವಿರುದ್ಧ ಲಾಂಛನ ಕಾಯ್ದೆ ಉಲ್ಲಂಘನೆಯ ದೂರು

ನವದೆಹಲಿ (ಪಿಟಿಐ): ಚುನಾವಣೆಯಲ್ಲಿ ಭಾರಿ ಪ್ರಭಾವ ಬೀರಲು 26 ರಾಜಕೀಯ ಪಕ್ಷಗಳು ಮೈತ್ರಿಗಾಗಿ 'ಇಂಡಿಯಾ' ಹೆಸರನ್ನು ಅನುಚಿತವಾಗಿ ಬಳಸಿಕೊಂಡಿವೆ ಮತ್ತು 'ಲಾಂಛನ ಕಾಯ್ದೆ'ಯನ್ನು ಉಲ್ಲಂಘಿಸಿವೆ ಎಂದು ಆರೋಪಿಸಿ ಇಲ್ಲಿನ ಬಾರಾಖಾಂಬಾ ರಸ್ತೆಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ ಎಂದು ಪೊಲೀಸರು ಬುಧವಾರ ತಿಳಿಸಿದ್ದಾರೆ.

ಅವ್ನಿಶ್ ಮಿಶ್ರಾ ಎಂಬುವರು ಈ ಸಂಬಂಧ ದೂರು ನೀಡಿದ್ದು, ಇಲ್ಲಿಯವರೆಗೆ ಪ್ರಕರಣ ದಾಖಲಾಗಿಲ್ಲ ಎಂದು ಅವರು ಹೇಳಿದ್ದಾರೆ.

'ಬಿಜೆಪಿ ಆರೋಪದಲ್ಲಿ ಹುರುಳಿಲ್ಲ'

ನಿತೀಶ್ ಕುಮಾರ್

ರಾಜಗೀರ್: ವಿರೋಧ ಪಕ್ಷಗಳ ಮೈತ್ರಿಕೂಟವಾದ 'ಇಂಡಿಯಾ' ಬಗ್ಗೆ ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಮುನಿಸಿಕೊಂಡಿದ್ದಾರೆ ಎಂಬ ಬಿಜೆಪಿಯ ಆರೋಪವನ್ನು, ಸ್ವತಃ ನಿತೀಶ್ ಅವರೇ ಸಾರಾಸಗಟಾಗಿ ತಳ್ಳಿಹಾಕಿದ್ದಾರೆ.

'ಬೆಂಗಳೂರಿನ ಸಭೆಯಲ್ಲಿ ತಮಗೆ 'ಸಂಚಾಲಕ'ನ ಜವಾಬ್ದಾರಿ ನೀಡಿಲ್ಲವೆಂದು ಬೇಸರಗೊಂಡಿದ್ದ ಅವರು ಸುದ್ದಿಗೋಷ್ಠಿಯಿಂದ ದೂರ ಉಳಿದಿದ್ದರು' ಎಂದು ಬಿಜೆಪಿ ನಾಯಕ ಸುಶೀಲ್ ಕುಮಾರ್ ಮೋದಿ ಆರೋಪಿಸಿದ್ದು, ತೀವ್ರ ಚರ್ಚೆಗೆ ಗ್ರಾಸವಾಗಿತ್ತು.

ಬುಧವಾರ ಇದಕ್ಕೆ ಪ್ರತಿಕ್ರಿಯಿಸಿರುವ ನಿತೀಶ್, 'ಸುಶೀಲ್ ಕುಮಾರ್ ಮೋದಿ ಅವರ ಮಾತುಗಳನ್ನು ಯಾರೂ ಗಂಭೀರವಾಗಿ ಪರಿಗಣಿಸುವುದಿಲ್ಲ. ಅವರ ಆರೋಪದಲ್ಲಿ ಹುರುಳಿಲ್ಲ. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ದೂಳೀಪಟವಾಗುವುದು ನಿಶ್ಚಿತ' ಎಂದರು.

ಸಂಕ್ಷಿಪ್ತ ಸುದ್ದಿ

ವ್ಯಕ್ತಿ ಮೇಲೆ ಮೂತ್ರ ವಿಸರ್ಜನೆ, ಆರು ಮಂದಿ ಬಂಧನ

ಒಂಗೋಲು, ಆಂಧ್ರಪ್ರದೇಶ (ಪಿಟಿಐ): ಮಧ್ಯಪ್ರದೇಶದ ಸೀದೀಯಲ್ಲಿ ಬುಡಕಟ್ಟು ಜನಾಂಗದ ವ್ಯಕ್ತಿ ಮೇಲೆ ಮೂತ್ರ ವಿಸರ್ಜಿಸಿದ್ದ ಪ್ರಕರಣವಿನ್ನೂ ಜನಮಾನಸದಿಂದ ಮರೆಯಾಗಿಲ್ಲ, ಅಷ್ಟರಲ್ಲಿ ಅಂಥದ್ದೇ ಪ್ರಕರಣ ಆಂಧ್ರಪ್ರದೇಶದ ಪ್ರಕಾಶಂ ಜಿಲ್ಲೆಯ ಒಂಗೋಲು ಪಟ್ಟಣದಲ್ಲಿ ನಡೆದಿರುವುದು ತಡವಾಗಿ ಬೆಳಕಿಗೆ ಬಂದಿದೆ. ಪ್ರಕರಣಕ್ಕೆ ಸಂಬಂಧಿಸಿ ಆರು ಜನರನ್ನು ಪೊಲೀಸರು ಬಂಧಿಸಿದ್ದಾರೆ.

ಬುಡಕಟ್ಟು ಸಮುದಾಯದ ಮೋಟ ನವೀನ್ ಎಂಬಾತ ಯುವತಿಯೊಬ್ಬಳನ್ನು ಪ್ರೀತಿಸುತ್ತಿದ್ದ ಎಂಬ ಕಾರಣಕ್ಕೆ ಆತನನ್ನು ಥಳಿಸಿ, ಆತನ ಮೇಲೆ ಮೂತ್ರ ವಿಸರ್ಜಿಸಲಾಗಿದೆ. ಈ ಪ್ರಕರಣ ಜೂನ್ 19ರಂದು ನಡೆದಿದೆ.

ಮನ್ನಂ ರಾಮಾಂಜನೇಯುಲು ಮತ್ತು ಇತರ ಎಂಟು ಜನರು ಪ್ರಕರಣದ ಆರೋಪಿಗಳು. ರಾಮಾಂಜನೇಯುಲು ತಲೆಮರಿಸಿಕೊಂಡಿದ್ದಾನೆ. ಎಂಟು ಆರೋಪಿಗಳಲ್ಲಿ ಇಬ್ಬರು ಚಿಕ್ಕ ವಯಸ್ಸಿನವರು ಎಂದು ಪ್ರಕಾಶಂ ಜಿಲ್ಲೆಯ ಎಸ್‌ಪಿ ಮಲ್ಲಿಕಾ ಗಾರ್ಗ್ ಅವರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಡಿಎಂಕೆ ಮತ್ತೊಬ್ಬ ಸಚಿವರ ಮೇಲೆ ಇ.ಡಿ ಕಣ್ಣು

ಚೆನ್ನೈ: ಜಾರಿ ನಿರ್ದೇಶನಾಲಯವು (ಇ.ಡಿ) ಈಗ ತಮಿಳುನಾಡಿನ ಪಶುಸಂಗೋಪನಾ ಸಚಿವ ಅನಿತಾ ರಾಧಾಕೃಷ್ಣನ್ ಅವರತ್ತ ತನ್ನ ದೃಷ್ಟಿನೆಟ್ಟಿದೆ. ಅವರ ವಿರುದ್ಧ ಬಾಕಿ ಇರುವ, ಆದಾಯಕ್ಕೂ ಮೀರಿದ ಆಸ್ತಿಗಳಿಕೆ ಪ್ರಕರಣದಲ್ಲಿ ತಮಿಳುನಾಡಿನ ಜಾಗೃತಿ ಮತ್ತು ಭ್ರಷ್ಟಾಚಾರ ನಿಗ್ರಹ ನಿರ್ದೇಶನಾಲಯಕ್ಕೆ ನೆರವು ನೀಡಲು ಅನುಮತಿ ಕೋರಿ ಸ್ಥಳೀಯ ನ್ಯಾಯಾಲಯದ ಬಾಗಿಲು ತಟ್ಟಿದೆ.

11 ವರ್ಷಗಳ ಹಳೆ ಪ್ರಕರಣದಲ್ಲಿ ಉನ್ನತ ಶಿಕ್ಷಣ ಸಚಿವ ಕೆ. ಪೊನ್ಮುಡಿ ಮತ್ತು ಅವರ ಪುತ್ರ, ಸಂಸದ ಗೌತಮ್ ಸಿಗಾಮಣಿ ಅವರಿಗೆ ಸಂಬಂಧಿಸಿದ ಪ್ರದೇಶಗಳಲ್ಲಿ ಇ.ಡಿ ಶೋಧ ನಡೆಸಿ, ಅವರನ್ನು ವಿಚಾರಣೆಗೆ ಒಳಪಡಿಸಿರುವ ಮಧ್ಯೆಯೇ ಈ ಬೆಳವಣಿಗೆಯೂ ನಡೆದಿದೆ. ಈಗಾಗಲೇ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಸಚಿವ ವಿ. ಸೆಂಥಿಲ್ ಬಾಲಾಜಿ ಅವರನ್ನು ಇ.ಡಿ ಬಂಧಿಸಿತ್ತು.

ರಾಧಾಕೃಷ್ಣನ್ ಅವರ ವಿರುದ್ಧ ನಿರ್ಣಾಯಕ ಪುರಾವೆಗಳನ್ನು ಸಂಗ್ರಹಿಸಲಾಗಿದ್ದು, ಈ ಪ್ರಕರಣದಲ್ಲಿ ಡಿವಿಎಸಿಗೆ ಸಹಾಯ ಮಾಡಲು ಅನುಮತಿ ನೀಡುವಂತೆ ಇ.ಡಿಯು ತೂತುಕುಡಿಯ ಪ್ರಧಾನ ಜಿಲ್ಲಾ ನ್ಯಾಯಾಲಯದಲ್ಲಿ ಮನವಿ ಮಾಡಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Vishal : 9845114560

Jerry : 9731810277 | Tanveer : 9886213331

Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ

https://homages.deccanherald.com

ಅಥವಾ QR code ಸ್ಕ್ಯಾನ್ ಮಾಡಿ

ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

'ಕಾಂಗ್ರೆಸ್‌ನಂತೆ ಮೋದಿ ಕಲ್ಯಾಣ ಕಾರ್ಯಕ್ರಮ ಜಾರಿಗೊಳಿಸಲಿ'

ನವದೆಹಲಿ (ಪಿಟಿಐ): ಕರ್ನಾಟಕ ಸರ್ಕಾರ ಜಾರಿ ಮಾಡಿರುವ ಗೃಹ ಲಕ್ಷ್ಮಿ ಯೋಜನೆಯನ್ನು 'ಬಿಜೆಪಿ ಸೃಷ್ಟಿಸಿರುವ ಹಣದುಬ್ಬರಕ್ಕೆ ಮದ್ದು' ಎಂದು ಕರೆದಿರುವ ಕಾಂಗ್ರೆಸ್, ಯೋಜನೆಯಿಂದ ಉತ್ತೇಜನ ಪಡೆದು ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿ ಮಾಡುವಂತೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಒತ್ತಾಯಿಸಿದೆ.

ಈ ಕುರಿತು ಟ್ವೀಟ್ ಮಾಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಅವರು, 'ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಜಾರಿ ಮಾಡಿರುವ ಗೃಹ ಲಕ್ಷ್ಮಿ ಯೋಜನೆಯ ವಾರ್ಷಿಕ ಅಂದಾಜು ವೆಚ್ಚ ₹30,000 ಕೋಟಿ. ಸುಮಾರು 1.26 ಕೋಟಿ ಮಹಿಳೆಯರು ಇದರ ಫಲಾನುಭವಿಗಳಾಗಲಿದ್ದಾರೆ. ಮಹಿಳಾ ಸಬಲೀಕರಣಕ್ಕಾಗಿ ರಾಜ್ಯ ಸರ್ಕಾರವೊಂದು ಜಾರಿ ಮಾಡಿರುವ ಅತ್ಯಂತ ದೊಡ್ಡ ಹಣಕಾಸು ಭದ್ರತಾ ಯೋಜನೆಯಿದು' ಎಂದು ಕರ್ನಾಟಕ ಸರ್ಕಾರವನ್ನು ಬಣ್ಣಿಸಿದ್ದಾರೆ .

ಮನೆಗೆಲಸದ ಬಾಲಕಿ ಮೇಲೆ ಹಲ್ಲೆ ಮಹಿಳಾ ಪೈಲಟ್, ಪತಿಗೆ ಥಳಿತ

ನವದೆಹಲಿ (ಪಿಟಿಐ); ನೈಋತ್ಯ ದೆಹಲಿಯ ದ್ವಾರಕಾದಲ್ಲಿ ಮನೆಗೆಲಸ ಮಾಡುತ್ತಿದ್ದ 10 ವರ್ಷದ ಬಾಲಕಿ ಮೇಲೆ ದೌರ್ಜನ್ಯ ನಡೆಸಲಾಗಿದೆ ಎಂದು ಆರೋಪಿಸಿ, ಗುಂಪೊಂದು ದಂಪತಿಯನ್ನು ನಡುರಸ್ತೆಯಲ್ಲೇ ಥಳಿಸಿದೆ.

ಬಾಲಕಿ ಮೇಲೆ ದೌರ್ಜನ್ಯ ನಡೆಸಿದ ಆರೋಪಿ ದಂಪತಿ ಕೌಶಿಕ್ ಬಾಗ್ಚಿ (36) ಮತ್ತು ಪೂರ್ಣಿಮಾ ಬಾಗ್ಚಿ (33) ಅವರನ್ನು ಬಂಧಿಸಲಾಗಿದೆ.

ಪೊಲೀಸರ ಪ್ರಕಾರ, ಸಂತ್ರಸ್ತೆಯ ಕಣ್ಣುಗಳ ಮೇಲೆ ಗಾಯಗಳಿವೆ ಮತ್ತು ಅವಳ ದೇಹದ ಮೇಲೆ ಸುಟ್ಟ ಗುರುತುಗಳಿವೆ.

ಈ ನಡುವೆ, ಘಟನೆ ಕುರಿತು ವರದಿ ಸಲ್ಲಿಸುವಂತೆ ಜಿಲ್ಲಾ ಮ್ಯಾಜಿಸ್ಟ್ರೇಟ್‌ಗೆ ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ (ಎನ್‌ಸಿಪಿಸಿಆರ್) ಸೂಚಿಸಿದೆ.

ಆರೋಪಿಗಳ ವಿರುದ್ಧದ ಎಫ್‌ಐಆರ್ ಪ್ರತಿಗಳು, ಸಂತ್ರಸ್ತ ಬಾಲಕಿಯ ವೈದ್ಯಕೀಯ ವರದಿ ಹಾಗೂ ಸಂಬಂಧಪಟ್ಟ ಇತರ ದಾಖಲೆಗಳನ್ನು ಏಳು ದಿನಗಳ ಒಳಗಾಗಿ ಸಲ್ಲಿಸುವಂತೆ ಆಯೋಗ ಸೂಚಿಸಿದೆ.

ಮಹಿಳೆ ಖಾಸಗಿ ವಿಮಾನಯಾನ ಸಂಸ್ಥೆಯಲ್ಲಿ ಪೈಲಟ್ ಆಗಿ ಕೆಲಸ ಮಾಡುತ್ತಿದ್ದು, ಆಕೆಯ ಪತಿ ಮತ್ತೊಂದು ವಿಮಾನಯಾನ ಸಂಸ್ಥೆಯಲ್ಲಿ ಗ್ರೌಂಡ್ ಸ್ಟಾಫ್ ಆಗಿ ಕೆಲಸ ಮಾಡುತ್ತಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆ ಗೊತ್ತಾದ ನಂತರ, ದಂಪತಿಯನ್ನು ಸಂತ್ರಸ್ತೆಯ ಸಂಬಂಧಿಕರು ಥಳಿಸಿದ್ದಾರೆ.

ಈ ಕುರಿತ ವಿಡಿಯೊದಲ್ಲಿ ದಂಪತಿಯನ್ನು ಗುಂಪು ಥಳಿಸುವುದನ್ನು ಕಾಣಬಹುದು. ಕೆಲ ಮಹಿಳೆಯರು ಸಮವಸ್ತ್ರದಲ್ಲಿದ್ದ ಆರೋಪಿ ಮಹಿಳೆಯ ಕಪಾಳಮೋಕ್ಷ ಮಾಡಿ, ಕೂದಲು ಎಳೆಯುತ್ತಿರುವುದು ಕಂಡುಬಂದಿದೆ.

ಉಪ ಪೊಲೀಸ್ ಆಯುಕ್ತ (ದ್ವಾರಕಾ) ಎಂ.ಹರ್ಷವರ್ಧನ್ ಮಾತನಾಡಿ, 'ಎರಡು ತಿಂಗಳಿನಿಂದ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಬಾಲಕಿ ಮೇಲೆ ದಂಪತಿ ದೌರ್ಜನ್ಯ ನಡೆಸಿದ್ದಾರೆ ಎಂದು ತಿಳಿದು ಬಂದಿದೆ. ಈ ವಿಷಯ ಗಮನಕ್ಕೆ ಬಂದ ಬಳಿಕ ಸಂತ್ರಸ್ತೆಯ ಸಂಬಂಧಿಕರು ಅವರ ನಿವಾಸಕ್ಕೆ ತೆರಳಿ ದಂಪತಿ ಮೇಲೆ ಹಲ್ಲೆ ನಡೆಸಿದ್ದಾರೆ. ಹಲ್ಲೆ ನಡೆಸಿದವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದು ಹೇಳಿದ್ದಾರೆ.

ಈ ನಡುವೆ ದೆಹಲಿ ಮಹಿಳಾ ಆಯೋಗದ (ಡಿಸಿಡಬ್ಲ್ಯು) ಮುಖ್ಯಸ್ಥೆ ಸ್ವಾತಿ ಮಲಿವಾಲ್ ಈ ಘಟನೆಯನ್ನು ಖಂಡಿಸಿದ್ದಾರೆ. ಬಾಲಕಿಯನ್ನು ಮನೆಗೆಲಸಕ್ಕೆ ಇಟ್ಟುಕೊಂಡು ಚಿತ್ರಹಿಂಸೆ ನೀಡಿದವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಅಲಕನಂದಾ ನದಿ ದಂಡೆಯಲ್ಲಿ ಅವಘಡ: ನ್ಯಾಯಾಂಗ ತನಿಖೆಗೆ ಆದೇಶ

ವಿದ್ಯುತ್ ಪ್ರವಹಿಸಿ 15 ಮಂದಿ ದಾರುಣ ಸಾವು

ಗೋಪೇಶ್ವರ/ ಡೆಹ್ರಾಡೂನ್ (ಪಿಟಿಐ): ಉತ್ತರಾಖಂಡದ ಚಮೋಲಿ ಜಿಲ್ಲೆಯ ಅಲಕನಂದಾ ನದಿ ದಂಡೆಯಲ್ಲಿ ಬುಧವಾರ 'ನಮಾಮಿ ಗಂಗೆ' ಯೋಜನೆಯ ಕೆಲಸ ನಿರ್ವಹಿಸುತ್ತಿದ್ದ ವೇಳೆ ಏಕಾಏಕಿ ವಿದ್ಯುತ್ ಪ್ರವಹಿಸಿದ್ದರಿಂದ 15 ಮಂದಿ ದಾರುಣವಾಗಿ ಮೃತಪಟ್ಟಿದ್ದು, ಏಳು ಮಂದಿ ತೀವ್ರ ಗಾಯಗೊಂಡಿದ್ದಾರೆ.

ನದಿ ದಂಡೆಯಲ್ಲಿರುವ ಒಳಚರಂಡಿ ಸಂಸ್ಕರಣಾ ಘಟಕದಲ್ಲಿ ಕೆಲಸ ನಿರ್ವಹಿಸುತ್ತಿದ್ದಾಗ ಈ ಅವಘಡ ಸಂಭವಿಸಿದೆ. ಮೃತಪಟ್ಟವರ ಪೈಕಿ ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ ಪ್ರದೀಪ್ ರಾವತ್ ಸೇರಿದಂತೆ ಮೂವರು ಗೃಹರಕ್ಷಕರೂ ಸೇರಿದ್ದಾರೆ. ಗಾಯಾಳುಗಳ ನೆರವಿಗೆ ಹೆಲಿಕಾಪ್ಟರ್ ಬಳಸಿಕೊಳ್ಳಲಾಗಿದ್ದು, ಎಲ್ಲರನ್ನೂ ಋಷಿಕೇಶದ ಏಮ್ಸ್‌ಗೆ ದಾಖಲಿಸಲಾಗಿದೆ.

ದುರಂತದ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿರುವ ಉತ್ತರಾಖಂಡ ಸರ್ಕಾರವು, ನ್ಯಾಯಾಂಗ ತನಿಖೆಗೆ ಆದೇಶಿಸಿದೆ. ಜಿಲ್ಲಾ ಹೆಚ್ಚುವರಿ ನ್ಯಾಯಾಧೀಶ ಡಾ.ಅಭಿಷೇಕ್ ತ್ರಿಪಾಠಿ ಅವರಿಗೆ ತನಿಖೆಯ ಹೊಣೆ ನೀಡಲಾಗಿದ್ದು, ಒಂದು ವಾರದೊಳಗೆ ಘಟನೆಗೆ ನಿಖರ ಕಾರಣವನ್ನು ಪತ್ತೆಹಚ್ಚಿ ವರದಿ ಸಲ್ಲಿಸಲು ಆದೇಶದಲ್ಲಿ ತಿಳಿಸಲಾಗಿದೆ.

ಉತ್ತರಾಖಂಡದ ಚಮೋಲಿ ಜಿಲ್ಲೆಯ ಅಲಕನಂದಾ ನದಿ ದಂಡೆಯಲ್ಲಿ 'ನಮಾಮಿ ಗಂಗೆ' ಯೋಜನೆಯ ಕೆಲಸದಲ್ಲಿ ತೊಡಗಿದ್ದ ವೇಳೆ ವಿದ್ಯುತ್ ಪ್ರವಹಿಸಿ ಗಾಯಗೊಂಡವರನ್ನು ಹೆಲಿಕಾಪ್ಟರ್ ಮೂಲಕ ಋಷಿಕೇಶದ ಏಮ್ಸ್‌ಗೆ ದಾಖಲಿಸಲು ಕರೆದೊಯ್ಯಲಾಯಿತು –ಪಿಟಿಐ ಚಿತ್ರ

ದುರಂತ ಸಂಭವಿಸಿದ್ದು ಹೇಗೆ?: ಗಂಗಾ ನದಿಯ ಶುದ್ಧೀಕರಣ ಹಾಗೂ ನದಿ ವ್ಯಾಪ್ತಿಯ ಮಾಲಿನ್ಯ ಪ್ರಮಾಣ ತಗ್ಗಿಸುವುದೇ 'ನಮಾಮಿ ಗಂಗೆ' ಯೋಜನೆಯ ಮುಖ್ಯ ಉದ್ದೇಶ. ಈ ಯೋಜನಾ ಸ್ಥಳದಲ್ಲಿರುವ ವಿದ್ಯುತ್ ಪರಿವರ್ತಕದ ಬಳಿಯ ಸಂಸ್ಕರಣಾ ಘಟಕದಲ್ಲಿ ಅವಘಡ ಸಂಭವಿಸಿದೆ.

> ದುರಂತದ ಬಗ್ಗೆ ತನಿಖೆಗೆ ಆದೇಶಿಸಲಾಗಿದೆ. ವರದಿ ಬಂದ ಬಳಿಕ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಜರುಗಿಸುವುದು ನಿಶ್ಚಿತ
>
> **ಪುಷ್ಕರ್ ಸಿಂಗ್ ಧಾಮಿ,** ಮುಖ್ಯಮಂತ್ರಿ, ಉತ್ತರಾಖಂಡ

'ಬೆಳಿಗ್ಗೆ 11.30ಗಂಟೆ ಸುಮಾರಿಗೆ ಘಟಕದಲ್ಲಿ ಅಳವಡಿಸಿದ್ದ ಕಬ್ಬಿಣದ ಕಂಬಿಗಳ ಮೂಲಕ ವಿದ್ಯುತ್ ಪ್ರವಹಿಸಿದೆ. ಬಹುತೇಕರು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ವಿದ್ಯುತ್ ಪ್ರವಹಿಸಿದ್ದು ಹೇಗೆ ಎಂಬ ಬಗ್ಗೆ ಸಮಗ್ರ ತನಿಖೆ ನಡೆಸಲಾಗುತ್ತಿದೆ' ಎಂದು ಚಮೋಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರಮೇಂದ್ರ ಡೊಭಾಲ್ ತಿಳಿಸಿದ್ದಾರೆ.

ಸುದ್ದಿ ತಿಳಿದ ತಕ್ಷಣ ದುರಂತ ನಡೆದ ಸ್ಥಳಕ್ಕೆ ತೆರಳಿದ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಸಂತ್ರಸ್ತ ಕುಟುಂಬಗಳಿಗೆ ಸಾಂತ್ವನ ಹೇಳಿದರು. ಮೃತಪಟ್ಟವರ ಕುಟುಂಬಗಳಿಗೆ ತಲಾ ₹5 ಲಕ್ಷ ಹಾಗೂ ಗಾಯಾಳುಗಳ ಚಿಕಿತ್ಸೆಗೆ ತಲಾ ₹1 ಲಕ್ಷ ಪರಿಹಾರ ಘೋಷಿಸಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164

9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266 /9611221244

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ ತಿಂಗಳಿಗೆ 18,000-22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು,ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ.ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 15,000/- . ಬೆಂಗಳೂರು- 56.ಸಂಪರ್ಕಿಸಿ : 9606523337, 9606385001

Wanted

ಕಂಪನಿ ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ.16,000-45,000. SSLC, PUC, DEGREEPASS/FAIL 9945791526 / 9945721526

ಎಂಎನ್ಸಿಗೆ &ಇತರೆ ಕಂಪನಿಗಳಿಗೆ ಡಿಪ್ಲೋಮಾ ಮೆಕ್ಯಾನಿಕಲ್ಸ್, ಎಲೆಕ್ಟ್ರಿಕಲ್ಸ್ /ಹೊರದೇಶದ ಕಂಪೆನಿಗಳಿಗೆ ಯುಕೆ ಯುಎಸ್‌ಎ ಕೆನಡಾ ಕೆಲಸಕ್ಕೆ ಬೇಕಾಗಿದ್ದಾರೆ: 8892501007/ 9606701007

ಪ್ರವಾಸ

Travel

9 ದಿನಗಳ ಕಾಶಿ,ಗಯಾ ಅಲಹಾಬಾದ್. 8 ದಿನಗಳ ನೇಪಾಳ,ಮುಕ್ತಿನಾಥ ವಿಶೇಷ. 8 ದಿನಗಳ ಸಿಂಗಾಪುರ್ ಮಲೇಶಿಯಾ. 5 ದಿನಗಳ ಬಾಲಿ. ಹಾಗು ಇತರೆ ಪ್ರವಾಸಗಳಿಗೆ ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್. ಬಸವನಗುಡಿ ಬೆಂಗಳೂರು.04. 9880079588 9900080796

8 ದಿನಗಳ ಕಾಶಿಯಾತ್ರೆ, 12ದಿನಗಳ ಚಾರ್‌ಧಾಮ್‌ಯಾತ್ರೆ, 12 ದಿನಗಳ ನೇಪಾಳ, ಮುಕ್ತಿನಾಥ್, 10 ದಿನಗಳ ಗುಜರಾತ್, ಸಂಪರ್ಕಿಸಿ: ಶ್ರೀನಂದಿ ಹಾಲಿಡೇಸ್ 9980270467, 9740228186

20.09.2023 12 ದಿನಗಳು ಚಾರ್ ಧಾಮ್. 05.12.2023 9 ದಿನಗಳು ಕಾಶಿ,ಅಯೋಧ್ಯಾ, ಗಯಾ,ಕೋಲ್ಕತಾ ಪುರಿಜಗನ್ನಾಥ್ ಸಂಪರ್ಕಿಸಿ: ವಿಜಯ ಟ್ರಾವಲ್ಸ್ ಬೆಂಗಳೂರು. 9448294477

Pilgrimage Tours

SML ಪ್ರವಾಸಗಳು14/8 ಪುರಿ ಜಗನ್ನಾಥ್, ಭುನೇಶ್ವರ.28/8: ಶಿರಡಿ 3 ಜ್ಯೋತಿರ್ಲಿಂಗ 29/8 ಕಾಶಿ, ಜಾರ್ಖಂಡ್ ಬೈದ್ಯನಾಥ್ 9591017782.

ಸಾರ್ವಜನಿಕ ಪ್ರಕಟಣೆ

NOTICE INVITING SHORT TENDER

HDCK P&A/K BGER/2023-24/642

HANDICRAFTS DEVELOPMENT CORPORATION OF KERALA LIMITED (HDCK LTD) invite sealed tenders in two cover system for "Interior Decoration of Showroom Kairal at Kammanahalli Main Road, Bangalore from well-reputed contractors qualified for executing such works. The last date & time of receipt of technical & financial bid 25.07.2023 at 3.30pm. The date & time of opening of technical bid 25.07.2023 at 4:30 pm. Only the bids of tenders who satisfy the technical parameters and whose design/layout/estimate is approved will be considered for financial bid.

Bid opening Venne- Head Office, Handicrafts Development Corporation of Kerala Ltd. Puthenchanthai, Thiruvananthapuram. The detailed tender document with Aunexures may be obtained from website: www.handicrafts.kerala.gov.in

Sd/- Managing Director

Handicrafts Development Corporation of Kerala Lid Puthenchanthai Post, Thiruvananthapuram- 695 001. Kerala Tel: +91-471-2331358, 2778400 www.handicrafts.kerala.gov.in e-mail: hockeralagmail.com

25-07-2023

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು ದೇವನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ, ಸಾದಹಳ್ಳಿ ಗ್ರಾಮದ ಸರ್ವೆ ನಂ.103/2ರ 6 ಎಕರೆ 25 ಗುಂಟೆ ಒಟ್ಟು ವಿಸ್ತೀರ್ಣವುಳ್ಳ ಕೃಷಿ ಜಮೀನನ್ನು ಖರೀದಿಸಲು ಇಚ್ಛಿಸಿರುತ್ತಾರೆ.

ಪೂರ್ವಕ್ಕೆ : ನಾಲೆ,

ಪಶ್ಚಿಮಕ್ಕೆ : ರಸ್ತೆ ಮತ್ತು ಸರ್ವೆ ನಂ. 103/3 ಶ್ರೀ ಚಿಕ್ಕಕದಿರಪ್ಪನವರಿಗೆ ಸೇರಿದ ಸ್ವತ್ತು ಮತ್ತು ಸರ್ವೆ ನಂ.133 ಮತ್ತು 134

ಉತ್ತರಕ್ಕೆ : ರಸ್ತೆ;

ದಕ್ಷಿಣಕ್ಕೆ : ಸರ್ವೆ.ನಂ. 103/1 ಶ್ರೀ ಸುಬ್ಬಣ್ಣ ಮತ್ತು ಶ್ರೀ ಮುನಿಯಪ್ಪನವರಿಗೆ ಸೇರಿದ ಸ್ವತ್ತು

ಮಾಲೀಕರಾದ ಶ್ರೀ ಮಹಮ್ಮದ್ ಮನ್ಸೂರ್ ಅಹಮದ್ ಶರೀಫ್ ಬಿನ್ ಲೇಟ್ ಎಮ್. ಎಚ್. ಶರೀಫ್ ರವರಿಂದ ಖರೀದಿಸಲು ಇಚ್ಛಿಸಿರುತ್ತಾರೆ.

ಯಾವುದೇ ವ್ಯಕ್ತಿಗಳು ಈ ಮೇಲೆ ತಿಳಿಸಿದ ಸ್ವತ್ತಿನ ಸಂಬಂಧ ಯಾವುದೇ ಹಕ್ಕನ್ನು ಹೊಂದಿದ್ದರೆ ತಮ್ಮ ಆಕ್ಷೇಪಣೆಗಳು / ಕ್ಲೈಮುಗಳನ್ನು ದಾಖಲೆಯ ಸಮೇತ ಲಿಖಿತ ರೂಪದಲ್ಲಿ ಈ ಪ್ರಕಟಣೆಯಾದ 15 ದಿನಗಳ ಒಳಗಾಗಿ ಕೆಳಸಹಿದಾರರಿಗೆ ಸಲ್ಲಿಸತಕ್ಕದ್ದು.

ಪ್ರಶಾಂತ್ ವಿಜಯಲಕ್ಷ್ಮಿ ಅಂಡ್ ಅಸೋಸಿಯೇಟ್ಸ್ (ವಕೀಲರು) ನಂ. 162, 1ನೇ ಮಹಡಿ, ವೆಂಕಟೇಶ್ವರ ಮೊಬೈಲ್ ಸ್ಟೋರ್ ಮೇಲೆ, ಕಾಂತಿ ಸ್ವೀಟ್ಸ್ ಮುಂದೆ, 2ನೇ ಮೈನ್, ಕಸ್ತೂರಿನಗರ, ಬೆಂಗಳೂರು–560043.

ದೂ: 9845638758 / 080-42065536

Mail @ prashanthviji.adv@gmail.com

ಭವಿಷ್ಯ

Astrology

100% ವಶೀಕರಣ ಸ್ಪೆಷಲಿಸ್ಟ್: ಪ್ರೀತಿಯಲ್ಲಿ ನಂಬಿಮೋಸ ಹೋದವರಿಗೆ ಕಲ್ಕತ್ತಾ ಕೊಳ್ಳೇಗಾಲದ ಪೂಜೆಯಿಂದ, ಗಂಡಹೆಂಡತಿ ಸಮಸ್ಯೆಗಳಿಗೆ 3ಗಂಟೆಗಳಲ್ಲಿ ಶೀಘ್ರ ಪರಿಹಾರ. 9448687421

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD ಪ್ರಜಾವಾಣಿ

JOB CORNER

BOOK JOB ADS ON WEEKDAY + SUNDAY

@ 803/-* Per Sqcm Single Column

@ 825/-* Per Sqcm Multi Column

conditions apply*

For more information Contact:

9845114560 : 9731810277

9901641752 : 9886213331

080 - 45557163 / 164

ವೈವಾಹಿಕ ಅತ್ಯಾಚಾರ ಅಪರಾಧೀಕರಣ ಕುರಿತ ಅರ್ಜಿಗಳ ವಿಚಾರಣೆ ನಡೆಸಿದ 'ಸುಪ್ರೀಂ'

ಮೂವರು ನ್ಯಾಯಮೂರ್ತಿಗಳ ಪೀಠ ರಚನೆ

ನವದೆಹಲಿ (ಪಿಟಿಐ): ವೈವಾಹಿಕ ಅತ್ಯಾಚಾರವನ್ನು ಅಪರಾಧೀಕರಣಗೊಳಿಸುವುದಕ್ಕೆ ಸಂಬಂಧಿಸಿದ ಅರ್ಜಿಯ ವಿಚಾರಣೆಗಾಗಿ ಮೂವರು ನ್ಯಾಯಮೂರ್ತಿಗಳನ್ನು ಒಳಗೊಂಡ ನ್ಯಾಯಪೀಠ ರಚಿಸುವುದಾಗಿ ಸುಪ್ರೀಂ ಕೋರ್ಟ್ ಬುಧವಾರ ಹೇಳಿದೆ.

ಪಟ್ಟಿಯಲ್ಲಿರುವ ಅರ್ಜಿಗಳ ವಿಚಾರಣೆಯನ್ನು ಸಂವಿಧಾನ ಪೀಠ ಪೂರ್ಣಗೊಳಿಸಿದ ನಂತರ, ವೈವಾಹಿಕ ಅತ್ಯಾಚಾರವನ್ನು ಅಪರಾಧೀಕರಣಗೊಳಿಸುವ ಕುರಿತ ಅರ್ಜಿಗಳ ವಿಚಾರಣೆಯನ್ನು ಮೂವರು ನ್ಯಾಯಮೂರ್ತಿಗಳು ನಡೆಸುವರು ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಹಾಗೂ ಮನೋಜ್ ಮಿಶ್ರಾ ಅವರಿದ್ದ ಪೀಠ ಹೇಳಿದೆ.

'ನಾನು ವಾದ ಮಂಡಿಸಲಿರುವ ಪ್ರಕರಣ ಬಾಲಕಿ ಮೇಲಿನ ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿದ್ದು, ಅರ್ಜಿಯ ತುರ್ತು ವಿಚಾರಣೆ ನಡೆಸಬೇಕು' ಎಂದು ಹಿರಿಯ ವಕೀಲೆ ಇಂದಿರಾ ಜೈಸಿಂಗ್ ಕೋರಿದಾಗ ನ್ಯಾಯಪೀಠ ಈ ಮಾತನ್ನು ಹೇಳಿತು.

'ಪತ್ನಿ ಮೇಲೆ ಅತ್ಯಾಚಾರ ನಡೆಸಿದ್ದಾಗ್ಯೂ ಪತಿಯನ್ನು ವಿಚಾರಣೆಗೆ ಒಳಪಡಿಸಬಹುದು ಹಾಗೂ ಐಪಿಸಿ ಸೆಕ್ಷನ್ 375ರ ಅಡಿ ಪತಿಗೆ ನೀಡಿರುವ ವಿನಾಯಿತಿ ಪ್ರಶ್ನಾರ್ಹವಲ್ಲ ಎಂದು ಕಳೆದ ಮಾರ್ಚ್ 23ರಂದು ಕರ್ನಾಟಕ ಹೈಕೋರ್ಟ್ ತೀರ್ಪು ನೀಡಿತ್ತು. ವ್ಯಕ್ತಿ ವಿರುದ್ಧ ಪೋಕ್ಸೊ ಕಾಯ್ದೆಯಡಿಯೂ ಆರೋಪಗಳಿವೆ' ಎಂದು ಇಂದಿರಾ ಜೈಸಿಂಗ್ ನ್ಯಾಯಪೀಠದ ಗಮನಕ್ಕೆ ತಂದರು.

'ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಮೂವರು ನ್ಯಾಯಮೂರ್ತಿಗಳಿರುವ ಪೀಠವು ಈ ವಿಷಯದ ವಿಚಾರಣೆ ನಡೆಸುವುದು' ಎಂದು ಹೇಳಿತು.

ವೈವಾಹಿಕ ಅತ್ಯಾಚಾರಕ್ಕೆ ಸಂಬಂಧಿಸಿದ ಈ ಪ್ರಕರಣ ಕುರಿತು, ಕರ್ನಾಟಕ ಹೈಕೋರ್ಟ್ ಕಳೆದ ಮಾರ್ಚ್ 23ರಂದು ನೀಡಿದ್ದ ತೀರ್ಪನ್ನು ಪ್ರಶ್ನಿಸಿ ಸುಪ್ರೀಂಕೋರ್ಟ್‌ನಲ್ಲಿ ಕಳೆದ ವರ್ಷ ನವೆಂಬರ್‌ನಲ್ಲಿ ನಡೆದ ವಿಚಾರಣೆ ವೇಳೆ ಕರ್ನಾಟಕ ಸರ್ಕಾರವು ಹೈಕೋರ್ಟ್ ತೀರ್ಪನ್ನು ಬೆಂಬಲಿಸಿತ್ತು. 'ಈ ಪ್ರಕರಣದಲ್ಲಿ ಉದ್ಭವಿಸಿರುವ ಎಲ್ಲ ಕಾನೂನಾತ್ಮಕ ಅಂಶಗಳನ್ನು ಗಣನೆಗೆ ತೆಗೆದುಕೊಂಡೇ ರಾಜ್ಯ ಹೈಕೋರ್ಟ್ ಆದೇಶ ನೀಡಿದೆ' ಎಂದು ಸುಪ್ರೀಂಕೋರ್ಟ್‌ಗೆ ಸಲ್ಲಿಸಿದ್ದ ಪ್ರಮಾಣ-ಪತ್ರದಲ್ಲಿ ಕರ್ನಾಟಕ ಸರ್ಕಾರ ಹೇಳಿತ್ತು.

ಪ್ರತಿಕ್ರಿಯೆ ಕೇಳಿದ್ದ ಕೋರ್ಟ್

ವೈವಾಹಿಕ ಅತ್ಯಾಚಾರವನ್ನು ಅಪರಾಧೀಕರಣಗೊಳಿಸುವ ಕುರಿತು ಅರ್ಜಿಗಳು ಸಲ್ಲಿಕೆಯಾಗಿದ್ದವು. ಅಲ್ಲದೇ, ಪತ್ನಿಯೊಂದಿಗೆ ಪತಿ ಬಲವಂತದ ಸಂಭೋಗ ನಡೆಸಿದ ಸಂದರ್ಭದಲ್ಲಿ, ಅತ್ಯಾಚಾರ ಎಸಗಿದ ಅಪರಾಧಕ್ಕೆ ಸಂಬಂಧಿಸಿದ ಕಾನೂನಿನಡಿ ಕ್ರಮದಿಂದ ಆತನಿಗೆ ರಕ್ಷಣೆ ನೀಡುವ ಐಪಿಸಿ ಸೆಕ್ಷನ್‌ಗಳ ಕುರಿತಾಗಿಯೂ ಅರ್ಜಿಗಳು ಸಲ್ಲಿಕೆಯಾಗಿದ್ದವು.

ಇವುಗಳ ಬಗ್ಗೆ ಪ್ರತಿಕ್ರಿಯೆ ಸಲ್ಲಿಸುವಂತೆ ಜನವರಿಯಲ್ಲಿ ಕೇಂದ್ರ ಸರ್ಕಾರಕ್ಕೆ ಸುಪ್ರೀಂಕೋರ್ಟ್ ಸೂಚಿಸಿತ್ತು.

ಈ ವಿಷಯವು ಸಾಮಾಜಿಕ ಪರಿಣಾಮಗಳನ್ನು ಹೊಂದಿದೆ ಎಂದು ಹೇಳಿದ್ದ ಕೇಂದ್ರ ಸರ್ಕಾರ, ಪ್ರತಿಕ್ರಿಯೆ ಸಲ್ಲಿಸುವುದಾಗಿ ಸುಪ್ರೀಂಕೋರ್ಟ್‌ಗೆ ತಿಳಿಸಿತ್ತು.

ಕಲ್ಲಿದ್ದಲು ಹಗರಣ: 26ಕ್ಕೆ ಶಿಕ್ಷೆ ಪ್ರಕಟ

ನವದೆಹಲಿ (ಪಿಟಿಐ): ಛತ್ತೀಸ್‌ಗಢ ಕಲ್ಲಿದ್ದಲು ಹಗರಣ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ರಾಜ್ಯಸಭಾ ಸದಸ್ಯ ವಿಜಯ್ ದರ್ಡಾ ಮತ್ತು ಮಾಜಿ ಕಲ್ಲಿದ್ದಲು ಕಾರ್ಯದರ್ಶಿ ಎಚ್.ಸಿ. ಗುಪ್ತಾ ಮತ್ತಿತರ ಶಿಕ್ಷೆಯ ಪ್ರಮಾಣವನ್ನು ದೆಹಲಿ ನ್ಯಾಯಾಲಯ ಜುಲೈ 26ರಂದು ಪ್ರಕಟಿಸಲಿದೆ.

ಮಂಗಳವಾರ ಪ್ರಕರಣದ ವಿಚಾರಣೆ ನಡೆಸಿದ ವಿಶೇಷ ನ್ಯಾಯಾಧೀಶ ಸಂಜಯ್ ಬನ್ಸಲ್ ಅವರು ಸಿಬಿಐ ಮತ್ತು ಆರೋಪಿಗಳ ಪರ ವಕೀಲರ ವಾದವನ್ನು ಆಲಿಸಿ ತೀರ್ಪನ್ನು ಕಾಯ್ದಿರಿಸಿದ್ದರು. ಜುಲೈ 13ರಂದು ದರ್ಡಾ, ಗುಪ್ತಾ ಸೇರಿದಂತೆ ಏಳು ಮಂದಿಯನ್ನು ದೋಷಿಗಳೆಂದು ಕೋರ್ಟ್ ತೀರ್ಪು ನೀಡಿತ್ತು.

ತೀಸ್ತಾ ಸೆಟಲ್ವಾಡ್‌ಗೆ ಜಾಮೀನು

ನವದೆಹಲಿ (ಪಿಟಿಐ): ಗೋಧ್ರೋತ್ತರ ಗಲಭೆಗಳ ಪ್ರಕರಣದಲ್ಲಿ ಸಾಮಾಜಿಕ ಹೋರಾಟಗಾರ್ತಿ ತೀಸ್ತಾ ಸೆಟಲ್ವಾಡ್ ಅವರಿಗೆ ಸುಪ್ರೀಂ ಕೋರ್ಟ್ ಬುಧವಾರ ನಿಯಮಿತ (ರೆಗ್ಯುಲರ್) ಜಾಮೀನು ನೀಡಿದೆ.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ, ಎ.ಎಸ್.ಬೋಪಣ್ಣ ಮತ್ತು ದೀಪಂಕರ್ ದತ್ತ ಅವರಿದ್ದ ಪೀಠ, ನಿಯಮಿತ ಜಾಮೀನು ಕೋರಿ ತೀಸ್ತಾ ಸೆಟಲ್ವಾಡ್ ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸಿ ಗುಜರಾತ್ ಹೈಕೋರ್ಟ್ ನೀಡಿದ್ದ ಆದೇಶವನ್ನು ರದ್ದುಗೊಳಿಸಿತು.

'ಈ ಪ್ರಕರಣದಲ್ಲಿ ಸೆಟಲ್ವಾಡ್ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿಯನ್ನು ಈಗಾಗಲೇ ಸಲ್ಲಿಸಿರುವ ಕಾರಣ, ಅವರನ್ನು ಕಸ್ಟಡಿಗೆ ತೆಗೆದುಕೊಂಡು ವಿಚಾರಣೆಗೆ ಒಳಪಡಿಸುವ ಅಗತ್ಯ ಇಲ್ಲ' ಎಂದು ನ್ಯಾಯಪೀಠ ಹೇಳಿತು.

'ಮೇಲ್ಮನವಿದಾರರು (ಸೆಟಲ್ವಾಡ್) ಒಪ್ಪಿಸಿರುವ ಅವರ ಪಾಸ್‌ಪೋರ್ಟ್ ಸೆಷನ್ಸ್ ಕೋರ್ಟ್ ವಶದಲ್ಲಿದೆ. ಅವರು ಸಾಕ್ಷಿಗಳ ಮೇಲೆ ಪ್ರಭಾವ ಬೀರುವ ಪ್ರಯತ್ನ ಮಾಡಬಾರದು. ಅವರಿಂದ ದೂರ ಇರಬೇಕು' ಎಂದೂ ನ್ಯಾಯಪೀಠ ಸೂಚಿಸಿತು.

'ಒಂದು ವೇಳೆ ಸಾಕ್ಷಿಗಳ ಮೇಲೆ ಪ್ರಭಾವ ಬೀರುವ ಪ್ರಯತ್ನ ನಡೆದದ್ದು ಕಂಡುಬಂದಲ್ಲಿ ಗುಜರಾತ್ ಪೊಲೀಸರು ನೇರವಾಗಿ ಸುಪ್ರೀಂಕೋರ್ಟ್‌ಗೆ ಬರಬಹುದು' ಎಂದೂ ಸ್ಪಷ್ಟಪಡಿಸಿತು.

ಗುಜರಾತಿನ ವೇರಾವಲ್‌ನಲ್ಲಿ ಬುಧವಾರ ಪ್ರವಾಹದಲ್ಲಿ ಸಿಲುಕಿದ್ದ ಜನರನ್ನು ರಕ್ಷಿಸಲಾಯಿತು –ಪಿಟಿಐ ಚಿತ್ರ

ಭೂಕುಸಿತ: ಐವರು ಮಕ್ಕಳು ಸೇರಿ 8 ಮಂದಿ ಸಾವು

ಮಹಾರಾಷ್ಟ್ರ, ಗುಜರಾತ್, ಜಮ್ಮುವಿನಲ್ಲಿ ಭಾರಿ ಮಳೆ

ಜಮ್ಮು, ಮಹಾರಾಷ್ಟ್ರ, ಗುಜರಾತ್ (ಪಿಟಿಐ): ಭಾರಿ ಮಳೆಯಿಂದಾಗಿ ಬುಧವಾರ ಜಮ್ಮುವಿನ ಕೆಲ ಪ್ರದೇಶಗಳಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗಿದ್ದು, ಎಂಟು ಮಂದಿ ಸಾವಿಗೀಡಾಗಿದ್ದಾರೆ. ಮಹಾರಾಷ್ಟ್ರದ ಠಾಣೆ ಮತ್ತು ಪಾಲ್ಘರ್ ಜಿಲ್ಲೆಯಲ್ಲಿ ಕೆಲ ತಗ್ಗುಪ್ರದೇಶಗಳಿಗೆ ಮಳೆನೀರು ನುಗ್ಗಿದ್ದರಿಂದ ಸುಮಾರು 250 ಕುಟುಂಬಗಳನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರ ಮಾಡಲಾಯಿತು. ಗುಜರಾತ್‌ನಲ್ಲಿ ಮಳೆಯಿಂದಾಗಿ ಕೆಲವು ಪ್ರದೇಶಗಳಲ್ಲಿ ಪ್ರವಾಹ ಉಂಟಾಗಿದ್ದು, ಜನಜೀವನ ಅಸ್ತವ್ಯಸ್ತವಾಗಿದೆ.

ಮಹಾರಾಷ್ಟ್ರದಲ್ಲಿ ಭಾರಿ ಮಳೆ ಕಾರಣ ಬುಧವಾರ ಪಾಲ್ಘರ್ ಜಿಲ್ಲೆಯ ಕೆಲವೆಡೆ ಶಾಲಾ-ಕಾಲೇಜುಗಳಿಗೆ ಜಿಲ್ಲಾಡಳಿತ ರಜೆ ಘೋಷಿಸಿತ್ತು. ಉಲ್ಲಾಸ್ (ಠಾಣೆ), ಅಂಬಾ, ಸಾವಿತ್ರಿ, ಪಾತಾಳಗಂಗ ನದಿಗಳು ಅಪಾಯದ ಮಟ್ಟ ತಲುಪಿದ್ದು, ನದಿಪ್ರದೇಶಗಳಲ್ಲಿ ಪ್ರವಾಹ ಸ್ಥಿತಿ ಉಂಟಾಗಿದೆ. .

ಸರ್ಕಾರಿ ಕಚೇರಿ ಬೇಗ ಮುಚ್ಚಲು ಸೂಚನೆ: ಮಳೆಯಿಂದಾಗಿ ಸ್ಥಳೀಯ ರೈಲು ಸೇವೆಗಳು ಮತ್ತು ರಸ್ತೆ ಸಂಚಾರದ ಮೇಲೆ ಪರಿಣಾಮ ಬೀರಿದ್ದು ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಅವರು ಮುಂಬೈ ಮತ್ತು ನೆರೆ ಹೊರೆಯ ಪ್ರದೇಶಗಳಲ್ಲಿನ ಸರ್ಕಾರಿ ಕಚೇರಿಗಳನ್ನು ಬೇಗನೆ ಮುಚ್ಚಲು ಆದೇಶಿಸಿದ್ದಾರೆ. ಮುಂಬೈನಲ್ಲಿ 14 ವರ್ಷದ ಬಾಲಕಿ ಮೋರಿಯಲ್ಲಿ ಕೊಚ್ಚಿಹೋಗಿದ್ದಾಳೆ.

ಠಾಣೆ ಜಿಲ್ಲೆಯ ಕಲ್ಯಾಣ್ ತಾಲ್ಲೂಕಿನ ಮೌರ್ಯನಗರದಲ್ಲಿನ ಹಿರಿಯ ನಾಗರಿಕರ ವಸತಿ ಸ್ಥಳದಲ್ಲಿದ್ದ ಸುಮಾರು 60 ಕುಟುಂಬಗಳನ್ನೂ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಗಿದೆ .

(ಜಮ್ಮು ವರದಿ): ಜಮ್ಮು ಮತ್ತು ಕಾಶ್ಮೀರದ ಕಥುವಾ ಜಿಲ್ಲೆಯಲ್ಲಿ ವಿವಿಧೆಡೆ ಸಂಭವಿಸಿದ ಭೂಕುಸಿತಗಳಿಂದ ಐವರು ಮಕ್ಕಳು ಸೇರಿ 8 ಮಂದಿ ಮೃತಪಟ್ಟಿದ್ದಾರೆ. ಹಲವು ಮನೆಗಳು ಹಾನಿಗೀಡಾಗಿವೆ. ಅವಶೇಷಗಳಡಿ ಸಿಲುಕಿರುವ ಮೃತದೇಹಗಳನ್ನು ರಕ್ಷಣಾ ತಂಡಗಳು ಹೊರತೆಗೆದಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಜ್ಯದ ವಿವಿಧ ಭಾಗಗಳಲ್ಲಿ ಮುಂದಿನ ಏಳು ದಿನಗಳ ಕಾಲ ವ್ಯಾಪಕವಾಗಿ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಮುನ್ಸೂಚನೆ ನೀಡಿದೆ.

(ಅಹಮದಾಬಾದ್ ವರದಿ): ಗುಜರಾತ್‌ನ ಸೌರಾಷ್ಟ್ರ ಸೇರಿದಂತೆ ಹಲವೆಡೆ ಬುಧವಾರ ಧಾರಾಕಾರ ಮಳೆಯಾಗಿದ್ದು, ತಗ್ಗು ಪ್ರದೇಶಗಳಲ್ಲಿ ನೀರು ನುಗ್ಗಿದ ಕಾರಣ ಪ್ರವಾಹ ಉಂಟಾಗಿದೆ.

ಗಿರ್ ಸೋಮನಾಥದ ವೇರಾವಲ್ ತಾಲ್ಲೂಕಿನಲ್ಲಿ ಪ್ರವಾಹಕ್ಕೆ ಸಿಲುಕಿದ ನೂರು ಜನರನ್ನು ಎನ್‌ಡಿಆರ್‌ಎಫ್ ತಂಡವು ರಕ್ಷಿಸಿದೆ.

(ಲಖನೌ ವರದಿ): ಬುಧವಾರ ಸಂಜೆ 6 ಗಂಟೆಗೆ ಮುಕ್ತಾಯವಾದಂತೆ ಕಳೆದ 24 ಗಂಟೆಗಳಲ್ಲಿ ಮಳೆ ಸಂಬಂಧಿಸಿದ ಅವಘಡಗಳಲ್ಲಿ ಉತ್ತರ ಪ್ರದೇಶದ ನಾಲ್ವರು ಮೃತಪಟ್ಟಿದ್ದಾರೆ. 14 ಜಿಲ್ಲೆಗಳ 426 ಗ್ರಾಮಗಳ 38,996 ಜನರು ಪ್ರವಾಹದಿಂದ ಸಂಕಷ್ಟಕ್ಕೀಡಾಗಿದ್ದಾರೆ ಎಂದು ರಾಜ್ಯ ಸರ್ಕಾರ ತಿಳಿಸಿದೆ.

ತೆಲಂಗಾಣದ ವರಂಗಲ್‌ನಲ್ಲಿ ಮನೆ ಕುಸಿದು ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ.

ಅಸ್ಸಾಂನಲ್ಲಿ ಮತ್ತೊಬ್ಬ ವ್ಯಕ್ತಿ ಮೃತಪಟ್ಟಿದ್ದು, ರಾಜ್ಯದಲ್ಲಿ ಈ ವರ್ಷ ಪ್ರವಾಹದಿಂದಾಗಿ ಮೃತಪಟ್ಟವರ ಸಂಖ್ಯೆ 9ಕ್ಕೆ ಏರಿದೆ.

ಮುಂಬೈ: ರೈಲು ಸೇವೆ ರದ್ದು

ಮುಂಬೈ: ಭಾರಿ ಮಳೆಯಿಂದಾಗಿ ರೈಲ್ವೆ ಹಳಿಗಳ ಮೇಲೆ ನೀರು ನಿಂತಿದ್ದರಿಂದ ಮಹಾರಾಷ್ಟ್ರದ ಠಾಣೆಯ ಜಿಲ್ಲೆಯ ಬದ್ಲಾಪುರ್ ಮತ್ತು ಅಂಬರ್‌ನಾಥ್ ವಿಭಾಗದ ನಡುವಿನ ಸ್ಥಳೀಯ ರೈಲು ಸೇವೆಯನ್ನು ಕೆಲವು ಗಂಟೆಗಳ ಕಾಲ ಬುಧವಾರ ಸ್ಥಗಿತಗೊಳಿಸಲಾಗಿತ್ತು ಎಂದು ಕೇಂದ್ರ ರೈಲ್ವೆಯ ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಡಾ.ಶಿವರಾಜ್ ತಿಳಿಸಿದ್ದಾರೆ.

ವೈಷ್ಣೋ ದೇವಿ ಯಾತ್ರೆ ಸ್ಥಗಿತ

ಜಮ್ಮು: ರಿಯಾಸಿ ಜಿಲ್ಲೆಯ ಕತ್ರಾ ಪಟ್ಟಣದಲ್ಲಿ ಅತಿ ಹೆಚ್ಚು ಮಳೆಯಾಗಿದ್ದು, ಭೂಕುಸಿತ ಭೀತಿಯ ಹಿನ್ನೆಲೆಯಲ್ಲಿ ಮಾತಾ ವೈಷ್ಣೋ ದೇವಿ ದೇಗುಲಕ್ಕೆ ತೆರಳುವ ಹೊಸ ಮಾರ್ಗವನ್ನು ಬಂದ್ ಮಾಡಲಾಗಿದೆ. ಇದರಿಂದ ಯಾತ್ರೆ ಸ್ಥಗಿತವಾಗಿದೆ.

ವೈಷ್ಣೋ ದೇವಿ ದೇಗುಲಕ್ಕೆ ಭೇಟಿ ನೀಡುವ ಯಾತ್ರಿಗಳ ಮೊದಲ ಬೇಸ್ ಕ್ಯಾಂಪ್ ಆಗಿರುವ ಕತ್ರಾದಲ್ಲಿ 315.4 ಮಿ.ಮೀ ಮಳೆಯಾಗಿದೆ. 1980ರ ಬಳಿಕ ಇಷ್ಟು ದೊಡ್ಡ ಪ್ರಮಾಣದಲ್ಲಿ ಮಳೆಯಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಮಹಾರಾಷ್ಟ್ರ: 'ವಂದೇ ಮಾತರಂ' ವಿವಾದ– ಕಲಾಪ ಮುಂದೂಡಿಕೆ

ಮುಂಬೈ (ಪಿಟಿಐ): 'ವಂದೇ ಮಾತರಂ' ಗೀತೆ ಕುರಿತ ಹೇಳಿಕೆಯಿಂದ ಉಂಟಾದ ಗದ್ದಲದ ಕಾರಣ ಮಹಾರಾಷ್ಟ್ರ ವಿಧಾನ ಸಭೆಯ ಕಲಾಪವನ್ನು ಬುಧವಾರ ಕೆಲ ಕಾಲ ಮುಂದೂಡಲಾಗಿತ್ತು.

ಕಲಾಪದ ವೇಳೆ, ಸಂಭಾಜಿನಗರ ಜಿಲ್ಲೆಯಲ್ಲಿ ನಡೆದ ಹಿಂಸಾಚಾರ ಪ್ರಕರಣದ ಕುರಿತ ಚರ್ಚೆಯನ್ನು ಕೈಗೆತ್ತಿಕೊಂಡ ಸಮಾಜವಾದಿ ಪಕ್ಷದ ಶಾಸಕ ಅಬು ಆಜ್ಮಿ ಅವರು, 'ಭಾರತದಲ್ಲಿ ವಾಸಿಸಬೇಕೆಂದರೆ ವಂದೇ ಮಾತರಂ ಗೀತೆಯನ್ನು ಕಡ್ಡಾಯವಾಗಿ ಹಾಡಬೇಕು ಎಂದು ಕೆಲವರು ಹೇಳುತ್ತಾರೆ. ನಾವು ಒಂದು ದೇವರಲ್ಲಿ ಮಾತ್ರ ನಂಬಿಕೆ ಇಟ್ಟಿರುವವರು. ಹಾಗಾಗಿ ವಂದೇ ಮಾತರಂ ಹಾಡಲಾಗುವುದಿಲ್ಲ' ಎಂದು ಹೇಳಿದರು.

ಈ ಹೇಳಿಕೆಯನ್ನು ಬಲವಾಗಿ ವಿರೋಧಿಸಿದ ಬಿಜೆಪಿ ಶಾಸಕರು ವಿಧಾನಸಭೆಯಲ್ಲಿ ಗದ್ದಲ ಎಬ್ಬಿಸಿದರು. ಶಾಂತಿ ಕಾಯ್ದುಕೊಳ್ಳಲು ಶಾಸಕರಿಗೆ ಮನವಿ ಮಾಡಿದ ಸಭಾಧ್ಯಕ್ಷ ರಾಹುಲ್ ನಾರ್ವೇಕರ್ ಅವರು, 'ಆಜ್ಮಿ ಅವರ ಹೇಳಿಕೆಯು ವಿಷಯಕ್ಕೆ ಸಂಬಂಧಿಸಿಲ್ಲ. ಪಟ್ಟಿ ಮಾಡಲಾಗಿರುವ ವಿಷಯಗಳ ಮೇಲೆ ಮಾತ್ರ ಚರ್ಚೆಯನ್ನು ಕೇಂದ್ರೀಕರಿಸಬೇಕು' ಎಂದರು.

ಆದರೂ ಬಿಜೆಪಿ ಶಾಸಕರು ಪ್ರತಿಭಟನೆ ಮುಂದುವರೆಸಿದ ಕಾರಣ ಕಲಾಪವನ್ನು 10 ನಿಮಿಷಗಳ ಕಾಲ ಅವರು ಮುಂದೂಡಿದರು.

ಬಿಜೆಪಿ ಆಕ್ರೋಶ: 'ಎಸ್‌ಪಿ ಶಾಸಕ ಅಬು ಆಜ್ಮಿ ಅವರು ವಂದೇ ಮಾತರಂ ಗೀತೆ ಕುರಿತು ನೀಡಿರುವ ಹೇಳಿಕೆಯು 'ಇಂಡಿಯಾ'ದ (ಐ.ಎನ್.ಡಿ.ಐ.ಎ.) ಆಶಯವೇ' ಎಂದು ಬಿಜೆಪಿ ಪ್ರಶ್ನಿಸಿದೆ.

ಬಿಜೆಪಿಗೆ ಎದುರಾಗಿ ರಚಿಸಲಾಗಿರುವ ವಿರೋಧ ಪಕ್ಷಗಳ ಒಕ್ಕೂಟಕ್ಕೆ 'ಇಂಡಿಯಾ' ಎಂದು ಹೆಸರಿಟ್ಟಿರುವುದನ್ನು ಆಜ್ಮಿ ಅವರ ಹೇಳಿಕೆ ಜೊತೆ ಸಮೀಕರಿಸಿ ಬಿಜೆಪಿಯ ರಾಷ್ಟ್ರೀಯ ವಕ್ತಾರ ಶಹ್ಜಾದ್ ಪೂನವಾಲ ಅವರು ಹೀಗೆ ವ್ಯಂಗ್ಯವಾಡಿದ್ದಾರೆ.

'ನಾನು ವಂದೇ ಮಾತರಂ ಹಾಡುವುದಿಲ್ಲ. ನನ್ನ ಧರ್ಮವು ಅವಕಾಶ ನೀಡದ ಕಾರಣ ಗೀತೆಗೆ ತಲೆಬಾಗುವುದಿಲ್ಲ ಎಂದು ಎಸ್‌ಪಿ ಶಾಸಕ ಅಬು ಆಜ್ಮಿ ಹೇಳಿದ್ದಾರೆ. ಎಸ್‌ಪಿ ಕೂಡಾ 'ಇಂಡಿಯಾ'ದ ಭಾಗವಾಗಿರುವ ಕಾರಣ, ಈ ಹೇಳಿಕೆ 'ಇಂಡಿಯಾ'ದ ಆಶಯವೇ ಅಥವಾ ಅದರ ವಿರೋಧಿ ಆಶಯವೇ ಎಂದು ತಿಳಿಸ ಬೇಕು' ಎಂದು ಪೂನವಾಲ ಟ್ವೀಟ್ ಮಾಡಿದ್ದಾರೆ.

ವಿರೋಧ ಪಕ್ಷಗಳ ಒಕ್ಕೂಟದ ಹೆಸರಲ್ಲಿ 'ಇಂಡಿಯಾ' ಇದೆ. ಕಾರ್ಯಸೂಚಿಯಲ್ಲಿ ಇಂಡಿಯಾ ಇಲ್ಲ ಎಂದು ಕಿಡಿಕಾರಿದ್ದಾರೆ.

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಆಜ್ಮಿ ಹೇಳಿಕೆ ಕುರಿತು ತಮ್ಮ ನಿಲುವು ಏನೆಂದು ತಿಳಿಸುತ್ತಾರಾ ಎಂದು ಪ್ರಶ್ನಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಸಾಮಾನ್ಯ ಕೋಚ್: ಕೈಗೆಟುಕುವ ದರದ ಊಟ

ನವದೆಹಲಿ (ಪಿಟಿಐ): ಸಾಮಾನ್ಯ ಕೋಚ್‌ಗಳ ಪ್ರಯಾಣಿಕರಿಗೆ ಕೈಗೆಟುಕುವ ದರದಲ್ಲಿ ಊಟ ಮತ್ತು ಕುಡಿಯುವ ನೀರನ್ನು ಒದಗಿಸಲು ಭಾರತೀಯ ರೈಲ್ವೆ ನಿರ್ಧರಿಸಿದೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಸಾಮಾನ್ಯ ಕೋಚ್‌ಗಳಿಗೆ ಹೊಂದಿಕೆಯಾಗುವ ಪ್ಲಾಟ್‌ಫಾರ್ಮ್‌ಗಳಲ್ಲಿ ಈ ಆಹಾರ ಪೂರೈಸುವ ಕೌಂಟರ್‌ಗಳನ್ನು ತೆರೆಯಲಾಗುವುದು ಎಂದು ರೈಲ್ವೆ ಮಂಡಳಿ ಹೊರಡಿಸಿರುವ ಆದೇಶದಲ್ಲಿ ತಿಳಿಸಿದೆ.

ಇಲ್ಲಿನ ಊಟವನ್ನು ಎರಡು ವರ್ಗಗಳಾಗಿ ವಿಂಗಡಿಸಲಾಗುತ್ತದೆ. 'ಟೈಪ್ ಒನ್' ಊಟವು ₹ 20 ಆಗಿದ್ದು, ಏಳು ಪೂರಿಗಳು, ಒಣ ಆಲೂ ಸಬ್ಜಿ, ಉಪ್ಪಿನಕಾಯಿ ಒಳಗೊಂಡಿರುತ್ತದೆ. 'ಟೈಪ್ ಟು' ಊಟ ₹ 50 ಆಗಿದ್ದು, ಅನ್ನ, ರಾಜ್ಮಾ, ಚೋಲೆ, ಖಿಚಡಿ, ಕುಲ್ಚಾ, ಭತುರಾ, ಪಾವ್- ಬಾಜಿ, ಮಸಾಲೆ ದೋಸೆ ಸೇರಿದಂತೆ ಕೆಲ ದಕ್ಷಿಣ ಭಾರತದ ಆಹಾರವನ್ನು ಒಳಗೊಂಡಿರುತ್ತದೆ.

ಮಣಿಪುರ: ಗುಂಪುಗಳ ಬಳಿ 6 ಲಕ್ಷ ಗುಂಡು

ಇಂಫಾಲ್ (ಪಿಟಿಐ): ಹಿಂಸಾಚಾರ ಪೀಡಿತ ಮಣಿಪುರದಲ್ಲಿ ಜನಾಂಗೀಯ ಸಂಘರ್ಷಕ್ಕಿಳಿದಿರುವ ಎರಡು ಗುಂಪುಗಳ ಬಳಿ 3 ಸಾವಿರ ಶಸ್ತ್ರಾಸ್ತ್ರಗಳು, 6 ಲಕ್ಷ ಗುಂಡುಗಳಿವೆ ಎಂದಿರುವ ಅಧಿಕಾರಿಗಳು ಮತ್ತು ತಜ್ಞರು, ನಿಷೇಧಿತ ಭಯೋತ್ಪಾದಕ ಗುಂಪುಗಳು ರಾಜ್ಯದಲ್ಲಿ ಮತ್ತೆ ಪುನರ್ ಜಾಗೃತಿಗೊಳ್ಳುವ ಎಚ್ಚರಿಕೆ ನೀಡಿದ್ದಾರೆ.

'303 ರೈಫಲ್ಸ್, ಮಧ್ಯಮ ಗಾತ್ರದ ಮೆಷಿನ್ ಗನ್‌ಗಳು, ಹಗುರವಾದ ಮೆಷಿನ್ ಗನ್‌ಗಳು, ಎಕೆ ರೈಫಲ್ಸ್, ಕಾರ್ಬೈನ್ಸ್, ಐಎನ್‌ಎಸ್‌ಎಎಸ್ ರೈಫಲ್ಸ್, ಎಂ-16 ಮತ್ತು ಎಂಪಿ5 ರೈಫಲ್ಸ್‌ಗಳು ಮೇ ತಿಂಗಳಲ್ಲಿ ಪೊಲೀಸರ ಶಸ್ತ್ರಾಗಾರದಿಂದ ಕಾಣೆಯಾಗಿವೆ. ಪೊಲೀಸರು,ವಿವಿಧ ಭದ್ರತಾ ಪಡೆಗಳ ಅಧಿಕಾರಿಗಳ ಮೇಲೆ ಇದುವರೆಗೆ ಪ್ರತಿಭಟನನಿರತರು ನಡೆಸಿದ ದಾಳಿಯಲ್ಲಿ 6 ಲಕ್ಷ ಗುಂಡುಗಳು ನಾಪತ್ತೆಯಾಗಿವೆ' ಎಂದಿದ್ದಾರೆ.

'ಐಆರ್‌ಬಿಯ 7ನೇ ಬೆಟಾಲಿಯನ್ ಹಾಗೂ ಮಣಿಪುರ ರೈಫಲ್ಸ್‌ನ 8ನೇ ಬೆಟಾಲಿಯನ್‌ನ ಕೇಂದ್ರಗಳಿಂದ 4,537 ಶಸ್ತ್ರಾಸ್ತ್ರ, 6.32 ಲಕ್ಷ ಸುತ್ತು ಗುಂಡುಗಳು ನಾಪತ್ತೆಯಾಗಿವೆ' ಎಂದೂ ಅಧಿಕಾರಿಗಳು ತಿಳಿಸಿದ್ದಾರೆ.

ಕೊರಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿ

ಸಿಂಧು ನಿರ್ಗಮನ; ಪ್ರಿಯಾಂಶು ಮುನ್ನಡೆ

ಯೋಸು (ಕೊರಿಯಾ), (ಪಿಟಿಐ): ಭಾರತದ ಪಿ.ವಿ.ಸಿಂಧು ಅವರ ಅಸ್ಥಿರ ಪ್ರದರ್ಶನ ಮುಂದುವರಿದಿದೆ. ಬುಧವಾರ ನಡೆದ ಕೊರಿಯಾ ಓಪನ್ ಸೂಪರ್ 500 ಟೂರ್ನಿಯ ಮಹಿಳೆಯರ ಸಿಂಗಲ್ಸ್ ಮೊದಲ ಸುತ್ತಿನಲ್ಲಿ ಹೋರಾಟ ತೋರಿದ ನಂತರ ಸಿಂಧು ಚೀನಾ ತೈಪೆಯ ಪೈ ಯು-ಪೊ ಎದುರು ಸೋಲನುಭವಿಸಿದರು. ಇನ್ನೊಂದೆಡೆ, ಕಿದಂಬಿ ಶ್ರೀಕಾಂತ್ ಗೆಲುವಿನ ಅಂಚಿನಿಂದ ಸೋಲಿನ ಪ್ರಪಾತಕ್ಕಿಳಿದರು.

ಆದರೆ ಭಾರತದ ಎಚ್.ಎಸ್. ಪ್ರಣಯ್ ಮತ್ತು ಪ್ರಿಯಾಂಶು ರಾಜಾವತ್ ಎರಡನೇ ಸುತ್ತಿಗೆ ಮುನ್ನಡೆದರು.

58 ನಿಮಿಷಗಳ ಕಾಲ ನಡೆದ ಪಂದ್ಯದಲ್ಲಿ 32 ವರ್ಷದ ಪೊ 21-18, 10-21, 21-13ರಲ್ಲಿ ಎರಡು ಸಲದ ಒಲಿಂಪಿಕ್ ಪದಕ ವಿಜೇತೆ ಸಿಂಧು ಮೇಲೆ ಜಯಗಳಿಸಿದರು.

ಅಗ್ರ 10ರ ಒಳಗಿರುವ ಭಾರತದ ಏಕೈಕ ಆಟಗಾರ ಪ್ರಣಯ್ ಪುರುಷರ ಸಿಂಗಲ್ಸ್‌ನಲ್ಲಿ 21-13, 21-17ರಲ್ಲಿ ಬೆಲ್ಜಿಯಮ್‌ನ ಜೂಲಿಯನ್ ಕರಾಗಿ ಅವರನ್ನು ಮಣಿಸಿದರು.

ಪ್ರಿಯಾಂಶು ರಾಜಾವತ್, 21-15, 21-19 ರಿಂದ ನೇರ ಆಟಗಳಲ್ಲಿ ಸ್ಥಳೀಯ ಆಟಗಾರ ಚೊಯ್ ಜಿ ಹೂನ್ ಅವರನ್ನು ಹಿಮ್ಮೆಟ್ಟಿಸಿದರು.

ಪ್ರಿಯಾಂಶು ರಾಜಾವತ್

ಮಿಕ್ಸೆಡ್ ಡಬಲ್ಸ್ ವಿಭಾಗದಲ್ಲಿ ಭಾರತದ ಎನ್.ಸಿಕ್ಕಿ ರೆಡ್ಡಿ- ರೋಹನ್ ಕಪೂರ್ ಜೋಡಿ 21-17, 21-17ರಲ್ಲಿ ಫಿಲಿಪ್ಪೀನ್ಸ್‌ನ ಅಲ್ವಿನ್ ಮೊರಾಡ- ಅಲಿಸ್ಸಾ ಸೆಬೆಲ್ ಲಿಯೊನಾರ್ಡೊ ಜೋಡಿಯನ್ನು ಸೋಲಿಸಿತು. ಇವರಿಬ್ಬರು ಮುಂದಿನ ಸುತ್ತಿನಲ್ಲಿ ನಾಲ್ಕನೇ ಶ್ರೇಯಾಂಕದ ಫೆಂಗ್ ಯಾನ್ ಝೆ- ಹುವಾಂಗ್ ಡಾಂಗ್ ಪಿಂಗ್ (ಚೀನಾ) ಅವರನ್ನು ಎದುರಿಸುತ್ತಾರೆ.

ಇನ್ನೊಂದೆಡೆ, ಜಪಾನ್‌ನ ಅನುಭವಿ ಆಟಗಾರ ಕೆಂಟೊ ಮೊಮೊಟಾ ವಿರುದ್ಧ ಮ್ಯಾಚ್ ಪಾಯಿಂಟ್‌ಗಾಗಿ ಸರ್ವ್ ಮಾಡುತ್ತಿದ್ದ ಕಿದಂಬಿ ಶ್ರೀಕಾಂತ್ ಎಡವಿ 21-12, 22-24, 17-21ರಲ್ಲಿ ಪರಾಭವ ಕಂಡರು. ಇದು ಶ್ರೀಕಾಂತ್ ಅವರಿಗೆ ಎರಡು ಬಾರಿಯ ಮಾಜಿ ವಿಶ್ವ ಚಾಂಪಿಯನ್ ಮೊಮೊಟಾ ವಿರುದ್ಧ ಒಟ್ಟಾರೆ 15ನೇ ಮತ್ತು ಸತತ 12ನೇ ಸೋಲು. ಕೆಲ ವರ್ಷಗಳಿಂದ ಹಿನ್ನಡೆ ಅನುಭವಿಸಿದ್ದು ಪ್ರಸ್ತುತ ವಿಶ್ವಕ್ರಮಾಂಕದಲ್ಲಿ 53ನೇ ಸ್ಥಾನಕ್ಕೆ ಸರಿದಿದ್ದಾರೆ.

ಉದಯೋನ್ಮುಖರಿಗೆ ಹಿನ್ನಡೆ: ಭಾರತದ ಕಿರಣ್ ಜಾರ್ಜ್ 17-21, 9-21ರಲ್ಲಿ ಚೀನಾ ತೈಪೆಯ ಆಟಗಾರ, ವಿಶ್ವ ಕ್ರಮಾಂಕದಲ್ಲಿ 29ನೇ ಸ್ಥಾನದಲ್ಲಿರುವ ವಾಂಗ್ ತ್ಸು ವಿ ಅವರಿಗೆ ಮಣಿದರು.

ಭಾರತದ ಆಕರ್ಷಿ ಕಶ್ಯಪ್, ತಸ್ನಿಮ್ ಮಿರ್, ಮಿಥುನ್ ಮಂಜುನಾಥ್, ಅಸ್ಮಿತಾ ಚಲಿಹಾ ಮೊದಲ ಸುತ್ತಿನಲ್ಲೇ ಹೊರಬಿದ್ದಿದ್ದಾರೆ. ಇದು ದೇಶದ ಮೊದಲ ಹಂತದ ಮತ್ತು ಎರಡನೇ ಹಂತದ ಆಟಗಾರರ ಗುಣಮಟ್ಟದಲ್ಲಿರುವ ಅಂತರವನ್ನು ಸೂಚಿಸುವಂತಿದೆ.

ಬಾಂಗ್ಲಾ ವಿರುದ್ಧ ಭಾರತಕ್ಕೆ ಜಯ

ಮೀರ್‌ಪುರ್ (ಪಿಟಿಐ): ಆಲ್‌ರೌಂಡರ್ ಜೆಮಿಮಾ ರಾಡ್ರಿಗಸ್ ಅವರು ಜೀವನ ಶ್ರೇಷ್ಠ 86 ರನ್ (78 ಎಸೆತ) ಗಳಿಸಿದರಲ್ಲದೇ, ಆಫ್ ಸ್ಪಿನ್ ದಾಳಿಯಲ್ಲಿ 3 ರನ್ನಿಗೆ ನಾಲ್ಕು ವಿಕೆಟ್ ಪಡೆದು ಭಾರತ ತಂಡ, ಎರಡನೇ ಏಕದಿನ ಪಂದ್ಯದಲ್ಲಿ ಬಾಂಗ್ಲಾದೇಶ ತಂಡದ ಮೇಲೆ 108 ರನ್ ಗೆಲುವು ಪಡೆಯುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ಬುಧವಾರ ನಡೆದ ಈ ಪಂದ್ಯದಲ್ಲಿ, ನಾಯಕಿ ಹರ್ಮನ್‌ಪ್ರೀತ್ ಕೌರ್ (52) ಮತ್ತು ಜೆಮಿಮಾ ಅವರ 73 ರನ್‌ಗಳ ನಾಲ್ಕನೇ ವಿಕೆಟ್ ಜೊತೆಯಾಟದ ನೆರವಿನಿಂದ ಭಾರತ 8 ವಿಕೆಟ್‌ಗೆ 228 ರನ್‌ಗಳ ಉತ್ತಮ ಮೊತ್ತ ಗಳಿಸಿತು. ಮೊದಲ ಪಂದ್ಯದಲ್ಲಿ ಸೋಲು ಕಂಡಿದ್ದ ಭಾರತ ಇಲ್ಲಿ ಸುಧಾರಿತ ಪ್ರದರ್ಶನ ನೀಡಿತು.

ಬಾಂಗ್ಲಾದೇಶ ಆರಂಭದಲ್ಲೇ ಆಘಾತ ಅನುಭವಿಸಿದರೂ, ರಿತು ಮೋನಿ (46 ಎಸೆತಗಳಲ್ಲಿ 27) ಮತ್ತು ಫರ್ಜಾನಾ ಹಕ್ (81 ಎಸೆತಗಳಲ್ಲಿ 47) ನಡುವ 68 ರನ್ (92 ಎಸೆತ) ಜೊತೆಯಾಟದಿಂದ ಚೇತರಿಸಿತು. ಒಂದು ಹಂತದಲ್ಲಿ 3 ವಿಕೆಟ್‌ಗೆ 106 ರನ್ ಗಳಿಸಿ ಉತ್ತಮ ಸ್ಥಿತಿಯಲ್ಲಿದ್ದ ಆತಿಥೇಯರು ಸರಣಿ ಜಯದ ನಿರೀಕ್ಷೆ ಹುಟ್ಟಿಸಿದ್ದರು. ಆದರೆ ಇವರಿಬ್ಬರೂ ಅಲ್ಪ ಅಂತರದಲ್ಲಿ ನಿರ್ಗಮಿಸಿದ ಬಳಿಕ ನಂತರ ಕುಸಿದು 35.1 ಓವರುಗಳಲ್ಲಿ 120 ರನ್‌ಗಳಿಗೆ ಉರುಳಿತು. 22 ವರ್ಷದ ಜೆಮಿಮಾ 3.1 ಓವರುಗಳಲ್ಲಿ ಕೇವಲ ಮೂರು ರನ್ನಿತ್ತು 4 ವಿಕೆಟ್ ಪಡೆದರು.

ಜೆಮಿಮಾ ರಾಡ್ರಿಗಸ್

ಸರಣಿಯ ಮೂರನೇ ಹಾಗೂ ಅಂತಿಮ ಪಂದ್ಯ ಶನಿವಾರ ನಡೆಯಲಿದೆ.

ಸಂಕ್ಷಿಪ್ತ ಸ್ಕೋರು: ಭಾರತ: 50 ಓವರುಗಳಲ್ಲಿ 8 ವಿಕೆಟ್‌ಗೆ 228 (ಸ್ಮೃತಿ ಮಂದಾನ 36, ಹರ್ಮನ್‌ಪ್ರೀತ್ ಕೌರ್ 52, ಜೆಮಿಮಾ ರಾಡ್ರಿಗಸ್ 86, ಹರ್ಲೀನ್ ಡಿಯೋಲ್ 25; ಸುಲ್ತಾನಾ ಖಾತುನ್ 41ಕ್ಕೆ2, ನಹೀದಾ ಅಖ್ತರ್ 37ಕ್ಕೆ2); ಬಾಂಗ್ಲಾದೇಶ: 35.1 ಓವರುಗಳಲ್ಲಿ 120 (ಫರ್ಜಾನಾ ಹಕ್ 47, ರಿತು ಮೋನಿ 27; ದೇವಿಕಾ ವೈದ್ಯ 30ಕ್ಕೆ3, ಜೆಮಿಮಾ ರಾಡ್ರಿಗಸ್ 3ಕ್ಕೆ4).

ವಾಟರ್ ಪೋಲೊ: ಕರ್ನಾಟಕಕ್ಕೆ ನಿರಾಸೆ

ಚೆನ್ನೈ: ಕರ್ನಾಟಕದ ಬಾಲಕರ ಮತ್ತು ಬಾಲಕಿಯರ ತಂಡವು ಇಲ್ಲಿ ನಡೆಯುತ್ತಿರುವ 49ನೇ ಜೂನಿಯರ್ ಅಕ್ವಾಟಿಕ್ ಚಾಂಪಿಯನ್‌ಷಿಪ್‌ನ ವಾಟರ್ ಪೋಲೊ ಸ್ಪರ್ಧೆಯಲ್ಲಿ ಬುಧವಾರ ನಿರಾಸೆ ಅನುಭವಿಸಿದವು.

ರಾಜ್ಯದ ಬಾಲಕರ ತಂಡವು ಬಂಗಾಲ ತಂಡದ ವಿರುದ್ಧ 3-18ರಿಂದ ಸೋತರೆ, ಬಾಲಕಿಯರ ತಂಡವು ಕೇರಳ ತಂಡಕ್ಕೆ 4-13ರಿಂದ ಮಣಿಯಿತು.

ಬಾಲಕರ ಇತರ ಪಂದ್ಯಗಳಲ್ಲಿ ಹರಿಯಾಣ ತಂಡವು ಪಂಜಾಬ್ ತಂಡವನ್ನು 9-7ರಿಂದ, ಮಹಾರಾಷ್ಟ್ರ ತಂಡವು ಕೇರಳ ತಂಡವನ್ನು 8-7ರಿಂದ, ಗುಜರಾತ್ ತಂಡವು ತೆಲಂಗಾಣ ತಂಡವನ್ನು 15-4ರಿಂದ ಮತ್ತು ಮಹಾರಾಷ್ಟ್ರ ತಂಡವು ತಮಿಳುನಾಡು ತಂಡವನ್ನು 14-2ರಿಂದ ಮಣಿಸಿತು.

ಬಾಲಕಿಯರ ಇತರ ಪಂದ್ಯಗಳಲ್ಲಿ ದೆಹಲಿ ತಂಡವು ತಮಿಳುನಾಡು ತಂಡವನ್ನು 14-5ರಿಂದ, ಮಹಾರಾಷ್ಟ್ರ ತಂಡವು ಬಂಗಾಲ ತಂಡವನ್ನು 6-5ರಿಂದ, ಹರಿಯಾಣ ತಂಡವು ತೆಲಂಗಾಣ ತಂಡವನ್ನು 8-4ರಿಂದ ಪರಾಭವಗೊಳಿಸಿತು.

'ಎ' ಗುಂಪಿನಲ್ಲಿರುವ ಬಾಲಕರ ತಂಡ ಎರಡನೇ ಸ್ಥಾನದಲ್ಲಿದ್ದರೆ, ಬಂಗಾಲ ತಂಡ ಅಗ್ರಸ್ಥಾನದಲ್ಲಿದೆ. ಬಾಲಕಿಯರ ವಿಭಾಗದಲ್ಲಿ ರಾಜ್ಯದ ತಂಡ 'ಎ' ಗುಂಪಿನಲ್ಲಿದ್ದು, ಎರಡನೇ ಸ್ಥಾನದಲ್ಲಿದೆ. ಕೇರಳ ಮೊದಲ ಸ್ಥಾನದಲ್ಲಿದೆ.

ವಿನೇಶಾ, ಬಜರಂಗ್‌ಗೆ ಟ್ರಯಲ್ಸ್‌ನಿಂದ ವಿನಾಯಿತಿ

ಹೈಕೋರ್ಟ್ ಮೊರೆಹೋದ ಅಂತಿಮ್, ಸುಜೀತ್

ನವದೆಹಲಿ (ಪಿಟಿಐ): ವಿನೇಶಾ ಫೋಗಟ್ ಮತ್ತು ಬಜರಂಗ್ ಪೂನಿಯಾ ಅವರಿಗೆ ಟ್ರಯಲ್ಸ್ ನಡೆಸದೇ ನೇರವಾಗಿ ಏಷ್ಯನ್ ಗೇಮ್ಸ್ ತಂಡಕ್ಕೆ ಆಯ್ಕೆ ಮಾಡಿರುವ ಕ್ರಮವನ್ನು ಪ್ರಶ್ನಿಸಿ ಅಂತರರಾಷ್ಟ್ರೀಯ ಕುಸ್ತಿಪಟುಗಳಾದ ಅಂತಿಮ್ ಪಂಘಲ್ ಮತ್ತು ಸುಜೀತ್ ಕಲ್ಕಲ್ ಅವರು ದೆಹಲಿ ಹೈಕೋರ್ಟ್ ಮೊರೆ ಹೋಗಿದ್ದಾರೆ. ಏಷ್ಯನ್ ಗೇಮ್ಸ್‌ಗೆ ನ್ಯಾಯಯುತ ಆಯ್ಕೆ ಪ್ರಕ್ರಿಯೆ ನಡೆಸಬೇಕೆಂದು ಆಗ್ರಹಿಸಿದ್ದಾರೆ.

ಇಬ್ಬರು ಪೈಲ್ವಾನರ ಜಂಟಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ಅವರು ಗುರುವಾರದ ವಿಚಾರಣಾ ಪಟ್ಟಿಗೆ ಸೇರಿಸಿದ್ದಾರೆ. ಬಜರಂಗ್ ಮತ್ತು ವಿನೇಶಾ ಅವರಿಗೆ ಟ್ರಯಲ್ಸ್‌ನಿಂದ (ಕ್ರಮವಾಗಿ ಪುರುಷರ 65 ಕೆ.ಜಿ ಫ್ರೀಸ್ಟೈಲ್ ಮತ್ತು ಮಹಿಳೆಯರ 53 ಕೆ.ಜಿ) ವಿನಾಯಿತಿ ನೀಡಿರುವ ಅಡ್‌ಹಾಕ್ ಸಮಿತಿಯ ನಿರ್ದೇಶನವನ್ನು ರದ್ದು ಮಾಡಬೇಕು ಎಂದು ಅರ್ಜಿಯಲ್ಲಿ ಕೋರಲಾಗಿದೆ. ಸುಜೀತ್ ಅವರು 23 ವರ್ಷದೊಳಗಿನವರ ಏಷ್ಯನ್ ಚಾಂಪಿಯನ್ ಆಗಿದ್ದಾರೆ. ಅಂತಿಮ್ ಪಂಘಲ್ ಅವರು ವಿಶ್ವ ಜೂನಿಯರ್ ಮಹಿಳಾ ಚಾಂಪಿಯನ್.

ದೇಶದ ಜೂನಿಯರ್ ಕುಸ್ತಿಪಟುಗಳ ಹಿತಾಸಕ್ತಿ ರಕ್ಷಿಸಲು ಜಂತರ್‌ಮಂತರ್‌ನಲ್ಲಿ ಧರಣಿ ನಡೆಸುತ್ತಿರುವುದಾಗಿ ಈ ಹಿಂದೆ ಹೇಳಿದ್ದ ಈ ಇಬ್ಬರು (ವಿನೇಶಾ ಮತ್ತು ಬಜರಂಗ್) ಪೈಲ್ವಾನರು ಈಗ ಕಿರಿಯ ಕುಸ್ತಿಪಟುಗಳನ್ನು ಕಡೆಗಣಿಸಿದ್ದಾರೆ. ಹೀಗಾಗಿ ನಾವು ನ್ಯಾಯಾಲಯಕ್ಕೆ ಹೋಗುತ್ತಿದ್ದೇವೆ' ಎಂದು ಸುಜೀತ್ ತಂದೆ ದಯಾನಂದ ಕಲ್ಕಲ್ ಹೇಳಿದ್ದಾರೆ.

ಬಜರಂಗ್‌ಗೆ ವಿನಾಯಿತಿ- ಸುರ್ಜಿತ್ ಆಕ್ಷೇಪ: ಇಬ್ಬರು ಪೈಲ್ವಾನರಿಗೆ ನೇರವಾಗಿ ಭಾರತ ತಂಡಕ್ಕೆ ಆಯ್ಕೆ ಮಾಡಿರುವ ಐಒಎ ಅಡ್‌ಹಾಕ್ ಸಮಿತಿಯ ಕ್ರಮಕ್ಕೆ ಆಕ್ಷೇಪ ವ್ಯಕ್ತಪಡಿಸಿರುವ 23 ವರ್ಷದೊಳಗಿನವರ ಏಷ್ಯನ್ ಚಾಂಪಿಯನ್ ಸುಜೀತ್ ಕಲ್ಕಲ್, 'ಇದು, ಒಲಿಂಪಿಕ್ ಚಾಂಪಿಯನ್ ಆಗಬಯಸುವ ಮುಂದಿನ ಪೀಳಿಗೆಯ ಕುಸ್ತಿಪಟುಗಳಿಗೆ ಮಾಡುತ್ತಿರುವ ಅನ್ಯಾಯ' ಎಂದು ಟೀಕಿಸಿದ್ದಾರೆ.

ಕಲ್ಕಲ್ 20 ವರ್ಷದೊಳಗಿನವರ ವಿಶ್ವ ಚಾಂಪಿಯನ್‌ಷಿಪ್‌ನ ಕಂಚಿನ ಪದಕ ವಿಜೇತ ಕೂಡ. 'ಇತ್ತೀಚೆಗೆ ನಡೆದ ರ್‍ಯಾಂಕಿಂಗ್ ಕುಸ್ತಿಯಲ್ಲಿ ನಾನು ಅಮೆರಿಕದ ಜಾನ್ ಮೈಕೆಲ್ ಡೈಕೊಮಿಹಾಲಿಸ್ ಅವರನ್ನು 8-2 ಅಂತರದಿಂದ ಸೋಲಿಸಿದ್ದೆ. ಇದೇ ಕುಸ್ತಿಪಟುವಿಗೆ ಕಳೆದ ವರ್ಷ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಬಜರಂಗ್ ತಾಂತ್ರಿಕ ಕೌಶಲದ ಆಧಾರದಲ್ಲಿ ಸೋತಿದ್ದರು' ಎಂದು ನೆನಪಿಸಿದ್ದಾರೆ.

2022ರ ವಿಶ್ವ ಚಾಂಪಿಯನ್‌ಷಿಪ್‌ಗೂ ಬಜರಂಗ್ ಅವರಿಗೆ ನೇರ ಪ್ರವೇಶ ನೀಡಲಾಗಿತ್ತು. ಅವರು ಅಮೆರಿಕದ ಪೈಲ್ವಾನ್‌ಗೆ ಸೋತಿದ್ದರು. ನಾನು ಅದೇ ಅಮೆರಿಕದ ಪೈಲ್ವಾನ್ ಅವರನ್ನು ವಿಶ್ವ ಸರಣಿಯಲ್ಲಿ ಸೋಲಿಸಿದ್ದೇನೆ' ಎಂದು ವಿವರ ನೀಡಿದ್ದಾರೆ. ಟ್ಯುನಿಸ್‌ನಲ್ಲಿ ನಡೆದ ಜುಲೈ 22ರ ವಿಶ್ವ ಸರಣಿಯಲ್ಲಿ ಸುಜೀತ್ ಚಾಂಪಿಯನ್ ಆಗಿದ್ದರು.

ಪ್ರತಿಭಟನೆ ನಡೆಸಿದ ಅಂತಿಮ್ ಪಂಘಲ್

ಹಿಸಾರ್ (ಹರಿಯಾಣ), (ಪಿಟಿಐ): ಬಜರಂಗ್ ಪೂನಿಯಾ ಮತ್ತು ವಿನೇಶಾ ಫೋಗಟ್ ಅವರಿಗೆ ಏಷ್ಯನ್ ಗೇಮ್ಸ್ ತಂಡಕ್ಕೆ ನೇರವಾಗಿ ಆಯ್ಕೆ ಮಾಡಿದ ಕ್ರಮವನ್ನು ವಿರೋಧಿಸಿ ವಿಶ್ವ ಜೂನಿಯರ್ ಮಹಿಳಾ ಚಾಂಪಿಯನ್ ಅಂತಿಮ್ ಪಂಘಲ್ ಅವರು ಬುಧವಾರ ರಾಷ್ಟ್ರ ಮಟ್ಟದ ಪೈಲ್ವಾನರೊಂದಿಗೆ ಪ್ರತಿಭಟನೆ ನಡೆಸಿದ್ದಾರೆ.

ನಗರದ ಚೋಟುರಾಮ್ ಚೌಕ್‌ನಲ್ಲಿ ಸೇರಿದ ಕುಸ್ತಿಪಟುಗಳು, ಎಲ್ಲಾ ತೂಕ ವಿಭಾಗಗಳಲ್ಲಿ ಟ್ರಯಲ್ಸ್ ನಡೆಸಬೇಕು ಎಂದು ಆಗ್ರಹಿಸಿದರು. ಹಿಸಾರ್‌ನ ಬಾಬಾ ಲಾಲ್‌ದಾಸ್ ಅಖಾಡ ಮತ್ತು ನವದೆಹಲಿಯ ಛತ್ರಸಾಲ್ ಸ್ಟೇಡಿಯಂನ ಕುಸ್ತಿಪಟುಗಳೂ ಪ್ರತಿಭಟನೆಯಲ್ಲಿ ಪಾಲ್ಗೊಂಡರು.

ಟೋಕಿಯೊ ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಬಜರಂಗ್ ಮತ್ತು ವಿನೇಶಾ ಅವರು ದೆಹಲಿಯ ಜಂತರ್‌ಮಂತರ್‌ನಲ್ಲಿ ಸುಮಾರು ಒಂದು ತಿಂಗಳ ಕಾಲ ನಡೆದ ಧರಣಿಯ ಮುಂಚೂಣಿಯಲ್ಲಿದ್ದರು. ಲೈಂಗಿಕ ಕಿರುಕುಳ ಆರೋಪಿ, ಕುಸ್ತಿ ಫೆಡರೇಷನ್ ನಿರ್ಗಮಿತ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರ ಬಂಧನಕ್ಕೆ ಒತ್ತಾಯಿಸಿ ಈ ಧರಣಿ ನಡೆದಿತ್ತು.

'ನಾನು ಮಾತ್ರವಲ್ಲ, 53 ಕೆ.ಜಿ. ವಿಭಾಗದಲ್ಲಿ ಇನ್ನೂ ಹಲವು ಮಂದಿ ಕುಸ್ತಿಪಟುಗಳು ವಿನೇಶಾ ಅವರನ್ನು ಸೋಲಿಸುವ ಸಾಮರ್ಥ್ಯ ಹೊಂದಿದ್ದಾರೆ' ಎಂದಿದ್ದಾರೆ 19 ವರ್ಷದ ಅಂತಿಮ್.

ಟ್ರಯಲ್ಸ್ ನಡೆಯುವ ಜುಲೈ 22-23ರಂದು ಇಂದಿರಾ ಗಾಂಧಿ ಕ್ರೀಡಾಂಗಣದ ಎದುರು ಧರಣಿ ನಡೆಸುವುದಾಗಿ ಪಂಘಲ್ ಅವರ ಆರಮಭದ ಕೋಚ್ ಲಿಲಿ ಸಿಸೈ ತಿಳಿಸಿದ್ದಾರೆ.

ಚುನಾವಣೆ ಆಗಸ್ಟ್ 7ಕ್ಕೆ?

ನವದೆಹಲಿ: ಈಗಾಗಲೇ ಸಾಕಷ್ಟು ಸಲ ಮುಂದಕ್ಕೆ ಹೋಗಿರುವ ಭಾರತ ಕುಸ್ತಿ ಫೆಡರೇಷನ್‌ನ ಚುನಾವಣೆ ಆಗಸ್ಟ್ 7ರಂದು ನಡೆಯುವ ಸಾಧ್ಯತೆಯಿದೆ ಎಂದು ಫೆಡರೇಷನ್‌ನ ಮೂಲಗಳು ತಿಳಿಸಿವೆ.

ದುರದೃಷ್ಟಕರ: ಬ್ರಿಜ್‌ಭೂಷಣ್

ನವದೆಹಲಿ: ಇಬ್ಬರು ಕುಸ್ತಿಪಟುಗಳಿಗೆ ಏಷ್ಯನ್ ಗೇಮ್ಸ್‌ಗೆ ನೇರಪ್ರವೇಶ ನೀಡಿದ ಕ್ರಮ 'ದುರದೃಷ್ಟಕರ' ಎಂದು ಟೀಕಿಸಿರುವ ಭಾರತ ಕುಸ್ತಿ ಫೆಡರೇಷನ್ ನಿರ್ಗಮಿತ ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ಅವರು, 'ಇದು ದೇಶದ ಕುಸ್ತಿ ಕ್ಷೇತ್ರಕ್ಕೆ ಗಾಸಿ ಮಾಡಲಿದೆ' ಎಂದು ಬುಧವಾರ ತಿಳಿಸಿದ್ದಾರೆ.

ವೆಸ್ಟ್ ಇಂಡೀಸ್‌ಗೆ ಐತಿಹಾಸಿಕ ಪಂದ್ಯದಲ್ಲಿ ಸೋಲಿನ ಸರಪಳಿ ಕಳಚುವ ಛಲ

ಸರಣಿ ಜಯದ ಮೇಲೆ ಭಾರತ ಕಣ್ಣು

ಪೋರ್ಟ್ ಆಫ್ ಸ್ಪೇನ್, ಟ್ರಿನಿಡಾಡ್ (ಪಿಟಿಐ): ಭಾರತ ಮತ್ತು ವೆಸ್ಟ್ ಇಂಡೀಸ್ ಟೆಸ್ಟ್ ತಂಡಗಳಿಗೆ ಗುರುವಾರ ಐತಿಹಾಸಿಕ ದಿನವಾಗಲಿದೆ.

ಉಭಯ ತಂಡಗಳು 100ನೇ ಟೆಸ್ಟ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಈ ಪಂದ್ಯದಲ್ಲಿ ಜಯಿಸಿ ಸರಣಿ ಕಿರೀಟ ಧರಿಸುವ ಆತ್ಮವಿಶ್ವಾಸದಲ್ಲಿ ರೋಹಿತ್ ಶರ್ಮಾ ನಾಯಕತ್ವದ ಭಾರತ ತಂಡವಿದೆ. ಮೊದಲ ಟೆಸ್ಟ್ ಸೋಲಿನ ಮುಯ್ಯಿ ತೀರಿಸಿಕೊಂಡು ಸಮಬಲ ಸಾಧಿಸುವ ಛಲದಲ್ಲಿ ಕ್ರೇಗ್ ಬ್ರಾಥ್‌ವೇಟ್ ಬಳಗ ಇದೆ.

ಕಳೆದ 21 ವರ್ಷಗಳಿಂದ ವಿಂಡೀಸ್ ತಂಡವು ಭಾರತದ ಎದುರು ಒಂದೂ ಟೆಸ್ಟ್ ಪಂದ್ಯ ಜಯಿಸಿಲ್ಲ. ಈ ಸೋಲಿನ ಸರಪಳಿ ತುಂಡರಿಸಿ ಇತಿಹಾಸ ಬರೆಯುವ ಅವಕಾಶ ಆತಿಥೇಯರಿಗೆ ಇದೆ.

ಆದರೆ, ಮೊದಲ ಪಂದ್ಯದಲ್ಲಿ ಮಿಂಚಿದ್ದ ಆಫ್‌ಸ್ಪಿನ್ನರ್ ಆರ್. ಅಶ್ವಿನ್, ವೇಗಿ ಮೊಹಮ್ಮದ್ ಸಿರಾಜ್, ಜಯದೇವ್ ಉನದ್ಕತ್ ಮತ್ತು ಶಾರ್ದೂಲ್ ಠಾಕೂರ್ ಅವರು ಉತ್ತಮ ಲಯದಲ್ಲಿದ್ದಾರೆ. ವಿಂಡೀಸ್ ತಂಡದಲ್ಲಿ ಕ್ರೇಗ್ ಬಿಟ್ಟರೆ ಅನುಭವಿ ಬ್ಯಾಟರ್‌ಗಳ ಕೊರತೆ ಇದೆ. ಹೊಸ ಹುಡುಗ ಅಲಿಕ್ ಅಥನೇಜ್, ತೇಜನಾರಾಯಣ ಚಂದ್ರಪಾಲ್ ಮತ್ತು ಅನುಭವಿ ಆಲ್‌ರೌಂಡರ್ ಜೇಸನ್ ಹೋಲ್ಡರ್ ತಂಡಕ್ಕೆ ಬಲ ತುಂಬಬಲ್ಲ ಬ್ಯಾಟರ್‌ಗಳಾಗಿದ್ದಾರೆ.

ವಿರಾಟ್ ಕೊಹ್ಲಿ

ಆದರೆ, ಭಾರತದ ಬ್ಯಾಟಿಂಗ್ ಕ್ರಮಾಂಕವನ್ನು ಕಟ್ಟಿಹಾಕಲು ಬೌಲಿಂಗ್ ಪಡೆ ಸಮರ್ಥವಾಗಿಲ್ಲ. ಮೊದಲ ಪಂದ್ಯದಲ್ಲಿ ಶತಕ ಬಾರಿಸಿದ ಯಶಸ್ವಿ ಜೈಸ್ವಾಲ್, ರೋಹಿತ್ ಶರ್ಮಾ ಅವರ ಜೊತೆಯಾಟಕ್ಕೆ ತಡೆಯೊಡ್ಡುವಲ್ಲಿ ಬೌಲರ್‌ಗಳು ವಿಫಲರಾಗಿದ್ದರು. ಅಲ್ಲದೇ ವಿರಾಟ್ ಕೊಹ್ಲಿ, ಇಶಾನ್ ಕಿಶನ್, ಶುಭಮನ್ ಗಿಲ್, ರವೀಂದ್ರ ಜಡೇಜ ಮತ್ತು ಅಶ್ವಿನ್ ಅವರನ್ನೂ ಕಟ್ಟಿಹಾಕುವ ಸವಾಲು ಬೌಲರ್‌ಗಳಿಗೆ ಇದೆ.

ಈ ಕ್ರೀಡಾಂಗಣದ ಪಿಚ್ ಮೊದಲಿನಿಂದಲೂ ವೇಗದ ಬೌಲರ್‌ಗಳಿಗೆ ಹೆಚ್ಚು ನೆರವು ನೀಡಿದೆ. ಆದ್ದರಿಂದ ಭಾರತ ತಂಡವು ನಾಲ್ವರು ಮಧ್ಯಮ ವೇಗಿಗಳು ಮತ್ತು ಒಬ್ಬ ಸ್ಪಿನ್ನರ್‌ಗೆ ಅವಕಾಶ ನೀಡಿದರೂ ಅಚ್ಚರಿಯಿಲ್ಲ.

ಪಂದ್ಯ ನಡೆಯುವ ಐದೂ ದಿನಗಳಲ್ಲಿ ಮಳೆ ಸುರಿಯುವ ಸಾಧ್ಯತೆ ಇದೆ.

ಪಂದ್ಯ ಆರಂಭ: ರಾತ್ರಿ 7.30ಕ್ಕೆ, ಭಾರತೀಯ ಕಾಲಮಾನ, **ನೇರಪ್ರಸಾರ:** ಡಿಡಿ ಸ್ಪೋರ್ಟ್ಸ್, ಫ್ಯಾನ್‌ಕೋಡ್, ಜಿಯೋ ಸಿನಿಮಾ

ಅಂಕಿ-ಅಂಶಗಳು

500 ವಿರಾಟ್ ಕೊಹ್ಲಿ ಆಡಲಿರುವ ಅಂತರರಾಷ್ಟ್ರೀಯ ಪಂದ್ಯ. ಮೂರು ಮಾದರಿಗಳಲ್ಲಿ ಸೇರಿ ಈ ಸಾಧನೆ

3 ಕ್ವೀನ್ಸ್ ಪಾರ್ಕ್ ಓವಲ್‌ನಲ್ಲಿ ಭಾರತವು ಇದುವರೆಗೆ ಜಯಿಸಿರುವ ಪಂದ್ಯಗಳು. ಇಲ್ಲಿ ಇದುವರೆಗೆ ಹದಿಮೂರು ಪಂದ್ಯಗಳಲ್ಲಿ ಆಡಿದೆ.

14 ಟೆಸ್ಟ್‌ನಲ್ಲಿ 500 ವಿಕೆಟ್ ಗಡಿ ಮುಟ್ಟಲು ಆರ್. ಅಶ್ವಿನ್ ಗಳಿಸಬೇಕಿರುವ ವಿಕೆಟ್‌ಗಳು

21 ಭಾರತದ ವಿರುದ್ಧ ವಿಂಡೀಸ್ ತಂಡವು ಕಳೆದ ಇಪ್ಪತ್ತೊಂದು ವರ್ಷಗಳಿಂದ ಒಂದೂ ಟೆಸ್ಟ್ ಪಂದ್ಯ ಜಯಿಸಿಲ್ಲ

100 ಭಾರತ ತಂಡವು ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾ ತಂಡಗಳ ವಿರುದ್ಧವೂ ನೂರಕ್ಕಿಂತ ಹೆಚ್ಚು ಟೆಸ್ಟ್‌ಗಳಲ್ಲಿ ಆಡಿದೆ. ವೆಸ್ಟ್ ಇಂಡೀಸ್ ಕೂಡ ಈಗ ಈ ಸಾಲಿಗೆ ಸೇರ್ಪಡೆಯಾಗಲಿದೆ.

ವಿಶ್ವಕಪ್‌ಗೆ ಕಾರ್ಯತಂತ್ರ: ವಿಂಡೀಸ್‌ನತ್ತ ಅಗರ್ಕರ್

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಆಯ್ಕೆ ಸಮಿತಿ ಅಧ್ಯಕ್ಷ ಅಜಿತ್ ಅಗರ್ಕರ್ ಐಸಿಸಿ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಗೆ ಕಾರ್ಯತಂತ್ರ ರೂಪಿಸುವುದಕ್ಕೆ ಸಂಬಂಧಿಸಿದಂತೆ ತಂಡದ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಮತ್ತು ನಾಯಕ ರೋಹಿತ್ ಶರ್ಮಾ ಅವರೊಂದಿಗೆ ಚರ್ಚಿಸಲು ವೆಸ್ಟ್ ಇಂಡೀಸ್‌ಗೆ ತೆರಳಲಿದ್ದಾರೆ.

ಭಾರತವು ಅ. 8ರಂದು ಚೆನ್ನೈನಲ್ಲಿ ಆಸ್ಟ್ರೇಲಿಯಾದ ವಿರುದ್ಧ ಟೂರ್ನಿಯ ಮೊದಲ ಪಂದ್ಯ ಆಡಲಿದೆ. 15ರಂದು ಪಾಕಿಸ್ತಾನದ ವಿರುದ್ಧ ಪಂದ್ಯ ಇದೆ.

'ಆಯ್ಕೆ ಸಮಿತಿ ಸದಸ್ಯ ಸಲೀಲ್ ಅಂಕೋಲಾ ಪ್ರಸ್ತುತ ವೆಸ್ಟ್ ಇಂಡೀಸ್‌ನಲ್ಲಿದ್ದಾರೆ. ಟೆಸ್ಟ್ ಸರಣಿ ಮುಗಿದ ನಂತರ ಅವರು ಹಿಂತಿರುಗುತ್ತಾರೆ. ಸೀಮಿತ ಓವರ್‌ಗಳ ಸರಣಿ ಆರಂಭಕ್ಕೂ ಮೊದಲು ಅಗರ್ಕರ್ ತಂಡ ಸೇರಿಕೊಳ್ಳಲಿದ್ದಾರೆ' ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಬ್ಯಾಸ್ಕೆಟ್‌ಬಾಲ್: ಎಸ್. ಬ್ಲೂಸ್, ವಿಮಾನಪುರ ಸೆಮಿಗೆ

ಬೆಂಗಳೂರು: ಶಿವಾಂಕ್ ತಿವಾರಿ (26) ಅವರ ಆಟದ ನೆರವಿನಿಂದ ಎಸ್.ಬ್ಲೂಸ್ ತಂಡವು 13 ವರ್ಷದೊಳಗಿನವರ ರಾಜ್ಯ ಸಬ್ ಜೂನಿಯರ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಬಾಲಕರ ವಿಭಾಗದಲ್ಲಿ ಎಚ್‌ಬಿಆರ್ ಬಿ.ಸಿ ತಂಡವನ್ನು 62–51ರಿಂದ ಮಣಿಸಿ, ಸೆಮಿಫೈನಲ್ ಪ್ರವೇಶಿಸಿತು.

ಬಾಲಕರ ಕ್ವಾರ್ಟರ್ ಫೈನಲ್ ಪಂದ್ಯಗಳು ಬುಧವಾರ ನಡೆದವು. ಎಂಸಿಎಚ್‌ಎಸ್ ತಂಡವು ಎಂಎನ್‌ಕೆ ರಾವ್ ಪಾರ್ಕ್ ತಂಡವನ್ನು 45–40ರಿಂದ, ವಿಮಾನಪುರ ಎಸ್.ಸಿ ತಂಡವು ಕೋರಮಂಗಲ ಎಸ್.ಸಿ ತಂಡವನ್ನು 41–20ರಿಂದ, ಯಂಗ್ ಓರಿಯನ್ಸ್ ತಂಡವು ಬೀಗಲ್ಸ್ ಬಿ.ಸಿ ತಂಡವನ್ನು 40–27ರಿಂದ ಮಣಿಸಿ, ನಾಲ್ವರ ಘಟ್ಟಕ್ಕೆ ಲಗ್ಗೆ ಹಾಕಿದವು.

ಬಾಲಕಿಯರ ವಿಭಾಗದ ಕ್ವಾರ್ಟರ್ ಫೈನಲ್ ಪಂದ್ಯಗಳಲ್ಲಿ ಆಲ್ ಸ್ಟಾರ್ ಅಕಾಡೆಮಿ ಮೈಸೂರು ತಂಡವು ಎಂಸಿಎಚ್‌ಎಸ್ ತಂಡವನ್ನು 42–27ರಿಂದ, ಅಪ್ಪಯ್ಯ ಬಿ.ಸಿ ತಂಡವು ಬೀಗಲ್ಸ್ ಬಿ.ಸಿ ತಂಡವನ್ನು 23–16ರಿಂದ, ಯಂಗ್ ಓರಿಯನ್ಸ್ ಎಸ್.ಸಿ ತಂಡವು ಪಿಪಿಸಿ ತಂಡವನ್ನು 30–27ರಿಂದ ಮತ್ತು ಎಸ್.ಬ್ಲೂಸ್ ತಂಡವು ವೈಎಂಎಂಎ ತಂಡವನ್ನು 42–07ರಿಂದ ಸೋಲಿಸಿ ಸೆಮಿಫೈನಲ್ ಪ್ರವೇಶ ಪಡೆದವು.

ನಾಡಾ ಅದಕ್ಷತೆಗೆ ವಾಡಾ ಗರಂ

ಮಾಂಟ್ರಿಯಲ್ (ಪಿಟಿಐ): ವಿಶ್ವ ಉದ್ದೀಪನ ಮದ್ದು ತಡೆ ಘಟಕ(ವಾಡಾ)ವು ಭಾರತದ ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಘಟಕದ ಕಾರ್ಯವೈಖರಿಯು ಅದಕ್ಷತೆಯಿಂದ ಕೂಡಿದೆ ಎಂದು ಕಿಡಿಕಾರಿದೆ.

ಅಥ್ಲೀಟ್‌ಗಳ ಚಲನವಲನ ಮಾಹಿತಿ ಮತ್ತು ಉದ್ದೀಪನ ಮದ್ದು ಸೇವನೆ ಪರೀಕ್ಷೆಗಳಲ್ಲಿ ವೈಫಲ್ಯವನ್ನೂ ವಾಡಾ ಗುರುತಿಸಿದೆ. ತಾನೇ ನಡೆಸಿದ ತನಿಖೆಯಲ್ಲಿ 12 ಅಥ್ಲೀಟ್‌ಗಳು ಉದ್ದೀಪನ ಮದ್ದು ಸೇವನೆ ಮಾಡಿರುವುದನ್ನು ಖಚಿತಪಡಿಸಿದೆ. ಅಲ್ಲದೇ ಚಲನವಲನ ದಾಖಲಾಗದ 97 ಪ್ರಕರಣಗಳನ್ನು ಪತ್ತೆ ಮಾಡಿದೆ. ಇದರಲ್ಲಿ ಭಾರತದ 70 ಅಥ್ಲೀಟ್‌ಗಳು ಸೇರಿದ್ದಾರೆ.

ವಾಡಾದ ಸ್ವತಂತ್ರವಾದ ಗುಪ್ತಚರ ಮತ್ತು ತನಿಖಾ ಸಂಸ್ಥೆಯು (ಐ ಮತ್ತು ಐ) ಮಂಗಳವಾರ ಪ್ರಕಟಿಸಿರುವ ವರದಿಯಲ್ಲಿ ಈ ಮಾಹಿತಿಗಳನ್ನು ಬಹಿರಂಗಪಡಿಸಿದೆ. ಭಾರತದ ನಾಡಾದಿಂದ ನಡೆಸಲಾಗುವ ಪರೀಕ್ಷಾ ವಿಧಾನಗಳು ಸಮಂಜಸವಾಗಿಲ್ಲ. ವಾಡಾ ನಿಯಮಾವಳಿ ಮತ್ತು ಅಂತರರಾಷ್ಟ್ರೀಯ ದರ್ಜೆಗೆ ಅನುಗುಣವಾಗಿ ಇಲ್ಲ ಎಂದೂ ಉಲ್ಲೇಖಿಸಿದೆ.

'2018ರಿಂದಲೇ ಐ ಮತ್ತು ಐ ಸಂಸ್ಥೆಯು ಆಪರೇಷನ್ ಕರೋಸಿಲ್ ಆರಂಭಿಸಿದೆ. ಅದರ ಪ್ರಕಾರ ನಾಡಾದ ನೋಂದಾಯಿತ ಪರೀಕ್ಷೆ ತಂಡವು (ಆರ್‌ಟಿಪಿ) ಸರಿಯಾದ ಮೇಲ್ವಿಚಾರಣೆ ನಡೆಸಿಲ್ಲ. ಅಥ್ಲೀಟ್‌ಗಳ ಚಲನವಲನದ ಮಾಹಿತಿಗಳ ನಿರ್ವಹಣೆ ಸೂಕ್ತವಾಗಿಲ್ಲ' ಎಂದೂ ವಾಡಾ ವರದಿಯಲ್ಲಿ ತಿಳಿಸಿದೆ.

'2016ರಿಂದ ವಾಡಾ, ನಾಡಾದ ಜೊತೆಗೆ ಕಾರ್ಯನಿರ್ವಹಿಸುತ್ತಿದೆ. ಉದ್ದೀಪನ ಮದ್ದು ತಡೆ ಕಾರ್ಯವನ್ನು ಸುಧಾರಣೆ ಮಾಡಲು ಹಲವಾರು ಯೋಜನೆಗಳ ಮೂಲಕ ನೆರವು ನೀಡುತ್ತಿದೆ. ವಿಶ್ವ ಉದ್ದೀಪನ ಮದ್ದು ನಿಷೇಧ ನಿಯಮ ಮತ್ತು ಅಂತರರಾಷ್ಟ್ರೀಯ ದರ್ಜೆಯನ್ನೂ ಪರಿಚಯಿಸಿದೆ. ಅದಕ್ಕನುಗುಣವಾಗಿ ನಮ್ಮ ರಹಸ್ಯ ಜಾಲ 'ಸ್ಪೀಕ್ ಅಪ್' ಮೂಲಕ ಲಭ್ಯವಾಗುವ ಮಾಹಿತಿಯ ಹೊಣೆಯನ್ನೂ ನಿರ್ವಹಿಸುತ್ತಿದ್ದೇವೆ. ಆದರೆ ನಾಡಾದಲ್ಲಿ ಸಂಪನ್ಮೂಲ ಕೊರತೆ ಇರುವುದು ಸ್ಪಷ್ಟವಾಗಿದೆ' ಎಂದೂ ವಾಡಾ ಅಸಮಾಧಾನ ವ್ಯಕ್ತಪಡಿಸಿದೆ.

2019ರಲ್ಲಿ ಆರು ತಿಂಗಳುಗಳ ಕಾಲ ನಾಡಾವನ್ನು ವಾಡಾ ಅಮಾನತುಗೊಳಿಸಿತ್ತು. ಅಂತರರಾಷ್ಟ್ರೀಯ ದರ್ಜೆಯ ಪ್ರಯೋಗಾಲಯದ ನಿರ್ವಹಣೆ ಇಲ್ಲವೆಂದು ಹೇಳಲಾಗಿತ್ತು.

ಅಗ್ರ 10 ಬ್ಯಾಟರ್ ಪಟ್ಟಿಯಲ್ಲಿ ರೋಹಿತ್

ದುಬೈ (ಪಿಟಿಐ): ಭಾರತ ತಂಡದ ನಾಯಕ ರೋಹಿತ್ ಶರ್ಮಾ ಐಸಿಸಿ ಟೆಸ್ಟ್ ಬ್ಯಾಟರ್‌ಗಳ ರ‍್ಯಾಂಕಿಂಗ್‌ನಲ್ಲಿ ಮತ್ತೆ ಅಗ್ರ 10ರೊಳಗೆ ಸ್ಥಾನ ಪಡೆದಿದ್ದಾರೆ. ವೆಸ್ಟ್ ಇಂಡೀಸ್ ವಿರುದ್ಧ ಮೊದಲ ಟೆಸ್ಟ್‌ನಲ್ಲಿ 12 ವಿಕೆಟ್ ಪಡೆದಿದ್ದ ರವಿಚಂದ್ರನ್ ಅಶ್ವಿನ್ ಬೌಲರ್‌ಗಳ ವಿಭಾಗದಲ್ಲಿ ಅಗ್ರಸ್ಥಾನವನ್ನು ಸುಭದ್ರಗೊಳಿಸಿದ್ದಾರೆ.

ಡೊಮಿನಿಕಾದಲ್ಲಿ ಇತ್ತೀಚೆಗೆ ವೆಸ್ಟ್ ಇಂಡೀಸ್ ವಿರುದ್ಧ ಟೆಸ್ಟ್ ಪಂದ್ಯದಲ್ಲಿ ಶತಕ ಬಾರಿಸಿದ್ದ ರೋಹಿತ್ ಮೂರು ಸ್ಥಾನಗಳಷ್ಟು ಬಡ್ತಿ ಪಡೆದು 10ನೇ ಸ್ಥಾನದಲ್ಲಿದ್ದಾರೆ. ಬ್ಯಾಟರ್‌ಗಳ ವಿಭಾಗದಲ್ಲಿ ಅವರೇ ಹೆಚ್ಚಿನ ಕ್ರಮಾಂಕ ಪಡೆದಿದ್ದಾರೆ. ಮೊದಲ 9 ಸ್ಥಾನಗಳಲ್ಲಿ ಯಾವುದೇ ಬದಲಾವಣೆ ಆಗಿಲ್ಲ.

ಚೊಚ್ಚಲ ಟೆಸ್ಟ್‌ನಲ್ಲೇ 171 ರನ್ ಗಳಿಸಿ ಮಿಂಚಿದ್ದ 21 ವರ್ಷದ ಯಶಸ್ವಿ ಜೈಸ್ವಾಲ್ 420 ಪಾಯಿಂಟ್‌ಗಳೊಂದಿಗೆ 73ನೇ ಸ್ಥಾನದಲ್ಲಿದ್ದಾರೆ. ರಿಷಭ್ ಪಂತ್ ಒಂದು ಸ್ಥಾನ ಕೆಳಕ್ಕಿಳಿದು 11ನೇ ಕ್ರಮಾಂಕದಲ್ಲಿದ್ದಾರೆ. ವಿರಾಟ್ ಕೊಹ್ಲಿ 711 ಪಾಯಿಂಟ್‌ಗಳೊಂದಿಗೆ 14ನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ. ವೆಸ್ಟ್ ಇಂಡೀಸ್ ಕಡೆ, ಪದಾರ್ಪಣೆ ಟೆಸ್ಟ್‌ನಲ್ಲೇ ಗಮನ ಸೆಳೆದ ಅಲಿಕ್ ಅಥನೇಜ್ 77ನೇ ಸ್ಥಾನದಲ್ಲಿ ಕಾಣಿಸಿಕೊಂಡಿದ್ದಾರೆ.

ಇತ್ತೀಚಿನ ಟೆಸ್ಟ್‌ನಲ್ಲಿ ಅಮೋಘ ಬೌಲಿಂಗ್ ಮಾಡಿದ ಅಶ್ವಿನ್ 884 ಪಾಯಿಂಟ್ಸ್ ಪಡೆದಿದ್ದಾರೆ. ಪ್ಯಾಟ್ ಕಮಿನ್ಸ್ (828) ಎರಡನೇ ಸ್ಥಾನದಲ್ಲಿದ್ದಾರೆ. ರವೀಂದ್ರ ಜಡೇಜಾ (779 ಪಾಯಿಂಟ್ಸ್) 3 ಸ್ಥಾನ ಬಡ್ತಿ ಪಡೆದು, 7ನೇ ಸ್ಥಾನಕ್ಕೇರಿದ್ದಾರೆ.

ಜಡೇಜಾ ಆಲ್‌ರೌಂಡರ್‌ಗಳ ವಿಭಾಗದಲ್ಲಿ 449 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದ್ದಾರೆ. ಅಶ್ವಿನ್ (362) ಎರಡನೇ ಸ್ಥಾನದಲ್ಲಿದ್ದಾರೆ.

ಏಷ್ಯಾ ಕಪ್ ಕ್ರಿಕೆಟ್: ಕ್ಯಾಂಡಿಯಲ್ಲಿ ಭಾರತ–ಪಾಕ್ ಮುಖಾಮುಖಿ

ಮುಂಬೈ (ಪಿಟಿಐ): ಭಾರತ ಮತ್ತು ಪಾಕಿಸ್ತಾನ ತಂಡಗಳು ಸೆಪ್ಟೆಂಬರ್ 2ರಂದು ಕ್ಯಾಂಡಿಯಲ್ಲಿ ನಡೆಯುವ ಏಷ್ಯಾ ಕಪ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಏಷ್ಯನ್ ಕ್ರಿಕೆಟ್ ಕೌನ್ಸಿಲ್ (ಎಸಿಸಿ) ಬುಧವಾರ ಬಿಡುಗಡೆ ಮಾಡಿರುವ ವೇಳಾಪಟ್ಟಿಯ ಪ್ರಕಾರ ಭಾರತ ಮತ್ತು ಪಾಕ್ ಗುಂಪು ಹಂತದಲ್ಲಿ ಮುಖಾಮುಖಿಯಾಗಲಿವೆ. ಟೂರ್ನಿಯಲ್ಲಿ ಎರಡು ಗುಂಪುಗಳಿವೆ. 'ಎ' ಗುಂಪಿನಲ್ಲಿ ಭಾರತ, ಪಾಕಿಸ್ತಾನ ಮತ್ತು ನೇಪಾಳ ತಂಡಗಳಿವೆ. 'ಬಿ' ಗುಂಪಿನಲ್ಲಿ ಅಫ್ಗಾನಿಸ್ತಾನ, ಶ್ರೀಲಂಕಾ ಮತ್ತು ಬಾಂಗ್ಲಾದೇಶ ತಂಡಗಳು ಆಡಲಿವೆ.

ಉದಯೋನ್ಮುಖ ತಂಡವಾಗಿರುವ ನೇಪಾಳ, ಗುಂಪು ಹಂತದಲ್ಲಿ ಭಾರತ ಹಾಗೂ ಪಾಕ್ ವಿರುದ್ಧ ಗೆಲುವು ಸಾಧಿಸುವುದು ಕಠಿಣವಾಗಿದೆ. ಆದ್ದರಿಂದ ಭಾರತ ಮತ್ತು ಪಾಕ್ ಮೊದಲ ಹಾಗೂ ಎರಡನೇ ಸ್ಥಾನ ಪಡೆದು ಸೂಪರ್ ನಾಲ್ಕರ ಹಂತ ಪ್ರವೇಶಿಸುವುದು ಬಹುತೇಕ ಖಚಿತ. ಆಗ ಈ ತಂಡಗಳು ಸೆ.10ರಂದು ಕೊಲಂಬೊದಲ್ಲಿ ಮುಖಾಮುಖಿಯಾಗುತ್ತವೆ.

ಈ ಹಂತದಲ್ಲಿ ಭಾರತ ಮತ್ತು ಪಾಕ್ ತಂಡಗಳು ಮೊದಲ ಹಾಗೂ ಎರಡನೇ ಸ್ಥಾನ ಗಳಿಸಿದರೆ ಫೈನಲ್‌ನಲ್ಲಿಯೂ ಹಣಾಹಣಿ ನಡೆಸಬಹುದು. ಟೂರ್ನಿಯ 4 ಪಂದ್ಯಗಳು ಮಾತ್ರ ಪಾಕಿಸ್ತಾನದಲ್ಲಿ ನಡೆಯಲಿವೆ. ಉಳಿದೆಲ್ಲ ಪಂದ್ಯಗಳೂ ಶ್ರೀಲಂಕಾದಲ್ಲಿ ಆಯೋಜನೆಗೊಂಡಿವೆ. ಭಾರತವು ಎಲ್ಲ ಪಂದ್ಯಗಳನ್ನೂ ಲಂಕಾದಲ್ಲಿಯೇ ಆಡಲಿದೆ.

ದಿನಾಂಕ	ಪಂದ್ಯ	ತಾಣ
ಆ.30	ಪಾಕಿಸ್ತಾನ–ನೇಪಾಳ	ಮುಲ್ತಾನ್
ಆ.31	ಬಾಂಗ್ಲಾದೇಶ–ಶ್ರೀಲಂಕಾ	ಕ್ಯಾಂಡಿ
ಸೆ.2	ಭಾರತ–ಪಾಕಿಸ್ತಾನ	ಕ್ಯಾಂಡಿ
ಸೆ.3	ಬಾಂಗ್ಲಾ–ಅಫ್ಗಾನಿಸ್ತಾನ	ಲಾಹೋರ್
ಸೆ.4	ಭಾರತ–ನೇಪಾಳ	ಕ್ಯಾಂಡಿ
ಸೆ.5	ಶ್ರೀಲಂಕಾ–ಅಫ್ಗಾನಿಸ್ತಾನ	ಲಾಹೋರ್

* ಸೂಪರ್ 4 ಹಂತದ ಪಂದ್ಯಗಳು ಸೆ. 6ರಿಂದ 15ರವರೆಗೆ ನಡೆಯಲಿವೆ. ಸೆ 17ರಂದು ಫೈನಲ್ ಕೊಲಂಬೊದಲ್ಲಿ ನಡೆಯಲಿದೆ.

ಆ್ಯಷಸ್ ನಾಲ್ಕನೇ ಟೆಸ್ಟ್: ಆಸ್ಟ್ರೇಲಿಯಾ ಸಾಧಾರಣ ಮೊತ್ತ

600 ವಿಕೆಟ್ ಪೂರೈಸಿದ ಬ್ರಾಡ್

ಮ್ಯಾಂಚೆಸ್ಟರ್ (ಎಎಫ್‌ಪಿ): ಇಂಗ್ಲೆಂಡ್ ವೇಗದ ಬೌಲರ್ ಸ್ಟುವರ್ಟ್ ಬ್ರಾಡ್ ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ 600 ವಿಕೆಟ್‌ಗಳ ಮೈಲಿಗಲ್ಲು ದಾಟಿದ ಐದನೇ ಬೌಲರ್ ಎಂಬ ಗೌರವಕ್ಕೆ ಪಾತ್ರರಾದರು. ಬುಧವಾರ ಆ್ಯಷಸ್ ಸರಣಿಯ ನಾಲ್ಕನೇ ಟೆಸ್ಟ್‌ನ ಮೊದಲ ದಿನದಾಟದಲ್ಲಿ ಟ್ರಾವಿಸ್ ಹೆಡ್ ಅವರ ವಿಕೆಟ್ ಪಡೆದು ಈ ಸಾಧನೆ ದಾಖಲಿಸಿದರು.

ಶ್ರೀಲಂಕಾದ ಮುತ್ತಯ್ಯ ಮುರಳೀಧರನ್ (800), ಆಸ್ಟ್ರೇಲಿಯಾದ ಶೇನ್ ವಾರ್ನ್ (708), ಇಂಗ್ಲೆಂಡ್‌ನ ಜೇಮ್ಸ್ ಆ್ಯಂಡರ್ಸನ್ (688) ಮತ್ತು ಭಾರತದ ಅನಿಲ್ ಕುಂಬ್ಳೆ (619) ಅವರು ಮಾತ್ರ 600ಕ್ಕಿಂತ ಹೆಚ್ಚು ವಿಕೆಟ್ ಪಡೆದಿದ್ದಾರೆ. 40 ವರ್ಷದ ಆ್ಯಂಡರ್ಸನ್ ಮತ್ತು 37 ವರ್ಷದ ಬ್ರಾಡ್ ಅವರು ಈಗಲೂ ಸಕ್ರಿಯ ಆಟಗಾರರಾಗಿದ್ದಾರೆ. ಮಾತ್ರವಲ್ಲ, ಇವರಿಬ್ಬರು ಮಾತ್ರ ಈ '600 + ಕ್ಲಬ್'ನಲ್ಲಿರುವ ವೇಗದ ಬೌಲರ್‌ಗಳೆನಿಸಿದ್ದಾರೆ.

ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ಆಸ್ಟ್ರೇಲಿಯಾ ದಿನದಾಟದ ಅಂತ್ಯಕ್ಕೆ 83 ಓವರುಗಳಲ್ಲಿ 8 ವಿಕೆಟ್‌ಗೆ 299 ರನ್ ಗಳಿಸಿದೆ. 61 ರನ್‌ಗಳಾಗುಷ್ಟರಲ್ಲಿ ಆರಂಭ ಆಟಗಾರರಿಬ್ಬರನ್ನು ಕಳೆದುಕೊಂಡ ಆಸ್ಟ್ರೇಲಿಯಾಕ್ಕೆ ಮಾರ್ನಸ್ ಲಾಬುಷೇನ್ (51) ಮತ್ತು ಸ್ಟೀವನ್ ಸ್ಮಿತ್ (41) ಅವರು ಮೂರನೇ ವಿಕೆಟ್‌ಗೆ 122 ರನ್ ಸೇರಿಸಿ ಚೇತರಿಕೆ ನೀಡಿದರು.

ವಿಕೆಟ್ ಪಡೆದ ಸಂಭ್ರಮದಲ್ಲಿ ಸ್ಟುವರ್ಟ್ ಬ್ರಾಡ್– ಎಪಿ ಚಿತ್ರ

ಟ್ರಾವಿಸ್ ಹೆಡ್ (48) ಮತ್ತು ಮಿಚೆಲ್ ಮಾರ್ಷ್ 51 (60 ಎಸೆತ) ಅವರೂ ವೇಗವಾಗಿ ರನ್ ಗಳಿಸಿದರು. ಸ್ಟುವರ್ಟ್ ಬ್ರಾಡ್ (68ಕ್ಕೆ2) ಮತ್ತು ಕ್ರಿಸ್ ವೋಕ್ಸ್ (52ಕ್ಕೆ4) ಯಶಸ್ವಿ ಬೌಲರ್‌ಗಳೆನಿಸಿದರು.

ಇದು ಬ್ರಾಡ್ ಅವರಿಗೆ 166ನೇ ಟೆಸ್ಟ್ ಆಗಿದ್ದು, ಈ ಪಂದ್ಯಕ್ಕೆ ಮೊದಲು 598 ವಿಕೆಟ್ ಪಡೆದಿದ್ದರು. ಆಸ್ಟ್ರೇಲಿಯಾದ ಆರಂಭ ಆಟಗಾರ ಉಸ್ಮಾನ್ ಖ್ವಾಜಾ ಅವರ ವಿಕೆಟ್ ಕೂಡ ಬ್ರಾಡ್ ಪಾಲಾಗಿತ್ತು. ಆಸ್ಟ್ರೇಲಿಯಾ ವಿರುದ್ಧ ಟೆಸ್ಟ್‌ನಲ್ಲಿ ಅವರು 150 ವಿಕೆಟ್ ಪಡೆಯುವ ಮೂಲಕ ಇಯಾನ್ ಬೋಥಂ ಅವರನ್ನು ಹಿಂದೆಹಾಕಿದರು.

ಸಂಕ್ಷಿಪ್ತ ಸ್ಕೋರ್: ಮೊದಲ ಇನ್ನಿಂಗ್ಸ್; ಆಸ್ಟ್ರೇಲಿಯಾ 83 ಓವರ್‌ಗಳಲ್ಲಿ 8 ವಿಕೆಟ್‌ಗೆ 299 (ಡೇವಿಡ್ ವಾರ್ನರ್ 32, ಮಾರ್ನಸ್ ಲಾಬುಷೇನ್ 51, ಸ್ಟೀವನ್ ಸ್ಮಿತ್ 41, ಟ್ರಾವಿಸ್ ಹೆಡ್ 48, ಮಿಚೆಲ್ ಮಾರ್ಷ್ 51, ಮಿಚೆಲ್ ಸ್ಟಾರ್ಕ್ ಬ್ಯಾಟಿಂಗ್ 23, ಪ್ಯಾಟ್ ಕಮಿನ್ಸ್ ಬ್ಯಾಟಿಂಗ್ 1; ಕ್ರಿಸ್ ವೋಕ್ಸ್ 52ಕ್ಕೆ 4, ಸ್ಟುವರ್ಟ್ ಬ್ರಾಡ್ 68ಕ್ಕೆ 2)

ಶತಕದ ಸಂಭ್ರಮದಲ್ಲಿ ಸಾಯಿ ಸುದರ್ಶನ್ –ಬಿಸಿಸಿಐ ಟ್ವಿಟರ್ ಚಿತ್ರ

ಸಾಯಿ ಸುದರ್ಶನ್ ಶತಕ: ಭಾರತ 'ಎ'ಗೆ ಮಣಿದ ಪಾಕ್

ಕೊಲಂಬೊ (ಪಿಟಿಐ): ರಾಜ್ಯವರ್ಧನ್ ಹಂಗರ್ಗೇಕರ್ ಅವರ ಐದು ವಿಕೆಟ್‌ಗಳ ಸಾಧನೆಯ ನಂತರ ಉದಯೋನ್ಮುಖ ಬ್ಯಾಟರ್ ಸಾಯಿ ಸುದರ್ಶನ್ ಅಜೇಯ ಶತಕ ದಾಖಲಿಸಿದರು. ಇವರಿಬ್ಬರ ಅಮೋಘ ಪ್ರದರ್ಶನದ ನೆರವಿನಿಂದ ಭಾರತ 'ಎ' ತಂಡ ಎಮರ್ಜಿಂಗ್ ಏಷ್ಯಾಕಪ್ ಕ್ರಿಕೆಟ್ ಟೂರ್ನಿಯಲ್ಲಿ ಬುಧವಾರ ಪಾಕಿಸ್ತಾನ 'ಎ' ತಂಡವನ್ನು 8 ವಿಕೆಟ್‌ಗಳಿಂದ ಸೋಲಿಸಿತು.

ಭಾರತ ಲೀಗ್‌ನಲ್ಲಿ ಆಡಿದ ಎಲ್ಲ ಪಂದ್ಯಗಳಲ್ಲೂ ಜಯಗಳಿಸಿದಂತಾಗಿದೆ. ಮೊದಲು ಬ್ಯಾಟ್ ಮಾಡಿದ ಪಾಕಿಸ್ತಾನ 205 ರನ್‌ಗಳಿಗೆ ಆಲೌಟ್ ಆಯಿತು. ಹಂಗರ್ಗೇಕರ್ 42 ರನ್ನಿಗೆ 5 ವಿಕೆಟ್ ಪಡೆದರು. ಸುದರ್ಶನ್ 110 ಎಸೆತಗಳಲ್ಲಿ 3 ಸಿಕ್ಸರ್, 10 ಬೌಂಡರಿಗಳಿದ್ದ 104 ರನ್ ಬಾರಿಸಿದರು. ಭಾರತ ಈ ಸಾಧಾರಣ ಮೊತ್ತವನ್ನು 36.4 ಓವರುಗಳಲ್ಲೇ 2 ವಿಕೆಟ್ ಕಳೆದುಕೊಂಡು ದಾಟಿತು.

ಇದು ಸುದರ್ಶನ್‌ಗೆ ಲಿಸ್ಟ್ 'ಎ' ಪಂದ್ಯಗಳಲ್ಲಿ ನಾಲ್ಕನೇ ಶತಕ. ಅದನ್ನು ವೇಗದ ಬೌಲರ್ ಶಹನವಾಜ್ ಬೌಲಿಂಗ್‌ನಲ್ಲಿ ಬೆನ್ನು ಬೆನ್ನಿಗೆ 2 ಸಿಕ್ಸರ್ ಮೂಲಕ ಆಚರಿಸಿದರು. ಕನ್ನಡಿಗ ನಿಕಿನ್ ಜೋಸ್ (64 ಎಸೆತಗಳಲ್ಲಿ 53) ಜೊತೆ ಸುದರ್ಶನ್ 2ನೇ ವಿಕೆಟ್‌ಗೆ 99 ರನ್ ಸೇರಿಸಿದರು. ನಾಯಕ ಯಶ್ ಧುಲ್ (19 ಎಸೆತಗಳಲ್ಲಿ 21) ಅವರು ಸುದರ್ಶನ್‌ಗೆ ಶತಕ ದಾಟಲು ಅವಕಾಶ ನೀಡಿದರು.

ಸೆಮಿಫೈನಲ್‌ನಲ್ಲಿ ಭಾರತ 'ಎ' ತಂಡವು ಬಾಂಗ್ಲಾದೇಶ 'ಎ' ತಂಡವನ್ನು, ಪಾಕಿಸ್ತಾನ 'ಎ' ತಂಡವು ಶ್ರೀಲಂಕಾ 'ಎ' ತಂಡವನ್ನು ಎದುರಿಸಲಿದೆ.

ಸ್ಕೋರುಗಳು: ಪಾಕಿಸ್ತಾನ 'ಎ': 48 ಓವರುಗಳಲ್ಲಿ 205 (ಖಾಸಿಂ ಅಕ್ರಂ 48; ರಾಜ್ಯವರ್ಧನ್ ಹಂಗರ್ಗೇಕರ್ 42ಕ್ಕೆ5, ಮಾನವ್ ಸುತಾರ್ 36ಕ್ಕೆ3); ಭಾರತ 'ಎ': 36.4 ಓವರುಗಳಲ್ಲಿ 2 ವಿಕೆಟ್‌ಗೆ 210 (ಸಾಯಿ ಸುದರ್ಶನ್ ಔಟಾಗದೇ 104, ನಿಕಿನ್ ಜೋಸ್ 53, ಯಶ್ ಧುಲ್ ಔಟಾಗದೇ 21).